2022

JANUARY "TO" JUNE

ಕಸ್ತೂರಿ ಪ್ರಭ

ಜೂನ್ ೨೦೨೨

ಗಾಂಧೀಜಿ ವಿಚಾರಗಳನ್ನು ಜೀವಂತವಾಗಿಡುವ ಕಾರ್ಯದಲ್ಲಿ ನಿರತವಾಗಿರುವ ಎಸ್.ಜೆ.ಆರ್. ಮಹಿಳಾ ಕಾಲೇಜಿನ ಬಗೆಗೆ ನಾಡೋಜ ಡಾ. ವೂಡೇ ಪಿ. ಕೃಷ್ಣ ಪ್ರಶಂಸೆ

ಭಾರತಕ್ಕೆ ಸ್ವಾತಂತ್ರ್ಯ ಲಭಿಸಿ ೭೫ ವರ್ಷಗಳಾದುವು. ಈ ಅವಧಿಯಲ್ಲಿ ಮಹಾತ್ಮಾ ಗಾಂಧಿ ಅವರ ತತ್ವಾದರ್ಶಗಳನ್ನು ಪಾಲಿಸಿದ್ದಿದ್ದರೆ ಭಾರತಕ್ಕೆ ಮಾತ್ರವಲ್ಲ, ಇಡೀ ಮನುಕುಲಕ್ಕೆ ಒಳಿತಾಗುತ್ತಿತ್ತು. ಅವರು ಹತ್ಯೆಯಾಗುವುದಕ್ಕೆ ಒಂದು ವಾರ ಮೊದಲು ನಮಗೆ ಸಿಕ್ಕಿರುವುದು ರಾಜಕೀಯ ಸ್ವಾತಂತ್ರ್ಯ ಮಾತ್ರ. ಗಾಂಧೀಜಿ ಅವರ ಆಶಯಗಳಿಗೆ ಧಕ್ಕೆ ತರುವಂತೆ ಇಂದು ಜಾತೀಯತೆ, ಮತೀಯತೆ ಮೊದಲಾದ ವಿಷಯಗಳು ನಮ್ಮ ದೇಶವನ್ನು ಕಿತ್ತು ತಿನ್ನುತ್ತಿವೆ. ಬಡವ-ಶ್ರೀಮಂತರ ಅಂತರ ಹೆಚ್ಚಾಗುತ್ತಿದೆ. ಪಾಶ್ಚಾತ್ಯ ಶಿಕ್ಷಣ ಪದ್ಧತಿ, ಪಾಶ್ಚಾತ್ಯ ಜೀವನ ಶೈಲಿಯಿಂದ ಮುಕ್ತವಾಗುವುದೇ ನಿಜವಾದ ಸ್ವಾತಂತ್ರ್ಯ ಎಂದು ಗಾಂಧೀಜಿ ಭಾವಿಸಿದ್ದರು. ಪರಿಪೂರ್ಣ ಅಹಿಂಸಾತ್ಮಕ ಸಮಾಜ ನಿರ್ಮಾಣ ಅವರ ಗುರಿಯಾಗಿತ್ತು. ಅವರ ಆಶಯಗಳಿಗೆ ವಿರುದ್ಧವೇ ದೇಶ ಸಾಗುತ್ತಿದೆ. ಇಂತಹ ನಿರಾಶಾದಾಯಕ ವಾತಾವರಣದಲ್ಲೂ ಮಹಾತ್ಮನ ವಿಚಾರಗಳನ್ನು ಜೀವಂತವಾಗಿಡುವ ಕೆಲಸವನ್ನು ಪ್ರಾಮಾಣಿಕವಾಗಿ ಮಾಡುತ್ತಿರುವ ನಿಮ್ಮ ಕಾಲೇಜಿನ ಪ್ರಾಂಶುಪಾಲರಾದ ಡಾ. ಪ್ರೇಮ ಸಿದ್ದರಾಜು ಅಭಿನಂದನಾರ್ಹರು ಎಂದು ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಅಧ್ಯಕ್ಷರೂ, ಶಿಕ್ಷಣ ತಜ್ಞರೂ ಆದ ನಾಡೋಜ ಡಾ. ವೂಡೇ ಪಿ. ಕೃಷ್ಣ ಅವರು ತಿಳಿಸಿದರು.



ರಾಜಾಜಿನಗರದ ಎಸ್.ಜೆ.ಆರ್. ಮಹಿಳಾ ಕಾಲೇಜಿನ ಗಾಂಧೀ ಅಧ್ಯಯನ ಕೇಂದ್ರ, ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಸಹಯೋಗದಿಂದ ಏರ್ಪಡಿಸಿದ್ದ 'ದೇಸಿ ಸತ್ವ-ಗಾಂಧಿ ತತ್ವ' ಬಾಪುಯಾನ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಡಾ. ವೂಡೇ ಪಿ. ಕೃಷ್ಣ ವಾರ್ಧಾ ಆಶ್ರಮದಲ್ಲಿ ಕೆಲವು ದಿನಗಳ ಕಾಲವಿದ್ದು, ಗಾಂಧೀಜಿ ಅವರ ಬಗೆಗೆ ಆಳವಾದ ಅಧ್ಯಯನ ಮಾಡಿ ಬಂದಿರುವ ಡಾ. ಪ್ರೇಮ ಸಿದ್ಧರಾಜು ತಮ್ಮ ಕಾಲೇಜಿನ ನೂರಾರು ವಿದ್ಯಾರ್ಥಿನಿಯರು ಗಾಂಧೀಜಿ ಅವರ ಉನ್ನತ ವಿಚಾರಗಳನ್ನು ಓದುವಂತೆ ಮಾಡಿದ್ದಾರೆ ಎಂದು ಪ್ರಶಂಸಿಸಿದರು.

ಸಮಾಜದ ಕಟ್ಟ ಕಡೆಯ ಮನುಷ್ಯನ ಬದುಕು ಹಸನಾಗಬೇಕು ಎಂದು ಆಶಿಸಿದ್ದ ಗಾಂಧೀಜಿ ಬಗೆಗೆ ತಲಾ ೬೦೦ ಪುಟಗಳ ೧೦೦ ಬೃಹತ್ ಸಂಪುಟಗಳನ್ನು ಕೇಂದ್ರ ಸರ್ಕಾರ ಪ್ರಕಟಿಸಿದೆ. ಕಾಲೇಜಿನ ವಿದ್ಯಾರ್ಥಿಯಾಗಿದ್ದಾಗಲೇ ಈ ಸಂಪುಟಗಳನ್ನೆಲ್ಲಾ ಓದಿ ಮನನ ಮಾಡಿಕೊಂಡು ಸಂಪೂರ್ಣವಾಗಿ ಬದಲಾದೆ. ತ್ರೀ ಪೀಸ್ ಸೂಟ್‌ಧಾರಿಯಾಗಿ ವಕೀಲಿ ಮಾಡುತ್ತಿದ್ದ ಗಾಂಧೀಜಿ ತರೆಬೆತ್ತಲ ಫಕೀರನಾಗಿ ಮಹಾತ್ಮ ಎಂದೆನಿಸಿಕೊಂಡರು. 'ಗಾಂಧೀಜಿ ಬಿಟ್ಟು ಭಾರತ ಇಲ್ಲ, ಭಾರತ ಬಿಟ್ಟು ಗಾಂಧೀಜಿ ಇಲ್ಲ' ಎಂಬ ಮಾತು ಚಾಲ್ತಿಯಲ್ಲಿದೆ. ದ್ವೇಷಿಸುವವರನ್ನು ಪ್ರೀತಿಸುವುದು, ಬಹಿಷ್ಕೃತ ಸಮಾಜದವರನ್ನು ಮುಖ್ಯ ವಾಹಿನಿಗೆ ತರುವುದು, ಸಣ್ಣ-ಪುಟ್ಟ ತಪ್ಪುಗಳನ್ನು ಕ್ಷಮಿಸುವ ಮನೋಭಾವ ಬೆಳೆಸಿಕೊಳ್ಳುವುದು, ತಪ್ಪು ಮಾಡಿದಾಗ ಒಪ್ಪಿಕೊಳ್ಳುವ ಪ್ರಾಮಾಣಿಕತೆ ರೂಢಿಸಿಕೊಳ್ಳುವುದು ಮತ್ತು ಕಾಯಾ, ವಾಚಾ, ಮನಸಾ, ನಿರಾಡಂಬರ ಸರಳ ಜೀವನ ಪದ್ಧತಿ ಅಳವಡಿಸಿಕೊಳ್ಳುವುದು – ಇವೇ ಗಾಂಧೀಜಿ ಅವರ ಬೋಧನೆಗಳು. ಈ ಸೂತ್ರಗಳನುಸಾರ ನಡಯೋಣ ಎಂದು ಕರೆ ನೀಡಿದರು.

ಹೆಸರಿನಲ್ಲಿ ಯೋಗ್ಯರಿಗೆ ಪ್ರಶಸ್ತಿ ನೀಡಿ ಸಂಘರ್ಷ ಸಮಿತಿ ಉತ್ತಮ ಕೆಲಸ ಮಾಡಿದೆ ಎಂದು ಹೇಳಿದರು.

ಹಿರಿಯ ಸಾಹಿತಿ ಡಾ. ಕಾ.ವೆಂ. ಶ್ರೀನಿವಾಸಮೂರ್ತಿ ಮುಖ್ಯ ಉಪನ್ಯಾಸ ನೀಡಿದರು. ಹಿರಿಯ ಪತ್ರಕರ್ತ ಹಾಗೂ ಸಂಘರ್ಷ ಸಮಿತಿಯ ಮಾಜಿ ಅಧ್ಯಕ್ಷ ರಾಮಣ್ಣ ಹೆಚ್. ಕೋಡಿಹೊಸಹಳ್ಳಿ ಮುಖ್ಯ ಅತಿಥಿಯಾಗಿದ್ದರು.

–ರು. ಬಸಪ್ಪ

ಉದಯವಾಣಿ

ಗುರುವಾರ | ಜೂನ್ | 23 | 2022

ಸ್ತ್ರೀ ಶಕ್ತಿ ಸಂಘಗಳ ಉತ್ಪನ್ನ ಮಾರಾಟಕ್ಕೆ ಪ್ರೋತ್ಸಾಹ

ಅಕ್ಟೋಬರ್ 2ಕ್ಕೆ ಸ್ತ್ರೀ ಶಕ್ತಿ ಸಂಘಗಳಿಗೆ ನೆರವು ಒದಗಿಸುವ ಯೋಜನೆಗೆ ಚಾಲನೆ: ಸಿಎಂ

ಬೆಂಗಳೂರು: ತಳಮಟ್ಟದ ಆರ್ಥಿಕತೆಗೆ ಶಕ್ತಿ ತುಂಬುವ ಸ್ತ್ರೀ ಶಕ್ತಿ ಸಂಘಗಳಿಗೆ ಆರ್ಥಿಕ ನೆರವು ನೀಡುವ ಯೋಜನೆಯನ್ನು ಅಕ್ಟೋಬರ್ 2ರಂದು ಚಾಲನೆ ನೀಡಲು ಉದ್ದೇಶಿಸಲಾಗಿದೆ ಎಂದು ಸಿಎಂ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಕರ್ನಾಟಕ ರಾಜ್ಯ ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟ, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಸುಮಂಗಲಿ ಸೇವಾಶ್ರಮ ವತಿಯಿಂದ ಆಯೋಜಿಸಿದ್ದ ರಾಜ್ಯ ಮಟ್ಟದ ಸ್ವಯಂ ಸೇವಾ ಸಂಸ್ಥೆಗಳ ಸಮಾವೇಶ ಉದ್ಘಾಟಿಸಿ ಮಾತನಾಡಿದರು.

ಸ್ತ್ರೀ ಶಕ್ತಿ ಸಂಘಗಳು ರಾಜ್ಯದ ಆರ್ಥಿಕತೆಗೆ ಕೊಡುಗೆ ನೀಡಲು ಅನುಕೂಲವಾಗುವಂತೆ ಪ್ರಥಮ ಬಾರಿ ಆಯವ್ಯಯದಲ್ಲಿ 1.5 ಲಕ್ಷ ರೂ.ಗಳ ಆರ್ಥಿಕ ನೆರವು, ಆ್ಯಂಕರ್ ಬ್ಯಾಂಕ್ ಜೋಡಣೆ, ಯಂತ್ರೋಪಕರಣ, ಪ್ರಾಜೆಕ್ಟ್‌ಗಳು, ಉತ್ಪನ್ನಗಳಿಗೆ ಮಾರುಕಟ್ಟೆ ವ್ಯವಸ್ಥೆ ಮಾಡಲಾಗುವುದು ಎಂದು ಹೇಳಿದರು.

ಅಮೆಜಾನ್ ನಂತಹ ಆನ್‌ಲೈನ್ ವೇದಿಕೆಗಳಲ್ಲಿ ಈ ಉತ್ಪನ್ನಗಳನ್ನು ಮಾರಾಟ ಮಾಡುವ ವ್ಯವಸ್ಥೆ ಮಾಡಲಾಗುವುದು. ಪ್ರಾಯೋಗಿಕವಾಗಿ ಎಲಿವೇಟ್ ಕಾರ್ಯಕ್ರಮ ಪ್ರಾರಂಭಿಸಿದ್ದು

- ಸ್ತ್ರೀ ಶಕ್ತಿ ಸಂಘಗಳಿಗೆ ಅನುಕೂಲವಾಗುವಂತೆ ಆಯವ್ಯಯದಲ್ಲಿ 1.5 ಲಕ್ಷ ರೂ. ಆರ್ಥಿಕ ನೆರವು
- ಅಮೆಜಾನ್ ನಂತಹ ಆನ್‌ಲೈನ್ ವೇದಿಕೆಗಳಲ್ಲಿ ಉತ್ಪನ್ನಗಳನ್ನು ಮಾರಾಟ ಮಾಡುವ ವ್ಯವಸ್ಥೆ

ಒಂದು ಸ್ತ್ರೀಶಕ್ತಿ ಸಂಘ ತಿಂಗಳಿಗೆ ಸುಮಾರು 50 ಲಕ್ಷ ರೂ. ವಹಿವಾಟು ಮಾಡುತ್ತಿದೆ. ಇದು ಸಂಘಟಿತವಾದ ಶ್ರಮದ ಶಕ್ತಿ ಎಂದು ತಿಳಿಸಿದರು.

ರಾಜ್ಯದ ಗ್ರಾಮೀಣ ಹಾಗೂ ನಗರ ಪ್ರದೇಶದ ಸ್ತ್ರೀ ಶಕ್ತಿಯ ಸಬಲೀಕರಣ ಆಗಬೇಕು. ನಮ್ಮ ಸ್ಥಳೀಯಮಟ್ಟದ ಸಂಘ ಸಂಸ್ಥೆಗಳ ಉತ್ಪನ್ನಗಳು ವಿದೇಶದಲ್ಲಿ ಮಾರಾಟವಾಗಬೇಕು ಎನ್ನುವ ಆಸೆ ಸರ್ಕಾರದ್ದು. ಆಗ ನಮ್ಮ ಆರ್ಥಿಕತೆಗೆ ಬಹಳ ಶಕ್ತಿ ಬರುತ್ತಿದೆ. ಈ ದೇಶದಲ್ಲಿನ ಮಹಿಳೆಯರ ದುಡಿಮೆಗೆ ಬೆಲೆ ಕೊಡಬೇಕಿದೆ. ಅವರಿಗೆ ಆರ್ಥಿಕ ಸ್ವಾತಂತ್ರ್ಯ ಬಂದಾಗ ಶೈಕ್ಷಣಿಕ, ಸಾಮಾಜಿಕವಾಗಿಯೂ ಸಬಲರಾಗುತ್ತಾರೆ. ಈ ಹಿನ್ನೆಲೆಯಲ್ಲಿ ಸೇವಾಸಂಸ್ಥೆಗಳು ಸಮಾನತೆಯ ಕ್ರಾಂತಿ ತರುವಲ್ಲಿ ಮಹತ್ವದ ಪಾತ್ರ ವಹಿಸುತ್ತಿದೆ ಎಂದು ಹೇಳಿದರು.



ಬೆಂಗಳೂರಿನಲ್ಲಿ ಬುಧವಾರ ಆಯೋಜಿಸಲಾಗಿದ್ದ ರಾಜ್ಯ ಮಟ್ಟದ ಸ್ವಯಂ ಸೇವಾ ಸಂಸ್ಥೆಗಳ ಸಮಾವೇಶವನ್ನು ಸಿಎಂ ಬಸವರಾಜ ಬೊಮ್ಮಾಯಿ ಉದ್ಘಾಟಿಸಿದರು. ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಕೈಗಾರಿಕಾ ಸಚಿವ ಮುರಗೇಶ್ ನಿರಾಣಿ, ಕರ್ನಾಟಕ ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ. ಸಿ. ಸೋಮಶೇಖರ್, ಸುಮಂಗಲಿ ಸೇವಾಶ್ರಮದ ಅಧ್ಯಕ್ಷೆ ಸುಶೀಲಮ್ಮ, ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೆ ಪಿ. ಕೃಷ್ಣ ಮತ್ತಿತರರು ಇದ್ದರು.

ಒಳ್ಳೆಯ ಕೆಲಸಗಳನ್ನು ಮಾಡುವ ಚಿಂತನೆ ಹಾಗೂ ಕ್ರಿಯಾಯೋಜನೆ ಇರಬೇಕು. ಪ್ರತಿ ವರ್ಷ ಕನಿಷ್ಠ 5 ಕ್ಷೇತ್ರಗಳಿಗೆ ಗುರಿ ನಿಗದಿಸಿ ಸಾಧಿಸಲು ಪ್ರಯತ್ನಿಸಿ, ಸರ್ಕಾರವೂ ಅದಕ್ಕೆ ಪೂರಕ ಸಹಕಾರ ನೀಡುತ್ತದೆ ಎಂದು ಮುಖ್ಯಮಂತ್ರಿ ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಕೈಗಾರಿಕಾ ಸಚಿವ ಮುರಗೇಶ್ ನಿರಾಣಿ, ಕರ್ನಾಟಕ ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ. ಸಿ. ಸೋಮಶೇಖರ್, ಸುಮಂಗಲಿ ಸೇವಾಶ್ರಮದ ಅಧ್ಯಕ್ಷೆ ಸುಶೀಲಮ್ಮ, ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೆ ಪಿ. ಕೃಷ್ಣ ಮತ್ತಿತರರು ಇದ್ದರು.

ಕೋವಿಡ್ ಬಳಿಕ ಹಲವರು ಕೃಷಿಯತ್ತ

ಕಾರ್ಯಕ್ರಮದಲ್ಲಿ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಮಾತನಾಡಿ, ದೇಶದ ಪ್ರಗತಿಯಲ್ಲಿ ಸ್ವಯಂಸೇವಾ ಸಂಸ್ಥೆಗಳ ಪಾತ್ರ ದೊಡ್ಡದಿದೆ. ಕೋವಿಡ್ ನಂತರ ಹಲವರು ಕೃಷಿಯತ್ತ ಮುಖ ಮಾಡಿದ್ದಾರೆ. ಇದರ ಪರಿಣಾಮವಾಗಿ ಕೃಷಿ ಉತ್ಪಾದನೆಯನ್ನು ದೇಶವು ಗುರಿ ಮೀರಿ ಸಾಧನೆ ಮಾಡಿದೆ. ಶೇ.70ರಷ್ಟು ಖಾದ್ಯ ತೈಲವನ್ನು ಮಾತ್ರ ಆಮದು ಮಾಡಿಕೊಳ್ಳಲಾಗುತ್ತಿದೆ. ಕೃಷಿ ಉತ್ಪನ್ನಗಳ ರಫ್ತು ಪ್ರಮಾಣದಲ್ಲಿ ದೇಶ 9ನೇ ಸ್ಥಾನದಲ್ಲಿದೆ ಎಂದು ಹೇಳಿದರು.

ನಂ. 1 ಕನ್ನಡ ದಿನಪತ್ರಿಕೆ
ಗುರುವಾರ 23 ಜೂನ್ 2022
23 JUNE 2022

ಮಹಿಳೆಯರಿಗೆ ಆರ್ಥಿಕ ಶಕ್ತಿ

ಸಿಎಂ ಘೋಷಣೆ | ಯೋಜನೆಗೆ ಅ. 2ರಂದು ಚಾಲನೆ



ರಾಜ್ಯ ಮಟ್ಟದ ಸ್ವಯಂ ಸೇವಾ ಸಂಸ್ಥೆಗಳ ಸಮಾವೇಶವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸಿದರು. ಕೇಂದ್ರ ಸಚಿವ ಶೋಭಾ ಕರಂದ್ಲಾಜೆ, ಸಚಿವ ಮುರುಗೇಶ್ ನಿರಾಣಿ, ಒಕ್ಕೂಟದ ಕಾರ್ಯದರ್ಶಿ ಡಾ. ಎಸ್. ಜಿ. ಸುಶೀಲಮ್ಮ, ಪ್ರಾಧಿಕಾರದ ಅಧ್ಯಕ್ಷ ಡಾ. ಸಿ. ಸೋಮಶೇಖರ್, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ. ವೂಡೇ. ಪಿ. ಕೃಷ್ಣ ಇತರರು ಇದ್ದರು.

▫ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಸಮಾನತೆ ದುಡಿಮೆಯ ಕ್ರಾಂತಿ ಮಾಡುತ್ತಿರುವ ಸ್ತ್ರೀಶಕ್ತಿ ಸಂಘಗಳಿಗೆ ಆರ್ಥಿಕ ನೆರವು ನೀಡುವ ಯೋಜನೆಗೆ ಅಕ್ಟೋಬರ್ 2ರಂದು ಚಾಲನೆ ನೀಡುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಿಸಿದರು. ನಗರದ ಗಾಂಧಿ ಭವನದಲ್ಲಿ ರಾಜ್ಯ ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟ, ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಗಾಂಧಿ ಸ್ಮಾರಕ ನಿಧಿ ಹಾಗೂ ಸುಮಂಗಲಿ ಸೇವಾ ಆಶ್ರಮ ಸಹಯೋಗದಲ್ಲಿ ಆಯೋಜಿಸಿದ್ದ ರಾಜ್ಯಮಟ್ಟದ ಸ್ವಯಂ ಸೇವಾ ಸಂಸ್ಥೆಗಳ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

ಸ್ತ್ರೀಶಕ್ತಿ ಸಂಘಗಳು ರಾಜ್ಯದ ಆರ್ಥಿಕತೆಗೆ ಕೊಡುಗೆ ನೀಡಲು ಅನುಕೂಲವಾಗುವಂತೆ ಆಯವ್ಯಯದಲ್ಲಿ ಮೊದಲ ಬಾರಿಗೆ 1.5 ಲಕ್ಷ ಆರ್ಥಿಕ ನೆರವು ಒದಗಿಸಲಾಗಿದೆ. ಜತೆಗೆ ಆ್ಯಂಕರ್ ಬ್ಯಾಂಕ್ ಜೋಡಣೆ, ಯಂತ್ರೋಪಕರಣ, ಪ್ರಾಜೆಕ್ಟ್‌ಗಳು, ಉತ್ಪನ್ನಗಳಿಗೆ ಮಾರುಕಟ್ಟೆಗಳಲ್ಲಿ ಹಾಗೂ ಅಮೆಜಾನ್‌ನಂತಹ ಆನ್‌ಲೈನ್ ವೇದಿಕೆಗಳಲ್ಲಿ ಮಾರಾಟದ ವ್ಯವಸ್ಥೆ ಕಲ್ಪಿಸಲಾಗುವುದು. ಈ ಸಂಬಂಧ ಪ್ರಾರಂಭಿಸಿರುವ ಪ್ರಾಯೋಗಿಕವಾಗಿ ಎಲಿವೇಟ್ ಕಾರ್ಯಕ್ರಮದಲ್ಲಿ ಒಂದು ಸ್ತ್ರೀಶಕ್ತಿ ಸಂಘ ತಿಂಗಳಿಗೆ ಸುಮಾರು 50 ಲಕ್ಷ ರೂ. ವಹಿವಾಟು ಮಾಡುತ್ತಿದೆ. ಇದು ಸಂಘಟಿತ ಶ್ರಮದ ಶಕ್ತಿ ಎಂದು ಹೇಳಿದರು.

ಮಹಿಳೆಯರ ದುಡಿಮೆಗೆ ಬೆಲೆ ಕೊಡಬೇಕು: ಸೇವಾ ಸಂಸ್ಥೆಗಳು ಸಮಾನತೆಯ ಕ್ರಾಂತಿ ತರುವಲ್ಲಿ ಮಹತ್ವದ ಪಾತ್ರ ವಹಿಸುತ್ತಿದ್ದು, ರಾಜ್ಯವನ್ನು ಸುಭಿಕ್ಷವಾಗಿಸಲು ಶ್ರಮಿಸುತ್ತಿವೆ. ರಾಜ್ಯದ ಗ್ರಾಮೀಣ ಹಾಗೂ ನಗರ ಪ್ರದೇಶದ ಸ್ತ್ರೀಶಕ್ತಿಯ ಸಬಲೀಕರಣ ಆಗಬೇಕು. ಸ್ಥಳೀಯ ಸಂಘಸಂಸ್ಥೆಗಳ ಉತ್ಪನ್ನಗಳು ವಿದೇಶದಲ್ಲಿ ಮಾರಾಟವಾಗಬೇಕು. ಆಗ ನಮ್ಮ ಆರ್ಥಿಕತೆಗೆ ಶಕ್ತಿ ಬರುತ್ತದೆ. ಈ ದೇಶದಲ್ಲಿ ಮಹಿಳೆಯರ ದುಡಿಮೆಗೆ ಬೆಲೆ ಕೊಡಬೇಕು. ಅವರಲ್ಲಿ ಆರ್ಥಿಕ ಸ್ವಾತಂತ್ರ್ಯ ಬಂದರೆ ಉಳಿದಂತೆ ಶೈಕ್ಷಣಿಕ, ಸಾಮಾಜಿಕ ಸೇರಿ ಎಲ್ಲ ವಲಯಗಳಲ್ಲೂ ಸ್ತ್ರೀಯರು ಸಬಲರಾಗುತ್ತಾರೆ ಎಂದರು.

ಶ್ರಮಿಕ ವರ್ಗದ ಕೊಡುಗೆ: ದೇಶದ ತಲಾವಾರು ಆದಾಯದಲ್ಲಿ

> ವಿದೇಶಿ ಬಂಡವಾಳ ಹೂಡಿಕೆಯಲ್ಲಿ ರಾಜ್ಯವು ಪ್ರಸಕ್ತ ವರ್ಷದ ನಾಲ್ಕನೇ ತ್ರೈಮಾಸಿಕದಲ್ಲಿ ಮೊದಲ ಸ್ಥಾನದಲ್ಲಿದೆ. ಈ ನಿಟ್ಟಿನಲ್ಲಿ ಉದ್ಯಮ ಕ್ಷೇತ್ರದಲ್ಲಿ ಮಹಿಳೆಯರು ಆಸಕ್ತಿ ವಹಿಸಿದರೆ ಸರ್ಕಾರ ಎಲ್ಲ ರೀತಿಯ ನೆರವು ನೀಡಲಿದೆ. ಉದ್ಯಮಿಯಾಗುವ ಮೂಲಕ ಉದ್ಯೋಗ ಕಲ್ಪಿಸುವ ಬಗ್ಗೆ ಗಮನಹರಿಸಬೇಕು. ಇದಕ್ಕಾಗಿ ಸರ್ಕಾರದ ಯೋಜನೆಗಳನ್ನು ಸದುಪಯೋಗಪಡಿಸಿ ಕೊಳ್ಳಬೇಕು. ಸ್ತ್ರೀಶಕ್ತಿ ಸಂಘಗಳಿಗೆ ಈ ಬಗ್ಗೆ ಹೆಚ್ಚಿನ ಮಾಹಿತಿ ನೀಡಲು ವಿಶೇಷ ಕಾರ್ಯಾಗಾರ ಆಯೋಜಿಸಲು ಸಹ ಸಿದ್ಧ.
>
> **| ಮುರುಗೇಶ್ ನಿರಾಣಿ** ಕೈಗಾರಿಕಾ ಸಚಿವ

ರಾಜ್ಯ 3ನೇ ಸ್ಥಾನದಲ್ಲಿದೆ. ಇದಕ್ಕೆ ರಾಜ್ಯದ ಜನರ ಕೊಡುಗೆ ಶೇ.30 ಮಾತ್ರ. ಉಳಿದ ಶೇ. 70 ಜನರು ಜೀವನೋಪಾಯಕ್ಕಾಗಿ ದುಡಿಯುತ್ತಿದ್ದಾರೆ. ಇವರಿಗೆ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಿದರೆ ರಾಜ್ಯದ ಆರ್ಥಿಕತೆಗೆ ಶ್ರಮಿಕ ವರ್ಗದ ಜನರ ಕೊಡುಗೆ ದೊರೆಯುತ್ತದೆ. ಹಾಗೆಯೇ ಕೇಂದ್ರ ಸರ್ಕಾರ ಸಂಘಗಳ ಮೂಲಕ ರೈತ ಉತ್ಪನ್ನಗಳ ಮೌಲ್ಯವರ್ಧನೆ, ಹೆಚ್ಚಿನ ದರದಲ್ಲಿ ಮಾರಾಟಕ್ಕೆ ಯೋಜನೆ ಆರಂಭಿಸಿದ್ದು, ಮೀನುಗಾರಿಕೆ, ಕುಶಲಕರ್ಮಿಗಳಿಗೂ ಯೋಜನೆ ವಿಸ್ತರಿಸಲಾಗುವುದು ಎಂದು ಹೇಳಿದರು.

ಕೃಷಿ ರಫ್ತಿನಲ್ಲಿ 9ನೇ ಸ್ಥಾನ: ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಮಾತನಾಡಿ, ದೇಶದ ಪ್ರಗತಿಯಲ್ಲಿ ಸ್ವಯಂ ಸೇವಾ ಸಂಸ್ಥೆಗಳು ಮಹತ್ವದ ಪಾತ್ರ ವಹಿಸುತ್ತಿದ್ದು, ಮಹಿಳೆಯರು ಈ ಅವಕಾಶವನ್ನು ಉತ್ತಮ ರೀತಿಯಲ್ಲಿ ಬಳಸಿಕೊಳ್ಳಬೇಕು. ಕೋವಿಡ್ ನಂತರ ಬಹಳಷ್ಟು ಮಂದಿ ಕೃಷಿಯತ್ತ ಮುಖ ಮಾಡಿದ್ದಾರೆ. ಹೀಗಾಗಿ, ಕೃಷಿ ಉತ್ಪಾದನೆಯಲ್ಲಿ ದೇಶವು ಗುರಿ ಮೀರಿ ಸಾಧನೆ ಮಾಡಿದೆ. ಕೃಷಿ ಉತ್ಪನ್ನಗಳ ರಫ್ತು ಪ್ರಮಾಣದಲ್ಲಿ ಭಾರತ ಈಗ 9ನೇ ಸ್ಥಾನ ಪಡೆದಿದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟದ ಕಾರ್ಯದರ್ಶಿ ಡಾ. ಎಸ್.ಜಿ. ಸುಶೀಲಮ್ಮ ಅವರನ್ನು ಸನ್ಮಾನಿಸಲಾಯಿತು.

ಕನ್ನಡಪ್ರಭ

ಗುರುವಾರ 23.6.2022
ಬೆಂಗಳೂರು

ಸ್ತ್ರೀಶಕ್ತಿ ನೆರವಿನ ಯೋಜನೆ ಅ.2ರಿಂದ

ಅಮೆಜಾನ್‌ನಂತಹ ವೆಬ್‌ಸೈಟಲ್ಲಿ ಉತ್ಪನ್ನ ಮಾರಾಟಕ್ಕೆ ವ್ಯವಸ್ಥೆ: ಬೊಮ್ಮಾಯಿ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಘೋಷಿಸಿರುವ ಸ್ತ್ರೀಶಕ್ತಿ ಸಂಘಗಳಿಗೆ ಆರ್ಥಿಕ ನೆರವು ನೀಡುವ ಯೋಜನೆಗೆ ಮುಂಬರುವ ಗಾಂಧಿ ಜಯಂತಿ (ಅಕ್ಟೋಬರ್ 2) ದಿನದಿಂದ ಚಾಲನೆ ನೀಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಕರ್ನಾಟಕ ರಾಜ್ಯ ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟ, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಹಾಗೂ ಸುಮಂಗಲಿ ಸೇವಾಶ್ರಮ ಸಹಯೋಗದಲ್ಲಿ ಗಾಂಧಿಭವನದಲ್ಲಿ ಬುಧವಾರ ಆಯೋಜಿಸಿದ್ದ ರಾಜ್ಯ ಮಟ್ಟದ ಸ್ವಯಂ ಸೇವಾ ಸಂಸ್ಥೆಗಳ ಸಮಾವೇಶ ಉದ್ಘಾಟಿಸಿ ಮಾತನಾಡಿದರು.



ರಾಜ್ಯ ಮಟ್ಟದ ಸ್ವಯಂ ಸೇವಾ ಸಂಸ್ಥೆಗಳ ಸಮಾವೇಶವನ್ನು ಬೊಮ್ಮಾಯಿ ಉದ್ಘಾಟಿಸಿದರು.

ಸ್ತ್ರೀಶಕ್ತಿ ಸಂಘಗಳಿಗೆ ಆರ್ಥಿಕ ನೆರವು ನೀಡುವ ಯೋಜನೆಯಲ್ಲಿ ಪ್ರಮುಖವಾಗಿ 1.5 ಲಕ್ಷ ರು. ನೆರವು, ಆ್ಯಂಕರ್ ಬ್ಯಾಂಕ್ ಜೋಡಣೆ, ಯಂತ್ರೋಪಕರಣ, ಪ್ರಾಜೆಕ್ಟ್‌ಗಳು, ಉತ್ಪನ್ನಗಳಿಗೆ ಮಾರುಕಟ್ಟೆ ವ್ಯವಸ್ಥೆ ಮಾಡಲಾಗುವುದು. ಅಮೆಜಾನ್‌ನಂತಹ ಆನ್‌ಲೈನ್ ವೇದಿಕೆಗಳಲ್ಲಿ ಈ ಉತ್ಪನ್ನಗಳನ್ನು ಮಾರಾಟ ಮಾಡುವ ವ್ಯವಸ್ಥೆ ಮಾಡಲಾಗುವುದು. ಈಗಾಗಲೇ ಯೋಜನೆಯನ್ನು ಪ್ರಾಯೋಗಿಕವಾಗಿ ಆರಂಭಿಸಿದ್ದು, ಒಂದು ಸ್ತ್ರೀಶಕ್ತಿ ಸಂಘ ತಿಂಗಳಿಗೆ ಸುಮಾರು 50 ಲಕ್ಷ ವಹಿವಾಟು ಮಾಡುತ್ತಿದೆ ಎಂದರು.

ವಿದೇಶದಲ್ಲಿ ಮಾರಾಟವಾಗಲಿ: ಮಹಿಳೆಯರಿಗೆ ಆರ್ಥಿಕ ಸ್ವಾತಂತ್ರ್ಯ ಬಂದಾಗ ಶೈಕ್ಷಣಿಕ, ಸಾಮಾಜಿಕವಾಗಿಯೂ ಸಬಲರಾಗುತ್ತಾರೆ. ಪ್ರಮುಖವಾಗಿ ರಾಜ್ಯದ ಗ್ರಾಮೀಣ ಹಾಗೂ ನಗರ ಪ್ರದೇಶದ ಸ್ತ್ರೀಶಕ್ತಿಯ ಸಬಲೀಕರಣ ಆಗಬೇಕು. ಸ್ಥಳೀಯ ಸಂಘ ಸಂಸ್ಥೆಗಳ ಉತ್ಪನ್ನಗಳು ವಿದೇಶದಲ್ಲಿ ಮಾರಾಟವಾಗಬೇಕು ಎನ್ನುವ ಆಸೆಯನ್ನು ಸರ್ಕಾರ ಹೊಂದಿದೆ ಎಂದರು. ಕಾರ್ಯಕ್ರಮದಲ್ಲಿ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಕೈಗಾರಿಕಾ ಸಚಿವ ಮುರುಗೇಶ ನಿರಾಣಿ, ಸುಮಂಗಲಿ ಸೇವಾಶ್ರಮದ ಅಧ್ಯಕ್ಷೆ ಸುಶೀಲಮ್ಮ, ಗಾಂಧಿಭವನದ ಅಧ್ಯಕ್ಷ ವೊಡೇ ಪಿ.ಕೃಷ್ಣ, ಗಡಿ ಪ್ರಾಧಿಕಾರದ ಅಧ್ಯಕ್ಷ ಸಿ. ಸೋಮಶೇಖರ್ ಹಾಜರಿದ್ದರು.

ಸಂಯುಕ್ತ ಕರ್ನಾಟಕ
23 ಜೂನ್ 2022 ಗುರುವಾರ
ಬೆಂಗಳೂರು (BENGALURU)

ಸ್ತ್ರೀಶಕ್ತಿ ಸ್ವಸಹಾಯ ಸಂಘಗಳಿಗೆ 1.5 ಲಕ್ಷ ರೂ. ಧನ ಸಹಾಯ



ರಾಜ್ಯ ಮಟ್ಟದ ಸ್ವಯಂ ಸೇವಾ ಸಂಸ್ಥೆಗಳ ಸಮಾವೇಶವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಉದ್ಘಾಟಿಸಿದರು. ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಬೃಹತ್ ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ, ಸುಮಂಗಲಿ ಸೇವಾಶ್ರಮದ ಸುಶೀಲಮ್ಮ, ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ.ಸೋಮಶೇಖರ್, ವೊಡೆ ಪಿ. ಕೃಷ್ಣ ಸೇರಿ ಮತ್ತಿತರರು ಇದ್ದರು.

ಸಂ.ಕ.ಸಮಾಚಾರ,ಬೆಂಗಳೂರು.

ಸ್ತ್ರೀಶಕ್ತಿ ಸ್ವ-ಸಹಾಯ ಸಂಘಗಳು ಮತ್ತು ಇತರ ಸ್ವಯಂ ಸೇವಾ ಸಂಸ್ಥೆಗಳಿಗೆ ತಲಾ ಒಂದೂವರೆ ಲಕ್ಷ ರೂಪಾಯಿಗಳ ಆರ್ಥಿಕ ಅನುದಾನ ನೀಡುವ ಮೂಲಕ ಸಮಾಜಮುಖಿ ಸೇವಾ ಸಂಸ್ಥೆಗಳ ಕೈ ಬಲಪಡಿಸಲು ಸರ್ಕಾರ ಬದ್ಧವಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಹೇಳಿದರು.

ಗಾಂಧಿಭವನದಲ್ಲಿ ಆಯೋಜಿಸಲಾದ ರಾಜ್ಯ ಮಟ್ಟದ ಸ್ವಯಂ ಸೇವಾ ಸಂಸ್ಥೆಗಳ ಸಮಾವೇಶವನ್ನು ಉದ್ಘಾಟಿಸಿ ಬಳಿಕ ಮಾತನಾಡಿದ ಅವರು, ಸ್ವಯಂ ಸೇವಾ ಸಂಸ್ಥೆಗಳ ಆರ್ಥಿಕ ಮಟ್ಟವನ್ನು ಹೆಚ್ಚಿಸಲು ಸರ್ಕಾರ ಈಗಾಗಲೇ ನೂತನ ಕಾರ್ಯಕ್ರಮವನ್ನು ರೂಪಿಸಲಾಗಿದ್ದು, ಅಕ್ಟೋಬರ್ 2ರ ಗಾಂಧಿಜಯಂತಿಯಂದುಯೋಜನೆಜಾರಿಗೊಳಿಸಲಾಗುತ್ತದೆ ಎಂದರು.

ಸ್ವಯಂ ಸೇವಾ ಸಂಸ್ಥೆಗಳಿಗೆಂದೇ ಮೊಟ್ಟ ಮೊದಲ ಬಾರಿಗೆ ಬಜೆಟ್‌ನಲ್ಲಿ ಹಣ ಮೀಸಲಿರಿಸಲಾಗಿದೆ. ಇನ್ನು ಈಗಾಗಲೇ ಕಾರ್ಯ ನಿರ್ವಹಿಸುವಂಥ ಸ್ವಯಂ ಸೇವಾ ಸಂಸ್ಥೆಗಳಿಗೆ ಸರ್ಕಾರದ ವತಿಯಿಂದಲೇ ಆರ್ಥಿಕ ನೆರವು, ಅಗತ್ಯ ಯಂತ್ರೋಪಕರಣ, ಮಾರುಕಟ್ಟೆ ಸೌಲಭ್ಯ ಸೇರಿದಂತೆ ಎಲ್ಲ ಮೂಲಭೂತ ವ್ಯವಸ್ಥೆ ಕಲ್ಪಿಸಲಾಗುವುದು.

ಜೊತೆಗೆ ಸ್ಥಳೀಯ ಜನರ ಅಗತ್ಯತೆಗಳನ್ನು ಗಮನದಲ್ಲಿಟ್ಟುಕೊಂಡು ಸ್ವಯಂ ಸೇವಾ ಸಂಸ್ಥೆಗಳು ಉತ್ಪಾದನೆ ಮಾಡುವಂತೆ ಕಾರ್ಯ ಯೋಜನೆ ಸಿದ್ಧಪಡಿಸಲಾಗಿದ್ದು, ಚನ್ನಪಟ್ಟಣದ ಬೊಂಬೆ, ಮೊಳಕಾಲ್ಮೂರು, ಇಳಕಲ್ ಸೀರೆ ತಯಾರಿಕೆ ಸೇರಿದಂತೆ ಆಯಾ ಭಾಗಗಳ ವಸ್ತುಗಳ ಉತ್ಪಾದನೆ ಮತ್ತು ಮಾರಾಟಕ್ಕೆ ಒತ್ತು ನೀಡಲಾಗುತ್ತದೆ.

ಸ್ವಯಂ ಸೇವಾ ಸಂಸ್ಥೆಗಳು ಸ್ವಾವಲಂಬನೆಯಿಂದ ಕೆಲಸ ಮಾಡುವಂತಾಗಲು ನಮ್ಮ ಸರ್ಕಾರ ಎಲ್ಲ ಕ್ರಮ ಕೈಗೊಂಡಿದೆ. ಇನ್ನು ತಿಂಗಳಿಗೆ 5-10 ಲಕ್ಷ ರೂ.ಗಳ ವ್ಯವಹಾರ ನಡೆಸುವಂಥ ಸ್ವಯಂ ಸೇವಾ ಸಂಸ್ಥೆಗಳು ಮುಂದಿನ ದಿನಗಳಲ್ಲಿ ತಿಂಗಳೊಂದಕ್ಕೆ 50 ಲಕ್ಷಗಳಷ್ಟು ವ್ಯವಹಾರ ನಡೆಸಬೇಕೆಂಬ ಆಶಯವನ್ನು ಸರ್ಕಾರ ಹೊಂದಿದೆ ಎಂದು ಮುಖ್ಯಮಂತ್ರಿಯವರು ಹೇಳಿದರು.

ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ, ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಕೃಷ್ಣ ಪಿ.ವೊಡೆ, ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ.ಸೋಮಶೇಖರ್, ಸುಮಂಗಲಿ ಸೇವಾ ಆಶ್ರಮದ ಸುಶೀಲಮ್ಮ ಸೇರಿದಂತೆ ಮತ್ತಿತರ ಗಣ್ಯರು ಉಪಸ್ಥಿತರಿದ್ದರು. ಕರ್ನಾಟಕ ರಾಜ್ಯ ಸ್ವಯಂಸೇವಾ ಸಂಸ್ಥೆಗಳ ಒಕ್ಕೂಟ, ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಸುಮಂಗಲಿ ಸೇವಾ ಆಶ್ರಮದ ಸಂಯುಕ್ತಾಶ್ರಯದಲ್ಲಿ ಸ್ವಯಂಸೇವಾ ಸಂಸ್ಥೆಗಳ ಸಮಾವೇಶ ನಡೆಯಿತು.

ಸುಮಂಗಲಿ ಸೇವಾಶ್ರಮದ ಮೂಲಕ ಹಲವರ ಬಾಳಿಗೆ ದಾರಿದೀಪವಾದ ಸುಶೀಲಮ್ಮನವರು ನಮಗೆಲ್ಲ ಮದರ್ ತೆರೆಸಾ ಇದ್ದಂತೆ ಎಂದು ಸಿಎಂ ಬಸವರಾಜ ಬೊಮ್ಮಾಯಿ ಅವರು ಬಣ್ಣಿಸಿದರು. ನಾವು ದೂರದವರನ್ನು ಹೊಗಳುವ ಮೂಲಕ ನಮ್ಮ ಹತ್ತಿರದಲ್ಲಿರುವವರನ್ನೇ ಮರೆಯುತ್ತೇವೆ. ಹಾಗಾಗಬಾರದು, ಸೇವಾ ಮನೋಭಾವನೆಯಿಂದ ಸಮಾಜಮುಖಿ ಸೇವೆಯಲ್ಲಿ ತಮ್ಮನ್ನು ತಾವು ತಡಗಿಸಿಕೊಂಡ ನಮ್ಮ ಸುಶೀಲಮ್ಮ ಅವರು ಮದರ್ ತೆರೆಸಾ ಅವರಿಗಿಂತ ಕಡಿಮೆಯಲ್ಲ ಎಂದು ಮುಖ್ಯಮಂತ್ರಿಯವರು ಹೇಳಿದರು.

ವೇದಮೂರ್ತಿ ಪತ್ರಿಕೆ
ಜೂನ್ 23–29, 2022

ಸತ್ಯವ್ರತ, ಶ್ಯಾಮರಾಜ ಅಯ್ಯಂಗಾರ್, ಟಿ.ಆರ್.ಶಾಮಣ್ಣ, ಸೀತಾ ಶರಣ್ ಶರ್ಮ ಸ್ಮಾರಕ ದತ್ತಿ ಉಪನ್ಯಾಸ

ಗಾಂಧಿ ಶಾಂತಿ ಪ್ರತಿಷ್ಠಾನ ಮತ್ತು ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜು, ಗಾಂಧಿ ಅಧ್ಯಯನ ಕೇಂದ್ರ , ಅಮರ ಬಾಪು ಚಿಂತನ ಸಹಯೋಗದಲ್ಲಿ ಸತ್ಯವ್ರತ, ಶ್ಯಾಮರಾಜ ಅಯ್ಯಂಗಾರ್, ಟಿ.ಆರ್.ಶಾಮಣ್ಣ, ಸೀತಾ ಶರಣ್ ಶರ್ಮ ಸ್ಮಾರಕ ದತ್ತಿ ಉಪನ್ಯಾಸವನ್ನು ಜೂನ್ 18 ಶನಿವಾರದಂದು ನಗರದ ಶೇಷಾದ್ರಿಪುರಂನ ಶೇಷಾದ್ರಿಪುರಂ ಶಿಕ್ಷಣ ದತ್ತಿ ಸಭಾಂಗಣ ಆಯೋಜಿಸಲಾಗಿತ್ತು.

ಹಿರಿಯ ಶಿಕ್ಷಣ ತಜ್ಞ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಹಾಗೂ ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌ. ಪ್ರಧಾನ ಕಾರ್ಯದರ್ಶಿ, ನಾಡೋಜ ಡಾ. ವೂಡೇ ಪಿ. ಕೃಷ್ಣ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತ ಗಾಂಧಿ ಕಲ್ಪನೆಯ ಭಾರತ ಇಂದು ಸಾಧ್ಯವಾಗಿದೆಯೇ ? ನವಭಾರತ ನಿರ್ಮಾಣದಲ್ಲಿ ಗಾಂಧಿ ಚಿಂತನೆಗಳ ಪಾತ್ರ ಬಹಳ ದೊಡ್ಡದು. ಗ್ರಾಮಸ್ವರಾಜ್ಯದ ಕಲ್ಪನೆ ಮುಂದಿಟ್ಟು ಶ್ರೀಸಾಮಾನ್ಯನ ಬದುಕು ಹಸನಾಗಬೇಕು ಎಂದು ಬಯಸಿದ್ದ ಗಾಂಧಿ ವಿಚಾರಧಾರೆ ಇಂದಿಗೂ ಪ್ರಸ್ತುತ ಎಂದು ಅಭಿಪ್ರಾಯ ಪಟ್ಟರು.

'ವರ್ತಮಾನ ಭಾರತ ಮತ್ತು ಗಾಂಧಿ' ವಿಷಯದ ಕುರಿತು ದತ್ತಿ ಉಪನ್ಯಾಸವನ್ನು ಕಲಬುರ್ಗಿಯ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಪ್ರಾಧ್ಯಾಪಕರಾದ ಡಾ.ವಿಕ್ರಂ ವಿಸಾಜಿ ನೀಡುತ್ತ 'ನನ್ನ ಜೀವನವೇ ನನ್ನ ಸಂದೇಶ' ಎಂದು ನುಡಿದಂತೆ ನಡೆದ ಗಾಂಧಿ ಸತ್ಯಾಗ್ರಹ –ಅಹಿಂಸೆ ಎಂಬ ಎರಡು ಶಕ್ತಿಗಳಿಂದ ನೈತಿಕ ಮೌಲ್ಯಗಳ ಬಂಧವನ್ನು ಗಂಟು ಮಾಡಿದರು. ಆತ್ಮಶುದ್ಧಿಯಿಂದ ದಾಳಿಯ ಅಂತರ್ ದೃಷ್ಟಿಯೊಂದಿ ಎಲ್ಲ ವಲಯಗಳ



ಜನರಲ್ಲಿ ಸ್ವತಂತ್ರ ಆಲೋಚನಾಕ್ರಮದಿಂದ ಏಕೆ ಮುನ್ನಡೆಯಬೇಕೆಂದು ನಾವು ಜೀವನದಿಂದ ಕಲಿಯಬಹುದು ಎಂದು ಹೇಳಿದರು.

ವಿಶೇಷ ಆಹ್ವಾನಿತರಾಗಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಭಾಗವಹಿಸಿ ಭವಿಷ್ಯದ ಆಪಾಯಗಳಿಗೆ ಗಾಂಧಿ ಚಿಂತನೆಗಳಲ್ಲಿ ಪರಿಹಾರವಿದೆ. ಗಾಂಧಿ– ಅಂಬೇಡ್ಕರ್ ರ ವಿವೇಕಾನಂದರ ಚಿಂತನೆಗಳನ್ನು ಓದುವುದರಿಂದ ವರ್ತಮಾನದ ಭಾರತ ಓದಿದಂತೆ ಎಂದು ತಿಳಿಸಿದರು. ಇದೇ ಸಂದರ್ಭದಲ್ಲಿ ಗಾಂಧಿ ತತ್ವ ಪ್ರಸರಣದ ದ್ವೈಮಾಸಿಕ–ತ್ರೈಮಾಸಿಕ ಪತ್ರಿಕೆ 'ಅಮರ ಬಾಪು ಚಿಂತನ'ದ ದಶಮಾನೋತ್ಸವ ವಿಶೇಷ ಸಂಚಿಕೆಯನ್ನು ವೇದಿಕೆ ಮೇಲಿನ ಗಣ್ಯರು ಬಿಡುಗಡೆ ಮಾಡಿದರು.

ಗಾಂಧೀ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಡೇರಿಗೆ ಲೋಕೇಶ್ ಅಧ್ಯಕ್ಷತೆ ವಹಿಸಿದ್ದ ಸಮಾರಂಭದಲ್ಲಿ ಗಾಂಧಿ ಶಾಂತಿ ಪ್ರತಿಷ್ಠಾನದ ಕಾರ್ಯದರ್ಶಿ ಡಾ. ಸತ್ಯಮಂಗಲ ಮಹಾದೇವ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜಿನ ಪ್ರಾಂಶುಪಾಲ ಪ್ರೊ. ಎನ್.ಎಸ್.ಸತೀಶ್, ಡಾ.ರಾಮಲಿಂಗೇಶ್ವರ (ಸಿಸಿರಾ) ಉಪಸ್ಥಿತರಿದ್ದರು. ಅನುಪಮಾ ನಾಡಿಗೇರ್ ತಂಡದಿಂದ ಪ್ರಾರ್ಥನೆ ನಡೆಯಿತು.

ವಿಶ್ವವಾಣಿ

23.06.2022 ಗುರುವಾರ
vishwavani.news

ಗಾಂಧೀ ಜಯಂತಿಯಂದು ಯೋಜನೆ ಆರಂಭಿಸಲು ನಿರ್ಧಾರ-ಸಿಎಂ । ಆಯ್ದ ಸ್ತ್ರೀಶಕ್ತಿ ಸಂಘಗಳಿಗೆ 1.5 ಲಕ್ಷ ರು. ನೆರವು ಕುರಿತು ಬಜೆಟ್‌ನಲ್ಲಿ ಘೋಷಿಲಾಗಿತ್ತು

ಸ್ತ್ರೀಶಕ್ತಿಗೆ ನೆರವು ಯೋಜನೆ: ಅ.2ರಂದು ಚಾಲನೆ


ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯದಲ್ಲಿ ಸ್ತ್ರೀಶಕ್ತಿ ಸ್ವಸಹಾಯ ಸಂಘಗಳಿಗೆ 1.5 ಲಕ್ಷ ರು. ಆರ್ಥಿಕ ನೆರವು ನೀಡುವ ಯೋಜನೆಗೆ ಅ.2ರ ಗಾಂಧಿ ಜಯಂತಿಯಂದು ಚಾಲನೆ ನೀಡುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಆಯ್ದ ಸ್ವಸಹಾಯ ಸಂಘಗಳಿಗೆ ತಲಾ 1.50 ಲಕ್ಷ ಆರ್ಥಿಕ ನೆರವು ಯೋಜನೆಯನ್ನು 2022-23ನೇ ಸಾಲಿನ ಬಜೆಟ್‌ನಲ್ಲಿ ಘೋಷಿಸಿದ್ದ ಮುಖ್ಯಮಂತ್ರಿ, ಇದಕ್ಕಾಗಿ 500 ಕೋಟಿ ರು. ತೆಗೆದಿರಿಸಿದ್ದರು. ಇದೀಗ ಅ.2ರಿಂದ ಯೋಜನೆಗೆ ಚಾಲನೆ ನೀಡಲು ತೀರ್ಮಾನಿಸಿದ್ದಾರೆ.

ಕರ್ನಾಟಕ ರಾಜ್ಯ ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟ, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಹಾಗೂ ಸುಮಂಗಲಿ ಸೇವಾ ಆಶ್ರಮದ ಆಶ್ರಯದಲ್ಲಿ ಬೆಂಗಳೂರಿನಲ್ಲಿ ನಡೆದ ರಾಜ್ಯ ಮಟ್ಟದ ಸ್ವಯಂ ಸೇವಾ ಸಂಸ್ಥೆಗಳ ಸಮಾವೇಶ ಉದ್ಘಾಟಿಸಿ ಮುಖ್ಯಮಂತ್ರಿ ಮಾತನಾಡಿದರು.

ಸ್ತ್ರೀಶಕ್ತಿ ಸಂಘಗಳು ರಾಜ್ಯದ ಆರ್ಥಿಕತೆಗೆ ಕೊಡುಗೆ ನೀಡಲು ಅನುಕೂಲವಾಗುವಂತೆ ಪ್ರಥಮ ಬಾರಿ ಆಯವ್ಯಯದಲ್ಲಿ 1.5 ಲಕ್ಷ ರು. ಆರ್ಥಿಕ ನೆರವು ನೀಡುವುದರ ಜತೆಗೆ ಸಂಘಗಳನ್ನು ಲ್ಯಾಂಕರ್ ಬ್ಯಾಂಕ್‌ಗೆ ಜೋಡಣೆ ಮಾಡುವುದು, ಯಂತ್ರೋಪಕರಣ ಒದಗಿಸುವುದು, ಉತ್ಪನ್ನಗಳಿಗೆ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸುವ ಕಾರ್ಯ ಮಾಡಲಾಗುವುದು. ಅಮೆಜಾನ್‌ನಂತಹ ಆನ್‌ಲೈನ್ ವೇದಿಕೆಗಳಲ್ಲಿ ಮಹಿಳಾ ಸ್ವಸಹಾಯ ಸಂಘಗಳ ಉತ್ಪನ್ನಗಳನ್ನು ಮಾರಾಟ ಮಾಡುವ ವ್ಯವಸ್ಥೆ ಮಾಡಲಾಗುವುದು. ಪ್ರಾಯೋಗಿಕವಾಗಿ ಎಲಿವೇಟ್ ಕಾರ್ಯಕ್ರಮ ಪ್ರಾರಂಭಿಸಿದ್ದು, ಒಂದು ಸ್ತ್ರೀಶಕ್ತಿ ಸಂಘ ತಿಂಗಳಿಗೆ ಸುಮಾರು 50 ಲಕ್ಷ ರು. ವಹಿವಾಟನ್ನು ಮಾಡುತ್ತಿದೆ. ಇದು ಸಂಘಟಿತ ಶ್ರಮದ ಶಕ್ತಿ ಎಂದು ತಿಳಿಸಿದರು.



ಬೆಂಗಳೂರಿನಲ್ಲಿ ನಡೆದ ರಾಜ್ಯ ಮಟ್ಟದ ಸ್ವಯಂ ಸೇವಾ ಸಂಸ್ಥೆಗಳ ಸಮಾವೇಶದಲ್ಲಿ ಸುಮಂಗಲಿ ಸೇವಾಶ್ರಮದ ಅಧ್ಯಕ್ಷೆ ಸುಶೀಲಮ್ಮ ಅವರನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸನ್ಮಾನಿಸಿದರು. ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಸಚಿವ ಮುರುಗೇಶ್ ನಿರಾಣಿ, ಡಾ.ಸಿ.ಸೋಮಶೇಖರ್ ಮತ್ತಿತರರು ಇದ್ದರು.

ಸೇವಾ ಸಂಸ್ಥೆಗಳಿಗೆ ಗುರಿ, ಕ್ರಿಯಾ ಯೋಜನೆ ಬೇಕು: ಈ ದೇಶದಲ್ಲಿನ ಮಹಿಳೆಯರ ದುಡಿಮೆಗೆ ಬೆಲೆ ಕೊಡಬೇಕಿದೆ. ಅವರಿಗೆ ಆರ್ಥಿಕ ಸ್ವಾತಂತ್ರ್ಯ ಬಂದಾಗ ಶೈಕ್ಷಣಿಕ, ಸಾಮಾಜಿಕವಾಗಿಯೂ ಸಬಲರಾಗುತ್ತಾರೆ. ಈ ಹಿನ್ನೆಲೆಯಲ್ಲಿ ಸೇವಾಸಂಸ್ಥೆಗಳು ಸಮಾನತೆಯ ಕ್ರಾಂತಿ ತರುವಲ್ಲಿ ಮಹತ್ವದ ಪಾತ್ರ ವಹಿಸುತ್ತಿದೆ. ಒಳ್ಳೆಯ ಕೆಲಸ ಮಾಡುವ ಚಿಂತನೆ ಪ್ರೇರಣೆ ದೊರಕುತ್ತದೆ. ಒಳ್ಳೆಯ ಕೆಲಸಗಳನ್ನು ಮಾಡುವ ಚಿಂತನೆ ಹಾಗೂ ಕ್ರಿಯಾಯೋಜನೆ ಈ ಸೇವಾ ಸಂಸ್ಥೆಗಳಿಗೆ ಇರಬೇಕು. ಪ್ರತಿ ವರ್ಷ ಕನಿಷ್ಠ 5 ಕ್ಷೇತ್ರಗಳಿಗೆ ಗುರಿ ನಿಗದಿಪಡಿಸಿ, ಅದನ್ನು ಸಾಧಿಸಲು ಪ್ರಯತ್ನಿಸಬೇಕು. ಇದಕ್ಕೆ ಸರಕಾರವೂ ಸಹಕಾರ ನೀಡುತ್ತದೆ ಎಂದರು.

> ರಾಜ್ಯದ ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿ ಸ್ತ್ರೀ ಶಕ್ತಿಯ ಸಬಲೀಕರಣ ಆಗಬೇಕು. ಸ್ಥಳೀಯ ಮಟ್ಟದ ಸಂಘ ಸಂಸ್ಥೆಗಳ ಉತ್ಪನ್ನಗಳು ವಿದೇಶದಲ್ಲಿ ಮಾರಾಟವಾಗಬೇಕು ಎನ್ನುವ ಆಸೆ ಸರಕಾರದ್ದು. ಆಗ ನಮ್ಮ ಆರ್ಥಿಕತೆಗೆ ಶಕ್ತಿ ಬರುತ್ತಿದೆ.
>
> -ಬಸವರಾಜ ಬೊಮ್ಮಾಯಿ ಸಿಎಂ

ಕೇಂದ್ರ ಕೃಷಿ ಹಾಗೂ ರೈತ ಕಲ್ಯಾಣ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ, ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ, ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಸಿ.ಸೋಮಶೇಖರ್, ಸುಮಂಗಲಿ ಸೇವಾಶ್ರಮದ ಅಧ್ಯಕ್ಷೆ ಸುಶೀಲಮ್ಮ ಮತ್ತಿತರರು ಇದ್ದರು.

ಸ್ಥಳೀಯ ಕುಶಲಕರ್ಮಿಗಳ ಉತ್ಪನ್ನಗಳಿಗೆ ಪ್ರೋತ್ಸಾಹ

ರೈತ ಉತ್ಪನ್ನಗಳ ಸಂಘಗಳ ಮೂಲಕ ರೈತ ಉತ್ಪನ್ನಗಳ ಮೌಲ್ಯವರ್ಧನೆ, ಹೆಚ್ಚಿನ ದರದಲ್ಲಿ ಮಾರಾಟಕ್ಕೆ ಯೋಜನೆಗಳನ್ನು ಕೇಂದ್ರ ಸರಕಾರ ಪ್ರಾರಂಭಿಸಿದ್ದು, ಅದನ್ನು ಕರ್ನಾಟಕದಲ್ಲಿ ಉತ್ತಮ ರೀತಿಯಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಮೀನುಗಾರಿಕೆ, ಕುಶಲಕರ್ಮಿಗಳಿಗೂ ಈ ಯೋಜನೆಗಳನ್ನು ವಿಸ್ತರಣೆ ಮಾಡಲಾಗುತ್ತಿದೆ. ಚನ್ನಪಟ್ಟಣದಲ್ಲಿ ಆಟಿಕೆ, ಇಳಕಲ್, ಬೆಳಗಾವಿ, ಶಹಾಪುರ, ಶಿಡ್ಲಘಟ್ಟ ಮತ್ತು ಮೊಳಕಾಲ್ಮೂರು ಸೀರೆ ಮೈಕ್ರೋ ಕ್ಲಸ್ಟರ್‌ಗಳನ್ನು ಅಭಿವೃದ್ಧಿಪಡಿಸಲಾಗುವುದು. ಆ ಮೂಲಕ ಸ್ಥಳೀಯ ಕುಶಲಕರ್ಮಿಗಳ ಉತ್ಪನ್ನಗಳಿಗೆ ಪ್ರೋತ್ಸಾಹ ನೀಡಲಾಗುತ್ತಿದೆ ಎಂದು ಸಿಎಂ ಬೊಮ್ಮಾಯಿ ಹೇಳಿದರು.



ಬೆಂಗಳೂರಿನಲ್ಲಿ ನಡೆದ ರಾಜ್ಯ ಮಟ್ಟದ ಸ್ವಯಂ ಸೇವಾ ಸಂಸ್ಥೆಗಳ ಸಮಾವೇಶದಲ್ಲಿ ಸ್ತ್ರೀಶಕ್ತಿ ಗುಂಪುಗಳು ತಯಾರಿಸಿದ ಉತ್ಪನ್ನಗಳ ಪ್ರದರ್ಶನವನ್ನು ಕೇಂದ್ರ ಕೃಷಿ ಹಾಗೂ ರೈತ ಕಲ್ಯಾಣ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ವೀಕ್ಷಿಸಿದರು. ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಸಿ.ಸೋಮಶೇಖರ್, ಸುಮಂಗಲಿ ಸೇವಾಶ್ರಮದ ಅಧ್ಯಕ್ಷೆ ಸುಶೀಲಮ್ಮ ಇದ್ದರು.

ವಿಜಯ ಕರ್ನಾಟಕ VK
ಗುರುವಾರ,23 ಜೂನ್ 2022,
ಬೆಂಗಳೂರು

ಸ್ತ್ರೀಶಕ್ತಿ ಸಂಘಗಳಿಗೆ ಆರ್ಥಿಕ ನೆರವು ಯೋಜನೆ

ಅ.2ರಂದು ಚಾಲನೆ ನೀಡಲು ಸರಕಾರ ತೀರ್ಮಾನ: ಸಿಎಂ ಬೊಮ್ಮಾಯಿ

ವಿಕ ಸುದ್ದಿಲೋಕ ಬೆಂಗಳೂರು

ಸ್ತ್ರೀ ಶಕ್ತಿ ಸಂಘಗಳಿಗೆ ಆರ್ಥಿಕ ನೆರವು ನೀಡುವ ಸರಕಾರದ ಯೋಜನೆಗೆ ಅ.2ರಂದು ಚಾಲನೆ ನೀಡಲು ತೀರ್ಮಾನಿಸಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಕರ್ನಾಟಕ ರಾಜ್ಯ ಸ್ವಯಂಸೇವಾ ಸಂಸ್ಥೆಗಳ ಒಕ್ಕೂಟವು ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಹಾಗೂ ಸುಮಂಗಲಿ ಸೇವಾ ಶ್ರಮದ ಸಂಯುಕ್ತಾಶ್ರಯದಲ್ಲಿ ನಗರದ ಗಾಂಧಿ ಭವನದಲ್ಲಿ ಆಯೋಜಿಸಿದ್ದ ರಾಜ್ಯ ಮಟ್ಟದ ಸ್ವಯಂ ಸೇವಾ ಸಂಸ್ಥೆಗಳ ಸಮಾವೇಶವನ್ನು ಉದ್ಘಾಟಿಸಿ ಬುಧವಾರ ಅವರು ಮಾತನಾಡಿದರು.

''ಸ್ತ್ರೀಶಕ್ತಿ ಸಂಘಗಳು ರಾಜ್ಯದ ಆರ್ಥಿಕತೆಗೆ ಕೊಡುಗೆ ನೀಡಲು ಅನುಕೂಲವಾಗುವಂತೆ ಪ್ರಥಮ ಬಾರಿ ಆಯವ್ಯಯದಲ್ಲಿ 1.5 ಲಕ್ಷ ರೂ. ಆರ್ಥಿಕ ನೆರವು, ಬ್ಯಾಂಕರ್ ಬ್ಯಾಂಕ್ ಜೋಡಣೆ, ಯಂತ್ರೋಪಕರಣ, ಪ್ರಾಜೆಕ್ಟ್‌ಗಳು, ಉತ್ಪನ್ನಗಳಿಗೆ ಮಾರುಕಟ್ಟೆ ವ್ಯವಸ್ಥೆ ಮಾಡಲಾಗುವುದು. ಅಮೆಜಾನ್‌ನಂತಹ ಆನ್‌ಲೈನ್ ವೇದಿಕೆಗಳಲ್ಲಿ ಈ ಉತ್ಪನ್ನ ಮಾರಾಟ ಮಾಡುವ ವ್ಯವಸ್ಥೆ ಮಾಡಲಾಗುವುದು. ಪ್ರಾಯೋಗಿಕವಾಗಿ ಎಲಿವೇಟ್ ಕಾರ್ಯಕ್ರಮ ಪ್ರಾರಂಭಿಸಿದ್ದು, ಒಂದು ಸ್ತ್ರೀಶಕ್ತಿ ಸಂಘ ತಿಂಗಳಿಗೆ ಸುಮಾರು 50 ಲಕ್ಷ ವಹಿವಾಟು ನಡೆಸುತ್ತಿದೆ. ಇದು ಸಂಘಟಿತವಾದ ಶ್ರಮದ ಶಕ್ತಿ,'' ಎಂದು ತಿಳಿಸಿದರು.



ನಗರದ ಗಾಂಧಿ ಭವನದಲ್ಲಿ ಆಯೋಜಿಸಿದ್ದ ರಾಜ್ಯ ಮಟ್ಟದ ಸ್ವಯಂ ಸೇವಾ ಸಂಸ್ಥೆಗಳ ಸಮಾವೇಶದಲ್ಲಿ ಸುಶೀಲಮ್ಮ ಅವರನ್ನು ಸನ್ಮಾನಿಸಲಾಯಿತು.

ಗುರಿ ಮತ್ತು ಕ್ರಿಯಾ ಯೋಜನೆ ಇರಬೇಕು: ಸೇವಾಸಂಸ್ಥೆಗಳು ಸಮಾನತೆಯ ಕ್ರಾಂತಿ ತರುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಸಂಘ- ಸಂಸ್ಥೆಗಳಿಗೆ ಒಳ್ಳೆಯ ಕೆಲಸಗಳನ್ನು ಮಾಡುವ ಚಿಂತನೆ ಹಾಗೂ ಕ್ರಿಯಾಯೋಜನೆ ಇರಬೇಕು. ಪ್ರತಿ ವರ್ಷ ಕನಿಷ್ಠ ಐದು ಕ್ಷೇತ್ರಗಳ ಗುರಿ ನಿಗದಿಪಡಿಸಿ ಸಾಧಿಸಲು ಪ್ರಯತ್ನಿಸಿದರೆ ಅಂತಹ ಸಂಸ್ಥೆಗಳಿಗೆ ಸರಕಾರ ಪೂರಕ ಸಹಕಾರ ನೀಡುತ್ತದೆ ಎಂದರು.

ಮಹಿಳೆಯರಲ್ಲಿ ನಿಸರ್ಗದತ್ತವಾದ ಶಕ್ತಿ

''ಮಹಿಳೆಯರು ನಿಸರ್ಗದತ್ತವಾಗಿ ಶಕ್ತಿ ಹೊಂದಿರುತ್ತಾರೆ. ಆದರಿಂದಲೇ ಎಲ್ಲವನ್ನೂ ಸಾಧಿಸಲು ಸಾಧ್ಯ. ನಮ್ಮದು ಉಳಿತಾಯ ಮಾಡುವ ಸಂಸ್ಕೃತಿ. ಸಂಸ್ಕೃತಿಯ ಫಲವನ್ನು ನಾವು ಅನುಭವಿಸುತ್ತಿದ್ದೇವೆ. ದುಡಿಮೆಯನ್ನು ಗುರುತಿಸಬೇಕು. ನಿಮ್ಮ ಶ್ರಮಕ್ಕೆ ಬೆಲೆ, ಸ್ಥಾನಕ್ಕೆ ಗೌರವ, ನಿಮ್ಮ ಅಸ್ತಿತ್ವಕ್ಕೆ ದೊಡ್ಡ ಗುರುತು, ಬೆಂಬಲ ಕೊಟ್ಟಾಗ ದೇಶ ಸಮೃದ್ಧವಾಗಿ ಅಭಿವೃದ್ಧಿಯಾಗುತ್ತದೆ. ಆ ನಿಟ್ಟಿನಲ್ಲಿ ನಮ್ಮ ಸರಕಾರ ಬದ್ಧವಾಗಿದೆ. ಸರಕಾರ ಮಹಿಳೆಯರಿಗೆ ರೂಪಿಸಿರುವ ಯೋಜನೆಗಳ ಲಾಭ ಪಡೆದುಕೊಳ್ಳಬೇಕು,'' ಎಂದರು.

''ಸುಮಂಗಲಿ ಸೇವಾಶ್ರಮದ ಸಂಸ್ಥಾಪಕ ಅಧ್ಯಕ್ಷೆ ಸುಶೀಲಮ್ಮನವರ ಸೇವೆ ನಮ್ಮೆಲ್ಲರಿಗೂ ಆದರ್ಶಪ್ರಾಯವಾಗಿದೆ,'' ಎಂದು ಶ್ಲಾಘಿಸಿದ ಅವರು, ''ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿಯವರು ಸುಮಾರು 75 ಸಾವಿರ ಜನರಿಗೆ ಉದ್ಯೋಗ ನೀಡಿದ್ದಾರೆ. ಅವರು ಆಡಿದ್ದನ್ನು ಮಾಡಿ ತೋರಿಸುವವರು,'' ಎಂದರು.

ಇದೇ ವೇಳೆ ಸುಶೀಲಮ್ಮ' ಅವರನ್ನು ಅಭಿನಂದಿಸಲಾಯಿತು. ಕಾರ್ಯಕ್ರಮದಲ್ಲಿ ರಾಜ್ಯದ ನಾನಾ ಭಾಗಗಳಿಂದ 200ಕ್ಕೂ ಹೆಚ್ಚು ಸಂಘ- ಸಂಸ್ಥೆಗಳು ಭಾಗವಹಿಸಿದ್ದವು. ಗಾಂಧಿ ಭವನದ ಆವರಣದಲ್ಲಿ ಸಂಘ- ಸಂಸ್ಥೆಗಳು ತಯಾರಿಸಿದ್ದ ನಾನಾ ಉತ್ಪನ್ನಗಳ ಮಾರಾಟ ಮತ್ತು ಪ್ರದರ್ಶನ ಆಯೋಜಿಸಲಾಗಿತ್ತು.

ಸಮಾರಂಭದಲ್ಲಿ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಆವರು ಸ್ತ್ರೀ ಶಕ್ತಿ ಸಂಘಗಳು ತಯಾರಿಸಿ ತಂದಿದ್ದ ಉಡುಪು ಮತ್ತಿತರ ವಸ್ತುಗಳನ್ನು ವೀಕ್ಷಿಸಿದರು. ಸಚಿವ ಮುರುಗೇಶ್ ನಿರಾಣಿ ಮತ್ತಿತರರು ಉಪಸ್ಥಿತರಿದ್ದರು.

ಉದಯಕಾಲ

23 Jun 2022

ಸ್ತ್ರೀಶಕ್ತಿ ಸಂಘಕ್ಕೆ ಆರ್ಥಿಕ ನೆರವು ಯೋಜನೆ: ಸಿಎಂ

ಅಕ್ಟೋಬರ್ 2ರಂದು ರಾಜ್ಯಾದ್ಯಂತ ಚಾಲನೆ



ಉದಯಕಾಲ ನ್ಯೂಸ್

ಬೆಂಗಳೂರು: ಸ್ತ್ರೀಶಕ್ತಿ ಸಂಘಗಳಿಗೆ ಆರ್ಥಿಕ ನೆರವು ನೀಡುವ ಯೋಜನೆಗೆ ಅಕ್ಟೋಬರ್ 2ರಂದು ಚಾಲನೆ ನೀಡಲು ತೀರ್ಮಾನಿಸಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಕರ್ನಾಟಕ ರಾಜ್ಯ ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟ, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಬೆಂಗಳೂರು ಹಾಗೂ ಸುಮಂಗಲಿ ಸೇವಾ ಆಶ್ರಮ- ಬೆಂಗಳೂರು ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ರಾಜ್ಯ ಮಟ್ಟದ ಸ್ವಯಂ ಸೇವಾ ಸಂಸ್ಥೆಗಳ ಸಮಾವೇಶ ಉದ್ಘಾಟಿಸಿ ಮಾತನಾಡಿದರು.

ಸ್ತ್ರೀಶಕ್ತಿ ಸಂಘಗಳು ರಾಜ್ಯದ ಆರ್ಥಿಕತೆಗೆ ಕೊಡುಗೆ ನೀಡಲು ಅನುಕೂಲವಾಗುವಂತೆ ಪ್ರಥಮ ಬಾರಿ ಆಯವ್ಯಯದಲ್ಲಿ 1.5 ಲಕ್ಷ ರೂ. ಆರ್ಥಿಕ ನೆರವು, ಆ್ಯಂಕರ್ ಬ್ಯಾಂಕ್ ಜೋಡಣೆ, ಯಂತ್ರೋಪಕರಣ, ಪ್ರಾಜೆಕ್ಟ್‌ಗಳು, ಉತ್ಪನ್ನಗಳಿಗೆ ಮಾರುಕಟ್ಟೆ ವ್ಯವಸ್ಥೆ ಮಾಡಲಾಗುವುದು. ಅಮೆಜಾನ್‌ನಂತಹ ಆನ್‌ಲೈನ್ ವೇದಿಕೆಗಳಲ್ಲಿ ಈ ಉತ್ಪನ್ನ ಮಾರಾಟ ಮಾಡುವ ವ್ಯವಸ್ಥೆ ಮಾಡಲಾಗುವುದು. ಪ್ರಾಯೋಗಿಕವಾಗಿ ಎಲಿವೇಟ್ ಕಾರ್ಯಕ್ರಮ ಪ್ರಾರಂಭಿಸಿದ್ದು, ಒಂದು ಸ್ತ್ರೀಶಕ್ತಿ ಸಂಘ ತಿಂಗಳಿಗೆ ಸುಮಾರು 50 ಲಕ್ಷ ವಹಿವಾಟನ್ನು ಮಾಡುತ್ತಿದೆ. ಇದು ಸಂಘಟಿತವಾದ ಶ್ರಮದ ಶಕ್ತಿ ಎಂದು ತಿಳಿಸಿದರು.

ರಾಜ್ಯದ ಗ್ರಾಮೀಣ ಹಾಗೂ ನಗರ ಪ್ರದೇಶದ ಸ್ತ್ರೀಶಕ್ತಿಯ ಸಬಲೀಕರಣ ಆಗಬೇಕು. ನಮ್ಮ ಸ್ಥಳೀಯಮಟ್ಟದ ಸಂಘಸಂಸ್ಥೆಗಳ ಉತ್ಪನ್ನಗಳು ವಿದೇಶದಲ್ಲಿ ಮಾರಾಟವಾಗಬೇಕು ಎನ್ನುವ ಆಸೆ ಸರ್ಕಾರದ್ದು. ಆಗ ನಮ್ಮ ಆರ್ಥಿಕತೆಗೆ ಬಹಳ ಶಕ್ತಿ ಬರುತ್ತದೆ. ಈ ದೇಶದಲ್ಲಿನ ಮಹಿಳೆಯರ ದುಡಿಮೆಗೆ ಬೆಲೆ ಕೊಡಬೇಕಿದೆ. ಅವರಿಗೆ ಆರ್ಥಿಕ ಸ್ವಾತಂತ್ರ್ಯ ಬಂದಾಗ ಶೈಕ್ಷಣಿಕ, ಸಾಮಾಜಿಕವಾಗಿಯೂ ಸಬಲರಾಗುತ್ತಾರೆ. ಈ ಹಿನ್ನೆಲೆಯಲ್ಲಿ ಸೇವಾಸಂಸ್ಥೆಗಳು ಸಮಾನತೆಯ ಕ್ರಾಂತಿ ತರುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಒಳ್ಳೆಯ ಕೆಲಸ ಮಾಡುವ ಚಿಂತನೆ ಪ್ರೇರಣೆ ದೊರಕುತ್ತದೆ. ಒಳ್ಳೆಯ ಕೆಲಸ ಮಾಡುವ ಚಿಂತನೆ ಹಾಗೂ ಕ್ರಿಯಾಯೋಜನೆ ಇರಬೇಕು. ಪ್ರತಿ ವರ್ಷ ಕನಿಷ್ಠ 5 ಕ್ಷೇತ್ರಗಳಿಗೆ ಗುರಿ ಸಾಧಿಸಲು ಸರ್ಕಾರ ಪೂರಕ ಸಹಕಾರ ನೀಡುತ್ತದೆ ಎಂದು ವಿವರಿಸಿದರು.

ದುಡಿಮೆಯೇ ದೊಡ್ಡಪ್ಪ

ದೇಶದ ಕರಾವಾರು ಆದಾಯದಲ್ಲಿ ರಾಜ್ಯ 3ನೇ ಸ್ಥಾನದಲ್ಲಿದೆ. ಇದಕ್ಕೆ ಕೇವಲ ರಾಜ್ಯದ 30% ಜನತೆ ಮಾತ್ರ ಕೊಡುಗೆ ನೀಡುತ್ತಿದ್ದು, 70% ಜನತೆ ಜೀವನೋಪಾಯಕ್ಕಾಗಿ ದುಡಿಯುತ್ತಿದ್ದಾರೆ. ಈ 70% ಜನರಿಗೆ ಆರ್ಥಿಕ ನೆರವು, ಮಾರುಕಟ್ಟೆ ವ್ಯವಸ್ಥೆಗಳನ್ನು ನೀಡುವ ಮೂಲಕ ಶ್ರಮಿಕ ವರ್ಗದ ಜನರು ರಾಜ್ಯದ ಆರ್ಥಿಕತೆಗೆ ಕೊಡುಗೆ ನೀಡುವಂತಾಗುತ್ತದೆ. ಈಗ ದುಡಿಮೆಯೇ ದೊಡ್ಡಪ್ಪ. ಕೆಳಹಂತದ ಶ್ರಮಿಕ ವರ್ಗದಿಂದಲೇ ದೇಶ ಕಟ್ಟುವ ಕೆಲಸವಾಗುತ್ತಿದೆ ಎಂದರು.

> ರಾಜ್ಯದ ಗ್ರಾಮೀಣ ಹಾಗೂ ನಗರ ಪ್ರದೇಶದ ಸ್ತ್ರೀಶಕ್ತಿಯ ಸಬಲೀಕರಣ ಆಗಬೇಕು. ನಮ್ಮ ಸ್ಥಳೀಯಮಟ್ಟದ ಸಂಘಸಂಸ್ಥೆಗಳ ಉತ್ಪನ್ನಗಳು ವಿದೇಶದಲ್ಲಿ ಮಾರಾಟವಾಗಬೇಕು ಎನ್ನುವ ಆಸೆ ಸರ್ಕಾರದ್ದು. ಆಗ ನಮ್ಮ ಆರ್ಥಿಕತೆಗೆ ಬಹಳ ಶಕ್ತಿ ಬರುತ್ತದೆ. ಈ ದೇಶದಲ್ಲಿನ ಮಹಿಳೆಯರ ದುಡಿಮೆಗೆ ಬೆಲೆ ಕೊಡಬೇಕಿದೆ. ಅವರಿಗೆ ಆರ್ಥಿಕ ಸ್ವಾತಂತ್ರ್ಯ ಬಂದಾಗ ಶೈಕ್ಷಣಿಕ, ಸಾಮಾಜಿಕವಾಗಿಯೂ ಸಬಲರಾಗುತ್ತಾರೆ.
>
> - ಬಸವರಾಜ ಬೊಮ್ಮಾಯಿ, ಸಿಎಂ

ಸ್ಥಳೀಯ ಕುಲಕಸುಬುಗಳ ಉತ್ಪನ್ನಗಳಿಗೆ ಪ್ರೋತ್ಸಾಹ

ರೈತ ಉತ್ಪನ್ನಗಳ ಸಂಘಗಳ ಮೂಲಕ ರೈತ ಉತ್ಪನ್ನಗಳ ಮೌಲ್ಯವರ್ಧನೆ, ಹೆಚ್ಚಿನ ದರದಲ್ಲಿ ಮಾರಾಟಕ್ಕೆ ಯೋಜನೆಗಳನ್ನು ಕೇಂದ್ರ ಸರ್ಕಾರ ಆರಂಭಿಸಿದ್ದು, ಅದನ್ನು ಕರ್ನಾಟಕದಲ್ಲಿ ಉತ್ತಮ ರೀತಿಯಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಮೀನುಗಾರಿಕೆ, ಕುಲಕಸುಬುಗಳಿಗೂ ಈ ಯೋಜನೆಗಳನ್ನು ವಿಸ್ತರಣೆ ಮಾಡಲಾಗುತ್ತಿದೆ. ಚನ್ನಪಟ್ಟಣದಲ್ಲಿ ಆಟಿಕೆ, ಇಳಕಲ್, ಬೆಳಗಾವಿ ಸಾವಿರ, ಶಿಡ್ಲಘಟ್ಟ ಮತ್ತು ಮೊಳಕಾಲ್ಮೂರು ಸೀರೆ ಮೈಕ್ರೋಕ್ಲಸ್ಟರ್‌ನ್ನು ಅಭಿವೃದ್ಧಿಪಡಿಸಲಾಗುವುದು. ಹೀಗೆ ಸ್ಥಳೀಯ ಕುಲಕಸುಬುಗಳ ಉತ್ಪನ್ನಗಳಿಗೆ ಪ್ರೋತ್ಸಾಹ ನೀಡಲಾಗುತ್ತಿದೆ ಎಂದರು.

ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ ಅವರು ಸುಮಾರು 75 ಸಾವಿರ ಜನರಿಗೆ ಉದ್ಯೋಗ ನೀಡಿದ್ದಾರೆ. ಆಡಿದ್ದನ್ನು ಮಾಡಿ ತೋರಿಸುವವರು. ರಾಜ್ಯವನ್ನು ಸುಭಿಕ್ಷವಾಗಿಸಲು ಸೇವಾ ಸಂಸ್ಥೆಗಳ ಪಾತ್ರ ದೊಡ್ಡದಿದೆ ಎಂದು ತಿಳಿಸಿದರು.

ಹೊಸ ದಿಗಂತ
1
23 Jun 2022

ಮುಂಬರುವ ಅ.2ಕ್ಕೆ ಚಾಲನೆ: ಸಿಎಂ

ಸ್ತ್ರೀಶಕ್ತಿ ಸಂಘಗಳಿಗೆ ನೆರವು ಯೋಜನೆ



• ದಿಗಂತ ವರದಿ, ಬೆಂಗಳೂರು

ಸ್ತ್ರೀಶಕ್ತಿ ಸಂಘಗಳಿಗೆ ಆರ್ಥಿಕ ನೆರವು ನೀಡುವ ಯೋಜನೆಗೆ ಅ.2ರಂದು ಚಾಲನೆ ನೀಡುವ ಕುರಿತು ತೀರ್ಮಾನಿಸಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಸ್ವಯಂಸೇವಾ ಸಂಸ್ಥೆಗಳ ಸಮಾವೇಶ

ಬೆಂಗಳೂರಿನ ಗಾಂಧಿ ಭವನದಲ್ಲಿ ಬುಧವಾರ ನಡೆದ ರಾಜ್ಯ ಮಟ್ಟದ ಸ್ವಯಂಸೇವಾ ಸಂಸ್ಥೆಗಳ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ಸ್ತ್ರೀಶಕ್ತಿ ಸಂಘಗಳು ರಾಜ್ಯದ ಆರ್ಥಿಕತೆಗೆ ಕೊಡುಗೆ ನೀಡಲು ಅನುಕೂಲವಾಗುವಂತೆ ಪ್ರಥಮ ಬಾರಿ ಆಯವ್ಯಯದಲ್ಲಿ 1.5 ಲಕ್ಷ ರೂ. ಆರ್ಥಿಕ ನೆರವು, ವ್ಯವಹಾರ ಬ್ಯಾಂಕ್ ಜೋಡಣೆ, ಯಂತ್ರೋಪಕರಣ, ಉತ್ಪನ್ನಗಳಿಗೆ ಮಾರುಕಟ್ಟೆ ವ್ಯವಸ್ಥೆ ಮಾಡಲಾಗುವುದು. ಅಮೆಜಾನ್‌ನಂತಹ ಆನ್‌ಲೈನ್ ವೇದಿಕೆಗಳಲ್ಲಿ ಈ ಉತ್ಪನ್ನಗಳನ್ನು ಮಾರಾಟ ಮಾಡುವ ವ್ಯವಸ್ಥೆ ಮಾಡಲಾಗುವುದು ಎಂದರು.

ಸ್ಥಳೀಯ ಕುಶಲಕರ್ಮಿಗಳಿಗೆ ಪ್ರೋತ್ಸಾಹ: ರೈತ ಉತ್ಪನ್ನಗಳ ಸಂಘಗಳ ಮೂಲಕ ರೈತ ಉತ್ಪನ್ನಗಳ ಮೌಲ್ಯವರ್ಧನೆ, ಮತ್ಸ್ಯ ವಲಯದಲ್ಲಿ ಮಾರಾಟ ಆಗುವಂತೆ ಯೋಜನೆಗಳನ್ನು ಕೇಂದ್ರ ಆರಂಭಿಸಿದೆ.

ಯೋಜನೆಗಳ ಲಾಭ ಮಹಿಳೆಯರು ಪಡೆಯಲಿ

ಮಹಿಳೆಯರು ನಿಸರ್ಗದತ್ತವಾಗಿ ಶಕ್ತಿಯನ್ನು ಹೊಂದಿರುತ್ತಾರೆ. ಶಕ್ತಿಯ ಗುಣ ತಾಳ್ಮೆ, ಆದ್ದರಿಂದಲೇ ಎಲ್ಲವನ್ನೂ ಸಾಧಿಸಲು ಸಾಧ್ಯ. ನಮ್ಮದು ಉಪಕಾರ ಮಾಡುವ ಸಂಸ್ಕೃತಿ. ಅದನ್ನು ಮಹಿಳೆಯರು ಉತ್ತಮವಾಗಿ ನಿಭಾಯಿಸುತ್ತಾರೆ. ಮಹಿಳೆಯರು ಸರ್ಕಾರ ನೀಡುವ ಎಲ್ಲಾ ಸೌಲಭ್ಯಗಳನ್ನು ಸರಿಯಾಗಿ ಬಳಸಿಕೊಂಡು ಆರ್ಥಿಕವಾಗಿ ಸಬಲರಾಗಬೇಕು. ಇದರಿಂದ ಮಹಿಳೆಯರು ಹಾಗೂ ದೇಶ ಎರಡೂ ಉನ್ನತ ಸ್ಥಾನವನ್ನು ತಲುಪಲು ಸಾಧ್ಯ ಎಂದೆ ಸಿಎಂ ಬೊಮ್ಮಾಯಿ ಅಭಿಪ್ರಾಯಪಟ್ಟರು.

ದೇಶ ಕಟ್ಟುವ ತಳಹಂತದ ಶ್ರಮಿಕ ವರ್ಗ

ಟೈಮ್ಸ್ ಆಫ್ ಕರ್ನಾಟಕ
ಗುರುವಾರ 23 ಜೂನ್ 2022

ಸ್ತ್ರೀಶಕ್ತಿ ಸಂಘಗಳಿಗೆ ಆರ್ಥಿಕ ನೆರವು ಯೋಜನೆ: ಅಕ್ಟೋಬರ್ 2 ರಂದು ಚಾಲನೆ–ಬೊಮ್ಮಾಯಿ



ಬೆಂಗಳೂರು: ಸ್ತ್ರೀಶಕ್ತಿ ಸಂಘಗಳಿಗೆ ಆರ್ಥಿಕ ನೆರವು ನೀಡುವ ಯೋಜನೆಯನ್ನು ಅಕ್ಟೋಬರ್ 2 ರಂದು ಚಾಲನೆ ನೀಡಲು ತೀರ್ಮಾನಿಸಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಅವರು ಬುಧವಾರ ಕರ್ನಾಟಕ ರಾಜ್ಯ ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟ, – ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಬೆಂಗಳೂರು ಹಾಗೂ ಸುಮಂಗಲಿ ಸೇವ ಆಶ್ರಮ, ಬೆಂಗಳೂರು ಇವರುಗಳ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ರಾಜ್ಯ ಮಟ್ಟದ ಸ್ವಯಂ ಸೇವಾ ಸಂಸ್ಥೆಗಳ ಸಮಾವೇಶವನ್ನು ಉದ್ಘಾಟಿಸಿ ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದರು.

ಸ್ತ್ರೀಶಕ್ತಿ ಸಂಘಗಳು ರಾಜ್ಯದ ಆರ್ಥಿಕತೆಗೆ ಕೊಡುಗೆ ನೀಡಲು ಅನುಕೂಲವಾಗುವಂತೆ ಪ್ರಥಮ ಬಾರಿ ಆಯವ್ಯಯದಲ್ಲಿ 1.5 ಲಕ್ಷ ರೂ.ಗಳ ಆರ್ಥಿಕ ನೆರವು, ಲಿಂಕರ್ ಬ್ಯಾಂಕ್ ಜೋಡಣೆ, ಯಂತ್ರೋಪಕರಣ, ಪ್ರಾಜೆಕ್ಟ್‌ಗಳು, ಉತ್ಪನ್ನಗಳಿಗೆ ಮಾರುಕಟ್ಟೆ ವ್ಯವಸ್ಥೆ ಮಾಡಲಾಗುವುದು. ಅಮೆಜಾನ್ ನಂತಹ ಆನ್‌ಲೈನ್ ವೇದಿಕೆಗಳಲ್ಲಿ ಈ ಉತ್ಪನ್ನಗಳನ್ನು ಮಾರಾಟ ಮಾಡುವ ವ್ಯವಸ್ಥೆ ಮಾಡಲಾಗುವುದು. ಪ್ರಾಯೋಗಿಕವಾಗಿ ಎಲಿವೇಟ್ ಕಾರ್ಯಕ್ರಮ ಪ್ರಾರಂಭಿಸಿದ್ದು, ಒಂದು ಸ್ತ್ರೀಶಕ್ತಿ ಸಂಘ ತಿಂಗಳಿಗೆ ಸುಮಾರು 50 ಲಕ್ಷ ವಹಿವಾಟನ್ನು ಮಾಡುತ್ತಿದೆ. ಇದು ಸಂಘಟಿತವಾದ ಶ್ರಮದ ಶಕ್ತಿ ಎಂದು ತಿಳಿಸಿದರು.

ರಾಜ್ಯದ ಗ್ರಾಮೀಣ ಹಾಗೂ ನಗರ ಪ್ರದೇಶದ ಸ್ತ್ರೀಶಕ್ತಿಯ ಸಬಲೀಕರಣ ಆಗಬೇಕು. ನಮ್ಮ ಸ್ಥಳೀಯಮಟ್ಟದ ಸಂಘಸಂಸ್ಥೆಗಳ ಉತ್ಪನ್ನಗಳು ವಿದೇಶದಲ್ಲಿ ಮಾರಾಟವಾಗಬೇಕು ಎನ್ನುವ ಆಸೆ ಸರ್ಕಾರದ್ದು. ಆಗ ನಮ್ಮ ಆರ್ಥಿಕತೆಗೆ ಬಹಳ ಶಕ್ತಿ ಬರುತ್ತದೆ. ಈ ದೇಶದಲ್ಲಿನ ಮಹಿಳೆಯರ ದುಡಿಮೆಗೆ ಬೆಲೆ ಕೊಡಬೇಕಿದೆ. ಅವರಿಗೆ ಆರ್ಥಿಕ ಸ್ವಾತಂತ್ರ್ಯ ಬಂದಾಗ ಶೈಕ್ಷಣಿಕ, ಸಾಮಾಜಿಕವಾಗಿಯೂ ಸಬಲರಾಗುತ್ತಾರೆ. ಈ ಹಿನ್ನೆಲೆಯಲ್ಲಿ ಸೇವಾಸಂಸ್ಥೆಗಳು ಸಮಾನತೆಯ ಕ್ರಾಂತಿ ತರುವಲ್ಲಿ ಮಹತ್ವದ ಪಾತ್ರ ವಹಿಸುತ್ತಿದೆ. ಒಳ್ಳೆಯ ಕೆಲಸ ಮಾಡುವ ಚಿಂತನೆ ಪ್ರೇರಣೆ ದೊರಕುತ್ತದೆ. ಒಳ್ಳೆಯ ಕೆಲಸಗಳನ್ನು ಮಾಡುವ ಚಿಂತನೆ ಹಾಗೂ ಕ್ರಿಯಾ ಯೋಜನೆ ಇರಬೇಕು. ಪ್ರತಿ ವರ್ಷ ಕನಿಷ್ಠ 5 ಕ್ಷೇತ್ರಗಳಿಗೆ ಗುರಿ ನಿಗದಿಸಿ ಸಾಧಿಸಲು ಪ್ರಯತ್ನಿಸಿ, ಸರ್ಕಾರವೂ ಪೂರಕ ಸಹಕಾರವನ್ನು ನೀಡುತ್ತದೆ ಎಂದರು.

ದೇಶದ ತಲಾವಾರು ಆದಾಯದಲ್ಲಿ ರಾಜ್ಯ 3ನೇ ಸ್ಥಾನದಲ್ಲಿದೆ. ಇದಕ್ಕೆ ಕೇವಲ ರಾಜ್ಯದ 30 % ಜನತೆ ಮಾತ್ರ ಕೊಡುಗೆ ನೀಡುತ್ತಿದ್ದು, 70% ಜನತೆ ಜೀವನೋಪಾಯಕ್ಕಾಗಿ ದುಡಿಯುತ್ತಿದ್ದಾರೆ.

ಸಂಜೆವಾಣಿ

Wednesday 22 June 2022



ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಇಂದು ನಗರದ ಗಾಂಧಿ ಭವನದಲ್ಲಿ ಕರ್ನಾಟಕ ರಾಜ್ಯ ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟದ ಸಮಾವೇಶವನ್ನು ಉದ್ಘಾಟಿಸಿದರು. ಸಮಾರಂಭದಲ್ಲಿ ಕೇಂದ್ರ ಕೃಷಿ ಹಾಗೂ ರೈತ ಕಲ್ಯಾಣ ಖಾತೆ ರಾಜ್ಯ ಸಚಿವರಾದ ಶೋಭಾ ಕರಂದ್ಲಾಜೆ. ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ. ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಸಿ. ಸೋಮಶೇಖರ್. ಸುಮಂಗಲಿ ಸೇವಾಶ್ರಮದ ಅಧ್ಯಕ್ಷೆ ಸುಶೀಲಮ್ಮ ಮೊದಲಾದವರು ಉಪಸ್ಥಿತರಿದ್ದರು.

ಈ ಸಂಜೆ

Wed, 22 June 2022



ಗಾಂಧಿ ಭವನದಲ್ಲಿಂದು ನಡೆದ ಸ್ವಯಂ ಸೇವಾ ಸಂಸ್ಥೆಗಳ ಸಮಾವೇಶವನ್ನು ಉದ್ಘಾಟಿಸಿದ ನಂತರ ಮುಖ್ಯಮಂತ್ರಿ ಬಸವರಾಜಬೊಮ್ಮಾಯಿ ಅವರು ಕಿರುಹೊತ್ತಿಗೆ ಬಿಡುಗಡೆ ಮಾಡಿದರು. ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಸಚಿವ ಮುರುಗೇಶ್ ನಿರಾಣಿ, ಸುಮಂಗಲಿ ಸೇವಾಶ್ರಮದ ಅಧ್ಯಕ್ಷೆ ಸುಶೀಲಮ್ಮ, ಗಾಂಧಿಭವನದ ಅಧ್ಯಕ್ಷ ವೂಡೇ ಪಿ.ಕೃಷ್ಣ, ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ.ಸೋಮಶೇಖರ್ ಹಾಜರಿದ್ದರು.

ವಿಜಯ ಕರ್ನಾಟಕ VK ಬುಧವಾರ 22.6.2022

ಭಾರತೀಯ ಸಂಸ್ಕೃತಿಗೆ ಸಿಕ್ಕ ದೊಡ್ಡ ಗೌರವ



ವೈದ್ಯ ಡಾ.ವೈ.ರುದ್ರಪ್ಪ ರಚಿಸಿದ ಸ್ವಾಸ್ಥ್ಯ ಮತ್ತು ಯೋಗ ಪುಸ್ತಕವನ್ನು ಶ್ರೀಗಳು, ರಾಜಶೇಖರ್, ಪ್ರೊಫೆ. ಪಿ.ಕೃಷ್ಣ ಡಾ. ಚೇತನ್ ಕುಮಾರ್ ಬಿಡುಗಡೆ ಮಾಡಿದರು.

■ **ವಿಕ ಸುದ್ದಿಲೋಕ** ನೆಲಮಂಗಲ ಗ್ರಾ:
ವಿಶ್ವವೇ ಜೂ. 21ರಂದು ಯೋಗ ದಿನಾಚರಣೆ ಆಚರಿಸುತ್ತಿರುವುದು ಭಾರತೀಯ ಸಂಸ್ಕೃತಿ ಸಿಕ್ಕ ದೊಡ್ಡ ಗೌರವ ಎಂದು ಸೋಲೂರಿನ ಆರ್ಯ ಈಡಿಗ ಮಠದ ಶ್ರೀ ವಿಖ್ಯಾತನಾಂದ ಸ್ವಾಮೀಜಿ ಹೇಳಿದರು.

ನೆಲಮಂಗಲ ವಿಧಾನಸಭಾ ಕ್ಷೇತ್ರದ ಸೋಲೂರು ಬ್ರಿಲಿಯೆಂಟ್ ವ್ಯಾಲಿ ಇಂಟರ್‌ನ್ಯಾಷನಲ್ ವಸತಿ ಶಾಲೆಯಲ್ಲಿ ಗ್ರಾಪಂ ಮತ್ತು ಎಂ.ಆರ್.ಆರ್. ಪ್ರಕೃತಿ ಚಿಕಿತ್ಸಾಲಯದ ಸಹಯೋಗದಲ್ಲಿ ಆಯೋಜಿಸಿದ್ದ ಅಂತಾರಾಷ್ಟ್ರೀಯ ಯೋಗ ದಿನದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಮನುಷ್ಯನಲ್ಲಿರುವ ಮಾನವೀಯ ಗುಣಗಳು ಹೊರತರಲು ಯೋಗದಿಂದ ಸಾಧ್ಯ. ಯುವಕರು ಪತಂಜಲಿ ಯೋಗ ಮಹರ್ಷಿ ಯೋಗ ಕ್ರಮ ಅನುಸರಿಸಿ, ಆಹಾರ ಕ್ರಮ ಉತ್ತಮವಾಗಿಸಿಕೊಂಡರೆ ನಿರೋಗಿಯಾಗಬಹುದು. ಪ್ರತಿಯೊಬ್ಬರು ಪರರ ಚಿಂತನೆ ಬಿಟ್ಟು ಸಮಾಜದ ಒಳಿತನ್ನು ಚಿಂತಿಸಿ, ದಿನದಲ್ಲಿ 15 ನಿಮಿಷ ಯೋಗ ಮಾಡಿದರೆ ದೇಹದ ಸ್ವಾಸ್ಥ್ಯ ಉತ್ತಮವಾಗಿರುತ್ತದೆ. ಸ್ವತಃ ಬಾಲ್ಯದಲ್ಲಿ ಅಸ್ತಮಾ ರೋಗಿಯಾಗಿದ್ದ ನಾನು, ಸೂರ್ಯ ನಮಸ್ಕಾರ ಕಲಿತು ಇಂದು ನಿರೋಗಿಯಾಗಿದ್ದೇನೆ ಎಂದರು.

ಧರ್ಮಸ್ಥಳ ಯೋಗ ಮತ್ತು ನಿಸರ್ಗ ಚಿಕಿತ್ಸಾ ಆಸ್ಪತ್ರೆಯ ಸಂಸ್ಥಾಪಕ ವೈದ್ಯ ಡಾ.ವೈ.ರುದ್ರಪ್ಪ ಮಾತನಾಡಿ, ಯೋಗ ಸ್ವಾಸ್ಥ್ಯ ಆರೋಗ್ಯದ ಮಾರ್ಗದರ್ಶಿ. ಒಂದು ಕಾಲದಲ್ಲಿ ಯೋಗಾ ಎಂದರೇ ಮೂಗು ಮುರಿಯುತ್ತಿದ್ದರು. ಇದೀಗ ಎಲ್ಲೆಲ್ಲೂ ಯೋಗಾ ಶಿಕ್ಷಣಕ್ಕೆ ಮಹತ್ವವಿದೆ ಎಂದರು.

ಶಾಲೆಯ ಮುಖ್ಯಸ್ಥ ಡಾ.ಚೇತನ್ ಕುಮಾರ್, ಮುಂದಿನ ವರ್ಷ ಗ್ರಾಮ-ಗ್ರಾಮಗಳಲ್ಲೂ ಯೋಗ ಎಂಬ ಪರಿಕಲ್ಪನೆ ಜಾರಿಗೊಳಿಸುವುದು ನಮ್ಮ ಉದ್ದೇಶ ಎಂದರು. ಡಾ.ವೈ.ರುದ್ರಪ್ಪ ರಚಿಸಿದ ಸ್ವಾಸ್ಥ್ಯ ಜೀವನ ಮಾರ್ಗದರ್ಶಿ ಮತ್ತು ಯೋಗ ಕುರಿತ ಪುಸ್ತಕ ಬಿಡುಗಡೆ ಮಾಡಿದರು. ಗಾಂಧಿ ಭವನ ಅಧ್ಯಕ್ಷರಾದ ಪ್ರೊಫೆ. ಪಿ.ಕೃಷ್ಣ ಎಂ.ಆರ್.ಆರ್.ಆಸ್ಪತ್ರೆ ಮುಖ್ಯಸ್ಥರಾದ ಎಂ.ರಾಜಶೇಖರಯ್ಯ, ಶಾಲಾ ಸಂಸ್ಥಾಪಕ ಡಾ. ಕುಮಾರ್, ಶಾಲಾ ಆಡಳಿತ ಮಂಡಳಿಯ ಐಶ್ವರ್ಯ ಡಾ.ಚೇತನ್ ಕುಮಾರ್, ರಾಘವೇಂದ್ರ, ಕಾಮರಾಜು, ಗೋಪಾಲ್ ಇದ್ದರು.

ಕನ್ನಡಪ್ರಭ

ಬೆಂಗಳೂರು ಗ್ರಾ. ರಾಮನಗರ

ಬುಧವಾರ 22.6.2022
ಬೆಂಗಳೂರು

ಮಾನವೀಯತೆ ಜಾಗೃತಗೊಳಿಸಲು ಯೋಗ ಸಹಕಾರಿ

ವಿಶ್ವ ಯೋಗ ದಿನಾಚಾರಣೆ ಉದ್ಘಾಟನಾ ಕಾರ್ಯಕ್ರಮದಲ್ಲಿ ಆರ್ಯ ಈಡಿಗ ಸಂಸ್ಥಾನ ಮಠದ ಶ್ರೀವಿಖ್ಯಾತಾನಂದ ಸ್ವಾಮೀಜಿ ಅಭಿಮತ

• ಕನ್ನಡಪ್ರಭ ವಾರ್ತೆ ಕುದೂರು

ಮನುಷ್ಯನಲ್ಲಿರುವ ಮಾನವೀಯತೆ ಜಾಗೃತಗೊಳಿಸಲು ಯೋಗ ಅತ್ಯಂತ ಸಹಕಾರಿ ಎಂದು ಆರ್ಯ ಈಡಿಗರ ಸಂಸ್ಥಾನ ಮಠದ ಶ್ರೀ ವಿಖ್ಯಾತಾನಂದ ಸ್ವಾಮೀಜಿ ತಿಳಿಸಿದರು.

ಸೋಲೂರು ಗ್ರಾಮದ ಆರ್ಯ ಈಡಿಗ ಸಂಸ್ಥಾನ ಮಠದ ಮೈದಾನದಲ್ಲಿ ಎಂ.ಆರ್.ಆರ್. ಯೋಗ ಮತ್ತು ನಿಸರ್ಗ ಆಸ್ಪತ್ರೆ, ಬ್ರಿಲಿಯಂಟ್ ವ್ಯಾಲಿ ಶಾಲೆ, ಹಾಗೂ ಸೋಲೂರು ಗ್ರಾ.ಪಂ. ಸಹಯೋಗದಲ್ಲಿ ಏರ್ಪಡಿಸಿದ್ದ ವಿಶ್ವ ಯೋಗ ದಿನಾಚರಣೆ ಉದ್ಘಾಟಿಸಿ ಮಾತನಾಡಿದರು.





ವೇದಾದ್ರಿಪುರಂ ಶಿಕ್ಷಣ ಸಂಸ್ಥೆಯ ಸಂಯೋಜಕ ಪ್ರೊ. ಕೆ.ಕೃಷ್ಣ ಮಾತನಾಡಿ, ತಾಂತ್ರಿಕತೆ ಹೆಚ್ಚಾದಂತೆ ಮಾನವೀಯತೆ ದೂರವಾಗುತ್ತಿರುವುದು ವಿಷಾದದ ಸಂಗತಿ. ನಾವುಗಳು ದಿನದಿಂದ ದಿನಕ್ಕೆ ಪ್ರಕೃತಿಯಿಂದ ದೂರ ಸರಿಯುತ್ತಿದ್ದೇವೆ ಇದು ಅಪಾಯದ ಸೂಚನೆಯಾಗಿದೆ. ಇದೆಲ್ಲದಕ್ಕಿಂತ ಹೆಚ್ಚಿನದಾಗಿ ಸಾಮಾಜಿಕ ಜಾಲತಾಣಗಳಲ್ಲಿ ಮಾಧ್ಯಮಗಳ ಎಡಬಿಡಂಗಿತನ ಸಮಾಜದ ಮೇಲೆ ಕೆಟ್ಟ ಪರಿಣಾಮ ಬೀರುತ್ತಿದೆ ಎಂದರು. ನಿಸರ್ಗ ಚಿಕಿತ್ಸಾ ಕ್ರಮದ ಭೀಷ್ಮರೆಂದೇ ಹೆಸರಾದ ಡಾ.ವೈ.ರುದ್ರಪ್ಪ ಮಾತನಾಡಿ, ಯೋಗ ಎಂದರೆ ಮೂಗುಮುರಿಯುತ್ತಿದ್ದರು ಇಂದು ವಿಶ್ವದಾದ್ಯಂತ ಯೋಗವನ್ನು ಅತ್ಯಂತ ಗೌರವದಿಂದ ನೋಡುವಂತಾಗಿದೆ. ಯೋಗ ಚಿಕಿತ್ಸೆಯೇ ಬೇರೆ, ಯೋಗ ಶಿಕ್ಷಣವೇ ಬೇರೆ. ಇವೆರಡನ್ನೂ ಒಂದು ಮಾಡಿ ತರಬೇತಿ ನೀಡುತ್ತಿರುವುದು ಸರಿಯಲ್ಲ ಎಂದು ಹೇಳಿದರು. ನಿಸರ್ಗ ಚಿಕಿತ್ಸಾ ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿ ಡಾ.ಚೇತನ್ ಕುಮಾರ್ ಮಾತನಾಡಿ, ಬರುವ ವರ್ಷಗಳಲ್ಲಿ ಒಂದು ತಿಂಗಳು ಸೋಲೂರು ಹೋಬಳಿಯಾದ್ಯಂತ ಗ್ರಾಮಗಳಲ್ಲಿ ಯೋಗ ದಿನವನ್ನು ಆಚರಿಸಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಡಾ.ವೈ.ರುದ್ರಪ್ಪ ಅವರು ಬರೆದಿರುವ ಆರೋಗ್ಯ ಮತ್ತು ಯೋಗದ ಕುರಿತಾದ ಕನ್ನಡ ಮತ್ತು ಇಂಗ್ಲೀಷ್ ಪುಸ್ತಕಗಳನ್ನು ಬಿಡುಗಡೆ ಮಾಡಲಾಯಿತು. ಎಂ.ಆರ್.ಆರ್ . ಆಸ್ಪತ್ರೆಯ ಮಾಲೀಕ ಎಂ.ರಾಜಶೇಖರಯ್ಯ, ಬ್ರಿಲಿಯಂಟ್ ವ್ಯಾಲಿಯ ಆಡಳಿತ ಮಂಡಳಿಯ ಐಶ್ವರ್ಯ ಚೇತನ್ ಕುಮಾರ್ , ಗ್ರಾಮಪಂಚಾಯ್ತಿ ಉಪಾಧ್ಯಕ್ಷ ಮುಜಾಹಿದ್ ಪಾಷಾ, ಸದಸ್ಯರಾದ ರಾಘವೇಂದ್ರ, ರಾಮರಾಜ್, ಎಪಿಎಂಸಿ ಗೋಪಾಲಕೃಷ್ಣ, ಡಾ.ಕುಮಾರ್ , ನಟೇಶ್, ಡಾ.ಕಿರಣ್ ರೆಡ್ಡಿ, ಡಾ.ಶ್ವೇತ, ಡಾ.ಶ್ರೀನಿಧಿ, ಡಾ.ಸದೀಕ್ಷ ಹಾಜರಿದ್ದರು.

ಪ್ರಜಾವಾಣಿ
ಬುಧವಾರ • ಜೂನ್ 22, 2022

ಸೋಲೂರಿನ ವಿಖ್ಯಾತಾನಂದ ಸ್ವಾಮೀಜಿ ವಿಷಾದ

ಪರರ ನಿಂದನೆಯಲ್ಲೇ ಸಮಯ ವ್ಯರ್ಥ

ಪ್ರಜಾವಾಣಿ ವಾರ್ತೆ

ಮಾಗಡಿ: 'ಮನುಷ್ಯ ತನ್ನಲ್ಲಿರುವ ಶಕ್ತಿ ಮರೆತು ಪರರನ್ನು ನಿಂದಿಸುವಲ್ಲಿಯೇ ಹೆಚ್ಚಿನ ಸಮಯವನ್ನು ವ್ಯರ್ಥ ಮಾಡಿಕೊಂಡು ಮಾನವೀಯತೆಯ ಹಾದಿಯಿಂದ ದೂರ ಸರಿಯುತ್ತಿದ್ದಾನೆ' ಎಂದು ಆರ್ಯ ಈಡಿಗರ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ವಿಖ್ಯಾತಾನಂದ ಸ್ವಾಮೀಜಿ ವಿಷಾದಿಸಿದರು.

ಸೋಲೂರು ಗ್ರಾಮದ ಆರ್ಯ ಈಡಿಗರ ಮಹಾಸಂಸ್ಥಾನ ಮಠದ ಮೈದಾನದಲ್ಲಿ ಎಂ.ಆರ್.ಆರ್. ಯೋಗ ಮತ್ತು ನಿಸರ್ಗ ಆಸ್ಪತ್ರೆ, ಬ್ರಿಲಿಯಂಟ್ ವ್ಯಾಲಿ ಶಾಲೆ ಹಾಗೂ ಗ್ರಾಮ ಪಂಚಾಯಿತಿಯಿಂದ ಏರ್ಪಡಿಸಿದ್ದ 8ನೇ ಅಂತರರಾಷ್ಟ್ರೀಯ ಯೋಗ ದಿನಾಚಾರಣೆ ಉದ್ಘಾಟಿಸಿ ಅವರು ಮಾತನಾಡಿದರು.

ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಸಮೂಹ ಒಕ್ಕೂಟದ ಕಾರ್ಯದರ್ಶಿ ಪ್ರೊ. ಕೆ. ಕೃಷ್ಣ ಮಾತನಾಡಿ, ತಾಂತ್ರಿಕತೆ ಹೆಚ್ಚಾದಂತೆ ಮಾನವೀಯತೆ ದೂರವಾಗುತ್ತಿರುವುದು ವಿಷಾದದ ಸಂಗತಿ. ನಾವು ದಿನದಿಂದ ದಿನಕ್ಕೆ ಪ್ರಕೃತಿಯಿಂದ ದೂರ ಸರಿಯುತ್ತಿದ್ದೇವೆ. ಇದು ಅಪಾಯಕಾರಿ ಸೂಚನೆಯಾಗಿದೆ ಎಂದರು.

ಸಾಮಾಜಿಕ ಜಾಲತಾಣಗಳಲ್ಲಿನ ಎಡಬಿಡಂಗಿತನ ಸಮಾಜದ ಮೇಲೆ ಕೆಟ್ಟ ಪರಿಣಾಮ ಬೀರುತ್ತಿದೆ. ಯೋಗಾಭ್ಯಾಸ ರೂಢಿಸಿಕೊಂಡು ರೋಗದಿಂದ ದೂರ ಉಳಿಯಿರಿ ಎಂದರು.



ಮಾಗಡಿ ತಾಲ್ಲೂಕಿನ ಸೋಲೂರು ಗ್ರಾಮದ ಆರ್ಯ ಈಡಿಗರ ಮಹಾಸಂಸ್ಥಾನ ಮಠದ ಆವರಣದಲ್ಲಿ ಬ್ರಿಲಿಯಂಟ್ ವ್ಯಾಲಿ ಶಾಲೆ ಮತ್ತು ಎಂಆರ್‌ಆರ್ ಆಸ್ಪತ್ರೆ ಸಹಯೋಗದಡಿ ಅಂತರರಾಷ್ಟೀಯ ಯೋಗ ದಿನಾಚರಣೆ ನಡೆಯಿತು

ನಿಸರ್ಗ ಚಿಕಿತ್ಸಾ ಕೇಂದ್ರದ ಡಾ.ವೈ. ರುದ್ರಪ್ಪ ಮಾತನಾಡಿ ದೇಹ, ಮನಸ್ಸು ಮತ್ತು ಬುದ್ಧಿಯ ಸಂಗಮವಾದರೆ ಅಲ್ಲಿ ಸ್ವಾಸ್ಥ್ಯ ಸಮಾಜ ನಿರ್ಮಾಣವಾಗುತ್ತದೆ. ಒಂದು ಕಾಲದಲ್ಲಿ ಯೋಗ ಎಂದರೆ ಮೂಗು ಮುರಿಯುತ್ತಿದ್ದರು. ಇಂದು ವಿಶ್ವದಾದ್ಯಂತ ಯೋಗವನ್ನು ಗೌರವದಿಂದ ನೋಡುವಂತಾಗಿದೆ ಎಂದು ತಿಳಿಸಿದರು.

ಎಂ.ಆರ್.ಆರ್. ಯೋಗ ಮತ್ತು ನಿಸರ್ಗ ಚಿಕಿತ್ಸಾ ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿ ಡಾ.ಚೇತನ್ ಕುಮಾರ್ ಮಾತನಾಡಿ, ಈ ಬಾರಿ ಸಾವಿರಕ್ಕಿಂತಲೂ ಹೆಚ್ಚು ಜನರು ಯೋಗ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದಾರೆ. ಬರುವ ವರ್ಷಗಳಲ್ಲಿ ಒಂದು ತಿಂಗಳ ಪೂರ್ತಿ ಸೋಲೂರು ಹೋಬಳಿಯಾದ್ಯಂತ ಯೋಗ ದಿನ ಆಚರಿಸಲಾಗುವುದು ಎಂದರು.

ಡಾ.ವೈ. ರುದ್ರಪ್ಪ ಬರೆದಿರುವ ಆರೋಗ್ಯ ಮತ್ತು ಯೋಗ ಕುರಿತಾದ ಕನ್ನಡ ಮತ್ತು ಇಂಗ್ಲಿಷ್ ಪುಸ್ತಕಗಳನ್ನು ಬಿಡುಗಡೆ ಮಾಡಲಾಯಿತು. ಎಂ.ಆರ್.ಆರ್. ಆಸ್ಪತ್ರೆಯ ಮುಖ್ಯಸ್ಥ ಎಂ. ರಾಜಶೇಖರಯ್ಯ, ಬ್ರಿಲಿಯಂಟ್ ವ್ಯಾಲಿಯ ಆಡಳಿತ ಮಂಡಳಿಯ ಐಶ್ವರ್ಯ ಚೇತನ್ ಕುಮಾರ್, ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ಮುಜಾಹಿದ್ ಪಾಷಾ, ಸದಸ್ಯರಾದ ರಾಘವೇಂದ್ರ, ಕಾಮರಾಜ್, ಎಪಿಎಂಸಿ ಗೋಪಾಲಕೃಷ್ಣ, ಡಾ.ಕುಮಾರ್, ನಟೇಶ್, ಡಾ.ಕಿರಣ್ ರೆಡ್ಡಿ, ಡಾ.ಶ್ವೇತಾ, ಡಾ.ಶ್ರೀನಿಧಿ, ಡಾ.ಸದೀಕ್ಷ ಇದ್ದರು.

ಪ್ರಜಾವಾಣಿ
ಶನಿವಾರ • ಜೂನ್ 18, 2022



ಭಾವಸಾರ ವಿಷನ್ ಇಂಡಿಯಾ ಹಾಗೂ ಭಾವಸಾರ ಕ್ಷತ್ರಿಯ ಎಜುಕೇಷನಲ್ ಎನ್‌ಕರೇಜ್‌ಮೆಂಟ್ ಟ್ರಸ್ಟ್ ವತಿಯಿಂದ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ, ಸಾಹಿತಿ ವೂಡೇ ಪಿ.ಕೃಷ್ಣ ಅವರು ಶಾಲಾ ಮಕ್ಕಳಿಗೆ ಉಚಿತ ಪುಸ್ತಕಗಳನ್ನು ವಿತರಣೆ ಮಾಡಿದರು. ಭಾವಸಾರ ವಿಷನ್ ಇಂಡಿಯಾ ಅಧ್ಯಕ್ಷ ಮಂಜುನಾಥ, ಭಾವಸಾರ ಕ್ಷತ್ರಿಯ ಎಜುಕೇಷನಲ್ ಎನ್‌ಕರೇಜ್‌ಮೆಂಟ್ ಟ್ರಸ್ಟ್ ಅಧ್ಯಕ್ಷ ಉಮಾಕಾಂತ್ ಇದ್ದರು

— ಪ್ರಜಾವಾಣಿ ಚಿತ್ರ

ಪ್ರಜಾ ಪ್ರಗತಿ

Jun 17, 2022

ಕಣ್ಣು-ಕಿವಿಗಳನ್ನು ಮುಕ್ತವಾಗಿ ತೆರೆದಿಡಿ

ಸಿಐಟಿಯಲ್ಲಿ ಸ್ಟೂಡೆಂಟ್ ಚಾಪ್ಟರ್ ಆಕ್ಟಿವಿಟಿಸ್ ಉದ್ಘಾಟಿಸಿ ಡಾ.ವೂಡೆ ಪಿ. ಕೃಷ್ಣ ನುಡಿ

■ ಪ್ರಜಾಪ್ರಗತಿ.ಕಾಂ

ತುಮಕೂರು: ಜ್ಞಾನವನ್ನು ಅರಿಯಲು ಯಾವುದೇ ಬಾಹ್ಯ ಒತ್ತಡಗಳಿಲ್ಲದೆ ತಿಳಿಯುವ ಬಯಕೆಯನ್ನು ಹೊಂದಿರಬೇಕು. ಅವಕಾಶಗಳನ್ನು ಪಡೆಯಲು ಮನಸ್ಸನ್ನು ಸಂವೇದನಾಶೀಲಗೊಳಿಸಿಕೊಂಡಿರಬೇಕು. ಅದಕ್ಕಾಗಿ ಯಾವಾಗಲು ಕಣ್ಣು-ಕಿವಿಗಳನ್ನು ಸದಾ ಮುಕ್ತವಾಗಿ ತೆರೆದಿರಬೇಕಾಗಿರುತ್ತದೆ. ಹಾಗಿದ್ದಾಗ ಮಾತ್ರ ಹೊಸ ಹೊಸ ಆಲೋಚನೆಗಳು ಹುಟ್ಟಿಕೊಳ್ಳಲು ಮತ್ತು ಒಬ್ಬ ಯಶಸ್ವಿ ವಾಣಿಜ್ಯೋದ್ಯಮಿಯಾಗಲು ಸಾಧ್ಯ ಎಂದು ನಾಡೋಜ ಡಾ.ವೂಡೆ ಪಿ. ಕೃಷ್ಣ ಅಭಿಪ್ರಾಯಪಟ್ಟರು.

ಚನ್ನಬಸವೇಶ್ವರ ತಾಂತ್ರಿಕ ಮಹಾವಿದ್ಯಾಲಯದ ಪ್ರೊಫೆಷನಲ್ ಸೊಸೈಟಿ ಆಕ್ಟಿವಿಟಿ ಸೆಂಟರ್. ಗುಬ್ಬಿ ವತಿಯಿಂದ ಕಾಲೇಜಿನ ಸ್ವಾಮಿ ವಿವೇಕಾನಂದ ಸಭಾಂಗಣದಲ್ಲಿ ಸ್ಟೂಡೆಂಟ್ ಚಾಪ್ಟರ್ ಆಕ್ಟಿವಿಟಿಸ್ - 2022 ನ್ನು ಆಯೋಜಿಸಲಾಗಿತ್ತು.

> ಸಮಾಜಕ್ಕೆ ಯಾವಾಗಲೂ ನಾವು ಹೊಸದಾಗಿ ಏನನ್ನಾದರೂ ಸ್ವಂತಿಕೆಯಿಂದ ಕೊಡಲು ತಯಾರಿರಬೇಕು, ಹೊಸ ಹೊಸ ಕೊಡುಗೆಗಳನ್ನು ನೀಡಲು ಪ್ರಯತ್ನಿಸಬೇಕು, ಹೊಸ ಆಲೋಚನೆಗಳನ್ನು ಮತ್ತು ಚಿಂತನೆಗಳನ್ನು ಮಾಡುವ ಕೌಶಲ್ಯವನ್ನು ಬೆಳೆಸಿಕೊಳ್ಳಬೇಕು, ವಿದ್ಯಾರ್ಥಿಗಳು ತಮ್ಮ ಗುರಿಯನ್ನು ಮುಟ್ಟಲು ಉತ್ತಮ ಅವಕಾಶಗಳನ್ನು ಬಳಸಿಕೊಂಡು ಸೃಜನಶೀಲರಾಗಿ ತಮ್ಮ ಕರ್ತವ್ಯದಲ್ಲಿ ಸಾಗಬೇಕು ಜೊತೆಗೆ ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಳ್ಳುವುದರ ಮೂಲಕ ಜೀವನಪರ್ಯಂತ ಕಲಿಕಾರ್ಥಿಯಾಗಿ ಸಾಗಬೇಕು.
>
> ■ ನಾಡೋಜ ಡಾ.ವೂಡೆ ಪಿ.ಕೃಷ್ಣ



ಕಾರ್ಯಕ್ರಮವನ್ನು ನಾಡೋಜ ಡಾ. ವೂಡೆ ಪಿ. ಕೃಷ್ಣ ಇಂಜಿನಿಯರ್-ಆರ್ಬಿಟ್ರೇಟರ್ ಬೆಂಗಳೂರು ಮತ್ತು ಡಾ.ನಾಗಭೂಷಣ ಟಿ.ಎನ್. ಎಕ್ಸಿಕ್ಯೂಟೀವ್ ಡೈರೆಕ್ಟರ್, ಈಸ್ಟ್‌ವೆಸ್ಟ್ ಗ್ರೂಪ್ ಆಫ್ ಇನ್ಸ್ಟಿಟ್ಯೂಷನ್ಸ್ ಬೆಂಗಳೂರು, ಇವರು ದೀಪ ಬೆಳಗಿಸುವುದರ ಮೂಲಕ ಉದ್ಘಾಟನೆಯನ್ನು ಮಾಡಿದರು.

ಡಾ. ನಾಗಭೂಷಣ ಟಿ ಎನ್ ಮಾತನಾಡಿ, ವಿದ್ಯಾರ್ಥಿಗಳಿಗೆ ಮೂರು ಮುಖ್ಯ ಸಲಹೆಗಳನ್ನು ನೀಡಿದರು. ಸಮಯ, ಶಕ್ತಿ, ಜೀವನ ಇವುಗಳನ್ನು ಬದುಕಿನಲ್ಲಿ ಹೇಗೆ ನಿರ್ವಹಿಸಬೇಕು ಎಂಬುದನ್ನು ಹೇಳಿದರು. ವಿದ್ಯಾರ್ಥಿಗಳು ಸಮೂಹ ಚಟುವಟಿಕೆಗಳಲ್ಲಿ ಭಾಗವಹಿಸುವುದರ ಮೂಲಕ ತಮ್ಮ ಸ್ವಸಾಮರ್ಥ್ಯವನ್ನು ಬೆಳೆಸಿಕೊಳ್ಳಬೇಕು, ಪದವಿ ಪ್ರಮಾಣ ಪತ್ರಗಳು ಕೇವಲ ಸರ್ಟಿಫಿಕೇಟ್‌ಗಳಾಗಿ ಉಳಿದುಕೊಳ್ಳಬಾರದು, ಅವು ನಮ್ಮ ಕೌಶಲ್ಯಗಳನ್ನು ಪ್ರತಿನಿಧಿಸುವ ಸಾಧನಗಳಾಗಬೇಕು. ಜ್ಞಾನದ ಸಂಪಾದನೆಯು ನಮ್ಮ ಆಲೋಚನಾ ಸಾಮರ್ಥ್ಯವನ್ನು ಮತ್ತು ಚಿಂತನೆಗಳನ್ನು ಬೆಳೆಸಿಕೊಳ್ಳಲು ಬಹಳ ಮುಖ್ಯವಾಗುತ್ತದೆ. ಜ್ಞಾನ ಸಂಪಾದನೆಯು ಆರು ಮುಖ್ಯಾಂಶಗಳನ್ನು ಒಳಗೊಂಡಿರುತ್ತದೆ, ಅರ್ಥೈಸಿಕೊಳ್ಳುವಿಕೆ, ವಿಶ್ಲೇಷಣೆ, ಅನ್ವಯಿಕೆ, ವಿನ್ಯಾಸಗೊಳಿಸುವಿಕೆ, ಮೌಲ್ಯಮಾಪನ, ಸೃಜನಶೀಲ ಚಿಂತನೆಗಳು ಈ ಅಂಶಗಳು ವಿದ್ಯಾರ್ಥಿಗಳಲ್ಲಿರಬೇಕು ಎಂದು ಹೇಳಿದರು. ಹೊಸ ರಾಷ್ಟ್ರೀಯ ಶಿಕ್ಷಣ ನೀತಿ (2020)ಯು ಈ ಮೇಲಿನ ಅಂಶಗಳನ್ನು ಒಳಗೊಂಡಿದ್ದು ಎಲ್ಲಾ ವಿದ್ಯಾರ್ಥಿಗಳನ್ನು ವಿವಿಧ ಕೌಶಲ್ಯಾಭಿವೃದ್ಧಿ ನಿರಂತರವಾಗಿ ಮಾಡುವಲ್ಲಿ ಸಹಕಾರಿಯಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾರ್ಯದರ್ಶಿ-ವ್ಯವಸ್ಥಾಪಕ ನಿರ್ದೇಶಕರು ಮತ್ತು ಶಾಸಕರಾದ ಜಿ.ಬಿ ಜ್ಯೋತಿಗಣೇಶ್ ರವರು ವಹಿಸಿದ್ದರು. ಸಿ ಐ ಟಿ ಕಾಲೇಜಿನ ನಿರ್ದೇಶಕರು ಮತ್ತು ಪ್ರಾಂಶುಪಾಲರು ಡಾ.ಡಿ.ಎಸ್ ಸುರೇಶ್ ರವರು ಮಾತನಾಡಿ, ವಿದ್ಯಾರ್ಥಿಗಳಿಗೆ ಹಿತವಚನ ಹೇಳಿದರು. ಉಪಪ್ರಾಂಶುಪಾಲರಾದ ಡಾ. ಸಿ.ಪಿ.ಶಾಂತಲಾರವರು ಗಣ್ಯವ್ಯಕ್ತಿಗಳನ್ನು ಸ್ವಾಗತಿಸಿದರು. ಪ್ರೊ.ಜಿ.ಎಸ್.ಸುರೇಶ್ ರವರು ವೃತ್ತಿಪರ ಚಟುವಟಿಕೆಯ ವರದಿಯನ್ನು ಪ್ರಸ್ತುತಪಡಿಸಿದರು. ಕು. ವಿದ್ಯಾಶ್ರೀ ಕೆ ಎಸ್ ಕಾರ್ಯಕ್ರಮವನ್ನು ನಿರೂಪಣೆ ಮಾಡಿದರು. ಸೌಮ್ಯಶ್ರೀ.ಒ.ಎ. ವಂದಿಸಿದರು. ಅಧ್ಯಾಪಕ ವೃಂದ, ಬೋಧಕೇತರ ವೃಂದ ಮತ್ತು ವಿದ್ಯಾರ್ಥಿ ವೃಂದ ಹಾಜರಿದ್ದರು.


ಈ ಸಂಜೆ

Mon. 13 June 2022



ಶೇಷಾದ್ರಿಪುರಂ ಕಾಲೇಜಿನಲ್ಲಿಂದು ನಡೆದ ವಿಶ್ವ ರಕ್ತದಾನಿಗಳ ದಿನಾಚರಣೆ ಕಾರ್ಯಕ್ರಮದಲ್ಲಿ ಒಕ್ಕಲಿಗರ ಸಂಘದ ಗೌರವಾಧ್ಯಕ್ಷ ಡಾ.ಆಂಜಿನಪ್ಪ, ಕರ್ನಾಟಕ ಏಡ್ಸ್ ನಿಯಂತ್ರಣ ಸೊಸೈಟಿಯ ಉಪನಿರ್ದೇಶಕ ಡಾ.ಡಿ.ಜಯರಾಜು, ಕರ್ನಾಟಕ ಸ್ವಯಂ ರಕ್ತದಾನಿಗಳ ಸಂಘದ ಅಧ್ಯಕ್ಷ ರಾಮು ಚಂದ್ರಶೇಖರ್, ಶೇಷಾದ್ರಿಪುರಂ ಶಿಕ್ಷಣ ಟ್ರಸ್ಟ್‌ನ ಗೌರವ ಪ್ರಧಾನ ಕಾರ್ಯದರ್ಶಿ ಡಾ.ವೂಡೆ ಪಿ.ಕೃಷ್ಣ ಮತ್ತಿತರರು ಪಾಲ್ಗೊಂಡಿದ್ದರು. ಇದೇ ವೇಳೆ ನೂರಾರು ವಿದ್ಯಾರ್ಥಿಗಳು ರಕ್ತದಾನ ಮಾಡಿದರು.

ಸಂಜೆವಾಣಿ
Friday 10 June 2022



ಕುವೆಂಪು ಕಲಾನಿಕೇತನ ಸಂಸ್ಥೆ ವತಿಯಿಂದ ನಗರದ ನಯನ ಸಭಾಂಗಣದಲ್ಲಿ ಏರ್ಪಡಿಸಿದ್ದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ 138ನೇ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿ ಜಸ್ಟೀಸ್ ವಿ. ಗೋಪಾಲಗೌಡ ಅವರನ್ನು ಶಿಕ್ಷಣ ತಜ್ಞ ನಾಡೋಜ ಡಾ. ವೂಡೇ ಪಿ. ಕೃಷ್ಣರವರು ಸನ್ಮಾನಿಸಿದರು. ಕಿದ್ವಾಯಿ ಆಸ್ಪತ್ರೆಯ ನಿರ್ದೇಶಕ ಡಾ. ಸಿ. ರಾಮಚಂದ್ರ, ಅಧ್ಯಕ್ಷ ಕುವೆಂಪು ಪ್ರಕಾಶ್ ಮತ್ತಿತರರು ಇದ್ದಾರೆ.

ಈ ಸಂಜೆ

Fri, 10 June 2022



ಬೆಂಗಳೂರಿನ ನಯನ ರಂಗಮಂದಿರದಲ್ಲಿ ಕುವೆಂಪು ಕಲಾನಿಕೇತನ ಹಮ್ಮಿಕೊಂಡಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ವಿಶ್ರಾಂತ ನ್ಯಾಯಮೂರ್ತಿ ಗೋಪಾಲಗೌಡ, ಕಿದ್ವಾಯಿ ಆಸ್ಪತ್ರೆಯ ನಿರ್ದೇಶಕ ರಾಮಚಂದ್ರ ಅವರನ್ನು ಸನ್ಮಾನಿಸಲಾಯಿತು. ಗಾಂಧಿಭವನದ ಅಧ್ಯಕ್ಷ ನಾಡೋಜ ವೂಡೇ ಪಿ ಕೃಷ್ಣ ಸಂಸ್ಥೆಯ ಅಧ್ಯಕ್ಷ ಕುವೆಂಪು ಪ್ರಕಾಶ್ ಹಾಗೂ ಮುಂತಾದ ಗಣ್ಯರು ಭಾಗವಹಿಸಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ

VIJAYAVANI » BENGALURU
ಶುಕ್ರವಾರ 10 ಜೂನ್ 2022
10 JUNE 2022



ಕುವೆಂಪು ಕಲಾನಿಕೇತನವು ಕನ್ನಡ ಭವನದಲ್ಲಿ ಆಯೋಜಿಸಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ನಾಡರತ್ನ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ನಿರ್ದೇಶಕ ಡಾ. ಸಿ. ರಾಮಚಂದ್ರ ಅವರಿಗೆ 'ನಾಲ್ವಡಿ ಕೃಷ್ಣರಾಜ ಒಡೆಯರ್ ಸಮಾಜ ಸೇವಾರತ್ನ ಪ್ರಶಸ್ತಿ' ಪ್ರದಾನ ಮಾಡಲಾಯಿತು. ನಿವೃತ್ತ ನ್ಯಾಯಮೂರ್ತಿ ವಿ. ಗೋಪಾಲಗೌಡ, ಗಾಂಧಿ ಭವನದ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ, ಕಲಾನಿಕೇತನದ ಅಧ್ಯಕ್ಷ ಕುವೆಂಪು ಪ್ರಕಾಶ್ ಮತ್ತಿತರರು ಉಪಸ್ಥಿತರಿದ್ದರು.

ಉದಯವಾಣಿ

ಗುರುವಾರ, ಜೂನ್ 9, 2022

ಕುಲಪತಿ ವೇಣುಗೋಪಾಲ್ ಅಭಿನಂದನಾ ಕಾರ್ಯಕ್ರಮದಲ್ಲಿ ಡಾ। ಸಿ.ಎನ್. ಮಂಜುನಾಥ್

ಆರೋಗ್ಯಕರ ಮನಸ್ಸಿದ್ದರೆ ಸಾಧನೆ, ಯಶಸ್ಸು



ಬೆಂಗಳೂರು: ಯಾವುದೇ ಸಂಸ್ಥೆ ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸಬೇಕಾದರೆ ಹಾಗೂ ಸಿಬ್ಬಂದಿಗೆ ಕೆಲಸ ಮಾಡುವ ವಾತಾವರಣ ಕಲ್ಪಿಸಬೇಕಾದರೆ, ಅದನ್ನು ಮುನಡೆಸುವ ವ್ಯಕ್ತಿ ಆರೋಗ್ಯಕರ ಮನಸ್ಸು ಹೊಂದಿರಬೇಕು. ಅಂತಹ ಮನಸ್ಸನ್ನು ಪ್ರೊ. ಕೆ.ಆರ್. ವೇಣುಗೋಪಾಲ್ ಹೊಂದಿದ್ದಾರೆ ಎಂದು ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ. ಸಿ.ಎನ್.ಮಂಜುನಾಥ್ ತಿಳಿಸಿದರು.

ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಹುದ್ದೆಯಿಂದ ಜೂ.12ರಂದು ನಿವೃತ್ತರಾಗುತ್ತಿರುವ ಪ್ರೊ. ಕೆ.ಆರ್. ವೇಣುಗೋಪಾಲ್ ಅವರಿಗೆ ವಿವಿ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ನಗರದ ಸೆಂಟ್ರಲ್ ಕಾಲೇಜು ಆವರಣದಲ್ಲಿರುವ ಜ್ಞಾನಜ್ಯೋತಿ ಸಭಾಂಗಣದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಅಭಿನಂದನಾ ಸಮಾರಂಭದಲ್ಲಿ 'ಸರಸ್ವತಿ ಪುತ್ರ' ಅಭಿನಂದನಾ ಗ್ರಂಥ ಲೋಕಾರ್ಪಣೆ ಮಾಡಿ ಮಾತನಾಡಿದರು.

ಸಮಾಜದಲ್ಲಿ ಸಾಕಷ್ಟು ಮಂದಿ ಪದವೀಧರರಿದ್ದಾರೆ. ಆದರೆ, ಪ್ರಜ್ಞಾವಂತರು ಸಿಗುವುದು ಕಷ್ಟ. ವಿದ್ಯಾವಂತರಾದರೆ ಸಾಲದು. ಉತ್ತಮ ನಡವಳಿಕೆ ಹೊಂದಿರುವ ವ್ಯಕ್ತಿಗಳಾಗುವ ಅವಶ್ಯಕತೆ ಇದೆ. ವಿದ್ಯೆ ಮತ್ತು ವಿನಯ ಒಟ್ಟಿಗೆ ಸೇರಿದಾಗ ಯಶಸ್ಸು ಗಳಿಸಲು ಸಾಧ್ಯ. ಅದಕ್ಕೆ ವೇಣುಗೋಪಾಲ್ ಅವರೇ ಸಾಕ್ಷಿ ಎಂದರು.

ರಾಷ್ಟ್ರೀಯ ಮೌಲ್ಯೀಕರಣ ಮತ್ತು ಮಾನ್ಯತಾ ಪರಿಷತ್‌ನ ನಿರ್ದೇಶಕ ಪ್ರೊ. ಎಸ್.ಸಿ. ಶರ್ಮ ಮಾತನಾಡಿ, ಪ್ರಾಮಾಣಿಕವಾಗಿ ಕೆಲಸ ಮಾಡುವವರಿಗೆ ಶತ್ರುಗಳು ಜಾಸ್ತಿ. ಧೈರ್ಯ ಮತ್ತು ತಾಳ್ಮೆಯಿದ್ದರೆ ಜೀವನದಲ್ಲಿ ಯಶಸ್ಸು ಸಿಗುತ್ತದೆ ಎನ್ನುವುದಕ್ಕೆ ವೇಣುಗೋಪಾಲ್ ಅವರೇ ನಿದರ್ಶನ. ಐದು ಬಾರಿ ಅಮಾನತಾಗಿದ್ದರೂ ವಿಚಲಿತರಾಗದೇ ಕೆಲಸ ಮಾಡಿದ ಪರಿಣಾಮ ವಿಶ್ವವಿದ್ಯಾಲಯದ ಕುಲಪತಿಗಳಾದರು ಎಂದು ತಿಳಿಸಿದರು.

ಅವರು ಮಂಡಿಸಿರುವ ಪ್ರಬಂಧಗಳನ್ನು ಐಐಟಿ ಪ್ರಾಧ್ಯಾಪಕರು ಕೂಡ ಮಂಡಿಸಲು ಸಾಧ್ಯವಾಗದೆ, ಕೈಬಿಟ್ಟಿರುವ ಸಾಕಷ್ಟು ಉದಾಹರಣೆಗಳಿವೆ. ಇದು ವೇಣುಗೋಪಾಲ್ ಅವರು ಕೆಲಸಕ್ಕೆ ನೀಡುವ ಬದ್ಧತೆಯನ್ನು ತೋರಿಸುತ್ತದೆ. ಅದೇ ಬದ್ಧತೆ ಇಷ್ಟು ಎತ್ತರಕ್ಕೆ ಕರೆದುಕೊಂಡು ಬಂದಿದೆ ಎಂದರು.

ತಮ್ಮ ಪುಸ್ತಕಗಳಿಂದ ಬರುವ ರಾಯಧನವನ್ನು ಸಂಪೂರ್ಣವಾಗಿ ದಾನ ನೀಡುವ ಮೂಲಕ ಸಮಾಜಮುಖಿ ಕೆಲಸ ಮಾಡುತ್ತಿದ್ದಾರೆ. ಹಲವು ಪದವಿಗಳನ್ನು ಸಂಪಾದಿಸುವ ಮೂಲಕ ಸರಸ್ವತಿ ಪುತ್ರ ಎನ್ನುವ ಹೆಸರಿಗೆ ಅನ್ವರ್ಥವಾಗಿದ್ದಾರೆ ಎಂದರು.

ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ ಗೌರವ ಕಾರ್ಯದರ್ಶಿ ಡಾ. ವುಡೇ ಪಿ ಕೃಷ್ಣ ಐಎನ್ ಎಸ್‌ಎ ಹಿರಿಯ ವಿಜ್ಞಾನಿ ಎಲ್.ಎಂ. ಪಟ್ನಾಯಕ್, ಬೆಂಗಳೂರು ವಿಶ್ವವಿದ್ಯಾಲಯದ ಕುಲಸಚಿವ ಎಂ. ಕೊಟ್ರೇಶ್, ಕುಲಸಚಿವ (ಮೌಲ್ಯಮಾಪನ) ಪ್ರೊ. ದೇವರಾಜು ಸೇರಿದಂತೆ ಹಲವರು ವೇಣುಗೋಪಾಲ್ ಅವರನ್ನು ಕುರಿತು ಅನಿಸಿಕೆ ಹಂಚಿಕೊಂಡರು.

ವ್ಯಕ್ತಿತ್ವವೆಂದರೆ ಸದ್ಗುಣಗಳ ಸಂಗಮ

ಬೆಂವಿವಿ ಕುಲಪತಿ ಪ್ರೊ.ವೇಣುಗೋಪಾಲ ಅಭಿನಂದನಾ ಸಮಾರಂಭ

ಬೆಂಗಳೂರು: ವ್ಯಕ್ತಿ ಎಲ್ಲರ ಮನೆಯಲ್ಲೂ ಹುಟ್ಟುತ್ತಾನೆ, ಆದರೆ ವ್ಯಕ್ತಿತ್ವ ಎಲ್ಲರಲ್ಲೂ ಇರುವುದಿಲ್ಲ, ವ್ಯಕ್ತಿತ್ವವೆಂದರೆ ಹಲವಾರು ಸದ್ಗುಣಗಳ, ಶಕ್ತಿಗಳ ಸಂಗಮ. ಅಂತಹ ಎಲ್ಲ ಸದ್ಗುಣ, ಶಕ್ತಿಗಳನ್ನು ಹೊಂದಿರುವ ಅಪರೂಪದ ವ್ಯಕ್ತಿ ಪ್ರೊ.ವೇಣುಗೋಪಾಲ ಕೆ. ಆರ್ ಎಂದು ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್ ಹೇಳಿದರು.



ಬೆಂಗಳೂರು ವಿಶ್ವವಿದ್ಯಾಲಯದಲ್ಲಿ 42 ವರ್ಷ ಸುದೀರ್ಘ ಸೇವೆ ಸಲ್ಲಿಸಿ, ಜೂ 12ರಂದು ನಿವೃತ್ತರಾಗಲಿರುವ ಕುಲಪತಿ ಪ್ರೊ.ವೇಣುಗೋಪಾಲ್ ಅವರಿಗೆ ಹಮ್ಮಿಕೊಂಡಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಈ ದೇಶದಲ್ಲಿ ಲಕ್ಷ್ಮಿ ಪುತ್ರರು ಸಾಕಷ್ಟಿದ್ದಾರೆ, ಆದರೆ ಸರಸ್ವತಿ ಪುತ್ರರು ಸಿಗುವುದು ವಿರಳ. ವೇಣುಗೋಪಾಲ ಸರಸ್ವತಿ ಪುತ್ರ ಎಂಬುದಕ್ಕೆ ಅವರು ಮಂಡಿಸಿದ ಸಾವಿರಕ್ಕೂ ಹೆಚ್ಚು ಪ್ರಬಂಧಗಳು, 76 ಪುಸ್ತಕಗಳು, 35ಕ್ಕೂ ಹೆಚ್ಚು ಪೇಟೆಂಟ್‌ಗಳು, 70ಕ್ಕೂ ವಿದ್ಯಾರ್ಥಿಗಳಿಗೆ ಪಿಎಚ್‌ಡಿ ಮಾರ್ಗದರ್ಶನ ನೀಡಿರುವುದೇ ಸಾಕ್ಷಿ. ವೇಣುಗೋಪಾಲ ಅವರ ಅಭಿನಂದನಾ ಗ್ರಂಥಕ್ಕೆ ಸರಸ್ವತಿ ಪುತ್ರ ಎಂದು ಹೆಸರಿಟ್ಟಿದ್ದು ಬಹಳ ಸೂಕ್ತವಾಗಿದೆ ಎಂದರು.

ರಾಷ್ಟ್ರೀಯ ಮೌಲ್ಯೀಕರಣ ಮತ್ತು ಮಾನ್ಯತಾ ಪರಿಷತ್ತಿನ ನಿರ್ದೇಶಕರಾದ ಪ್ರೊ. ಎಸ್.ಸಿ.ಶರ್ಮ ಮಾತನಾಡಿ, ಈ ಜಗತ್ತಿನಲ್ಲಿ ಜ್ಞಾನಕ್ಕೆ ಸರಿ ಸಮಾನವಾದದ್ದು ಯಾವುದೂ ಇಲ್ಲ. ಶುದ್ಧ ಮನಸ್ಸಿನಿಂದ ಜ್ಞಾನಾರ್ಜನೆ ಮಾಡಿಕೊಳ್ಳಬೇಕು. ಅದನ್ನೇ ಭಗವದ್ಗೀತೆಯಲ್ಲಿ ನಹಿಃ ಜ್ಞಾನೇನ ಸದೃಶಂ ಎಂದು ಹೇಳಿದ್ದಾರೆ ಎಂದರು.

ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಗಳ ಗೌರವ ಮುಖ್ಯ ಕಾರ್ಯದರ್ಶಿ ನಾಡೋಜ ಡಾ. ವುಡೆ.ಪಿ. ಕೃಷ್ಣ ಮಾತನಾಡಿದರು. ಹಿರಿಯ ವಿಜ್ಞಾನಿ ಪ್ರೊ.ಎಲ್.ಎಂ.ಪಟ್ನಾಯಕ್, ಕುಲಸಚಿವರಾದ ಎಂ.ಕೊಟ್ರೇಶ್, ಪ್ರೊ.ಸಿ.ಟಿ. ದೇವರಾಜ್, ಬೆಂಗಳೂರು ಉತ್ತರ ವಿವಿ ಕುಲಸಚಿವ ಪ್ರೊ.ಡಾಮ್ನಿಕ್ ಇದ್ದರು. ಈ ಸಂದರ್ಭದಲ್ಲಿ 'ಸರಸ್ವತಿ ಪುತ್ರ' ಗ್ರಂಥ ಲೋಕಾರ್ಪಣೆಗೊಳಿಸಲಾಯಿತು. ಬೋಧಕ, ಬೋಧಕೇತರ ಸಿಬ್ಬಂದಿ, ಸಂಶೋಧನಾ, ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ವಿಜಯ ಕರ್ನಾಟಕ

ಗುರುವಾರ,9 ಜೂನ್ 2022

ಅಭಿನಂದನಾ ಸಮಾರಂಭದಲ್ಲಿ ಡಾ. ಸಿ.ಎನ್.ಮಂಜುನಾಥ್ ಅಭಿಮತ

ಸರಳ ವ್ಯಕ್ತಿತ್ವದ ಸರಸ್ವತಿ ಪುತ್ರ ವೇಣುಗೋಪಾಲ್

■ ವಿಕ ಸುದ್ದಿಲೋಕ ಬೆಂಗಳೂರು

ಒಂದು ಸಂಸ್ಥೆ ಆರೋಗ್ಯಕರವಾಗಿ ಮುನ್ನಡೆಯಬೇಕಾದರೆ, ಅದನ್ನು ನಡೆಸುವ ವ್ಯಕ್ತಿ ಆರೋಗ್ಯವಂತ ಮನಸ್ಥಿತಿ ಹೊಂದಿರಬೇಕು. ಸಿಬ್ಬಂದಿಗಳಿಗೆ ಕೆಲಸ ಮಾಡುವುದಕ್ಕೆ ಉತ್ತಮ ವಾತಾವರಣ ಕಲ್ಪಿಸಿಕೊಡಬೇಕು. ಅದನ್ನು ಪ್ರೊ. ಕೆ.ಆರ್. ವೇಣುಗೋಪಾಲ್ ಮಾಡಿದ್ದಾರೆ ಎಂದು ಜಯದೇವ ಆಸ್ಪತ್ರೆಯ ನಿರ್ದೇಶಕ ಡಾ. ಸಿ.ಎನ್.ಮಂಜುನಾಥ್ ಹೇಳಿದರು.

ಸರಸ್ವತಿ ಪುತ್ರ ಅಭಿನಂದನಾ ಗ್ರಂಥ ಲೋಕಾರ್ಪಣೆ

ನಗರದ ಸೆಂಟ್ರಲ್ ಕಾಲೇಜು ಆವರಣದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿಗಳಾಗಿ ನಿವೃತ್ತಿಯಾಗುತ್ತಿರುವ ಪ್ರೊ. ಕೆ.ಆರ್. ವೇಣುಗೋಪಾಲ್ ಅವರ ಅಭಿನಂದನಾ ಸಮಾರಂಭದಲ್ಲಿ 'ಸರಸ್ವತಿ ಪುತ್ರ' ಅಭಿನಂದನಾ ಗ್ರಂಥ ಲೋಕಾರ್ಪಣೆ ಮಾಡಿ ಮಾತನಾಡಿದರು.

''ಹಲವು ಪದವಿಗಳನ್ನು ಪಡೆದು ಸರಸ್ವತಿ ಪುತ್ರ ಎನಿಸಿಕೊಂಡಿರುವ, ಸದಾ ನಿಷ್ಕಲ್ಮಷ ನಗುವಿನ ಹಾಗೂ ಸರಳ ವ್ಯಕ್ತಿತ್ವದ ವೇಣುಗೋಪಾಲ್ ಅವರು ಬೆಂಗಳೂರು ವಿಶ್ವವಿದ್ಯಾಲಯದ ಬ್ರ್ಯಾಂಡ್ ಅನ್ನು ದೇಶ ವಿದೇಶಕ್ಕೆ ಪರಿಚಯಿಸಿದ್ದಾರೆ. ವಿದ್ಯೆ ಜತೆಗೆ ವಿನಯವನ್ನು ಮೈಗೂಡಿಸಿಕೊಂಡಿರುವ ವೇಣುಗೋಪಾಲ್ ವ್ಯಕ್ತಿತ್ವ ಎಲ್ಲರಿಗೂ ಮಾದರಿಯಾಗಿದೆ'' ಎಂದು ಕೊಂಡಾಡಿದರು.

''ನಮ್ಮಲ್ಲಿ ಸಾಕಷ್ಟು ಮಂದಿ ಪದವಿ ಪಡೆದವರಿದ್ದಾರೆ. ಆದರೆ, ಪ್ರಜ್ಞಾವಂತರು ಸಿಗುವುದು ಕಷ್ಟ. ವಿದ್ಯಾವಂತರಾದರೆ ಸಾಲದು. ಉತ್ತಮ ನಡವಳಿಕೆ ಹೊಂದಿರುವ ವ್ಯಕ್ತಿಗಳಾಗುವ ಅವಶ್ಯಕತೆ ಇದೆ. ವಿದ್ಯೆ ಮತ್ತು ವಿನಯ ಒಟ್ಟಿಗೆ ಸೇರಿದರೆ ಮಾತ್ರ ಯಶಸ್ಸು ಗಳಿಸಲು ಸಾಧ್ಯ. ಅದಕ್ಕೆ ವೇಣುಗೋಪಾಲ್ ಅವರೇ ಸಾಕ್ಷಿ'' ಎಂದರು.

ರಾಷ್ಟ್ರೀಯ ಮೌಲ್ಯೀಕರಣ ಮತ್ತು ಮಾನ್ಯತಾ ಪರಿಷತ್‌ನ ನಿರ್ದೇಶಕ ಪ್ರೊ. ಎಸ್.ಸಿ.ಶರ್ಮ ಮಾತನಾಡಿ ''ಪ್ರಾಮಾಣಿಕವಾಗಿ ಕೆಲಸ ಮಾಡುವವರಿಗೆ ಶತ್ರುಗಳು ಜಾಸ್ತಿ. ಧೈರ್ಯ ಮತ್ತು ತಾಳ್ಮೆಯಿದ್ದರೆ ಜೀವನದಲ್ಲಿ ಯಶಸ್ಸು ಸಿಗುತ್ತದೆ ಎನ್ನುವುದಕ್ಕೆ ವೇಣುಗೋಪಾಲ್ ಅವರೇ ನಿದರ್ಶನ. ಐದು ಬಾರಿ ಅಮಾನತಾಗಿದ್ದರೂ ವಿಚಲಿತರಾಗದೇ ಕೆಲಸ ಮಾಡಿದ ಪರಿಣಾಮ ಕುಲಪತಿಗಳಾದರು'' ಎಂದು ಹೇಳಿದರು.

ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ ಗೌರವ ಕಾರ್ಯದರ್ಶಿ ಡಾ. ವೂಡೇ ಪಿ ಕೃಷ್ಣ, ಐಎನ್‌ಎಸ್‌ಎ ಹಿರಿಯ ವಿಜ್ಞಾನಿ ಎಲ್. ಎಂ.ಪಟ್ನಾಯಕ್, ಬೆಂಗಳೂರು ವಿಶ್ವವಿದ್ಯಾಲಯದ ಕುಲಸಚಿವ ಎಂ. ಕೊಟ್ರೇಶ್, ಕುಲಸಚಿವ (ಮೌಲ್ಯಮಾಪನ) ಪ್ರೊ.ಜೆ.ಟಿ.ದೇವರಾಜು ಸೇರಿದಂತೆ ಹಲವರು ಉಪಸ್ಥಿತರಿದ್ದರು.



ಸೆಂಟ್ರಲ್ ಕಾಲೇಜು ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರೊ. ಕೆ.ಆರ್.ವೇಣುಗೋಪಾಲ್ ಅವರನ್ನು ಅಭಿನಂದಿಸಲಾಯಿತು.

42 ವರ್ಷದ ಸೇವೆ

ಪ್ರೊ. ಕೆ.ಆರ್.ವೇಣುಗೋಪಾಲ್ ಬೆಂಗಳೂರು ವಿವಿಯಲ್ಲಿ ಸುದೀರ್ಘ 42 ವರ್ಷಗಳ ಸೇವೆ ಸಲ್ಲಿಸಿದ್ದಾರೆ. ಬೆಂಗಳೂರು ವಿವಿ ವಿದ್ಯಾರ್ಥಿಯಾಗಿ, ಅಲ್ಲಿನ ಎಲ್ಲಾ ಹಂತದ ಶೈಕ್ಷಣಿಕ ಹುದ್ದೆಗಳನ್ನು ಅಲಂಕರಿಸಿ ವಿಶ್ವವಿದ್ಯಾಲಯದ ಕುಲಪತಿ ಸ್ಥಾನಕ್ಕೇರಿದ ಅಪರೂಪದ ವ್ಯಕ್ತಿ. ಇವರು 11 ವಿವಿಧ ಪದವಿಗಳು, ಎರಡು ಪಿಎಚ್‌ಡಿ ಪದವಿಗಳನ್ನು ಪಡೆದಿದ್ದಾರೆ. 73 ಪುಸ್ತಕಗಳು ಹಾಗೂ ಒಂದು ಸಾವಿರಕ್ಕೂ ಹೆಚ್ಚು ಸಂಶೋಧನಾ ಲೇಖನಗಳನ್ನು ಪ್ರಕಟಿಸಿದ್ದಾರೆ. 35 ಪೇಟೆಂಟ್‌ಗಳು ಇವರ ಸಂಶೋಧನೆಗೆ ಸಂದಿವೆ. ಗಣಕ ವಿಜ್ಞಾನದ ಅತ್ಯುನ್ನತ ಗೌರವವಾದ ಐಇಇಇ ಫೆಲೋ ಪ್ರಶಸ್ತಿಗೆ ಭಾಜನರಾದದ್ದಲ್ಲದೆ, ಎಸಿಎಮ್ ಡಿಸ್ಟಿಂಗ್ವಿಶ್ಡ್ ಎಜುಕೇಟರ್ ಗೌರವಕ್ಕೂ ಪಾತ್ರರಾಗಿದ್ದಾರೆ. ಇದಲ್ಲದೆ ಅನೇಕ ಪ್ರಶಸ್ತಿ ಪುರಸ್ಕಾರಗಳು ಇವರ ಶೈಕ್ಷಣಿಕ ಸಾಧನೆಗೆ ಸಂದಿವೆ.

ಕನ್ನಡಪ್ರಭ

ಗುರುವಾರ 9.6.2022

ಬೆಂವಿವಿ ಕುಲಪತಿ ವೇಣುಗೆ ಸನ್ಮಾನ: ಜೂ.12ರಂದು ನಿವೃತ್ತಿ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಬೆಂಗಳೂರು ವಿವಿಯಲ್ಲಿ 4 ವರ್ಷ ಕುಲಪತಿಯಾಗಿ ಸೇವೆ ಸಲ್ಲಿಸಿ ಜೂ.12 ಕ್ಕೆ ನಿವೃತ್ತಿಯಾಗಲಿರುವ ಪ್ರೊ.ಕೆ.ಆರ್.ವೇಣುಗೋಪಾಲ್ ಅವರಿಗೆ ಸೆಂಟ್ರಲ್ ಕಾಲೇಜಿನ ಜ್ಞಾನಜ್ಯೋತಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಈ ವೇಳೆ ಮಾತನಾಡಿದ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಉತ್ತಮ ಹೆಸರು ಬರುವಂತೆ ಮಾಡಲು ಕುಲಪತಿ ವೇಣುಗೋಪಾಲ್ ಶ್ರಮಿಸಿದ್ದಾರೆ ಎಂದರು. ವೇಣುಗೋಪಾಲ್ ಸಾವಿರಕ್ಕೂ ಅಧಿಕ ಪ್ರಬಂಧ ಮಂಡನೆ, 76 ಪುಸ್ತಕ ರಚನೆ, 35ಕ್ಕೂ ಹೆಚ್ಚು ಪೇಟೆಂಟ್ ಪಡೆದಿದ್ದಾರೆ ಎಂದು ಶ್ಲಾಘಿಸಿದರು.



ಸೆಂಟ್ರಲ್ ಕಾಲೇಜಿನ ಜ್ಞಾನಜ್ಯೋತಿ ಸಭಾಂಗಣದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ವೇಣುಗೋಪಾಲ್ ಅವರನ್ನು ಸನ್ಮಾನಿಸಲಾಯಿತು.

2 ವಿಶ್ವವಾಣಿ
06.06.2022 ಸೋಮವಾರ
vishwavani.news

ಪ್ರೊ.ಮಲ್ಲೇಪುರಂ 70ರ ಅಭಿನಂದನೆ

ಬೆಂಗಳೂರು: ಪ್ರಾಕೃತ ಮತ್ತು ಸಂಸ್ಕೃತ ಭಾಷೆಯಲ್ಲಿನ ಕೃತಿಗಳನ್ನು ಕನ್ನಡಕ್ಕೆ ತರುವ ಮೂಲಕ ಮಲ್ಲೇಪುರಂ ಜಿ. ವೆಂಕಟೇಶ ಅವರು ನಮ್ಮ ತಿಳಿವಳಿಕೆ ವಿಸ್ತರಿಸಿದ್ದಾರೆ ಎಂದು ಜ್ಞಾನಪೀಠ ಪುರಸ್ಕೃತ, ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಚಂದ್ರಶೇಖರ ಕಂಬಾರ ಹೇಳಿದ್ದಾರೆ. ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅಭಿನಂದನಾ ಸಮಿತಿ ನಗರದಲ್ಲಿ ಆಯೋಜಿಸಿದ್ದ ಪ್ರೊ. ಮಲ್ಲೇಪುರಂ 70ರ ಅಭಿನಂದನ ಕಾರ್ಯಕ್ರಮದಲ್ಲಿ ಸಂಪಾದಿತ ಕೃತಿ ಸಮೂಹಿತ ಮತ್ತು ಸಪ್ತತಿ ಬಿಡುಗಡೆಮಾಡಿ ಮಾತನಾಡಿ, ಮಲ್ಲೇಪುರಂ ಇಲ್ಲದಿದ್ದರೆ ಕನ್ನಡ ಭಾಷೆ ಬಡವಾಗುತ್ತಿತ್ತು ಎಂದರು. ಆಧ್ಯಾತ್ಮಿಕ ಚಿಂತಕಿ ವೀಣಾ ಬನ್ನಂಜೆ, ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ, ಒಡಿಶಾ ಕೇಂದ್ರೀಯ ವಿಶ್ವವಿದ್ಯಾಲಯದ ಸಹ ಕುಲಾಧಿಪತಿ ಪ್ರೊ.ಪಿ.ವಿ. ಕೃಷ್ಣ ಭಟ್ಟ, ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎನ್. ಕುಮಾರ್ ಮತ್ತಿತರರು ಇದ್ದರು.

ಹೊಸದಿಗಂತ

ಸೋಮವಾರ, 6 ಜೂನ್ 2022, ಬೆಂಗಳೂರು

ಮನುಜನಾಗಿ ಬದುಕುವುದೇ ವ್ಯಕ್ತಿತ್ವ

ಬೆಂಗಳೂರು: [illegible]

[illegible]



ಬಿಡುಗಡೆಯಾದ ಕೃತಿಗಳು

[illegible] (1000 [illegible]) [illegible] (1000 [illegible]) [illegible]

"ಸಾಧಾರಣ ಜೀವಿಯಾಗಿ ಎಲ್ಲರಿಗೂ ಒಂದು ಮಾದರಿ ಯಾಗಬೇಕು ಎನ್ನುವ ಛಲವು ನನ್ನನ್ನು ಈ ಸ್ಥಿತಿಗೆ ತಂದು ನಿಲ್ಲಿಸಿದೆ. ಆದರೆ, ಕಲ್ಲಾಗಿದ್ದ ನನ್ನ ರೂಪವನ್ನು ತಿದ್ದಿ ತೀಡಿ ಬದಲಾಗುವ ಈ ಹಾದಿಯಲ್ಲಿ ಅನೇಕರ ಪ್ರೀತಿ, ಪ್ರೋತ್ಸಾಹ, ಪ್ರೇರಣೆ ಇದೆ. ಅದಕ್ಕೆ ನಾನು ಎಂದು ಋಣಿ

■ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ವಿದ್ವಾಂಸ

"ಅನೇಕ ಶಿಷ್ಯರಿಗೆ ಮಾರ್ಗದರ್ಶನ ಮಾಡಿರುವ ಸೌಜನ್ಯ ಜೀವಿ ಮಲ್ಲೇಪುರಂ ಅವರು. ಅವರ ಈ ವಿಧೇಯ ವ್ಯಕ್ತಿತ್ವ ಎಂಥವರಿಗಾದರೂ ಒಮ್ಮೆ ಬೆರಗುಗೊಳಿಸುತ್ತದೆ.

■ ಡಾ. ಶಿವರಾಜ ವಿ. ಪಾಟೀಲ, ವಿ. ನ್ಯಾಯಮೂರ್ತಿ

"ಸಾಧನೆ ಎಂದಿಗೂ ಸುಲಭವಾಗಿ ಒಲಿದು ಬರುವುದಿಲ್ಲ. ಸಾಹಿತ್ಯ ಲೋಕದ ದಿಗ್ಗಜರಲ್ಲಿ ಒಬ್ಬರಾದ ಅವರಿಗೆ ಎಂದೂ ಅಹಂ ಇರಲಿಲ್ಲ, ಎಲ್ಲರೊಂದಿಗೂ ಬೆರೆಯುವ ಅವರ ಸೌಮ್ಯ ಸ್ವಭಾವವೇ ಅವರನ್ನು [illegible]

■ ಡಾ. ವೀಣಾ ಬನ್ನಂಜೆ, ಆಧ್ಯಾತ್ಮ ಚಿಂತಕಿ

ಉದಯವಾಣಿ ಸೋಮವಾರ, ಜೂನ್ 6, 2022

ಸಾಹಿತ್ಯ ಲೋಕಕ್ಕೆ ಮಲ್ಲೇಪುರಂ ಕೊಡುಗೆ ದೊಡ್ಡದು

ಬೆಂಗಳೂರು: ಪ್ರಾಕೃತ ಮತ್ತು ಸಂಸ್ಕೃತ ಭಾಷೆಯಲ್ಲಿನ ಕೃತಿಗಳನ್ನು ಕನ್ನಡಕ್ಕೆ ತರುವಲ್ಲಿ ಲೇಖಕ ಮಲ್ಲೇಪುರಂ ಜಿ. ವೆಂಕಟೇಶ ಅವರ ಪಾತ್ರ ದೊಡ್ಡದಿದೆ ಎಂದು ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಚಂದ್ರಶೇಖರ ಕಂಬಾರ ಅಭಿಪ್ರಾಯಪಟ್ಟರು.



ಭಾನುವಾರ ಗಾಂಧಿಭವನದಲ್ಲಿ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ ಅಭಿನಂದನಾ ಸಮಿತಿ ಹಮ್ಮಿಕೊಂಡಿದ್ದ 'ಪ್ರೊ. ಮಲ್ಲೇಪುರಂ 70ರ ಅಭಿನಂದನೆ' ಸಮಾರಂಭದಲ್ಲಿ 'ಸಮಾಹಿತ' ಮತ್ತು 'ಸಪ್ತತಿ' ಲೋಕಾರ್ಪಣೆಗೊಳಿಸಿ ಮಾತನಾಡಿ, ನನಗೆ ಶಿಷ್ಯನಾಗಿದ್ದ ಮಲ್ಲೇಪುರಂ ನಾಟಕ, ಸಂಸ್ಕೃತ ಮತ್ತು ಶಾಸ್ತ್ರದ ವಿಚಾರದಲ್ಲಿ ಗುರುವಾಗಿದ್ದ ಎಂದರು. ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ, ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎನ್. ಕುಮಾರ್, ಕರ್ನಾಟಕದಲ್ಲಿ ವಿರೋಧದ ನಡುವೆಯೂ ಸಂಸ್ಕೃತ ವಿಶ್ವವಿದ್ಯಾಲಯ ಸ್ಥಾಪನೆಯಾಯಿತು. ಅದು ಸದೃಢವಾಗಿ ಬೆಳೆಯಲು ಮಲ್ಲೇಪುರಂ ಕಾರಣರಾಗಿದ್ದಾರೆ. ಅದರ ಏಳಿಗೆಯ ಸಂಪೂರ್ಣ ಶ್ರೇಯಸ್ಸು ಮಲ್ಲೇಪುರಂ ಅವರಿಗೆ ಸಲ್ಲಬೇಕು ಎಂದು ಶ್ಲಾಘಿಸಿದರು. ಆಧ್ಯಾತ್ಮಿಕ ಚಿಂತಕಿ ವೀಣಾ ಬನ್ನಂಜೆ, ಒಡಿಶಾ ಕೇಂದ್ರೀಯ ವಿಶ್ವವಿದ್ಯಾಲಯದ ಸಹ ಕುಲಪತಿ ಪ್ರೊ.ಪಿ.ವಿ. ಕೃಷ್ಣ ಭಟ್ಟ, ಮಲ್ಲೇಪುರಂ ಜಿ ವೆಂಕಟೇಶ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಹೊಸ ಚಿಂತನೆಗಳು ನಮಗೆ ಗೊತ್ತಾಗುತ್ತದೆ. ನಾವು ನಮ್ಮದೇ ಆದ ಜಗತ್ತಿನಲ್ಲಿ ಬದುಕುತ್ತೇವೆ. ಅದು ಅಲ್ಲ ಸಾಹಿತ್ಯ ನಮಗೆ ಬದುಕುವುದನ್ನು ಕಲಿಸಿಕೊಡುತ್ತದೆ ಎಂದು ತಿಳಿಸಿದರು.

ಕವಿ ಎಚ್.ಎಸ್.ವೆಂಕಟೇಶ ಮೂರ್ತಿ ಮಾತನಾಡಿ, ಕನ್ನಡ ನಾಡಿನ ಸುಗಮ ಸಂಗೀತಕ್ಕೆ ಹೊಸ ದಿಕ್ಕು ಕಲಿಸಿದ ಶ್ರೇಯಸ್ಸು ವೈ.ಕೆ. ಮುದ್ದುಕೃಷ್ಣ ಅವರಿಗೆ ಸಲ್ಲುತ್ತದೆ. ಸಂಗೀತ ನಿರ್ದೇಶಕ ಮತ್ತು ಗಾಯಕರಾದ ಮೈಸೂರು ಅಂತಸ್ವಾಮಿ, ಸಿ.ಅಶ್ವತ್ಥ್ ಅವರನ್ನು ಸೇರಿಸಿಕೊಂಡು ಸುಗಮ ಸಂಗೀತದ ಪಥ ಆರಂಭಿಸಿದರು. ಜತೆಗೆ, ಹಲವು ಕಲಾವಿದರ ಜತೆಗೂಡಿ ಕರ್ನಾಟಕ ಸುಗಮ ಸಂಗೀತ ಪರಿಷತ್ತು ಹುಟ್ಟುಹಾಕಿದರು. ಕನ್ನಡ ಸಾಹಿತ್ಯ ಪರಿಷತ್ತಿನಷ್ಟೇ, ಸುಗಮಸಂಗೀತ ಪರಿಷತ್ತು ಕ್ರಿಯಾಶೀಲತೆಯಿಂದ ಕಾರ್ಯ ನಿರ್ವಹಿಸುತ್ತಿರುವುದು ಸಂತಸ ವಿಚಾರ ಎಂದರು.

ಕವಿ.ನಾ.ದಾಮೋದರ ಶೆಟ್ಟಿ, ಕರ್ನಾಟಕ ಲೋಕಸೇವಾ ಆಯೋಗದ ಮಾಜಿ ಅಧ್ಯಕ್ಷ ವೈ.ಕೆ.ಪುಟ್ಟಸೋಮೇಗೌಡ, ಸಪ್ನ ಬುಕ್ ಹೌಸ್‌ನ ನಿತೀನ್ ಷಾ, ಗಾಯಕ ನಗರ ಶ್ರೀನಿವಾಸ ಉಡುಪ, ಶ್ರೀನಿವಾಸ ಜಿ.ಕಪ್ಪಣ್ಣ, ಕಿಕ್ಕೇರಿ ಕೃಷ್ಣಮೂರ್ತಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಕನ್ನಡಪ್ರಭ
ಸೋಮವಾರ 6.6.2022

ಮಲ್ಲೇಪುರಂಗೆ 70 | ಸಿದ್ಧಗಂಗಾ ಮಠದ ಗ್ರಂಥಾಲಯದ 10 ಸಾವಿರ ಪುಸ್ತಕ ಓದಿದ ಏಕೈಕ ವ್ಯಕ್ತಿ: ಸಿದ್ಧಲಿಂಗಶ್ರೀ


'ಸಿದ್ಧಗಂಗಾ ಮಠದ ಅನರ್ಘ್ಯ ರತ್ನ ಮಲ್ಲೇಪುರಂ'

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಡಾ। ಶಿವಕುಮಾರ ಸ್ವಾಮೀಜಿ ಹಚ್ಚಿದ ಜ್ಯೋತಿಯಲ್ಲಿ ಅತ್ಯಂತ ಪ್ರಖರವಾಗಿ ಬೆಳಗಿದ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ ಅವರು ಸಿದ್ಧಗಂಗಾ ಮಠದ ಅನರ್ಘ್ಯ ರತ್ನ ಎಂದು ಸಿದ್ದಲಿಂಗ ಸ್ವಾಮೀಜಿ ಬಣ್ಣಿಸಿದ್ದಾರೆ.

ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ ಅವರು 70ನೇ ವಸಂತಕ್ಕೆ ಕಾಲಿಟ್ಟ ಹಿನ್ನೆಲೆಯಲ್ಲಿ ನಗರದ ಗಾಂಧಿಭವನದಲ್ಲಿ ಹಮ್ಮಿಕೊಂಡಿದ್ದ ಅಭಿನಂದನಾ ಮತ್ತು ಸಮಾಹಿತ ಗ್ರಂಥ ಲೋಕಾರ್ಪಣೆ' ಸಮಾರಂಭದಲ್ಲಿ ಮಾತನಾಡಿದ ಅವರು, ಸಿದ್ಧಗಂಗಾ ಮಠದಲ್ಲಿ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್ ವ್ಯಾಸಂಗ ಮಾಡಿದ್ದಾರೆ. ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪ ಸಾಲಿನಲ್ಲಿ ನಿಲ್ಲುವ ವ್ಯಕ್ತಿತ್ವ ಅವರು. ಸಂವಿಧಾನ ಶಿಲ್ಪಿ ಡಾ।ಬಿ.ಆರ್.ಅಂಬೇಡ್ಕರ್ ಅವರಂತೆಯೇ ಗ್ರಂಥಗಳ ಅಧ್ಯಯನ ಮಾಡಿದವರು. ಸಿದ್ಧಗಂಗಾಮಠದ ಗ್ರಂಥಾಲಯದಲ್ಲಿರುವ 10 ಸಾವಿರ ಪುಸ್ತಕಗಳನ್ನು ಓದಿದ ಏಕೈಕ ವ್ಯಕ್ತಿ. ಬಾಲ್ಯದಿಂದಲೇ ಓದುವ ಹವ್ಯಾಸ ಬೆಳೆಸಿಕೊಂಡಿರುವುದಕ್ಕೆ ಅವರು ಈ ಎತ್ತರದ ಸಾಧನೆ ಮಾಡಲು ಸಾಧ್ಯವಾಯಿತು ಎಂದು ಶ್ಲಾಘಿಸಿದರು.

ಮನುಷ್ಯ ಹುಟ್ಟಿದಾಗ ಮಾತ್ರ ಮಾನವ ಜೀವಿ: ಆದರೆ, ಆಚರಣೆಯಲ್ಲಿ ಏನೇನೋ ಆಗುತ್ತಾನೆ. ಯಾರಾದರೂ ನಿಮ್ಮ ಜಾತಿ ಏನೆಂದು ಕೇಳಿದರೆ ಪ್ರೊ.ಮಲ್ಲೇಪುರಂ ಅವರು ಮಾನವ ಜಾತಿ ಎಂದು ಹೇಳುತ್ತಾರೆ. ಆಚರಣೆಯಲ್ಲಿ ಮನುಷ್ಯನಾಗಿ ಬದುಕುತ್ತಿದ್ದಾರೆ. ಅವರ ಇಡೀ ಜೀವನ ಸಾಹಿತ್ಯ ಅಧ್ಯಯನ, ಪ್ರವಚನ, ಸಂಸ್ಕೃತ-ಕನ್ನಡ, ಪಾಳಿ-ಪ್ರಾಕೃತವಾಗಿದ್ದು, ಜ್ಞಾನ ರತ್ನದ ಸಿರಿವಂತರಾಗಿದ್ದಾರೆ ಎಂದರು.



70ನೇ ವಸಂತಕ್ಕೆ ಕಾಲಿಟ್ಟ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ ಅವರನ್ನು ಭಾನುವಾರ ಬೆಂಗಳೂರಿನಲ್ಲಿ ನಡೆದ ಸಮಾರಂಭದಲ್ಲಿ ಅಭಿನಂದಿಸಲಾಯಿತು. ಡಾ। ಚಂದ್ರಶೇಖರ ಕಂಬಾರ, ನಿವೃತ್ತ ನ್ಯಾಯಮೂರ್ತಿ ಎನ್.ಕುಮಾರ್, ಪ್ರೊ.ಪಿ.ವಿ.ಕೃಷ್ಣಭಟ್ಟ ಮುಂತಾದವರು ಉಪಸ್ಥಿತರಿದ್ದರು.


ಮಲ್ಲೇಪುರಂ ಜಿ.ವೆಂಕಟೇಶ ಮಾತನಾಡಿ, ಸಿದ್ಧಗಂಗಾಮಠದ ಶಿವಕುಮಾರ ಸ್ವಾಮೀಜಿ ಅವರು ಇಲ್ಲದಿದ್ದರೆ ಊರಿನಲ್ಲಿ ನಾನು ಸಾಮಾನ್ಯ ರೈತನಾಗಿ ಬದುಕುತ್ತಿದ್ದೆನೇನೋ, ನನ್ನ ಬಾಳಿಗೆ ಅನೇಕ ಗುರು, ಹಿರಿಯರು, ಸಾಧು ಸಂತರರ ಮಾರ್ಗದರ್ಶನವಿದೆ. ಅವರಿಂದಲೇ ಸಮಾಜದಲ್ಲಿ ಸ್ವಲ್ಪಮಟ್ಟಿಗೆ ರಾಷ್ಟ್ರಪೋಷಕ ಕೆಲಸ ಮಾಡಲು ನನ್ನಿಂದ ಸಾಧ್ಯವಾಯಿತು. ಈ ಸಾಹಿತ್ಯದ ಓದು ಆತ್ಮಶುದ್ಧಿ ಮಾಡಿಕೊಳ್ಳಲು ನನಗೆ ದಾರಿ ಮಾಡಿಕೊಟ್ಟಿತು. ಹಣ, ಆಸ್ತಿ ಜೀವನದಲ್ಲಿ ಎಷ್ಟು ದಿನ ಇರುತ್ತದೆಯೋ ಗೊತ್ತಿಲ್ಲ, ಜನರಿಂದ ಗಳಿಸಿರುವ ಪ್ರೀತಿ ಶಾಶ್ವತವಾಗಿ ಉಳಿಯುತ್ತದೆ. ನನ್ನ ಸಾಧನೆ ಏನಿದ್ದರೂ ರಾಜ್ಯದಲ್ಲಿ ಅಪಾರ ಜನರ ಪ್ರೀತಿಯನ್ನು ಗಳಿಸಿರುವುದಾಗಿದೆ ಎಂದು ನುಡಿದರು.

ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ್ ಪಾಟೀಲ್ ಮಾತನಾಡಿದರು. ಕಾರ್ಯಕ್ರಮದಲ್ಲಿ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ। ಚಂದ್ರಶೇಖರ ಕಂಬಾರ, ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎನ್.ಕುಮಾರ್, ಒರಿಸ್ಸಾ ಕೇಂದ್ರೀಯ ವಿಶ್ವವಿದ್ಯಾಲಯದ ಸಹಕುಲಪತಿ ಪ್ರೊ.ಪಿ.ವಿ.ಕೃಷ್ಣಭಟ್ಟ, ಲೇಖಕಿ ಡಾ। ವೀಣಾ ಬನ್ನಂಜೆ, ಡಾ। ವೂಡೇ ಪಿ.ಕೃಷ್ಣ ಮತ್ತು ಪ್ರೊ.ಮಲ್ಲೇಪುರಂ 70ರ ಅಭಿನಂದನಾ ಸಮಿತಿ ಅಧ್ಯಕ್ಷ ಡಾ। ಕೆ.ಜಿ.ಲಕ್ಷ್ಮೀನಾರಾಯಣಪ್ಪ ಉಪಸ್ಥಿತರಿದ್ದರು.

ವಿಜಯ ಕರ್ನಾಟಕ ಸೋಮವಾರ,6 ಜೂನ್ 2022

70ನೇ ವರ್ಷದ ಅಭಿನಂದನಾ ಸಮಾರಂಭದಲ್ಲಿ ಸಿದ್ಧಲಿಂಗ ಸ್ವಾಮೀಜಿ ಬಣ್ಣನೆ

ಪ್ರೊ.ಮಲ್ಲೇಪುರಂ ಜ್ಞಾನರತ್ನದ ಸಿರಿವಂತ



ನಗರದ ಗಾಂಧಿಭವನದಲ್ಲಿ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್ ಅಭಿನಂದನಾ ಸಮಾರಂಭ ನಡೆಯಿತು.

ಸಿದ್ಧಗಂಗಾಮಠದ ಶಿವಕುಮಾರ ಸ್ವಾಮೀಜಿ ಅವರು ಇಲ್ಲದಿದ್ದರೆ ಊರಿನಲ್ಲಿ ನಾನು ಸಾಮಾನ್ಯ ರೈತನಾಗಿ ಬದುಕುತ್ತಿದ್ದೇನೋ ? ನನ್ನ ಬಾಳಿಗೆ ಅನೇಕ ಗುರು-ಹಿರಿಯರು, ಸಾಧು-ಸಂತರರ ಮಾರ್ಗದರ್ಶನವಿದೆ. ಅವರಿಂದಲೇ ಸಮಾಜದಲ್ಲಿ ಸ್ವಲ್ಪಮಟ್ಟಿಗೆ ಕೆಲಸ ಮಾಡಲು ನನ್ನಿಂದ ಸಾಧ್ಯವಾಯಿತು.

– ಮಲ್ಲೇಪುರಂ ಜಿ.ವೆಂಕಟೇಶ್
ವಿಶ್ರಾಂತ ಕುಲಪತಿ

▫ **ವಿಕ ಸುದ್ದಿಲೋಕ** ಬೆಂಗಳೂರು

ಮಲ್ಲೇಪುರಂ ಜಿ.ವೆಂಕಟೇಶ್ ಸಿದ್ಧಗಂಗಾ ಮಠದ ಗ್ರಂಥಾಲಯದಲ್ಲಿರುವ 10 ಸಾವಿರ ಪುಸ್ತಕಗಳನ್ನು ಓದಿದ ಏಕೈಕ ವ್ಯಕ್ತಿ. ಇವರು ಮಠದ ಅನರ್ಘ್ಯ ರತ್ನ ಎಂದು ಸಿದ್ಧಲಿಂಗ ಸ್ವಾಮೀಜಿ ಬಣ್ಣಿಸಿದರು.

ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್ 70ನೇ ವಸಂತಕ್ಕೆ ಕಾಲಿಟ್ಟ ಹಿನ್ನೆಲೆಯಲ್ಲಿ ನಗರದ ಗಾಂಧಿಭವನದಲ್ಲಿ ಆಯೋಜಿಸಿದ್ದ 'ಅಭಿನಂದನಾ ಮತ್ತು ಸಮಾಹಿತ ಗ್ರಂಥ ಲೋಕಾರ್ಪಣೆ' ಸಮಾರಂಭದಲ್ಲಿ ಆಶೀರ್ವಚನ ನೀಡಿದ ಶ್ರೀಗಳು, ''ನಮ್ಮ ಮಠದಲ್ಲೇ ವೆಂಕಟೇಶ್ ವ್ಯಾಸಂಗ ಮಾಡಿದ್ದಾರೆ. ಬಾಲ್ಯದಲ್ಲೇ ಓದಿನಲ್ಲಿ ಹೆಚ್ಚಿನ ಆಸಕ್ತಿ ಬೆಳೆಸಿಕೊಂಡ ಅವರು, ನಮ್ಮ ಗ್ರಂಥಾಲಯದಲ್ಲೇ 10 ಸಾವಿರ ಪುಸ್ತಕಗಳನ್ನು ಓದಿದ ಏಕೈಕ ವ್ಯಕ್ತಿಯಾಗಿದ್ದಾರೆ. ರಾಷ್ಟ್ರಕವಿ ಜಿ. ಶಿವರುದ್ರಪ್ಪ ಸಾಲಿನಲ್ಲಿ ನಿಲ್ಲುವ ವ್ಯಕ್ತಿತ್ವ ಹೊಂದಿದ್ದಾರೆ,'' ಎಂದು ಪ್ರಶಂಸೆ ವ್ಯಕ್ತಪಡಿಸಿದರು.

''ಮನುಷ್ಯ ಹುಟ್ಟಿದಾಗ ಮಾತ್ರ ಮಾನವ ಜೀವಿ. ಆದರೆ, ಆಚರಣೆಯಲ್ಲಿ ಏನೇನೋ ಆಗುತ್ತಾನೆ. ಯಾರಾದರೂ ನಿಮ್ಮ ಜಾತಿ ಏನೆಂದು ಕೇಳಿದರೆ ಪ್ರೊ. ಮಲ್ಲೇಪುರಂ ಅವರು ಮಾನವ ಜಾತಿ ಎಂದು ಹೇಳುತ್ತಾರೆ. ಆಚರಣೆಯಲ್ಲಿ ಮನುಷ್ಯನಾಗಿ ಬದುಕುತ್ತಿದ್ದಾರೆ. ಅವರ ಇಡೀ ಜೀವನ ಸಾಹಿತ್ಯ ಅಧ್ಯಯನ, ಪ್ರವಚನ, ಸಂಸ್ಕೃತ-ಕನ್ನಡ, ಪಾಳಿ-ಪ್ರಾಕೃತವಾಗಿದ್ದು ಜ್ಞಾನರತ್ನದ ಸಿರಿವಂತರಾಗಿದ್ದಾರೆ,'' ಎಂದರು.

ಸುಪ್ರೀಂಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಶಿವರಾಜ್ ಪಾಟೀಲ್ ಮಾತನಾಡಿ, ''ಮಲ್ಲೇಪುರಂ ಅವರು ಆಚಾರ್ಯ, ಪ್ರಾಚಾರ್ಯ, ಸಾಹಿತಿ, ಚಿಂತಕ, ಮಾರ್ಗದರ್ಶಕರಾಗಿದ್ದಾರೆ. ಒಂದು ಬದುಕಿನಲ್ಲಿ ಒಬ್ಬ ವ್ಯಕ್ತಿ ಇಷ್ಟೆಲ್ಲ ರೀತಿಯಲ್ಲಿ ಜೀವನ ಸಾಗಿಸಲು ಸಾಧ್ಯವೇ ಎಂಬ ಪ್ರಶ್ನೆಯೂ ಮಲ್ಲೇಪುರಂ ಅವರನ್ನು ಕಂಡಾಗ ಮೂಡುತ್ತದೆ,'' ಎಂದರು.

ಸಾಹಿತಿ ಡಾ.ಚಂದ್ರಶೇಖರ ಕಂಬಾರ, ಒಡಿಶಾ ಕೇಂದ್ರೀಯ ವಿಶ್ವವಿದ್ಯಾಲಯದ ಸಹಕುಲಪತಿ ಪ್ರೊ.ಬಿ.ವಿ. ಕೃಷ್ಣಭಟ್ಟ, ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎನ್.ಕುಮಾರ್, ಲೇಖಕಿ ಡಾ.ವೀಣಾ ಬನ್ನಂಜೆ, ಡಾ.ವೂಡೇ ಪಿ.ಕೃಷ್ಣ , ಡಾ. ಕೆ.ಜಿ. ಲಕ್ಷ್ಮೀನಾರಾಯಣಪ್ಪ ಮತ್ತಿತರರಿದ್ದರು.

ಪ್ರಜಾವಾಣಿ
ಸೋಮವಾರ • ಜೂನ್ 6, 2022

ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಚಂದ್ರಶೇಖರ ಕಂಬಾರ ಮೆಚ್ಚುಗೆ

'ಸಂಸ್ಕೃತದಿಂದ ಕನ್ನಡ ಬೆಳೆಸಿದ ಮಲ್ಲೇಪುರಂ'

ಬೆಂಗಳೂರು: 'ಪ್ರಾಕೃತ ಮತ್ತು ಸಂಸ್ಕೃತ ಭಾಷೆಯಲ್ಲಿನ ಕೃತಿಗಳನ್ನು ಕನ್ನಡಕ್ಕೆ ತರುವ ಮೂಲಕ ಮಲ್ಲೇಪುರಂ ಜಿ. ವೆಂಕಟೇಶ ಅವರು ನಮ್ಮ ತಿಳಿವಳಿಕೆ ವಿಸ್ತರಿಸಿದ್ದಾರೆ. ಅವರು ಇಲ್ಲದಿದ್ದರೆ ಕನ್ನಡ ಭಾಷೆ ಬಡವಾಗುತ್ತಿತ್ತು' ಎಂದು ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಚಂದ್ರಶೇಖರ ಕಂಬಾರ ಮೆಚ್ಚುಗೆ ವ್ಯಕ್ತಪಡಿಸಿದರು.

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅಭಿನಂದನಾ ಸಮಿತಿ ನಗರದಲ್ಲಿ ಭಾನುವಾರ ಆಯೋಜಿಸಿದ 'ಪ್ರೊ. ಮಲ್ಲೇಪುರಂ 70ರ ಅಭಿನಂದನೆ' ಕಾರ್ಯಕ್ರಮದಲ್ಲಿ ಸಂಪಾದಿತ ಕೃತಿ 'ಸಮಾಹಿತ' ಮತ್ತು 'ಸಪ್ತತಿ' ಬಿಡುಗಡೆಮಾಡಿದರು.

'ಬೆಂಗಳೂರಿನಲ್ಲಿ ಅಧ್ಯಾಪಕನಾಗಿದ್ದಾಗ ಮಲ್ಲೇಪುರಂ, ಡಿ.ಆರ್. ನಾಗರಾಜ್ ಮತ್ತು ಸಿದ್ಧಲಿಂಗಯ್ಯ ಅವರು ನನ್ನನ್ನು ಕಾಡಿಸಿದ್ದರು. ಇವರು ಕಿಡಿಗೇಡಿಗಳು ಮತ್ತು ಬುದ್ಧಿವಂತರಾಗಿದ್ದರು. ಮಲ್ಲೇಪುರಂ ಅವರು ಸಂಸ್ಕೃತದಲ್ಲಿ ಅಪಾರ ಪಾಂಡಿತ್ಯ ಸಾಧಿಸಿ, ಸಂಸ್ಕೃತ ಮತ್ತು ಕನ್ನಡ ಸಾಹಿತ್ಯಕ್ಕೆ ವಿಶೇಷ ಕೊಡುಗೆ ನೀಡಿದರು. ಶಿಷ್ಯನಾಗಿದ್ದ ಮಲ್ಲೇಪುರಂ ನಾಟಕ, ಸಂಸ್ಕೃತ ಮತ್ತು ಶಾಸ್ತ್ರದ ವಿಚಾರದಲ್ಲಿ ಗುರುವಾಗಿದ್ದ' ಎಂದು ಹೇಳಿದರು.

ಆಧ್ಯಾತ್ಮಿಕ ಚಿಂತಕಿ ವೀಣಾ ಬನ್ನಂಜೆ, 'ನನ್ನ ಬದುಕಿನ ಅತ್ಯಂತ ಕಠೋರ ಪರಿಸ್ಥಿತಿಗಳಲ್ಲಿ ಮಲ್ಲೇಪುರಂ ಅವರು ಬೆನ್ನಿಗೆ ನಿಂತಿದ್ದರು. ಎಡ-ಬಲ, ಧರ್ಮ, ಮಠ ಸೇರಿದಂತೆ ವಿವಿಧ ಚರ್ಚೆಗಳು ಮುನ್ನೆಲೆಗೆ ಬಂದಾಗಲೂ ಅವರು ಸರಿ-ತಪ್ಪು ಎಂದು ಹೇಳಿದವರಲ್ಲ. ಒಬ್ಬ ಮಹಾನುಭಾವ ಕೃತಿಯನ್ನು ಅರ್ಪಿಸಿಕೊಳ್ಳುವುದರಿಂದ ಬೆಳೆಯುತ್ತಾನೆ ಎನ್ನುವುದನ್ನು ಮಲ್ಲೇಪುರಂ ತೋರಿಸಿಕೊಟ್ಟಿದ್ದಾರೆ' ಎಂದರು.

ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ, 'ಮಲ್ಲೇಪುರಂ ಅವರು ಕನ್ನಡದ ಆಸ್ತಿ. ಅತ್ಯಂತ ಕ್ಲಿಷ್ಟವಾದ ವಿಚಾರವನ್ನೂ ಸರಳವಾಗಿ ಹೇಳುವ ಶಕ್ತಿ ಅವರಿಗಿದೆ. ಅಜಾತಶತ್ರು ಆಗಿರುವ ಅವರು, ಧ್ಯಾನಸ್ಥರಾಗಿ ಬೆಳೆದಿದ್ದಾರೆ' ಎಂದು ಹೇಳಿದರು.

ಒಳಗಣ್ಣನ್ನು ತೆರೆದು ನೋಡಲು ಸಂಗೀತ, ಕಲೆ, ಸಾಹಿತ್ಯ, ಶಾಸ್ತ್ರಗಳು ಬೇಕಾಗುತ್ತವೆ. ಅನೇಕ ಗುರುಗಳು, ಸಜ್ಜನರು ಒಳಗಣ್ಣನ್ನು ತೆರೆಯಲು ನೆರವಾದರು

ಮಲ್ಲೇಪುರಂ ಜಿ. ವೆಂಕಟೇಶ ಬಹುಭಾಷಾ ವಿದ್ವಾಂಸ

ಮಲ್ಲೇಪುರಂ ಅವರಿಗೆ ಅಧ್ಯಯನದಿಂದ ಸಾಧನೆ ಮಾಡಲು ಸಾಧ್ಯವಾಯಿತು. ಅಜಾತಶತ್ರು ಆಗಿರುವ ಅವರು, ಜ್ಞಾನದಲ್ಲಿ ಶ್ರೀಮಂತರಾಗಿದ್ದಾರೆ.

ಸಿದ್ಧಲಿಂಗ ಸ್ವಾಮೀಜಿ, ಸಿದ್ಧಗಂಗಾಮಠ



ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ದಂಪತಿಯನ್ನು ಸಿದ್ಧಲಿಂಗ ಸ್ವಾಮೀಜಿ ಅಭಿನಂದಿಸಿದರು. ವೀಣಾ ಬನ್ನಂಜೆ, ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲ, ಪಿ.ವಿ. ಕೃಷ್ಣ ಭಟ್ಟ ಹಾಗೂ ಚಂದ್ರಶೇಖರ ಕಂಬಾರ ಇದ್ದಾರೆ
—ಪ್ರಜಾವಾಣಿ ಚಿತ್ರ

'ಸಂಸ್ಕೃತ ವಿ.ವಿಗೆ ಹೊಸ ರೂಪ'

'ಮಲ್ಲೇಪುರಂ ಅವರು ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಹೊಸ ರೂಪ ನೀಡಿದರು. ಇತ್ತೀಚಿನ ವರ್ಷಗಳಲ್ಲಿ ಕುಲಪತಿ ಹುದ್ದೆಗೆ ಅರ್ಹತೆ ಇರುವವರು ಬರುವುದು ಕಡಿಮೆ. ಸಂಸ್ಕೃತ ಮತ್ತು ಕನ್ನಡದಲ್ಲಿ ಪಾಂಡಿತ್ಯ ಹೊಂದಿರುವ ಅವರು, ಸಂಸ್ಕೃತದ ಜ್ಞಾನ ಸಂಪತ್ತು ಸಾಮಾನ್ಯರಿಗೂ ಅರ್ಥವಾಗಲು ಕನ್ನಡಕ್ಕೆ ತಂದಿದ್ದಾರೆ' ಎಂದು ಒಡಿಶಾ ಕೇಂದ್ರೀಯ ವಿಶ್ವವಿದ್ಯಾಲಯದ ಸಹ ಕುಲಾಧಿಪತಿ ಪ್ರೊ.ಪಿ.ವಿ. ಕೃಷ್ಣ ಭಟ್ಟ ಅವರು ತಿಳಿಸಿದರು.

ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎನ್. ಕುಮಾರ್ ಮಾತನಾಡಿ, 'ಕರ್ನಾಟಕದಲ್ಲಿ ವಿರೋಧದ ನಡುವೆಯೂ ಸಂಸ್ಕೃತ ವಿಶ್ವವಿದ್ಯಾಲಯ ಸ್ಥಾಪನೆಯಾಯಿತು. ಅದು ಸದೃಢವಾಗಿ ಬೆಳೆಯಲು ಮಲ್ಲೇಪುರಂ ಕಾರಣ. ಸಂಸ್ಕೃತದಲ್ಲಿನ ಸಂಸ್ಕೃತಿಯನ್ನು ಕನ್ನಡಿಗರಿಗೆ ಸರಳ ಭಾಷೆಯಲ್ಲಿ ಕಲಿಸಿದ್ದಾರೆ' ಎಂದು ಹೇಳಿದರು.

ನಂ. 1 ಕನ್ನಡ ದಿನಪತ್ರಿಕೆ

VIJAYAVANI BENGALURU
ಸೋಮವಾರ 6 ಜೂನ್ 2022
6 JUNE 2022

ಮಲ್ಲೇಪುರಂ ಬಳಿ ಸಂಸ್ಕೃತದ ಕೀಲಿಕೈ

ಕಂಬಾರ ಹೇಳಿಕೆ | ಮಲ್ಲೇಪುರಂ ಜಿ. ವೆಂಕಟೇಶ್‌ಗೆ 70ರ ಅಭಿನಂದನೆ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಭಾರತದಲ್ಲಿ ಶಾಸ್ತ್ರಕ್ಕಾಗಿ ಬಳಸಿಕೊಳ್ಳಲಾಗಿರುವ ಏಕೈಕ ಭಾಷೆ ಸಂಸ್ಕೃತ. ಈ ಭಾಷೆಯ ಕೀಲಿ ಕೈ ಮಲ್ಲೇಪುರಂ ಅವರಿಗೆ ಚೆನ್ನಾಗಿ ತಿಳಿದಿದೆ ಎಂದು ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ. ಚಂದ್ರಶೇಖರ ಕಂಬಾರ ಹೇಳಿದ್ದಾರೆ.

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಅಭಿನಂದನಾ ಸಮಿತಿಯು ನಗರದ ಗಾಂಧಿ ಭವನದಲ್ಲಿ ಭಾನುವಾರ ಹಮ್ಮಿಕೊಂಡಿದ್ದ '70ರ ಅಭಿನಂದನೆ' ಸಮಾರಂಭ ಉದ್ಘಾಟಿಸಿ ಮಾತನಾಡಿದರು. ನನಗೆ ಶಾಸ್ತ್ರ ಅಡ್ಡಿ ಬಂದಾಗಲೆಲ್ಲ ಮಲ್ಲೇಪುರಂ ಬಳಿ ಕೇಳಿ ಪರಿಹಾರ ಕಂಡುಕೊಳ್ಳುತ್ತೇನೆ ಎಂದರು.

ಜಾನಪದ ರಂಗಭೂಮಿ ಹಾಗೂ ಶಾಸ್ತ್ರೀಯ ರಂಗಭೂಮಿಗೆ ಅಷ್ಟೇನೂ ವ್ಯತ್ಯಾಸವಿಲ್ಲ. ಅವೆರಡರ ರಚನೆ ಒಂದೇ ಆಗಿದೆ. ಹಾಗಾಗಿ ಮಲ್ಲೇಪುರಂಗೆ ನಾನು ಗುರುವಾದರೂ, ನಾಟಕ- ಸಂಸ್ಕೃತ ಮತ್ತು ಶಾಸ್ತ್ರದ ವಿಷಯದಲ್ಲೇ ಅವರೇ ನನಗೆ ಗುರು. ಇದುವರೆಗೂ ಯಾರಿಗೂ ಅನುವಾದಿಸಲು ಸಾಧ್ಯವಾಗದಂತಹ ಗ್ರಂಥಗಳನ್ನು ಅನುವಾದಿಸಿ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.



ಗಾಂಧಿ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ದಂಪತಿಯನ್ನು ಸನ್ಮಾನಿಸಲಾಯಿತು. ಶ್ರೀ ಶಿವಕುಮಾರ ಸ್ವಾಮೀಜಿ, ಡಾ. ಚಂದ್ರಶೇಖರ ಕಂಬಾರ, ಡಾ. ವೂಡೇ ಪಿ. ಕೃಷ್ಣ ಇತರರಿದ್ದರು.

10 ಸಾವಿರ ಪುಸ್ತಕ ಓದಿದ್ದಾರೆ

ಮಲ್ಲೇಪುರಂ ಅವರು ಸಿದ್ಧಗಂಗಾ ಮಠದ ಅನರ್ಘ್ಯ ರತ್ನ. ಮಠದಲ್ಲಿ ಶಿವಕುಮಾರ ಸ್ವಾಮೀಜಿಗಳು ಹಚ್ಚಿದ ಜ್ಯೋತಿಯಲ್ಲಿ ಅತ್ಯಂತ ಪ್ರಖರವಾಗಿ ಬೆಳಗುತ್ತಿರುವ ಅವರು, ರಾಷ್ಟ್ರಕವಿ ಜಿಎಸ್‌ಎಸ್ ಸಾಲಿನಲ್ಲಿ ನಿಲ್ಲುವ ವ್ಯಕ್ತಿತ್ವ ಹೊಂದಿದ್ದಾರೆ. ಬಾಲ್ಯದಿಂದಲೇ ಓದುವ ಹವ್ಯಾಸ ಬೆಳೆಸಿಕೊಂಡಿರುವ ಮಲ್ಲೇಪುರಂ, ಮಠದಲ್ಲಿ 10 ಸಾವಿರ ಪುಸ್ತಕಗಳನ್ನು ಓದಿರುವ ಏಕೈಕ ವ್ಯಕ್ತಿ. ಹಾಗಾಗಿ ಅವರು ಇಷ್ಟು ಎತ್ತರದ ಸಾಧನೆ ಮಾಡಲು ಸಾಧ್ಯವಾಯಿತು ಎಂದು ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಸ್ವಾಮೀಜಿ ಬಣ್ಣಿಸಿದರು.

ಪ್ರಶಸ್ತಿಗಳನ್ನೇ ಮೀರಿದವರು: ಆಚಾರ್ಯ, ಪ್ರಾಚಾರ್ಯ, ಸಾಹಿತಿ, ಚಿಂತಕ, ಮಾರ್ಗದರ್ಶಕರೂ ಆಗಿರುವ ಮಲ್ಲೇಪುರಂ ಅವರನ್ನು ನೋಡಿದಾಗ ಒಬ್ಬ ವ್ಯಕ್ತಿ ಇಷ್ಟೆಲ್ಲ ರೀತಿಯಲ್ಲಿ ಜೀವನ ಸಾಗಿಸಲು ಸಾಧ್ಯವೇ ಎಂಬ ಪ್ರಶ್ನೆ ಮೂಡುತ್ತದೆ. ಜಗತ್ತಿನಲ್ಲಿ ನಾನಾ ವಿಧದ ಪ್ರಶಸ್ತಿಗಳಿವೆ, ಆದರೆ ಅವೆಲ್ಲವನ್ನೂ ಮೀರಿದ ಶ್ರೇಷ್ಠ ಪ್ರಶಸ್ತಿ 'ಉತ್ತಮ ಮನುಷ್ಯ' ಎಂಬುದು. ತಮ್ಮ ಪಾಂಡಿತ್ಯ, ಗುಣ ಸ್ವಭಾವದ ಮೂಲಕ ಮಲ್ಲೇಪುರಂ ಪ್ರಶಸ್ತಿಗಳಿಗೇ ಪ್ರಶಸ್ತಿಯಾಗಿದ್ದಾರೆ ಎಂದು ಸುಪ್ರೀಂ ಕೋರ್ಟ್ ನಿವೃತ್ತ ನ್ಯಾ. ಶಿವರಾಜ್ ಪಾಟೀಲ್ ಬಣ್ಣಿಸಿದರು.

ಡಾ. ವೂಡೇ ಪಿ. ಕೃಷ್ಣ ಸಂಪಾದಕತ್ವದ 'ಸಮಾಹಿತ' ಹಾಗೂ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಅವರ 'ಸಪ್ತತಿ' ಗ್ರಂಥಗಳನ್ನು ಸಮಾರಂಭದಲ್ಲಿ ಲೋಕಾರ್ಪಣೆ ಮಾಡಲಾಯಿತು. ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎನ್. ಕುಮಾರ್, ಒಡಿಶಾದ ಕೇಂದ್ರೀಯ ವಿಶ್ವವಿದ್ಯಾಲಯದ ಸಹಕುಲಪತಿ ಪ್ರೊ.ವಿ. ಕೃಷ್ಣಭಟ್ಟ, ಲೇಖಕಿ ಡಾ.ವೀಣಾ ಬನ್ನಂಜೆ, ಶಿಕ್ಷಣತಜ್ಞ ಡಾ. ವೂಡೇ ಪಿ. ಕೃಷ್ಣ, ಅಭಿನಂದನಾ ಸಮಿತಿ ಅಧ್ಯಕ್ಷ ಡಾ. ಕೆ.ಜಿ. ಲಕ್ಷ್ಮೀನಾರಾಯಣಪ್ಪ ಇತರರಿದ್ದರು.

ಸಾಹಿತ್ಯದ ಮೂಲಕ ಆತ್ಮಶುದ್ಧಿ

ಸಿದ್ಧಗಂಗಾ ಮಠದ ಶ್ರೀ ಶಿವಕುಮಾರ ಸ್ವಾಮೀಜಿ ಅವರ ಆಶೀರ್ವಾದದಿಂದ ನಾನು ಈ ಸ್ಥಾನಕ್ಕೆ ಬರಲು ಸಾಧ್ಯವಾಯಿತು. ಮಠಕ್ಕೆ ಹೋಗದಿದ್ದರೆ ನಾನೂ ಸಾಮಾನ್ಯ ರೈತನಾಗಿ ಇರಬೇಕಿತ್ತು. ಮಠದ ಸಂಪರ್ಕದಿಂದಾಗಿ ನನಗೆ ಬದುಕಿನಲ್ಲಿ ಅನೇಕ ಗುರು- ಹಿರಿಯರು ಹಾಗೂ ಸಾಧು- ಸಂತರ ಮಾರ್ಗದರ್ಶನ ದೊರೆಯಿತು. ಆದರಿಂದಾಗಿ ಸಮಾಜದಲ್ಲಿ ನನಗೆ ಸ್ವಲ್ಪಮಟ್ಟಿಗಾದರೂ ರಾಷ್ಟ್ರಪೋಷಕ ಕೆಲಸ ಮಾಡಲು ಸಾಧ್ಯವಾಯಿತು. ಸಾಹಿತ್ಯದ ಮೂಲಕ ಆತ್ಮಶುದ್ಧಿ ಮಾಡಿಕೊಳ್ಳಲು ದಾರಿಯಾಯಿತು ಎಂದು ಮಲ್ಲೇಪುರಂ ಜಿ. ವೆಂಕಟೇಶ್ ಹೇಳಿದರು.

ಸಂಯುಕ್ತ ಕರ್ನಾಟಕ | 06 ಜೂನ್ 2022 ಸೋಮವಾರ

ಪ್ರೊ. ಮಲ್ಲೇಪುರಂ ಕನ್ನಡ ಸಂಸ್ಕೃತ ಪರಂಪರೆಯ ಕೊಂಡಿ

ಸಂ.ಕ.ಸಮಾಚಾರ, ಬೆಂಗಳೂರು

ಕನ್ನಡ ಪರ ತೀವ್ರ ಕಾಳಜಿ ಇರುವ ಸಂಸ್ಕೃತ ವಿದ್ವಾಂಸರಾದ ಪ್ರೊ. ಮಲ್ಲೇಪುರಂ ಜಿ. ವೆಂಟೇಶ್ ಅವರು ಕನ್ನಡ ಮತ್ತು ಸಂಸ್ಕೃತ ಪರಂಪರೆಯ ಕೊಂಡಿ. ಪ್ರಾಕೃತ ಭಾಷೆಯ ಉತ್ತಮ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸುವ ಮೂಲಕ ಕನ್ನಡದ ಬೆಳವಣಿಗೆ ತಮ್ಮದೇ ಆದ ಬಹುದೊಡ್ಡ ಕೊಡುಗೆ ನೀಡಿದ್ದಾರೆ ಎಂದು ಹಿರಿಯ ಸಾಹಿತಿ ಪದ್ಮಭೂಷಣ ಡಾ.ಚಂದ್ರ ಶೇಖರ್ ಕಂಬಾರ ಹೇಳಿದರು.

ಮಲ್ಲೇಪುರಂ ಅಭಿನಂದನೆ

ಗಾಂಧಿ ಭವನದಲ್ಲಿ ಭಾನುವಾರ ನಡೆದ ಪ್ರೊ. ಮಲ್ಲೇಪುರಂ 70 ಅಭಿನಂದನೆ ಮತ್ತು 'ಸಪ್ತತಿ' ಮತ್ತು 'ಸಮಾಹಿತ' ಕೃತಿಗಳನ್ನು ಬಿಡುಗಡೆ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಯಾರೂ ಅನುವಾದಿಸದ ಪುಸ್ತಕಗಳನ್ನು ಅನುವಾದಿಸಿ ಕನ್ನಡವನ್ನು ಉಳಿಸಿಬೆಳೆಸಿದ್ದಾರೆ. ನನಗೆ ಅವನು ಶಿಷ್ಯನಾಗಿದ್ದರೂ ಅವನ ವಿದ್ವತ್‌ನಿಂದ ನನಗೆ ಗುರುವಾಗಿದ್ದಾನೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.


ಡಿ.ಎಂ.ನಾಗರಾಜ್, ಡಾ.ಸಿದ್ದಲಿಂಗಯ್ಯ, ಮಲ್ಲೇಪುರಂ ಮೂವರು ಸ್ನೇಹಿತರು. ಇವರು ಪುಂಡರಾಗಿದ್ದರೂ ಸಾಹಿತ್ಯ ಕ್ಷೇತ್ರದಲ್ಲಿ ತಮ್ಮದೇ ಛಾಪು ಮೂಡಿಸಿದವರು. ನಾಗರಾಜ್ ಇಂಗ್ಲಿಷ್ ಸಾಹಿತ್ಯದಲ್ಲಿ ಉತ್ತಮ ಸಾಧನೆ ಮಾಡಿದರೆ.ಸಿದ್ದಲಿಂಗಯ್ಯ ದಲಿತ ಸಾಹಿತ್ಯದಲ್ಲಿ ತಮ್ಮದೇ ಛಾಪು ಮೂಡಿಸಿದವರು. ಮಲ್ಲೇಪುರಂ ಜಿ.ವೆಂಕಟೇಶ್ ಅವರು ಪಾಂಡಿತ್ಯದಲ್ಲಿ ಉತ್ತಮ ಸಾಧನೆಗೈದವರು. ಮಾನವೀಯ ಅಂತಃಕರಣವುಳ್ಳ ಅವರು ಸಾಹಿತ್ಯ ವಲಯದ ಅಜಾತ ಶತ್ರು ಎಂದು ಹೇಳಿದರು.

ಸಮಾರಂಭದಲ್ಲಿ ತುಮಕೂರು ಸಿದ್ದಗಂಗಾ ಮಠದ ಸಿದ್ಧಲಿಂಗ ಸ್ವಾಮಿಗಳು ಮಾತನಾಡಿ, ಸಿದ್ದಗಂಗಾಮಠದ ಶಿಷ್ಯ ಪರಂಪರೆಯ ಅನರ್ಘ್ಯ ರತ್ನ ಪ್ರೊ. ಮಲ್ಲೇಪುರಂ ಅವರು ಬಣ್ಣಿಸಿದರು. ಸುಪ್ರೀಂಕೋರ್ಟ್ ನ ನಿವೃತ್ತ ನ್ಯಾಯಮೂರ್ತಿ ಡಾ.ಶಿವರಾಜ್ ಪಾಟೀಲ್, ನಿವೃತ್ತ ನ್ಯಾಯಮೂರ್ತಿ ಎನ್.ಕುಮಾರ್, ಲೇಖಕಿ ವೀಣಾ ಬನ್ನಂಜೆ, ಗಾಂಧಿ ಸ್ಮಾರಕ ನಿಧಿಯ ವೂಡೆ.ಪಿ.ಕೃಷ್ಣ, ಅಭಿನಂದನಾ ಸಮಿತಿ ಅಧ್ಯಕ್ಷ ಡಾ.ಕೆ.ಟಿ.ಲಕ್ಷ್ಮೀನಾರಾಯಣ, ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ನಾಡೋಜ ವೂಡೇ ಪಿ.ಕೃಷ್ಣ, ಪ್ರೊ. ಕೃಷ್ಣಭಟ್ಟ, ತುಮಕೂರು ವಿವಿ ವಿಶ್ರಾಂತ ಕುಲಪತಿ ಪ್ರೊ. ವೈ.ಎಸ್.ಸಿದ್ದೇಗೌಡ ಮತ್ತಿರರು ಇದ್ದರು.



ಗಾಂಧಿಭವನದಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ. ಮಲ್ಲೇಪುರಂ ಜಿ.ವೆಂಕಟೇಶ್ ದಂಪತಿಯನ್ನು ಸನ್ಮಾನಿಸಿ, ಗೌರವಿಸಲಾಯಿತು. ತುಮಕೂರು ಸಿದ್ಧಗಂಗಾ ಮಠದ ಶ್ರೀ ಸಿದ್ಧಗಂಗಾ ಸ್ವಾಮೀಜಿ, ಜ್ಞಾನಪೀಠ ಪುರಸ್ಕೃತ ಸಾಹಿತಿ ಡಾ.ಚಂದ್ರಶೇಖರ ಕಂಬಾರ, ಸುಪ್ರಿಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ಡಾ.ಶಿವರಾಜ ಪಾಟೀಲ್, ಲೇಖಕಿ ಡಾ.ವೀಣಾ ಬನ್ನಂಜೆ ಇತರರು ಇದ್ದಾರೆ.

ಸಂಜೆವಾಣಿ ಶುಕ್ರವಾರ 3 ಜೂನ್ 2022



ಶೇಷಾದ್ರಿಪುರಂ ಶಿಕ್ಷಣ ಸಮೂಹ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಯಾಗಿ 7ನೇ ಬಾರಿಗೆ ಅವಿರೋಧವಾಗಿ ಆಯ್ಕೆಯಾಗಿರುವ ನಾಡೋಜ ಡಾ. ವೂಡೇ ಪಿ. ಕೃಷ್ಣರವರನ್ನು ಕರ್ನಾಟಕ ವಿಕಾಸ ರಂಗದ ಅಧ್ಯಕ್ಷ ವ.ಚ. ಚನ್ನೇಗೌಡ, ಕಥೋಲಿಕ ಕ್ರೈಸ್ತರ ಕನ್ನಡ ಸಂಘದ ಅಧ್ಯಕ್ಷ ರಫಾಯಲ್ ರಾಜ್, ಅವರು ಅಭಿನಂದಿಸಿದರು.

ಕನ್ನಡಪ್ರಭ
ಶನಿವಾರ 28.5.2022



ರಂಗ ಸಂಭ್ರಮ

ಪಂಪ ಸಾಂಸ್ಕೃತಿಕ ಮತ್ತು ಸಾಮಾಜಿಕ ಕೇಂದ್ರದಿಂದ ನಾಟಕಕಾರ ಬಿ.ಪುಟ್ಟಸ್ವಾಮಯ್ಯ ಅವರ 125ನೇ ಜಯಂತಿ ಹಿನ್ನೆಲೆಯಲ್ಲಿ ಏರ್ಪಡಿಸಿದ್ದ 'ರಂಗ ಸಂಭ್ರಮ' ಕಾರ್ಯಕ್ರಮವನ್ನು ವಿಧಾನ ಪರಿಷತ್ ಮುಖ್ಯ ಸಚೇತಕ ನಾರಾಯಣಸ್ವಾಮಿ ಉದ್ಘಾಟಿಸಿದರು. ಮಾಜಿ ಸಚಿವೆ ಲೀಲಾದೇವಿ ಆರ್.ಪ್ರಸಾದ್, ಶೇಷಾದ್ರಿಪುರ ಶಿಕ್ಷಣ ಸಂಸ್ಥೆಗಳ ದತ್ತಿ ಗೌರವ ಕಾರ್ಯದರ್ಶಿ ವೂಡೇ ಪಿ.ಕೃಷ್ಣ ಮತ್ತಿತರರು ಹಾಜರಿದ್ದರು.

ಪ್ರತಿನಿಧಿ 21-05-2022 ಶನಿವಾರ

ಪ್ರೊ.ಮಲ್ಲೇಪುರಂ ಅವರ ತತ್ತ್ವ ಕಥನ ಗ್ರಂಥ ಲೋಕಾರ್ಪಣೆ



ಬೆಂಗಳೂರು: ನಗರದ ಗಾಂಧಿ ಭವನದಲ್ಲಿ ಬಿದ್ದ ಬಾಪು ಗಾಂಧಿ ಸಾಂಸ್ಕೃತಿಕ ಟ್ರಸ್ಟ್ ಹಾಗೂ ಅನುಪಮ ಪ್ರಕಾಶನ ವತಿಯಿಂದ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ರಾಷ್ಟ್ರ ಚೂಡಾಮಣಿ ಪ್ರೊ ಮಲ್ಲೇಪುರ ಜಿ. ವೆಂಕಟೇಶ್ ಅವರ "ತತ್ತ್ವ ಕಥನ" ಗ್ರಂಥವನ್ನು ಪದ್ಮಶ್ರೀ ಡಾ.ದೊಡ್ಡರಂಗೇಗೌಡ ಅವರು ಲೋಕಾರ್ಪಣೆ ಮಾಡಿದರು.

ಲೇಖಕ ಡಾ.ಲಕ್ಷ್ಮೀನಾರಾಯಣ, ಡಾ.ಪದ್ಮಾ ಉತ್ನಾಳ್ ಹಾಗೂ ಡಾ.ಎಸ್ ರಾಮಲಿಂಗೇಶ್ವರ (ಸಿಸಾರಾ) ಇದ್ದರು. ಇದೇ ಸಂದರ್ಭದಲ್ಲಿ ಡಾ.ವೂಡೇ ಪಿ ಕೃಷ್ಣ ಅವರನ್ನು ಪ್ರೊಮಲ್ಲೇಪುರಂ ಅಭಿನಂದಿಸಿದರು.

ಈ ಸಂಜೆ

ಗುರುವಾರ, 19 ಮೇ 2022



ಮಿಥಿಕ್ ಸೊಸೈಟಿ ಶೇಷಾದ್ರಿಪುರಂ ಕಾಲೇಜು ಸಂಯುಕ್ತಾಶ್ರಯದಲ್ಲಿ ನಗರದಲ್ಲಿ ಹಮ್ಮಿಕೊಂಡಿದ್ದ ಇಂಡಿಯನ್ ನಾಲೆಡ್ಜ್ ಸಿಸ್ಟಮ್ ಕುರಿತ ಉಪನ್ಯಾಸ ಕಾರ್ಯಕ್ರಮವನ್ನು ಕರ್ನಾಟಕ ಸಂಸ್ಕೃತ ವಿವಿಯ ಕುಲಪತಿ ದೇವನಾಥನ್ ಉದ್ಘಾಟಿಸಿದರು. ನಾಡೋಜ ಡಾ.ವೂಡೇ ಪಿ. ಕೃಷ್ಣ, ಡಾ.ಮೀರಾ, ನಾಗರಾಜ್ ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು.

ಹೊಸ ದಿಗಂತ 19 May 2022



ಪಂ. ಸತೀಶ್ ಹಂಪಿಹೊಳಿ ಮ್ಯೂಸಿಕ್ ಫೌಂಡೇಶನ್ ಟ್ರಸ್ಟ್ ವತಿಯಿಂದ ಜಯನಗರದ ಜೆ.ಎಸ್.ಸಭಾಂಗಣದಲ್ಲಿ ಸಂಗೀತ ಸೌರಭ ಕಾರ್ಯಕ್ರಮವನ್ನು ಆಯೋಜಿಸಿತ್ತು. ಪಂ. ಶಿವಮೊಗ್ಗ ವೇಣುಗೋಪಾಲ್ ಗೆ ಗುರು ಗೌರವ ಪ್ರಶಸ್ತಿ ಪ್ರದಾನ ಮಾಡಲಾಯಿತು. ನ್ಯಾ. ಸಂತೋಷ್ ಹೆಗ್ಡೆ, ನಟ ವಿನಯಾಪ್ರಸಾದ್, ಡಾ. ವೂಡೇ ಪಿ. ಕೃಷ್ಣ ಇದ್ದರು.

ವಿಜಯ ಕರ್ನಾಟಕ ನಮ್ಮ ಬೆಂಗಳೂರು ಗುರುವಾರ,19 ಮೇ 2022

ಭಾರತೀಯ ಜ್ಞಾನ ಪರಂಪರೆಯನ್ನು ವರ್ತಮಾನಗೊಳಿಸುವುದು ಮುಖ್ಯ

ವಿಕ ಸುದ್ದಿಲೋಕ ಬೆಂಗಳೂರು

ನಮ್ಮ ಭಾರತೀಯ ಜ್ಞಾನ ಪರಂಪರೆಯನ್ನು ವರ್ತಮಾನಗೊಳಿಸುವುದು ಅತ್ಯಂತ ಮುಖ್ಯವಾಗಿದೆ ಎಂದು ವಿದ್ವಾಂಸರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ತಿಳಿಸಿದರು.

ಅನುಪಮ ಪ್ರಕಾಶನ ಮತ್ತು ಬುದ್ಧ, ಬಸವ, ಗಾಂಧಿ ಸಾಂಸ್ಕೃತಿಕ ಟ್ರಸ್ಟ್ ಸಹಯೋಗದೊಂದಿಗೆ ನಗರದ ಗಾಂಧಿ ಭವನದಲ್ಲಿ ಮಂಗಳವಾರ ಆಯೋಜಿಸಿದ್ದ ತಮ್ಮ 'ತತ್ತ್ವ ಕಥನ' ಗ್ರಂಥ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದರು.

'ತತ್ವ ಕಥನ'ದಲ್ಲಿ ಬರೆದ ಪ್ರತಿ ವಾಕ್ಯವೂ ಪ್ರಮಾಣ ಸಮಾನವಾಗಿದೆ. ಗ್ರಾಂಥಿಕ ಆಧಾರ, ಅನುಭವದ ಮೂಲಕ ಪರೀಕ್ಷೆ ಮತ್ತು ಗುರುಗಳ ಪ್ರಮಾಣೀಕರಣ ಇರದೇ ಒಂದೇ ಒಂದು ಸಾಲನ್ನು ನಾನು ಇಲ್ಲಿ ಬರೆದಿಲ್ಲ. ಪ್ರತಿ ವಿಷಯದ ಬಗ್ಗೆಯೂ ಆಳವಾದ ಅಧ್ಯಯನ ನಡೆಸಿ ತಿದ್ದಿ, ತೀಡಿ ಬರೆದಿದ್ದೇನೆ. ಅಪರೂಪದ ವಿಷಯಗಳ ಬಗ್ಗೆ ಈ ಕೃತಿಯಲ್ಲಿ ಲೇಖನಗಳಿವೆ. ಅನೇಕ ವಿದ್ಯೆ, ಉಪಾಸನೆಗಳ ಹಿನ್ನೆಲೆ, ಈ ಕಾಲಕ್ಕೆ ಅವುಗಳ ಪ್ರಸ್ತುತತೆ ಮುಂತಾದವುಗಳನ್ನು ಗಮನಿಸಿ ಲೇಖನ ಬರೆದಿದ್ದೇನೆ ಎಂದು ಹೇಳಿದರು.

ಹಿರಿಯ ಕವಿ ಪದ್ಮಶ್ರೀ ಡಾ. ದೊಡ್ಡರಂಗೇಗೌಡ ಮಾತನಾಡಿ, ''ಕವಿಗಳು ಭಾವಜೀವಿಗಳು. ಕವನ, ಕಾದಂಬರಿಗಳಲ್ಲಿ ಕಲ್ಪನೆಗೆ ಅವಕಾಶವಿದೆ. ವಿಷಯಗಳ ವೈಭವೀಕರಣ, ವಿಶೇಷ ರೀತಿಯಲ್ಲಿ ಗ್ರಹಿಸಿ ಅದಕ್ಕೆ ಸ್ವರೂಪ ನೀಡುವ ಸ್ವಾತಂತ್ರ್ಯ ಇರುತ್ತದೆ. ಆದರೆ ತತ್ವಶಾಸ್ತ್ರದ ವಿಷಯಗಳನ್ನು ಬರೆಯುವಾಗ ಆಳವಾದ ಅಧ್ಯಯನ, ಪಾಂಡಿತ್ಯ ಮತ್ತು ವಿಷಯ ಮಂಡನೆಯಲ್ಲಿ ನಿಖರತೆ ಅತ್ಯಗತ್ಯ'' ಎಂದರು.

ಕಾರ್ಯಕ್ರಮದಲ್ಲಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ, ಅನುಪಮ ಪ್ರಕಾಶನದ ವ್ಯವಸ್ಥಾಪಕ ಡಾ. ಸಿದ್ಧಣ್ಣ ಬಿ. ಉತ್ನಾಳ್, ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್‌ನ ಡಾ. ಎಸ್. ರಾಮಲಿಂಗೇಶ್ವರ (ಸಿಸಿರಾ) ಮತ್ತಿತರರು ಉಪಸ್ಥಿತರಿದ್ದರು.

ನಂ.1 ವಿಜಯವಾಣಿ
ಕನ್ನಡ ದಿನಪತ್ರಿಕೆ
O VIJAYAVANI >> BENGALURU

ಗುರುವಾರ 19 ಮೇ 2022
19 MAY 2022



ವಿಜಯವಾಣಿ ಚಿತ್ರಗಳು

ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್ ಗಾಂಧಿ ಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿಶ್ರಾಂತ ಕುಲಪತಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಅವರ 'ತತ್ತ್ವ ಕಥನ - ಭಾರತೀಯ ಸಂಸ್ಕೃತಿಯ ಮೂಲಗಾಮಿ ಚಿಂತನೆಗಳು' ಗ್ರಂಥ ಬಿಡುಗಡೆ ಮಾಡಲಾಯಿತು. ದೊಡ್ಡರಂಗೇಗೌಡ, ವೂಡೇ ಪಿ. ಕೃಷ್ಣ ಇತರರಿದ್ದರು.

ಕನ್ನಡಪ್ರಭ
ಬುಧವಾರ 18.5.2022
ಬೆಂಗಳೂರು

ತತ್ವಶಾಸ್ತ್ರದ ಬಗ್ಗೆ ಬರೆಯಲು ಆಳವಾದ ಪಾಂಡಿತ್ಯ ಅಗತ್ಯ: ಕವಿ ಡಾ. ದೊಡ್ಡರಂಗೇಗೌಡ

ಪ್ರೊ. ಮಲ್ಲೇಪುರಂ ಅವರ ತತ್ವಕಥನ ಕೃತಿ ಬಿಡುಗಡೆ



ಮಲ್ಲೇಪುರಂ ಜಿ.ವೆಂಕಟೇಶ್ ಅವರ ಲೇಖನಗಳ ಸಂಗ್ರಹ ತತ್ವಕಥನ ಕೃತಿಯನ್ನು ಕವಿ ಡಾ. ದೊಡ್ಡರಂಗೇಗೌಡ ಬಿಡುಗಡೆ ಮಾಡಿದರು.

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕವನ, ಕಾದಂಬರಿಗಳಲ್ಲಿ ಕಲ್ಪನೆ, ವಿಷಯಗಳ ವೈಭವೀಕರಣಕ್ಕೆ ಸ್ವರೂಪ ನೀಡುವ ಸ್ವಾತಂತ್ರ್ಯ ಇರುತ್ತದೆ. ಆದರೆ, ತತ್ವಶಾಸ್ತ್ರದ ವಿಷಯಗಳನ್ನು ಬರೆಯುವಾಗ ಆಳವಾದ ಅಧ್ಯಯನ, ಪಾಂಡಿತ್ಯ ಮತ್ತು ವಿಷಯ ಮಂಡನೆಯಲ್ಲಿ ನಿಖರತೆ ಅತ್ಯಗತ್ಯ ಎಂದು ಕವಿ ಡಾ.ದೊಡ್ಡರಂಗೇಗೌಡ ಹೇಳಿದರು.

ಮಂಗಳವಾರ ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್‌ನ ಸಹಯೋಗದೊಂದಿಗೆ ಅನುಪಮ ಪ್ರಕಾಶನ ಹೊರತಂದಿರುವ ಕರ್ನಾಟಕ ಸಂಸ್ಕೃತ ವಿವಿಯ ವಿಶ್ರಾಂತ ಕುಲಪತಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಅವರ 'ತತ್ವಕಥನ - ಭಾರತೀಯ ಸಂಸ್ಕೃತಿಯ ಮೂಲಗಾಮಿ ಚಿಂತನೆಗಳು' ಗ್ರಂಥ ಬಿಡುಗಡೆ ಮಾಡಿ ಮಾತನಾಡಿದರು.

ಶಾಸ್ತ್ರ ಪುರಾಣಗಳ ಬಗ್ಗೆ ಆಳವಾದ ಅಧ್ಯಯನ ನಡೆಸಿರುವ ಮಲ್ಲೇಪುರಂ ಅವರ ಬರಹದ ಪ್ರತಿ ಸಾಲಿನಲ್ಲೂ ಜ್ಞಾನದ ಗಣಿಯಿದೆ. ಈ ಬರಹದ ಪ್ರತಿ ವಾಕ್ಯವೂ ಅಪರಂಜಿಯಾಗಿದೆ. ಸಮಾಜವನ್ನು ಸೆಳೆಯಲು ಮಾತಿನ ಆಡಂಬರದಲ್ಲಿ ಮುಳುಗಿರುವಾಗ ಮಾತು ಬೆಳಕಿನ ಪ್ರವಾಹ ಆಗಬೇಕು ಎಂಬ ವಿಶಿಷ್ಟ ಚಿಂತನೆಯನ್ನು ಈ ಕೃತಿ ಒಳಗೊಂಡಿದೆ ಎಂದು ಹೇಳಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ ಮಾತನಾಡಿ, ಮಲ್ಲೇಪುರಂ ವೆಂಕಟೇಶ್ ಯಾವುದೇ ಇಸಂಗಳಿಗೆ ಸೇರಿದವರಲ್ಲ. ಯಾವುದೇ ಪಕ್ಷದ ಕಡೆ ವಾಲಿದವರಲ್ಲ. ಅವರು ವೈಚಾರಿಕವಾಗಿ ಸರ್ವತಂತ್ರ ಸ್ವತಂತ್ರರು. ಆದ್ದರಿಂದ ಅವರ ಬರಹಗಳಿಗೆ ವಿಶೇಷ ಮಾನ್ಯತೆಯಿದೆ ಎಂದು ಹೇಳಿದರು.

ಕೃತಿ ಬಗ್ಗೆ ಮಾತನಾಡಿದ ಮಲ್ಲೇಪುರಂ ಜಿ. ವೆಂಕಟೇಶ್, 'ತತ್ವ ಕಥನ'ದಲ್ಲಿ ಬರೆದ ಪ್ರತಿ ವಾಕ್ಯವೂ ಪ್ರಮಾಣ ಸಮಾನವಾಗಿದೆ. ಗ್ರಾಂಥಿಕ ಆಧಾರ, ಅನುಭವದ ಮೂಲಕ ಪರೀಕ್ಷೆ ಮತ್ತು ಗುರುಗಳ ಪ್ರಮಾಣೀಕರಣ ಇರದೇ ಒಂದೇ ಒಂದು ಸಾಲನ್ನು ನಾನು ಇಲ್ಲಿ ಬರೆದಿಲ್ಲ. ಅನೇಕ ವಿದ್ಯೆ, ಉಪಾಸನೆಗಳ ಹಿನ್ನೆಲೆ, ಈ ಕಾಲಕ್ಕೆ ಅವುಗಳ ಪ್ರಸ್ತುತತೆ ಮುಂತಾದವುಗಳನ್ನು ಗಮನಿಸಿ ಲೇಖನ ಬರೆದಿದ್ದೇನೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಅನುಪಮ ಪ್ರಕಾಶನದ ವ್ಯವಸ್ಥಾಪಕ ಡಾ. ಸಿದ್ದಣ್ಣ ಬಿ.ಉತ್ನಾಳ್, ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್‌ನ ಡಾ. ಎಸ್. ರಾಮಲಿಂಗೇಶ್ವರ (ಸಿಸಿರಾ) ಉಪಸ್ಥಿತರಿದ್ದರು.

ಸಂಯುಕ್ತ ಕರ್ನಾಟಕ ವಿಶಾಲ

ಬುಧವಾರ 18 ಮೇ 2022

ಕನ್ನಡದ ಏಳ್ಗೆ ಮರೆತ ಕನ್ನಡಿಗರು



ಸಂ.ಕ.ಸಮಾಚಾರ,ಬೆಂಗಳೂರು

ಕನ್ನಡದ ಏಳ್ಗೆಯನ್ನು ಮರೆತಿದ್ದೇವೆ.. ಅನ್ಯ ಭಾಷಾ ವ್ಯಾಮೋಹಕ್ಕೆ ಬಲಿಯಾಗಿದ್ದೇವೆ.. ಭಾಷೆ ಮರೆತ ನಾವೆಲ್ಲ ಬೇರೆ ಬೇರೆಯವರಂತಾಗಿ ಬದುಕುತ್ತಿದ್ದೇವೆ.. ಹೀಗೆಂದು ತೀವ್ರ ಬೇಸರ ವ್ಯಕ್ತಪಡಿಸಿದ್ದು ಅಖಿಲ ಭಾರತ 86ನೇ ಕನ್ನಡ

ತತ್ತ್ವಕಥನ ಕೃತಿ ಬಿಡುಗಡೆ ವೇಳೆ ಡಾ.ದೊಡ್ಡರಂಗೇಗೌಡರ ಮಾತು

ಸಾಹಿತ್ಯ ಸಮ್ಮೇಳನದ ನಿಯೋಜಿತ ಅಧ್ಯಕ್ಷ ಡಾ.ದೊಡ್ಡರಂಗೇಗೌಡ ಅವರು. ಈ ಮೂಲಕ ಪ್ರತಿಯೊಬ್ಬ ಕನ್ನಡಿಗರು ಆತ್ಮ ವಿಮರ್ಶೆ ಮಾಡಿಕೊಳ್ಳುವಂತೆ ಅವರು ಚಾಟಿ ಬೀಸಿದರು.

ಗಾಂಧಿ ಭವನದಲ್ಲಿ ಸಂಸ್ಕೃತ ವಿವಿಯ ವಿಶ್ರಾಂತ ಕುಲಪತಿ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ ಅವರ 'ತತ್ತ್ವ ಕಥನ' ಗ್ರಂಥವನ್ನು ಬಿಡುಗಡೆಗೊಳಿಸಿದ ನಂತರ ಮಾತನಾಡಿದ ಅವರು, ನಮ್ಮ ಅವಿಭಕ್ತ ಕುಟುಂಬಗಳು ಒಡೆದು ಹೋಗುತ್ತಿವೆ. ಮನಸ್ಸುಗಳು ಮುರಿದು ಹೋಗುತ್ತಿವೆ. ಲಿವಿಂಗ್ ಟುಗೆದರ್ ಸಂಸ್ಕೃತಿ ನಮ್ಮ ಸಂಸ್ಕೃತಿಯನ್ನು ನಾಶ ಮಾಡುತ್ತಿದೆ. ಇಂಥ ಕಾಲಘಟ್ಟದಲ್ಲಿ ಆಧ್ಯಾತ್ಮಿಕ ನೆಲೆಗಟ್ಟಿನ ಚೌಕಟ್ಟಿನೊಳಗಿರುವ ಡಾ.ಮಲ್ಲೇಪುರಂ ಜಿ.ವೆಂಕಟೇಶ ಅವರ ತತ್ತ್ವ ಕಥನ ಕೃತಿ ಪ್ರಸ್ತುತವಾಗಿದೆ ಎಂದರು.

ಎಲ್ಲರಿಗೂ ಅರ್ಥವಾಗುವಂತೆ ಬರೆಯುವ ಮಲ್ಲೇಪುರಂ ಅವರ ರಚನಾ ಶೈಲಿ ಸ್ವಂತಿಕೆಯಿಂದ ಕೂಡಿದ್ದು, ಈ ಪುಸ್ತಕದಲ್ಲಿನ ಒಂದೊಂದು ಮಾತುಗಳು ಅಪರಂಜಿಯಂತೆ. ಒಟ್ಟಾರೆ ಅವರ ಈ ಪುಸ್ತಕ ಬೆಳಕಿನೆಡೆಗೆ ದಾರಿ ತೋರಿಸುವಂತಿದೆ ಎಂದವರು ಹೇಳಿದರು.

ಕೃತಿ ಕುರಿತು ಮಾತನಾಡಿದ ಹಿರಿಯ ಲೇಖಕ ಡಾ.ಕೆ.ಜಿ.ಲಕ್ಷ್ಮೀನಾರಾಯಣಪ್ಪ ಅವರು, ವೇದ,ಉಪನಿಷತ್ತು,ಪುರಾಣ ಕೀರ್ತನೆಗಳನ್ನೆಲ್ಲ ಅಧ್ಯಯನ ಮಾಡಿದ ಮಲ್ಲೇಪುರಂ ಜಿ.ವೆಂಕಟೇಶ ಅವರ ಈ ಕೃತಿಯನ್ನು ಓದಿದಾಗ ಬುದ್ಧಿಗೆ ಸಾಣೆ ಹಿಡಿದು ಅಂತರಂಗ ಶುದ್ಧಿಗೆ ಪ್ರೇರೇಪಿಸುವಂತಿದೆ ಎಂದರೆ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ.ಕೃಷ್ಣ ಅವರು, ಮಲ್ಲೇಪುರಂ ವೆಂಕಟೇಶ ಅವರೊಬ್ಬ ಆಧ್ಯಾತ್ಮಿಕ ಜೀವಿ. ಅವರು ಬರೆದಂತೆ ಬದುಕಿದವರು ಬದುಕಿದಂತೆಯೇ ಬರೆದವರು ಎಂದು ಗುಣಗಾನ ಮಾಡಿದರು.

ಕೃತಿಕರ್ತೃ ಮಲ್ಲೇಪುರಂ ಜಿ.ವೆಂಕಟೇಶ ಅವರು ಮಾತನಾಡಿ, ಕಳೆದ ಕೆಲ ತಿಂಗಳಿಂದ ಪತ್ರಿಕೆಗೆ ಬರೆದ ನೂರು ಅಂಕಣ ಬರಹವನ್ನು ಸಂಕಲನ ಮಾಡಿದ್ದ ಪ್ರತಿಫಲವೇ ಇದೀಗ ಪುಸ್ತಕ ರೂಪ ಪಡೆದುಕೊಂಡಿದೆ. ನಾನು ನನ್ನ ಅನುಭವ, ಅಧ್ಯಯನವನ್ನು ಭಟ್ಟಿ ಇಳಿಸಿ ಧರ್ಮಜ್ಞಾನಿಗಳ ಒಡನಾಟದಿಂದ ಕಂಡುಕೊಂಡ ಸತ್ಯ ಸಂಗತಿಗಳನ್ನು ಒರೆಗಲ್ಲಿಗೆ ಹಚ್ಚಿ ಪ್ರಮಾಣೀಕರಿಸಿ ಬರೆದಿದ್ದೇನೆ ಎಂದರು. ಹಣೆಗೆ ಕುಂಕುಮವನ್ನು ಏಕೆ ಇಟ್ಟುಕೊಳ್ಳಬೇಕು? ಮೈಗೆ ಮುದ್ರೆಯನ್ನೇಕೆ ಒತ್ತಿಕೊಳ್ಳಬೇಕು? ಹೀಗೆ ಧಾರ್ಮಿಕ ವಿಧಿ ವಿಧಾನ, ಆಚಾರ ವಿಚಾರಗಳಿಗೆ ಈ ಕೃತಿಯ ಮೂಲಕ ಸಮರ್ಪಕವಾಗಿ ಉತ್ತರಿಸಲಾಗಿದೆ ಎಂದರು.

ಅನುಪಮ ಪ್ರಕಾಶನ ಸಂಸ್ಥೆಯ ವ್ಯವಸ್ಥಾಪಕ ಡಾ.ಸಿದ್ದಣ್ಣ ಉತ್ನಾಳ್, ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್ ಅಧ್ಯಕ್ಷ ಡಾ.ಎಸ್. ರಾಮಲಿಂಗೇಶ್ವರ (ಸಿಸಿರಾ) ಉಪಸ್ಥಿತರಿದ್ದರು.

4
ಉದಯವಾಣಿ ಬೆಂಗಳೂರು
ಬುಧವಾರ, ಮೇ 18, 2022

ಮಲ್ಲೇಪುರಂ ವೆಂಕಟೇಶ ತತ್ವ ಕಥನ ಕೃತಿ ಬಿಡುಗಡೆ



ಬೆಂಗಳೂರು: ಕನ್ನಡ ಸಾಹಿತ್ಯ ಲೋಕದಲ್ಲಿ ಮಲ್ಲೇಪುರಂ ಅವರು ತಮ್ಮದೇ ಆದಂತಹ ವಿಶಿಷ್ಟ ಛಾಪು ಮೂಡಿಸಿದ್ದಾರೆ ಎಂದು ಕವಿ ದೊಡ್ಡರಂಗೇಗೌಡ ಶ್ಲಾಘಿಸಿದರು. ಹಿರಿಯ ವಿದ್ವಾಂಸ ಮಲ್ಲೇಪುರಂ ಜಿ.ವೆಂಕಟೇಶ ಅವರ ತತ್ವ ಕಥನ ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಂಸ್ಕೃತ ಭಾಷೆಯಲ್ಲೂ ಪಾಂಡಿತ್ಯ ಹೊಂದಿರುವ ಮಲ್ಲೇಪುರಂ ಕನ್ನಡ ಸಾಹಿತ್ಯ ಲೋಕಕ್ಕೂ ವಿಶಿಷ್ಟ ಕೊಡುಗೆ ನೀಡಿದ್ದಾರೆ. ತುಂಬಾ ಸರಳ ಶೈಲಿಯಲ್ಲಿ ಓದುಗರಿಗೆ ಅರ್ಥವಾಗುವ ರೀತಿಯಲ್ಲಿ ತತ್ವಶಾಸ್ತ್ರದ ಕಥನವನ್ನು ನೀಡಿದ್ದಾರೆ. ತಮ್ಮ ಅನುಭವ ಜನ್ಯವನ್ನು ಓದುಗರಿಗೆ ಉಣಬಡಿಸಿದ್ದಾರೆ ಎಂದರು. ಕೃತಿ ಕುರಿತು ಮಾತನಾಡಿದ ಲೇಖಕ ಡಾ.ಕೆ.ಜಿ.ಲಕ್ಷ್ಮೀನಾರಾಯಣ, ಮಲ್ಲೇಪುರಂ ಕೃತಿಯಲ್ಲಿ ತತ್ವ ಕಥನ ಕೃತಿಯಲ್ಲಿ ರಾಮಾಯಣ, ಮಹಾಭಾರತ ಮತ್ತು ತತ್ವಶಾಸ್ತ್ರಗಳ ಅನುಸಂಧಾನವನ್ನು ಕಾಣಬಹುದಾಗಿದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಡಾ. ವೊಡೇ.ಪಿ. ಕೃಷ್ಣ, ಬುದ್ಧಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್‌ನ ಅಧ್ಯಕ್ಷ ಡಾ.ಎಸ್.ರಾಮಲಿಂಗೇಶ್ವರ, ಅನುಪ್ರಕಾಶನದ ಡಾ.ಸಿದ್ದಣ್ಣ ಬಿ.ಉತ್ನಾಳ್ ಇತರರಿದ್ದರು.

ನಂ. 1 ಕನ್ನಡ ದಿನಪತ್ರಿಕೆ

ಭಾನುವಾರ 15 ಮೇ 2022
15 MAY 2022

ಸಂತೋಷ್ ಹೆಗ್ಡೆ ಸಲಹೆ ಸತೀಶ್ ಹಂಪಿಹೊಳಿ ಮ್ಯೂಸಿಕ್ ಫೌಂಡೇಷನ್‌ನಿಂದ ಸಂಗೀತ ಸೌರಭ

ಮಕ್ಕಳಿಗೆ ತೃಪ್ತಿ, ಮಾನವೀಯತೆ ಗುಣ ಕಲಿಸಬೇಕು

▫ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಸಮಾಜದಲ್ಲಿ ಶಾಂತಿ- ಸೌಹಾರ್ದತೆ ನೆಲೆಸಲು ಹಿರಿಯರು ಹಾಕಿಕೊಟ್ಟಿದ್ದ ಆದರ್ಶಗಳು ಇಂದು ಕುಸಿಯುತ್ತಿವೆ. ಅವನ್ನು ಮತ್ತೆ ಭದ್ರಗೊಳಿಸಲು ಮಕ್ಕಳಲ್ಲಿ 'ತೃಪ್ತಿ' ಹಾಗೂ 'ಮಾನವೀಯತೆ' ಗುಣಗಳನ್ನು ಕಲಿಸಬೇಕು ಎಂದು ಮಾಜಿ ಲೋಕಾಯುಕ್ತ ಸಂತೋಷ್ ಹೆಗ್ಡೆ ಪಾಲಕರಿಗೆ ಸಲಹೆ ನೀಡಿದ್ದಾರೆ.

ಸತೀಶ್ ಹಂಪಿಹೊಳಿ ಮ್ಯೂಸಿಕ್ ಫೌಂಡೇಷನ್ ಟ್ರಸ್ಟ್, ವಿಜಯವಾಣಿ ಮತ್ತು ದಿಗ್ವಿಜಯ ನ್ಯೂಸ್ ಮಾಧ್ಯಮ ಸಹಯೋಗದಲ್ಲಿ ಜಯನಗರದ ಜೆ.ಎಸ್.ಎಸ್. ಸಭಾಂಗಣದಲ್ಲಿ ಶನಿವಾರ ಹಮ್ಮಿಕೊಂಡಿದ್ದ 'ಸಂಗೀತ ಸೌರಭ' ಕಾರ್ಯಕ್ರಮದಲ್ಲಿ ಹಿಂದುಸ್ತಾನಿ ಗಾಯಕ ಪಂಡಿತ್ ಶಿವಮೊಗ್ಗ ವೇಣುಗೋಪಾಲ ಅವರಿಗೆ ಪಂಡಿತ್ ಬಸವರಾಜ್ ಬೆಂಡಿಗೇರಿ ನೆನಪಿನಲ್ಲಿ 'ಗುರು ಗೌರವ' ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದರು.

ದುರಾಸೆಗೆ ಲಸಿಕೆಯಿಲ್ಲ. ಇದ್ದುದರಲ್ಲಿ ತೃಪ್ತಿ ಕಾಣು ವುದನ್ನು ಕಲಿಸಿದರೆ ಈ ದುರಾಸೆಯ ಕಾಯಿಲೆ ಅಂಟುವುದಿಲ್ಲ. ಇದನ್ನು ಪಾಲಕರು ಮೊದಲು ತಿಳಿಯಬೇಕಿದೆ ಎಂದರು.


ಮಾನಸಿಕ ಒತ್ತಡ ಹಾಗೂ ಮನಸ್ಸಿನ ನೋವಿಗೆ ಸಂಗೀತ ಒಳ್ಳೆಯ ಮದ್ದು. ಇದರಿಂದ ಉತ್ಸಾಹ- ಹುಮ್ಮಸ್ಸು ಮೂಡುತ್ತದೆ. ಸಾಧಕರನ್ನು ಗೌರವಿಸುವುದು ಮೌಲ್ಯವನ್ನು ಹೆಚ್ಚಿಸುವ ಕಾರ್ಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ನೈತಿಕ ಸ್ವಾತಂತ್ರ್ಯದ ಅಗತ್ಯ: ನಿಜ ಅರ್ಥದಲ್ಲಿ ಸ್ವಾತಂತ್ರ್ಯ ಎಂದರೆ ಪಾಶ್ಚಾತ್ಯ ಶಿಕ್ಷಣ, ಸಂಸ್ಕೃತ, ಜೀವನ ಪದ್ಧತಿಯಿಂದ ಸ್ವತಂತ್ರರಾಗುವುದು ಎಂದರ್ಥ. ಆದರೆ, ನಮಗೆ ಸಿಕ್ಕಿರುವುದು ರಾಜಕೀಯ ಸ್ವಾತಂತ್ರ್ಯವಷ್ಟೇ, ನಮಗಿನ್ನೂ ನೈತಿಕ ಸ್ವಾತಂತ್ರ್ಯದ ಅಗತ್ಯವಿದೆ ಎಂದು ಶಿಕ್ಷಣ ತಜ್ಞ ಡಾ. ವೂಡೇ ಪಿ. ಕೃಷ್ಣ ಹೇಳಿದರು.

ಸಂಗೀತ, ನೃತ್ಯ, ಕಲೆ ಮಕ್ಕಳಿಗೆ ನಾವು ನೀಡುವ ಮಹತ್ವದ ಕೊಡುಗೆ. ಇದರಿಂದ ಅವರ ಬದುಕು ಹಸನಾಗಿ ದೇಶದ ಸಂಸ್ಕೃತಿ ಉಳಿಯಲಿದೆ ಎಂದರು.

ಒಂಟಿತನ ಕಾಡುವುದಿಲ್ಲ: ಸಂಗೀತ ಕಲಿತವರಿಗೆ ಒಂಟಿತನ ಎಂದೂ ಕಾಡುವುದಿಲ್ಲ. ಸಾಹಿತ್ಯ ಮತ್ತು ಸಂಗೀತಕ್ಕೆ ಎಲ್ಲ ಕೊರತೆಗಳನ್ನು ಮುಚ್ಚಿಹಾಕುವ ಅದ್ಭುತ ಶಕ್ತಿ ಇದೆ ಎಂದು ನಟಿ ವಿನಯಾಪ್ರಸಾದ್ ಹೇಳಿದರು. ಹಿಂದೂಸ್ತಾನಿ ಗಾಯಕ ಪಂಡಿತ್ ಡಾ. ಮೃತ್ಯುಂಜಯ ಶೆಟ್ಟರ್ ಮಾತನಾಡಿ, ಕಲೆಯನ್ನು ಪೂಜಿಸುವವರಿಗೆ ಮಾತ್ರವೇ ಕಲಾದೇವಿ ಒಲಿಯುತ್ತಾಳೆ. ಕಲೆ ಮಾನವನಿಗೆ ದೈವತ್ವವನ್ನು ತಂದು ಕೊಡುವುದರ ಜತೆಗೆ ನಾಡು-ನುಡಿ ಸಂಸ್ಕೃತಿಯನ್ನು ಶ್ರೀಮಂತಗೊಳಿಸುತ್ತದೆ ಎಂದರು.

ವಿದ್ಯಾರ್ಥಿಗಳು 'ತಬಲಾ ತರಂಗ್' ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು. ಪಂ. ಶಿವಮೊಗ್ಗ ವೇಣುಗೋಪಾಲ ಹಾಡಿದರು. ವಿದುಷಿ ಪೂರ್ಣ ಆಚಾರ್ಯ ನಿರ್ದೇಶನದಲ್ಲಿ ಅಲಂಕೃತ ನೃತ್ಯ ಸಂಸ್ಥೆಯ ವಿದ್ಯಾರ್ಥಿಗಳು 'ಕಥಕ್ ನೃತ್ಯ' ಪ್ರದರ್ಶನ ನೀಡಿದರು. ಸಂಗೀತ ಸ್ವರ ಸಂಸ್ಕಾರ ಸೇವಾ ಟ್ರಸ್ಟ್ ಹಾಗೂ ಶ್ರೀ ಗುರುಕುಮಾರ ಪಂಚಾಕ್ಷರೇಶ್ವರ ಸಂಗೀತ ಕಲಾ ವೇದಿಕೆ ಶಿಷ್ಯರು 'ಸಮೂಹ ಗಾಯನ' ನಡೆಸಿಕೊಟ್ಟರು. ಇವರಿಗೆ ವಿದುಷಿ ರೇಖಾ ಹಂಪಿಹೊಳಿ, ಪಂ. ವೆಂಕಟೇಶ್ ಆಲ್ಕೋಡ್, ಪಂ. ಸತೀಶ್ ಕೊಳ್ಳಿ, ಶ್ರೀನಿವಾಸ ಹಂಪಿಹೊಳಿ, ವೆಂಕಟೇಶ್ ಪುರೋಹಿತ್, ಅಮಿತ್ ಭಟ್, ಪುನೀತ್ ರಾಣಾಪೂರ್, ಪ್ರಜ್ವಲ್ ಶರ್ಮ ವಾದ್ಯ ಸಹಕಾರ ನೀಡಿದರು.-



'ಸಂಗೀತ ಸೌರಭ' ಕಾರ್ಯಕ್ರಮದಲ್ಲಿ ಪಂಡಿತ್ ಶಿವಮೊಗ್ಗ ವೇಣುಗೋಪಾಲ ಅವರಿಗೆ 'ಗುರು ಗೌರವ' ಪ್ರಶಸ್ತಿ ಪ್ರದಾನ ಮಾಡಲಾಯಿತು. ಎನ್. ಸಂತೋಷ್ ಹೆಗ್ಡೆ, ವಿನಯಾಪ್ರಸಾದ್, ಡಾ. ವೂಡೇ ಪಿ. ಕೃಷ್ಣ ಇತರರಿದ್ದರು.

ದಿಗ್ವಿಜಯ 24X7 NEWS
ವಿಜಯವಾಣಿ
ಮಾಧ್ಯಮ ಸಹಯೋಗ

ಮೇ 14 ರಂದು ಶಿವಮೊಗ್ಗ ವೇಣುಗೋಪಾಲರಿಂದ ಸಂಗೀತ ಸೌರಭ



ಶಿವಮೊಗ್ಗ: ಸತೀಶ್ ಹಂಪಿಹೊಳಿ ಮ್ಯೂಸಿಕ್ ಫೌಂಡೇಷನ್ ಟ್ರಸ್ಟ್ ವತಿಯಿಂದ ಮೇ 14ರಂದು ಮಧ್ಯಾಹ್ನ 3ಗಂಟೆಗೆ ಬೆಂಗಳೂರಿನ ಜಯನಗರದ 8ನೇ ಬ್ಲಾಕ್‌ನಲ್ಲಿರುವ ಜೆಎಸ್‌ಎಸ್ ಸಭಾಂಗಣದಲ್ಲಿ ಪಂಡಿತ್ ಬಸವರಾಜ್ ಬೆಂಡಿಗೇರಿ ಅವರ ಸವಿನೆನಪಿಗಾಗಿ ಗುರುಗೌರವ ಪ್ರಶಸ್ತಿ ಪುರಸ್ಕೃತ ಖ್ಯಾತ ಹಿಂದೂಸ್ತಾನಿ ಗಾಯಕ ಪಂಡಿತ್ ಶಿವಮೊಗ್ಗ ವೇಣುಗೋಪಾಲ್ ಅವರಿಂದ ಸಂಗೀತ ಸೌರಭ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಶಿಕ್ಷಣ ತಜ್ಞ ನಾಡೋಜ ಡಾ|| ಪ್ರೊಫೆ. ಪಿ.ಕೃಷ್ಣ ಕಾರ್ಯಕ್ರಮ ಉದ್ಘಾಟಿಸಲಿದ್ದು, ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗಡೆ ಪ್ರಶಸ್ತಿ ಪ್ರದಾನ ಮಾಡುವರು. ಮುಖ್ಯ ಅತಿಥಿಯಾಗಿ ನಟಿ ವಿನಯಾ ಪ್ರಸಾದ್ ಆಗಮಿಸಲಿದ್ದು, ಅಂತರಾಷ್ಟ್ರೀಯ ಖ್ಯಾತಿಯ ಹಿಂದೂಸ್ತಾನಿ ಗಾಯಕ ಪಂಡಿತ್ ಡಾ|| ಮೃತ್ಯುಂಜಯ ಶೆಟ್ಟರ್ ಅಧ್ಯಕ್ಷತೆ ವಹಿಸುವರು.

ವಿದುಷಿ ರೇಖಾ ಹಂಪಿಹೊಳಿ ಹಾರ್ಮೋನಿಯಂ, ಶ್ರೀನಿವಾಸ ಹಂಪಿಹೊಳಿ ಸಹ ಗಾಯನದ ಸಾಥ್ ನೀಡಲಿದ್ದಾರೆ ಎಂದು ಸಪ್ತಸ್ವರ ಸಂಗೀತ ಸಭಾದ ಅಧ್ಯಕ್ಷ ಅರುಣ ಹಂಪಿಹೊಳಿ ತಿಳಿಸಿದ್ದಾರೆ.

ಮೇ.14ರಂದು ಶಿವಮೊಗ್ಗ ವೇಣುಗೋಪಾಲರಿಂದ ಸಂಗೀತ ಸೌರಭ

–ಶಿವಮೊಗ್ಗ ಸಂಚಲನ

ಶಿವಮೊಗ್ಗ: ಸತೀಶ್ ಹಂಪಿಹೊಳಿ ಮ್ಯೂಸಿಕ್ ಫೌಂಡೇಷನ್ ಟ್ರಸ್ಟ್ ವತಿಯಿಂದ ಮೇ 14ರಂದು ಮಧ್ಯಾಹ್ನ 3ಗಂಟೆಗೆ ಬೆಂಗಳೂರಿನ ಜಯನಗರದ 8ನೇ ಬ್ಲಾಕ್‌ನಲ್ಲಿರುವ ಜೆಎಸ್‌ಎಸ್ ಸಭಾಂಗಣದಲ್ಲಿ ಪಂಡಿತ್ ಬಸವರಾಜ್ ಬೆಂಡಿಗೇರಿ ಅವರ ಸವಿನೆನಪಿಗಾಗಿ ಗುರುಗೌರವ ಪ್ರಶಸ್ತಿ ಪುರಸ್ಕೃತ ಖ್ಯಾತ ಹಿಂದೂಸ್ತಾನಿ ಗಾಯಕ ಪಂಡಿತ್ ಶಿವಮೊಗ್ಗ ವೇಣುಗೋಪಾಲ್ ವರಿಂದ ಸಂಗೀತ ಸೌರಭ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.



ಶಿಕ್ಷಣ ತಜ್ಞ ನಾಡೋಜ ಡಾ॥ ವೂಡೇ ಪಿ.ಕೃಷ್ಣ ಕಾರ್ಯಕ್ರಮ ಉದ್ಘಾಟಿಸಲಿದ್ದು, ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗಡೆ ಪ್ರಶಸ್ತಿ ಪ್ರದಾನ ಮಾಡುವರು. ಮುಖ್ಯ ಅತಿಥಿಯಾಗಿ ನಟಿ ವಿನಯಾ ಪ್ರಸಾದ್ ಆಗಮಿಸಲಿದ್ದು, ಅಂತರಾಷ್ಟ್ರೀಯ ಖ್ಯಾತಿಯ ಹಿಂದೂಸ್ತಾನಿ ಗಾಯಕ ಪಂಡಿತ್ ಡಾ॥ ಮೃತ್ಯುಂಜಯ ಶೆಟ್ಟರ್ ಅಧ್ಯಕ್ಷತೆ ವಹಿಸುವರು.

ವಿದುಷಿ ರೇಖಾ ಹಂಪಿಹೊಳಿ ಹಾರ್ಮೋನಿಯಂ, ಶ್ರೀನಿವಾಸ ಹಂಪಿಹೊಳಿ ಸಹ ಗಾಯನದ ಸಾಥ್ ನೀಡಲಿದ್ದಾರೆ ಎಂದು ಸಪ್ತಸ್ವರ ಸಂಗೀತ ಸಭಾದ ಅಧ್ಯಕ್ಷ ಅರುಣ ಹಂಪಿಹೊಳಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೇ 14ರಂದು ಶಿವಮೊಗ್ಗ ವೇಣುಗೋಪಾಲರಿಂದ ಸಂಗೀತ ಸೌರಭ

ನಾವಿಕ, ಶಿವಮೊಗ್ಗ ಮೇ 11:-

ಸತೀಶ್ ಹಂಪಿಹೊಳಿ ಮ್ಯೂಸಿಕ್ ಫೌಂಡೇಷನ್ ಟ್ರಸ್ಟ್ ವತಿಯಿಂದ ಮೇ 14ರಂದು ಮಧ್ಯಾಹ್ನ 3ಗಂಟೆಗೆ ಬೆಂಗಳೂರಿನ ಜಯನಗರದ 8ನೇ ಬ್ಲಾಕ್‌ನಲ್ಲಿರುವ ಜೆಎಸ್‌ಎಸ್ ಸಭಾಂಗಣದಲ್ಲಿ ಪಂಡಿತ್ ಬಸವರಾಜ್ ಬೆಂಡಿಗೇರಿ ಅವರ



ಸವಿನೆನಪಿಗಾಗಿ ಗುರುಗೌರವ ಪ್ರಶಸ್ತಿ ಪುರಸ್ಕೃತ ಖ್ಯಾತ ಹಿಂದೂಸ್ತಾನಿ ಗಾಯಕ ಪಂಡಿತ್ ಶಿವಮೊಗ್ಗ ವೇಣುಗೋಪಾಲ್ ಅವರಿಂದ ಸಂಗೀತ ಸೌರಭ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಶಿಕ್ಷಣ ತಜ್ಞ ನಾಡೋಜ ಡಾ|| ವೂಡೇ ಪಿ.ಕೃಷ್ಣ ಕಾರ್ಯಕ್ರಮ ಉದ್ಘಾಟಿಸಲಿದ್ದು ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗಡೆ ಪ್ರಶಸ್ತಿ ಪ್ರದಾನ ಮಾಡುವರು. ಮುಖ್ಯ ಅತಿಥಿಯಾಗಿ ನಟಿ ವಿನಯಾ ಪ್ರಸಾದ್ ಆಗಮಿಸಲಿದ್ದು ಅಂತರಾಷ್ಟ್ರೀಯ ಖ್ಯಾತಿಯ ಹಿಂದೂಸ್ತಾನಿ ಗಾಯಕ ಪಂಡಿತ್ ಡಾ|| ಮೃತ್ಯುಂಜಯ ಶೆಟ್ಟರ್ ಅಧ್ಯಕ್ಷತೆ ವಹಿಸುವರು.

ವಿದುಷಿ ರೇಖಾ ಹಂಪಿಹೊಳಿ ಹಾರ್ಮೋನಿಯಂ, ಶ್ರೀನಿವಾಸ ಹಂಪಿಹೊಳಿ ಸಹ ಗಾಯನದ ಸಾಥ್ ನೀಡಲಿದ್ದಾರೆ ಎಂದು ಸಪ್ತಸ್ವರ ಸಂಗೀತ ಸಭಾದ ಅಧ್ಯಕ್ಷ ಅರುಣ ಹಂಪಿಹೊಳಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೇ 14: ಸಂಗೀತ ಸೌರಭ

ಶಿವಮೊಗ್ಗ, ಮೇ.11:

ಸತೀಶ್ ಹಂಪಿಹೊಳಿ ಮ್ಯೂಸಿಕ್ ಫೌಂಡೇಷನ್ ಟ್ರಸ್ಟ್ ವತಿಯಿಂದ ಮೇ 14ರಂದು ಮಧ್ಯಾಹ್ನ 3ಗಂಟೆಗೆ ಬೆಂಗಳೂರಿನ ಜಯನಗರದ 8ನೇ ಬ್ಲಾಕ್‌ನಲ್ಲಿರುವ ಜೆಎಸ್‌ಎಸ್ ಸಭಾಂಗಣದಲ್ಲಿ ಪಂಡಿತ್ ಬಸವರಾಜ್ ಬೆಂಡಿಗೇರಿ ಅವರ ಸವಿನೆನಪಿಗಾಗಿ ಗುರುಗೌರವ ಪ್ರಶಸ್ತಿ ಪುರಸ್ಕೃತ ಖ್ಯಾತ ಹಿಂದೂಸ್ತಾನಿ ಗಾಯಕ ಪಂಡಿತ್ ಶಿವಮೊಗ್ಗ ವೇಣುಗೋಪಾಲ್ ಅವರಿಂದ ಸಂಗೀತ ಸೌರಭ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಶಿಕ್ಷಣ ತಜ್ಞ ನಾಡೋಜ ಡಾ॥ ವೂಡೇ ಪಿ.ಕೃಷ್ಣ ಕಾರ್ಯಕ್ರಮ ಉದ್ಘಾಟಿಸಲಿದ್ದು, ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗಡೆ ಪ್ರಶಸ್ತಿ ಪ್ರದಾನ ಮಾಡುವರು. ಮುಖ್ಯ ಅತಿಥಿಯಾಗಿ ನಟಿ ವಿನಯಾ ಪ್ರಸಾದ್ ಆಗಮಿಸಲಿದ್ದು, ಅಂತರಾಷ್ಟ್ರೀಯ ಖ್ಯಾತಿಯ ಹಿಂದೂಸ್ತಾನಿ ಗಾಯಕ ಪಂಡಿತ್ ಡಾ॥ ಮೃತ್ಯುಂಜಯ ಶೆಟ್ಟರ್ ಅಧ್ಯಕ್ಷತೆ ವಹಿಸುವರು.

ವಿದುಷಿ ರೇಖಾ ಹಂಪಿಹೊಳಿ ಹಾರ್ಮೋನಿಯಂ, ಶ್ರೀನಿವಾಸ ಹಂಪಿಹೊಳಿ ಸಹ ಗಾಯನದ ಸಾಥ್ ನೀಡಲಿದ್ದಾರೆ ಎಂದು ಸಪ್ತಸ್ವರ ಸಂಗೀತ ಸಭಾದ ಅಧ್ಯಕ್ಷ ಅರುಣ ಹಂಪಿಹೊಳಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

11 ಮೇ 2022 ಬುಧವಾರ

ಸುದ್ದಿ ಸಾಲು

14ರಂದು ಸಂಗೀತ ಸೌರಭ





ಶಿವಮೊಗ್ಗ: ಸತೀಶ್ ಹಂಪಿಹೊಳಿ ಮ್ಯೂಸಿಕ್ ಫೌಂಡೇಷನ್ ಟ್ರಸ್ಟ್ ವತಿಯಿಂದ 14ರ ಮಧ್ಯಾಹ್ನ 3 ಗಂಟೆಗೆ ಬೆಂಗಳೂರಿನ ಜಯನಗರದ 8ನೇ ಬ್ಲಾಕ್‌ನಲ್ಲಿರುವ ಜೆಎಸ್‌ಎಸ್ ಸಭಾಂಗಣದಲ್ಲಿ ಪಂಡಿತ್ ಬಸವರಾಜ್ ಬೆಂಡಿಗೇರಿ ಅವರ ಸವಿನೆನಪಿಗಾಗಿ ಗುರುಗೌರವ ಪ್ರಶಸ್ತಿ ಪುರಸ್ಕೃತ ಖ್ಯಾತ ಹಿಂದೂಸ್ತಾನಿ ಗಾಯಕ ಪಂಡಿತ್ ಶಿವಮೊಗ್ಗ ವೇಣುಗೋಪಾಲ್ ಅವರಿಂದ ಸಂಗೀತ ಸೌರಭ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಶಿಕ್ಷಣ ತಜ್ಞ, ನಾಡೋಜ ಡಾ|| ವೂಡೇ ಪಿ.ಕೃಷ್ಣ ಕಾರ್ಯಕ್ರಮ ಉದ್ಘಾಟಿಸಲಿದ್ದು, ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗಡೆ ಪ್ರಶಸ್ತಿ ಪ್ರದಾನ ಮಾಡುವರು. ಮುಖ್ಯ ಅತಿಥಿಯಾಗಿ ನಟಿ ವಿನಯಾ ಪ್ರಸಾದ್ ಆಗಮಿಸಲಿದ್ದು, ಅಂತರಾಷ್ಟ್ರೀಯ ಖ್ಯಾತಿಯ ಹಿಂದೂಸ್ತಾನಿ ಗಾಯಕ ಪಂಡಿತ್ ಡಾ|| ಮೃತ್ಯುಂಜಯ ಶೆಟ್ಟರ್ ಅಧ್ಯಕ್ಷತೆ ವಹಿಸುವರು.

ವಿದುಷಿ ರೇಖಾ ಹಂಪಿಹೊಳಿ ಹಾರ್ಮೋನಿಯಂ, ಶ್ರೀನಿವಾಸ ಹಂಪಿಹೊಳಿ ಸಹ ಗಾಯನದ ಸಾಥ್ ನೀಡಲಿದ್ದಾರೆ ಎಂದು ಸಪ್ತಸ್ವರ ಸಂಗೀತ ಸಭಾದ ಅಧ್ಯಕ್ಷ ಅರುಣ ಹಂಪಿಹೊಳಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಜಾವಾಣಿ
ಶುಕ್ರವಾರ • ಮೇ 6, 2022



ನಗರದ ಶೇಷಾದ್ರಿಪುರಂ ಕಾಲೇಜಿನಲ್ಲಿ ಗುರುವಾರ ಆಯೋಜಿಸಿದ್ದ ವಿಚಾರ ಸಂಕಿರಣದಲ್ಲಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಅವರನ್ನು ಮೂಡೇ ಪಿ.ಕೃಷ್ಣ ಸನ್ಮಾನಿಸಿದರು. ಸಾಹಿತಿ ಡಾ.ಕಮಲಾ ಹಂಪನಾ, ಪ್ರೊ.ಸಿದ್ದಣ್ಣ ಉತ್ತಾಳ್, ಪ್ರೊ. ರಾಜಕುಮಾರ್ ಬಡಿಗೇರ, ಡಾ.ಅಣ್ಣಮ್ಮ ಹಾಗೂ ಇತರರು ಇದ್ದಾರೆ

ವಿಶ್ವವಾಣಿ

28th April 2022

ಸ್ವಸ್ಥ ಸಮಾಜ ನಿರ್ಮಾಣ ನಮ್ಮ ಕರ್ತವ್ಯ: ಪ್ರತಾಪ್

ಯಲಹಂಕ: ಭಾರತ ದೇಶವು ಅತಿ ಹೆಚ್ಚು ಯುವಶಕ್ತಿ ಹೊಂದಿರುವ ದೇಶವಾಗಿದ್ದು, ದೇಶದಲ್ಲಿ ಪ್ರತಿ 28 ಜನರಲ್ಲಿ ಒಬ್ಬರಿಗೆ ಕ್ಯಾನ್ಸರ್ ರೋಗ ಕಾಣಿಸಿಕೊಳ್ಳುತ್ತದೆ, ಈ ರೋಗವನ್ನು ತಡೆಗಟ್ಟುವ ದಿಸೆಯಲ್ಲಿ ಕ್ಯಾನ್ಸರ್ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ ಎಂದು ಕರ್ನಾಟಕ ರಾಜ್ಯ ಎನ್‌ಎಸ್‌ಎಸ್ ಅಧಿಕಾರಿ ಪ್ರತಾಪ್ ಲಿಂಗಯ್ಯ ತಿಳಿಸಿದರು.

ಕರ್ನಾಟಕ ರಾಜ್ಯ ಎನ್‌ಎಸ್‌ಎಸ್ ಕೋಶ, ಕ್ರೀಡಾ ಮತ್ತು ಯುವ ಸಬಲೀಕರಣ ಇಲಾಖೆ, ಏನೋಪ್ಲೋಯ ವಿಶ್ವವಿದ್ಯಾಲಯ, ಮಂಗಳೂರು, ಬೆಂಗಳೂರು ನಗರ ವಿಶ್ವವಿದ್ಯಾಲಯ, ಯಲಹಂಕ ಉಪನಗರದ ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜು ಇವರ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ರಾಜ್ಯಮಟ್ಟದ ವಿಚಾರಣ ಸಂಕಿರಣ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿ ದರು.

ದೇಶದಲ್ಲಿ ಕ್ಯಾನ್ಸರ್ ಪ್ರಕರಣಗಳು ಹೆಚ್ಚಾಗುತ್ತಿವೆ, ಯುವಜನತೆಗೆ ಕ್ಯಾನ್ಸರ್ ಕುರಿತು ಜಾಗೃತಿ ಮೂಡಿಸಿ ಮಾಹಿತಿ ನೀಡುವ ಕೆಲಸ ಮಾಡಬೇಕಾಗಿದೆ, ಆ ನಿಟ್ಟಿನಲ್ಲಿ ಒಂದು ಸಾವಿರ ಎನ್‌ಎಸ್‌ಎಸ್ ಸ್ವಯಂಸೇವಕರಿಗೆ ಕ್ಯಾನ್ಸರ್ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ದುಶ್ಚಟಗಳಿಂದ ದೂರವಿರಿ

ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿ ನಾಡೋಜ. ಡಾ. ವುಡೇ.ಪಿ ಕೃಷ್ಣ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ ಅನ್ನವೆಂದರೆ ಒಳ್ಳೆಯ ಪೌಷ್ಟಿಕ ಆಹಾರ, ಅಕ್ಷರ ಎಂದರೆ ಶಿಕ್ಷಣ, ಆರೋಗ್ಯ ಎಂದಾಗ ದುಶ್ಚಟಗಳಿಂದ ದೂರವಿದ್ದು ಒಳ್ಳೆಯ ಆಹಾರವನ್ನು ಸೇವಿಸಿ ಒಳ್ಳೆಯ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು, ಇವುಗಳಿಗೆ ಸೇವೆ ಮತ್ತು ತ್ಯಾಗ ಮುಖ್ಯವಾದದ್ದು, ಎನ್‌ಎಸ್‌ಎಸ್ ಸ್ವಯಂಸೇವಕರು ಸೇವೆ ಮನೋಭಾವವನ್ನು ಬೆಳೆಸಿಕೊಂಡು ನಾಯಕತ್ವ ಗುಣಗಳನ್ನು ಅಳವಡಿಸಿಕೊಂಡು ಸಮಾಜದಲ್ಲಿ ಉತ್ತಮ ನಾಗರಿಕರಾಗಿ ಎಂದು ಕರೆಕೊಟ್ಟರು.

ಕಾರ್ಯಕ್ರಮದಲ್ಲಿ ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಧರ್ಮದರ್ಶಿ ಡಬ್ಲ್ಯೂ. ಡಿ ಅಶೋಕ್, ಪ್ರಾಂಶುಪಾಲ ಡಾ. ಎಸ್.ಎನ್. ವೆಂಕಟೇಶ್, ಡಾ. ಅಶ್ವಿನಿ ಶೆಟ್ಟಿ ಇದ್ದರು.





ಗಾಂಧಿ ಸ್ಮಾರಕ ಟ್ರಸ್ಟ್ ಬಿಡುಗಡೆಗೊಳಿಸಿದ 'ಕನ್ನಡ ಅವಲೋಕನ' ಪುಸ್ತಕವನ್ನು ಗಾಂಧಿ ಸ್ಮಾರಕ ಟ್ರಸ್ಟ್ ಅಧ್ಯಕ್ಷ ಡಾ. ವೂಡೇ ಪಿ ಕೃಷ್ಣ ಬಿಡುಗಡೆಗೊಳಿಸಿದರು. ಈ ವೇಳೆ ಪುಸ್ತಕದ ಲೇಖಕ ಪ್ರೊ. ಎಸ್.ಜಿ ಸಿದ್ಧರಾಮಯ್ಯ, ಸಾಹಿತಿ ರುದ್ರಪ್ಪ ಹನಗವಾಡಿ, ವಸುಂಧರ ಭೂಪತಿ ಇನ್ನಿತರರು ಇದ್ದರು.

ಸಂಯುಕ್ತ ಕರ್ನಾಟಕ

18 ಏಪ್ರಿಲ್ 2022 ಸೋಮವಾರ

ಸರ್ಕಾರಿ ನೌಕರರ ಮಕ್ಕಳು ಸರ್ಕಾರಿ ಶಾಲೆಗಳಲ್ಲೇ ಓದಲಿ

- ಈ ಬಗ್ಗೆ ಸರ್ಕಾರ ಕಾನೂನು ಜಾರಿಗೆ ತರಲಿ
- ಅಧಿಕಾರಿಗಳ ಮಕ್ಕಳಿಗೆ ಕನ್ನಡದ ಅರಿವಿಲ್ಲ
- ಹಿಂದಿ ಹೇರಿಕೆಯ ಹುನ್ನಾರಕ್ಕೆ ಆತಂಕ

ಸಂ.ಕ.ಸಮಾಚಾರ, ಬೆಂಗಳೂರು

ಸರ್ಕಾರಿ ಶಾಲೆಗಳಲ್ಲಿ ಸರ್ಕಾರಿ ನೌಕರರ ಮಕ್ಕಳು ವ್ಯಾಸಂಗ ಮಾಡುವ ಬಗ್ಗೆ ಕಾನೂನು ತರಬೇಕು. ಈ ಬಗ್ಗೆ ಸರ್ಕಾರ ದಿಟ್ಟತನ ಪ್ರದರ್ಶಿಸಬೇಕು, ಎಂದು, ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷರಾದ ನಾಡೋಜ ಡಾ.ವೂಡೇ ಪಿ.ಕೃಷ್ಣ ಆಗ್ರಹಿಸಿದ್ದಾರೆ.

ಪ್ರೊ. ಎಸ್.ಜಿ.ಸಿದ್ದರಾಮಯ್ಯ ಅವರ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಅವಧಿಯ ಕಾರ್ಯ ಚಟುವಟಿಕೆಗಳ ಸಂಕಲನ ಕೃತಿ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದ ಅವರು, ಇಂತಹ ಕಾನೂನು ಜಾರಿಗೆ ತಂದಲ್ಲಿ ಸರ್ಕಾರಿ ಶಾಲೆಗಳು ಅಭಿವೃದ್ಧಿ ಆಗುತ್ತವೆ ಮತ್ತು ಕನ್ನಡತನವೂ ಹೆಚ್ಚಾಗುತ್ತದೆ. ಉನ್ನತಾಧಿಕಾರಿಗಳ ಮಕ್ಕಳಿಗೆ ಕನ್ನಡ ಮಾತನಾಡಲು ಬಾರದಿರುವುದು ದುರಂತ. ಕನ್ನಡನಾಡಿನ ಜನರ ತೆರಿಗೆ ಹಣದಲ್ಲಿ ಬದುಕುವವರಲ್ಲಿ ಕನ್ನಡತನ ಇಲ್ಲದಿರುವುದು ಸರಿಯಲ್ಲ ಎಂದು ವಿಷಾದ ವ್ಯಕ್ತಪಡಿಸಿದ್ದರು.

ಇನ್ನೂ ಮಾತೃಭಾಷೆಯಲ್ಲಿ ಶಿಕ್ಷಣಕ್ರಮ ಜಾರಿಗೆ ಬಂದಿಲ್ಲ. ಸರೋಜಿನಿ ಮಹಿಷಿ ವರದಿ ಅನುಷ್ಠಾನಕ್ಕೆ ಬಂದಿಲ್ಲ. ಹೀಗೆ ಕನ್ನಡ ಮತ್ತು ಕನ್ನಡನಾಡಿನ ಬೆಳವಣಿಗೆಗೆ ಪೂರಕವಾದ ವಾತಾವರಣ ನಿರ್ಮಾಣ ಮಾಡುವಂತಹ ಅನೇಕ ಯೋಜನೆಗಳು ಜಾರಿಯಾಗಿಲ್ಲ. ಕಾಲ ಕಾಲಕ್ಕೆ ಆದ್ಯತೆಗಳು ಬದಲಾಗುತ್ತವೆ. ಅದಕ್ಕನುಗುಣವಾಗಿ ಕನ್ನಡಪರ ಕಾನೂನುಗಳು ಜಾರಿ ಆಗಬೇಕು. ಇತ್ತೀಚಿನ ದಿನಗಳಲ್ಲಿ ಹಿಂದಿ ಹೇರಿಕೆ ಮಾಡುತ್ತಿರುವ ಹುನ್ನಾರಗಳು ನಡೆಯುತ್ತಿವೆ. ಭಾರತದ ಒಕ್ಕೂಟ ವ್ಯವಸ್ಥೆಗೆ ಇದು ಸರಿಯಲ್ಲ. ಒಕ್ಕೂಟ ವ್ಯವಸ್ಥೆ ಇಲ್ಲದಿದ್ದರೆ ಭಾರತದ ಉಳಿವು ಕಷ್ಟಕರ ಎಂದು ಅವರು ಆತಂಕ ವ್ಯಕ್ತಪಡಿಸಿದರು.




ಪ್ರೊ. ಎಸ್.ಜಿ.ಸಿದ್ದರಾಮಯ್ಯ ಅವರ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಅವಧಿಯ ಕಾರ್ಯಚಟುವಟಿಕೆಗಳ ಸಂಕಲನ ಕೃತಿಯನ್ನು ಹಿರಿಯ ಪತ್ರಕರ್ತ ರವೀಂದ್ರ ಭಟ್ಟ ಬಿಡುಗಡೆ ಮಾಡಿದರು. ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ನಾಡೋಜ ಡಾ.ವೂಡೇ ಪಿ.ಕೃಷ್ಣ, ಸಾಹಿತಿ ರುದ್ರಪ್ಪ ಹನಗವಾಡಿ, ಡಾ.ವೀರಶೆಟ್ಟಿ ಬಿ.ಗಾರಂಪಳ್ಳಿ ಮತ್ತಿತರರು ಇದ್ದರು.

ಕೃತಿ ಬಿಡುಗಡೆ ಮಾಡಿ ಮಾತನಾಡಿದ ಹಿರಿಯ ಪತ್ರಕರ್ತ ರವೀಂದ್ರ ಭಟ್ಟ ಅವರು, ದಶಕದಿಂದ ರಾಜ್ಯದಲ್ಲಿ ಎಲ್ಲರ ಭಾಷೆ ಬದಲಾಗಿದೆ. ಒಂದು ಭಾಷೆ, ಒಂದು ಚುನಾವಣೆ ಎಂಬ ಕೂಗು ಕೇಳಿ ಬರುತ್ತಿದೆ. ಇಂದಿನ ಕನ್ನಡದ ಪರಿಸ್ಥಿತಿಯನ್ನು ಗಮನಿಸಿದರೆ ಕನ್ನಡದ ಬಗ್ಗೆ ಇನ್ನೊಂದು ದೊಡ್ಡ ಹೋರಾಟ ನಡೆಯಬೇಕಾಗಿದೆ. ಹಿಂದಿ ಭಾಷೆ ಹೇರುವ ಪ್ರಯತ್ನ ನಡೆಯುತ್ತಿದೆ. ಇಂತಹ ಧೋರಣೆ ಸರಿಯಲ್ಲ ಎಂದು ಹೇಳಿದರು. ಕನ್ನಡ ಪ್ರಾಧ್ಯಾಪಕ ಡಾ.ಕೆ.ವೈ. ನಾರಾಯಣಸ್ವಾಮಿ ಮಾತನಾಡಿ, ಕನ್ನಡ ಭಾಷೆಯ ಅನುಷ್ಠಾನಕ್ಕೆ 350 ಆದೇಶಗಳನ್ನು ಮಾಡಲಾಗಿದೆ. ಯಾವುದು ಕೂಡ ನ್ಯಾಯವಾಗಿ ಅನುಷ್ಠಾನ ಆಗಿಲ್ಲ. ಇದು ಕನ್ನಡದ ಬಗ್ಗೆ ತಳೆದಿರುವ ನಿರ್ಲಕ್ಷ್ಯತನದ ಪರಮಾವಧಿ ಎಂದು ಟೀಕಿಸಿದರು. ಪುಸ್ತಕ ಕುರಿತು ಡಾ. ಕುಮಾರಸ್ವಾಮಿ ಬೆಜ್ಜಿಹಳ್ಳಿ ಮಾತನಾಡಿದರು. ಸಾಹಿತಿ ರುದ್ರಪ್ಪ ಹನಗವಾಡಿ, ಡಾ.ವೀರಶೆಟ್ಟಿ ಬಿ.ಗಾರಂಪಳ್ಳಿ, ಬಿಬಿಎಂಪಿ ಜಂಟಿ ಆಯುಕ್ತ ಡಾ.ಮುರುಳೀಧರ, ಮಾತನಾಡಿದರು. ಪುಸ್ತಕ ಪ್ರಕಟಿಸಿದ ಅಸ್ಮಿತೆ ಪ್ರಕಾಶನದ ಡಾ.ವಸುಂಧರೆ ಮತ್ತಿತರರು ಇದ್ದರು.

ನಂ. 1 ಕನ್ನಡ ದಿನಪತ್ರಿಕೆ

VIJAYAVANI :: BENGALURU
ಸೋಮವಾರ 18 ಏಪ್ರಿಲ್ 2022
18 APRIL 2022



ವಿಜಯವಾಣಿ ಚಿತ್ರ

ಅಸ್ಮಿತೆ ಪ್ರಕಾಶನ ಗಾಂಧಿ ಭವನದಲ್ಲಿ ಭಾನುವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ 'ಕನ್ನಡ ಅವಲೋಕನ (ಸಾಹಿತಿ ಪ್ರೊ. ಎಸ್.ಜಿ. ಸಿದ್ದರಾಮಯ್ಯ ಅವರ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅವಧಿಯ ಕಾರ್ಯಚಟುವಟಿಕೆಗಳ ಸಂಕಲನ') ಪುಸ್ತಕವನ್ನು ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ ಬಿಡುಗಡೆ ಮಾಡಿದರು. ಪ್ರಜಾವಾಣಿ ಸಂಪಾದಕ ರವೀಂದ್ರ ಭಟ್ಟ, ಪ್ರಾಧ್ಯಾಪಕರಾದ ಡಾ. ಕುಮಾರಸ್ವಾಮಿ ಬೆಜ್ಜಿಹಳ್ಳಿ, ಡಾ.ಕೆ.ವೈ.ನಾರಾಯಣಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

ಜನದನಿಯ ಸಾರಥಿ
ವಾರ್ತಾ ಭಾರತಿ

Apr 18, 2022

ಒಕ್ಕೂಟ ವ್ಯವಸ್ಥೆ ಉಳಿಸಿಕೊಂಡರೆ ಭಾರತ ಉಳಿಯುತ್ತದೆ: ಡಾ.ವೂಡೇ ಪಿ.ಕೃಷ್ಣ

ಬೆಂಗಳೂರು, ಎ.17: ಬಹುತ್ವವನ್ನು ಏಕಗೊಳಿಸಲಾಗುತ್ತಿರುವ ಈ ಕಾಲಘಟ್ಟದಲ್ಲಿ, ಒಕ್ಕೂಟ ವ್ಯವಸ್ಥೆಯನ್ನು ಉಳಿಸಿಕೊಳ್ಳಬೇಕಾಗಿದೆ. ಒಕ್ಕೂಟ ವ್ಯವಸ್ಥೆಯನ್ನು ಕಾಪಾಡಿಕೊಂಡಲ್ಲಿ ಮಾತ್ರ ಭಾರತ ಉಳಿಯುತ್ತದೆ ಎಂದು ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಡಾ.ವೂಡೇ ಪಿ.ಕೃಷ್ಣ ಅಭಿಪ್ರಾಯಪಟ್ಟಿದ್ದಾರೆ.

ರವಿವಾರ ನಗರದ ಗಾಂಧಿ ಭವನದಲ್ಲಿ ಅಸ್ಮಿತೆ ಪ್ರಕಾಶನದ ವತಿಯಿಂದ ಆಯೋಜಿಸಿದ್ದ ಕನ್ನಡ ಅವಲೋಕನ ಕೃತಿಯ ಲೋಕಾರ್ಪಣಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಒಂದು ದೇಶ, ಒಂದು ಭಾಷೆ ಎಂದು ಎಲ್ಲವನ್ನು ಏಕಗೊಳಿಸುವುದು ಒಕ್ಕೂಟ ವ್ಯವಸ್ಥೆಗೆ ಧಕ್ಕೆಯಾಗುತ್ತದೆ. ಒಕ್ಕೂಟ ವ್ಯವಸ್ಥೆಯನ್ನು ಭದ್ರಗೊಳಿಸಬೇಕಾಗಿದೆ ಎಂದು ತಿಳಿಸಿದರು.

ನೀವು ಅಲಂಕರಿಸು ಸ್ಥಾನಕ್ಕಿಂತ ನೀವು ದೊಡ್ಡ ವ್ಯಕ್ತಿಯಾಗಿರಬೇಕು ಎಂದು ತಿರುಕ್ಕುರಳ್‌ನಲ್ಲಿ ಉಲ್ಲೇಖಿಸಲಾಗಿದೆ. ಕವಿ ಕುವೆಂಪು ಮೈಸೂರು ವಿವಿಯ ಕುಲಪತಿಯಾದಾಗ ವಿವಿಯ ಹೆಚ್ಚು ಪ್ರಸಿದ್ಧಿ ಹೊಂದಿತು ಎಂಬುದು ಇದಕ್ಕೆ ನಿದರ್ಶನವಾಗಿದೆ ಎಂದು ವಿವರಿಸಿದರು. ಕೆಲಸ ಮಾಡುವುದು ದೊಡ್ಡದಲ್ಲ. ಆದರೆ ಮಾಡುವ ಕೆಲಸದಲ್ಲಿ ಪಾರದರ್ಶಕತೆ ಇರಬೇಕು. ಇದಲ್ಲದರ ದಾಖಲೀಕರಣ ಎಲ್ಲದಕ್ಕಿಂತ ಮುಖ್ಯವಾಗಿರುತ್ತದೆ. ಹಾಗಾಗಿ ನಾನು ಸಂಸ್ಥೆಗಳಲ್ಲಿದ್ದಾಗ ನಡೆದ ಕೆಲಸಗಳನ್ನು ಪುಸ್ತಕದಲ್ಲಿ ಪ್ರಕಟಿಸಬೇಕು ಎಂಬ ಆಸೆ ಎಂದು ತಿಳಿಸಿದರು. ಬಿಬಿಎಂಪಿಯ ಜಂಟಿ ಆಯುಕ್ತ ಡಾ.ಕೆ.ಮುರಳೀಧರ ಮಾತನಾಡಿ, ಕೆಲ ಉತ್ಪನ್ನಗಳು ವಿದೇಶಕ್ಕೆ ಹೋಗುತ್ತವೆ ಎಂಬ ಕಾರಣಕ್ಕಾಗಿ ಉತ್ಪನ್ನಗಳ ಮೇಲೆ ಕನ್ನಡವನ್ನು ಬಳಸುವುದಿಲ್ಲ ಎಂದು ಮಾಲಕರು ತಿಳಿಸುತ್ತಾರೆ. ವಿದೇಶದಲ್ಲಿರುವವರಿಗೂ ಕನ್ನಡದ ಬಗ್ಗೆ ತಿಳಿಯುವ ನಿಟ್ಟಿನಲ್ಲಿ ಕನ್ನಡ ಪದಗಳನ್ನು ಉತ್ಪನ್ನಗಳ ಮೇಲೆ ಬಳಸಬೇಕು ಎಂದು ಮನವಿ ಮಾಡಿದರು.

ಉದ್ಯೋಗದಲ್ಲಿ ಕನ್ನಡಿಗರಿಗೆ ಅವಕಾಶವನ್ನು ನೀಡುವ ನಿಟ್ಟಿನಲ್ಲಿ ಸರೋಜಿನಿ ಮಹಿಷಿ ಅವರ ವರದಿಯನ್ನು ಅಳವಡಿಸಿಕೊಳ್ಳಬೇಕು. ಖಾಸಗಿ ಕ್ಷೇತ್ರದ ಉದ್ಯೋಗದಲ್ಲಿ ಕನ್ನಡಿಗರಿಗೆ ಮೀಸಲಾತಿಯನ್ನು ನೀಡುವ ಕುರಿತು ಸರಕಾರದಿಂದ ಆದೇಶ ಬಂದರೆ ಸಾಲದು, ಅದು ಕಾಯ್ದೆಯಾಗಿ ರೂಪುಗೊಳ್ಳಬೇಕು ಎಂದು ಅವರು ಒತ್ತಾಯಿಸಿದರು.

ಸಾಹಿತಿ ರುದ್ರಪ್ಪ ಹನಗವಾಡಿ, ಡಾ.ಕೆ. ವೈ.ನಾರಾಯಣಸ್ವಾಮಿ ಮತ್ತಿತರರಿದ್ದರು.

ಕನ್ನಡಪ್ರಭ

ಸೋಮವಾರ 18.4.2022 ಬೆಂಗಳೂರು

ಮಾತೃ ಭಾಷೆ ಎಷ್ಟು ಮಾಡಿದರೂ ಕೊನೆ ಎಂಬುದಿಲ್ಲ | 'ಕನ್ನಡ ಅವಲೋಕನ' ಬಿಡುಗಡೆ ಕಾರ್ಯಕ್ರಮದಲ್ಲಿ ಅಭಿಮತ

ಕನ್ನಡದ ಕೆಲಸವೆಂದ್ರೆ ಹರಿವ ನದಿಯಂತೆ: ವೂಡೇ


• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕನ್ನಡದ ಕೆಲಸ ಎಂದರೆ ಹರಿಯುವ ನದಿ ಇದ್ದಂತೆ, ಎಷ್ಟು ಕೆಲಸ ಮಾಡಿದರೂ ಕೊನೆ ಎಂಬುದಿಲ್ಲ. ಕನ್ನಡದ ಕೆಲಸ ಮಾಡುವಾಗ ಎದುರಾಗುವ ಸವಾಲು, ಕೆಲಸದ ಸ್ವರೂಪ ಮತ್ತು ಆದ್ಯತೆ ಬದಲಾಗುತ್ತಿರುತ್ತದೆ ಎಂದು 'ಗಾಂಧಿ ಸ್ಮಾರಕ ನಿಧಿ' ಅಧ್ಯಕ್ಷ ಡಾ: ವೂಡೇ ಪಿ. ಕೃಷ್ಣ ಅಭಿಪ್ರಾಯಪಟ್ಟರು.

ಗಾಂಧಿ ಭವನದಲ್ಲಿ 'ಅಸ್ಮಿತೆ ಪ್ರಕಾಶನ' ಪ್ರಕಟಿಸಿರುವ ಲಕ್ಷ್ಮಣ ಕೊಡಸೆ ಮತ್ತು ಡಾ. ವೀರಶೆಟ್ಟಿ ಬಿ. ಗಾರಂಪಳ್ಳಿ ಸಂಪಾದಿಸಿರುವ ಪ್ರೊ. ಎಸ್.ಜಿ. ಸಿದ್ದರಾಮಯ್ಯ ಅವರು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದ ಅವಧಿಯ ಕಾರ್ಯಚಟುವಟಿಕೆಗಳ ಸಂಕಲನ 'ಕನ್ನಡ ಅವಲೋಕನ' ಕೃತಿ ಬಿಡುಗಡೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಪ್ರೊ. ಎಸ್.ಜಿ.ಸಿದ್ದರಾಮಯ್ಯ ಅವರು ಪ್ರಾಧಿಕಾರದ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಉತ್ತರದಾಯಿತ್ವದೊಂದಿಗೆ ಪಾರದರ್ಶಕ ಮತ್ತು ಶುದ್ಧ ಹಸ್ತತೆಯಿಂದ ಕೆಲಸ ಮಾಡಿದ್ದಾರೆ. ಕನ್ನಡದ ಕೆಲಸಗಳಿಗೆ ಪ್ರಾಯೋಗಿಕ ಸ್ಪರ್ಶ ನೀಡಿ ಕನ್ನಡದ ಅನುಷ್ಠಾನವನ್ನು ಕಟ್ಟುನಿಟ್ಟುಗೊಳಿಸಿದ್ದಾರೆ. ಕೃತಿಯ ಮೂಲಕ ಕನ್ನಡದ ಮುಂದಿನ ಕೆಲಸಗಳಿಗೆ ಮಾರ್ಗಸೂಚಿ ನೀಡಿದ್ದಾರೆ ಎಂದು ಶ್ಲಾಘಿಸಿದರು.

ಮಹಾರಾಣಿ ಕ್ಲಸ್ಟರ್ ವಿವಿಯ ಕನ್ನಡ ಪ್ರಾಧ್ಯಾಪಕ ಡಾ. ಕೆ. ವೈ.ನಾರಾಯಣಸ್ವಾಮಿ ಮಾತನಾಡಿ, ಪ್ರಸ್ತುತ ಪದವಿ ಶಿಕ್ಷಣದಲ್ಲಿ ಕೌಶಲ್ಯಕ್ಕೆ ಮಾತ್ರ ಒತ್ತು ನೀಡುತ್ತಿದ್ದು ಭಾಷಾ ಕಲಿಕೆಗೆ ಭಾರಿ ಹಿನ್ನಡೆಯಾಗಿದೆ. ಭಾಷೆಯ ಅಧ್ಯಯನದ ಮೂಲಕ ನಾವು ಸರಿ ತಪ್ಪು, ನ್ಯಾಯ ಅನ್ಯಾಯಗಳ ವಿವೇಚನೆಯನ್ನು ನಡೆಸುತ್ತೇವೆ. ಆದರೆ, ಇಂದು ಭಾಷೆಯನ್ನು ಕಲಿಯುವವರೇ ಕಡಿಮೆಯಾಗಿದ್ದು ಸರಿ ತಪ್ಪುಗಳನ್ನು ವಿಮರ್ಶಿಸುವ ಶಕ್ತಿ ಕಳೆದುಕೊಳ್ಳುತ್ತಿದ್ದೇವೆ. ಕನ್ನಡದ ಮೂಲಕ ಜಗತ್ತನ್ನು ತಿಳಿಯುವ ಪ್ರಯತ್ನ ಕೊನೆಯಾಗುತ್ತಿದೆ. ಇಂತಹ ಕಾಲಘಟ್ಟದಲ್ಲಿ ಎಸ್.ಜಿ. ಸಿದ್ದರಾಮಯ್ಯ ಅವರು ಕನ್ನಡದ ಬಗ್ಗೆ ಕಾಳಜಿ ಮತ್ತು ಬದ್ಧತೆಯಿಂದ ಶ್ರಮಿಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.



ಗಾಂಧಿ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಲಕ್ಷ್ಮಣ ಕೊಡಸೆ ಮತ್ತು ಡಾ. ವೀರಶೆಟ್ಟಿ ಬಿ.ಗಾರಂಪಳ್ಳಿ ಸಂಪಾದಿಸಿರುವ ಪ್ರೊ. ಎಸ್.ಜಿ.ಸಿದ್ದರಾಮಯ್ಯ ಅವರ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅವಧಿಯ ಕಾರ್ಯಚಟುವಟಿಕೆಗಳ ಸಂಕಲನ 'ಕನ್ನಡ ಅವಲೋಕನ' ಕೃತಿಯನ್ನು ಲೋಕಾರ್ಪಣೆ ಮಾಡಲಾಯಿತು.

■ ಕನ್ನಡದ ಕೆಲಸದ ಸ್ವರೂಪ, ಆದ್ಯತೆ ಬದಲಾಗುತ್ತಿರುತ್ತದೆ: ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ

ಪುಸ್ತಕ ಬಿಡುಗಡೆ ಮಾಡಿದ ಪ್ರಜಾವಾಣಿ ಪತ್ರಿಕೆಯ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಮಾತನಾಡಿ, ಏಕ ದೇಶ, ಏಕ ಭಾಷೆ, ಏಕ ಕಾರ್ಡ್, ಏಕ ಚುನಾವಣೆ ಎಂಬ ಅಪಾಯಕಾರಿ ಪ್ರವೃತ್ತಿ ಕಂಡು ಬರುತ್ತಿರುವ ಹೊತ್ತಿನಲ್ಲಿ ಮತ್ತು ದೇಶದ ರಾಜ್ಯಗಳ ನಡುವೆ ಹಿಂದಿ ಭಾಷೆಯಲ್ಲಿ ಸಂವಹನ ನಡೆಯಬೇಕು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರೇ ಹೇಳಿರುವ ಸಂದರ್ಭದಲ್ಲಿ ಕನ್ನಡದ ಬಗ್ಗೆ ಇನ್ನೊಂದು ದೊಡ್ಡ ಮಟ್ಟದ ಹೋರಾಟ ನಡೆಯುವ ಅಗತ್ಯವಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಲೊಯೆಲ. ಪದವಿ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಡಾ: ಕುಮಾರಸ್ವಾಮಿ ಬೆಜ್ಜಿಹಳ್ಳಿ, ಬಿಬಿಎಂಪಿ ಜಂಟಿ ಆಯುಕ್ತ ಡಾ. ಕೆ.ಮುರಳೀಧರ, ನಿವೃತ್ತ ಕೆಎಎಸ್ ಅಧಿಕಾರಿ ರುದ್ರಪ್ಪ ಹನಗವಾಡಿ, ವಸುಂಧರಾ ಭೂಪತಿ, ಆರ್. ಪೂರ್ಣಿಮಾ, ಇಂದಿರಾ ಕೃಷ್ಣಪ್ಪ ಮುಂತಾದವರು ಉಪಸ್ಥಿತರಿದ್ದರು.

ಪ್ರಜಾವಾಣಿ

ಸೋಮವಾರ • ಏಪ್ರಿಲ್ 18, 2022

'ಕಾದಂಬರಿ ಓದಿದ ಅನುಭವ ನೀಡುವ ಕೃತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡದ ಸೃಜನಶೀಲ ಹಾಗೂ ಪರಿಶುದ್ಧ ಮನಸ್ಸೊಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಚುಕ್ಕಾಣಿ ಹಿಡಿದರೆ ಹೇಗೆಲ್ಲಾ ಕೆಲಸ ಮಾಡಬಹುದು ಎನ್ನುವುದಕ್ಕೆ ಪ್ರೊ. ಎಸ್.ಜಿ.ಸಿದ್ದರಾಮಯ್ಯ ಸಾಕ್ಷಿ. ಅವರ ಅವಧಿಯಲ್ಲಿ ಆಗಿರುವ ಕೆಲಸಗಳ ಕುರಿತ ಮಾಹಿತಿ ಒಳಗೊಂಡಿರುವ ಈ ಪುಸ್ತಕ ಶ್ರೇಷ್ಠ ಕಾದಂಬರಿಯೊಂದನ್ನು ಓದಿದ ಅನುಭವ ನೀಡುತ್ತದೆ' ಎಂದು ಪ್ರೊ.ಕುಮಾರಸ್ವಾಮಿ ಬೆಜ್ಜಿಹಳ್ಳಿ ಅಭಿಪ್ರಾಯಪಟ್ಟರು.

ಪ್ರೊ. ಎಸ್. ಜಿ. ಸಿದ್ದರಾಮಯ್ಯನವರು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಮಾಡಿರುವ ಕೆಲಸಗಳ ಕುರಿತು ಪತ್ರಕರ್ತ ಲಕ್ಷ್ಮಣ ಕೊಡಸೆ ಹಾಗೂ ವೀರಶೆಟ್ಟಿ ಬಿ.ಗಾರಂಪಳ್ಳಿ ಸಂಪಾದಿಸಿರುವ 'ಕನ್ನಡ ಅವಲೋಕನ' ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಭಾನುವಾರ ಮಾತನಾಡಿದರು.

'ಪುಸ್ತಕ ಒಳಗೊಂಡಿರುವ ವಿಷಯ ಹಾಗೂ ಸಂಪಾದನೆ ಮಾಡಿರುವ ರೀತಿಯ ಆಧಾರದಲ್ಲಿ ಇದನ್ನು ಸೃಜನಶೀಲ ಕೃತಿ ಎಂದು ಕರೆಯಬಹುದು. ನಾಡು, ನುಡಿ ಮತ್ತು ನಾಡವರು ಸಾಗಬೇಕಾದ ದಾರಿಗಳ ಸ್ಪಷ್ಟತೆಯನ್ನೂ ಇದು ಒಳಗೊಂಡಿದೆ. ಮುಂದೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗುವವರಿಗೆ ಇದು ಕೈಪಿಡಿಯಾಗಿದೆ. ಕನ್ನಡದ ಪ್ರಜ್ಞೆಯನ್ನು ತಾತ್ವಿಕ ನೆಲೆಗಟ್ಟಿನಲ್ಲಿ ರೂಪಿಸುವ ಧಾಟಿಯಲ್ಲಿ ಕೃತಿಯ ನಿರೂಪಣೆ ಇದೆ. ಅದು ಪುಸ್ತಕದ ಹೆಚ್ಚುಗಾರಿಕೆ' ಎಂದರು.


'ಸೃಜನಶೀಲ (ಎಸ್.ಜಿ.ಸಿದ್ದರಾಮಯ್ಯ) ಹಾಗೂ ಸಮಾಜವಾದಿ (ಹಿಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ) ಮನಸ್ಸುಗಳ ಮುಂದಾಳತ್ವದಲ್ಲಿ ನಡೆದಿರುವ ಕೆಲಸಗಳ ದಾಖಲೀಕರಣ ಈ ಪುಸ್ತಕದಲ್ಲಿ ಆಗಿದೆ. ಶಿಕ್ಷಣ, ಆಡಳಿತ ಹಾಗೂ ತಂತ್ರಜ್ಞಾನದಲ್ಲಿ ಕನ್ನಡದ ಅನುಷ್ಠಾನ, ಕನ್ನಡಿಗರಿಗೆ ಉದ್ಯೋಗ ಕೊಡುವಂತಹ ಭಾಷೆಯಾಗಿ ಕನ್ನಡವನ್ನು ಹೇಗೆ ರೂಪಿಸಬೇಕು ಎಂಬುದರ ಕುರಿತ ಮಾರ್ಗದರ್ಶಿ ಸೂತ್ರಗಳು ಇದರಲ್ಲಿವೆ' ಎಂದು ಮಾಹಿತಿ ನೀಡಿದರು.

ಲೇಖಕ ರುದ್ರಪ್ಪ ಹನಗವಾಡಿ, 'ಎಸ್.ಜಿ.ಸಿದ್ದರಾಮಯ್ಯನವರು ತಮ್ಮ ಕವಿ ಮನಸ್ಸಿನ ಮೂಲಕ ಮೆಟ್ರೊ, ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಅಧಿಕಾರಿಗಳ ಮನ ಒಲಿಸಿ ಅಲ್ಲಿ ಕನ್ನಡ ಭಾಷೆ ಬಳಸುವಂತೆ ಮಾಡಿದ್ದರು. ಕನ್ನಡ ಅನುಷ್ಠಾನಕ್ಕೆ ತಾತ್ಸಾರ ತೋರಿದ 350 ಅಧಿಕಾರಿಗಳಿಗೆ ನೋಟಿಸ್ ನೀಡಿದ್ದು ಅವರ ಕಾರ್ಯದಕ್ಷತೆಗೆ ಸಾಕ್ಷಿ' ಎಂದರು.

ನಾಟಕಕಾರ ಪ್ರೊ.ಕೆ.ವೈ. ನಾರಾಯಣಸ್ವಾಮಿ, 'ಬೆಂಗಳೂರಿನಲ್ಲಿ 250ಕ್ಕೂ ಹೆಚ್ಚು ವಿದ್ಯಾ ಸಂಸ್ಥೆಗಳಿವೆ. ಆದರೆ, ಕನ್ನಡವನ್ನು ಐಚ್ಛಿಕ ವಿಷಯವನ್ನಾಗಿ ಆಯ್ಕೆಮಾಡಿಕೊಂಡಿರುವ ವಿದ್ಯಾರ್ಥಿಗಳ ಸಂಖ್ಯೆ 200ಕ್ಕಿಂತಲೂ ಕಡಿಮೆ. ಕನ್ನಡದ ಮೂಲಕ ಲೋಕ ಅರಿಯುವ ಅವಕಾಶವನ್ನು ವಿದ್ಯಾರ್ಥಿಗಳಿಗೆ ನಿರಾಕರಿಸಲಾಗುತ್ತಿದೆ' ಎಂದು ಬೇಸರ ವ್ಯಕ್ತಪಡಿಸಿದರು.

ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ.ಕೃಷ್ಣ, 'ರಾಜ್ಯಗಳ ಒಕ್ಕೂಟ ವ್ಯವಸ್ಥೆಯನ್ನು ಕಾಪಾಡಿದರೆ ಮಾತ್ರ ದೇಶ ಉಳಿಯುತ್ತದೆ. ಇಲ್ಲದಿದ್ದರೆ ಆಂತರಿಕ ಯುದ್ಧ ಶುರುವಾಗುವ ಅಪಾಯವಿದೆ' ಎಂದು ಎಚ್ಚರಿಸಿದರು.

'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಪುಸ್ತಕ ಬಿಡುಗಡೆ ಮಾಡಿದರು.



ವೂಡೇ ಪಿ.ಕೃಷ್ಣ (ಎಡದಿಂದ ನಾಲ್ಕನೆಯವರು) ಹಾಗೂ ಪ್ರೊ.ಎಸ್.ಜಿ.ಸಿದ್ದರಾಮಯ್ಯ ಪುಸ್ತಕದ ಕುರಿತು ಸಮಾಲೋಚನೆ ನಡೆಸಿದರು. (ಎಡದಿಂದ) ರುದ್ರಪ್ಪ ಹನಗವಾಡಿ, ಅಸ್ಮಿತೆ ಪ್ರಕಾಶನದ ಆರ್.ಪೂರ್ಣಿಮಾ, ಲೇಖಕಿ ವಸುಂಧರಾ ಭೂಪತಿ, ವೀರಶೆಟ್ಟಿ ಬಿ.ಗಾರಂಪಳ್ಳಿ ಹಾಗೂ ಬಿಬಿಎಂಪಿಯ ಜಂಟಿ ಆಯುಕ್ತ ಕೆ.ಮುರಳೀಧರ ಇದ್ದಾರೆ– ಪ್ರಜಾವಾಣಿ ಚಿತ್ರ

ಪುಸ್ತಕ ಪರಿಚಯ

ಪುಸ್ತಕದ ಹೆಸರು: ಕನ್ನಡ ಅವಲೋಕನ
ಸಂಪಾದನೆ: ಲಕ್ಷ್ಮಣ ಕೊಡಸೆ ಮತ್ತು ವೀರಶೆಟ್ಟಿ ಬಿ.ಗಾರಂಪಳ್ಳಿ
ಪುಟಗಳ ಸಂಖ್ಯೆ: 438
ದರ: ₹400
ಪ್ರಕಾಶಕರು: ಅಸ್ಮಿತೆ ಪ್ರಕಾಶನ

ಉದಯವಾಣಿ ಬೆಂಗಳೂರು

ಸೋಮವಾರ, ಏಪ್ರಿಲ್ 18, 2022

ಒಂದು ಭಾಷೆ-ಒಂದು ದೇಶ ಪ್ರಜಾಸತ್ತಾತ್ಮಕವಲ್ಲ

ಬೆಂಗಳೂರು: ಕೇಂದ್ರ ಸರ್ಕಾರವು ಒಂದು ಭಾಷೆ-ಒಂದು ದೇಶ, ಒಂದು ಚುನಾವಣೆ-ಒಂದು ದೇಶ ಮಾಡಲು ಹೊರಟಿರುವುದು ಪ್ರಜಾಸತ್ತಾತ್ಮಕ ಸಂವಿಧಾನವಲ್ಲ ಎಂದು ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಡಾ. ವೂಡೇ ಪಿ.ಕೃಷ್ಣ ಬೇಸರ ವ್ಯಕ್ತಪಡಿಸಿದರು.


ಅಸ್ಮಿತೆ ಪ್ರಕಾಶನ ಮತ್ತು ಬಯಲು ಬಳಗ ವತಿಯಿಂದ ಭಾನುವಾರ ನಗರದ ಗಾಂಧಿಭವನದಲ್ಲಿ ಪ್ರೊ.ಎಸ್.ಜಿ. ಸಿದ್ದರಾಮಯ್ಯ ಅವರ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅವಧಿಯ ಕಾರ್ಯಚಟುವಟಿಕೆಗಳ ಸಂಕಲನವಾದ ಕನ್ನಡ ಅವಲೋಕನ ಕೃತಿಯನ್ನು ಪ್ರಜಾವಾಣಿ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಬಿಡುಗಡೆಗೊಳಿಸಿದರು.

ಗಡಿ ಪ್ರದೇಶಗಳಲ್ಲಿನ ಕನ್ನಡ ಶಾಲೆಗಳ ಸಮಸ್ಯೆಗಳ ಕುರಿತು ಎಸ್‌ಜಿಎಸ್ ಅವರು ಕೈಗೊಂಡ ಪರಿಹಾರ ಕ್ರಮಗಳನ್ನು ನಾವು ಈ ಪುಸ್ತಕದಲ್ಲಿ ಕಾಣಬಹುದು. ಜತೆಗೆ ಪ್ರತಿ ಸರ್ಕಾರಿ ವಲಯಗಳಲ್ಲಿ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ, ಮೆಟ್ರೋ, ವಿಧಾನಸೌಧ, ಕೋರ್ಟ್ ಮುಂತಾದ ಸ್ಥಳಗಳಲ್ಲಿ ಕನ್ನಡ ಭಾಷೆ, ಕನ್ನಡ ಕವನಗಳನ್ನು ಕೇಳುವಂತೆ ಮಾಡಿದ ಹೆಮ್ಮೆ ಎಸ್.ಜಿ. ಸಿದ್ದರಾಮಯ್ಯ ಅವರಿಗೆ ಸಲ್ಲುತ್ತದೆ. ಹಾಗೂ ಆಂಧ್ರ ಪ್ರದೇಶದ ಗಡಿ ಭಾಗಗಳಲ್ಲಿರುವ 42 ಕನ್ನಡ ಶಾಲೆಗಳನ್ನು ಕಾಪಾಡಿ, ನೂರಾರು ಮಕ್ಕಳು ಕನ್ನಡ ಕಲಿಯಲು ಅವಕಾಶ ಕಲ್ಪಿಸಿಕೊಟ್ಟಿದ್ದಾರೆ ಎಂದು ತಿಳಿಸಿದರು.

ನಿವೃತ್ತ ಕೆಎಎಸ್ ಅಧಿಕಾರಿ ರುದ್ರಪ್ಪ ಹನಗವಾಡಿ, ಲೊಯೋಲ ಪದವಿ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಡಾ. ಕುಮಾರಸ್ವಾಮಿ ಬೆಜ್ಜಿಹಳ್ಳಿ, ಮಹಾರಾಣಿ ಕ್ಲಸ್ಟರ್ ವಿವಿಯ ಕನ್ನಡ ಪ್ರಾಧ್ಯಾಪಕ ಡಾ. ಕೆ.ವೈ. ನಾರಾಯಣಸ್ವಾಮಿ, ಬಿಬಿಎಂಪಿ ಜಂಟಿ ಆಯುಕ್ತ ಡಾ. ಕೆ.ಮುರಳೀಧರ, ಕೃತಿಯ ಸಂಪಾದಕ ಡಾ. ವೀರಶೆಟ್ಟಿ ಬಿ.ಗಾರಂಪಳ್ಳಿ, ಹಿರಿಯ ಪತ್ರಕರ್ತೆ ಡಾ. ಆರ್. ಪೂರ್ಣಿಮಾ, ವಸುಂಧರ ಭೂಪತಿ ಇದ್ದರು.



ಪ್ರೊ. ಎಸ್.ಜಿ. ಸಿದ್ದರಾಮಯ್ಯರ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅವಧಿಯ ಕಾರ್ಯಚಟುವಟಿಕೆಗಳ ಸಂಕಲನವಾದ ಕನ್ನಡ ಅವಲೋಕನ ಕೃತಿಯನ್ನು ರವೀಂದ್ರ ಭಟ್ಟ ಬಿಡುಗಡೆಗೊಳಿಸಿದರು.



ಅಸ್ಮಿತೆ ಪ್ರಕಾಶನ ನಗರದ ಗಾಂಧಿ ಭವನದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಪ್ರೊ.ಎಸ್.ಜಿ.ಸಿದ್ದರಾಮಯ್ಯ ಅವರ 'ಕನ್ನಡ ಅವಲೋಕನ' ಕೃತಿಯನ್ನು ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಡಾ.ವೂಡೇ ಪಿ.ಕೃಷ್ಣ ಬಿಡುಗಡೆ ಮಾಡಿದರು. ಪತ್ರಕರ್ತ ರವೀಂದ್ರಭಟ್ಟ, ಡಾ.ಕುಮಾರಸ್ವಾಮಿ ಬೆಜ್ಜಿಹಳ್ಳಿ, ಸಾಹಿತಿ ರುದ್ರಪ್ಪ ಹನಗವಾಡಿ, ಡಾ.ಕೆ.ವೈ.ನಾರಾಯಣಸ್ವಾಮಿ ಮತ್ತಿತರರು ಹಾಜರಿದ್ದರು.

ಈ ಸಂಜೆ Sun, 17 April 2022
https://epaper.eesanje.com/c/67497221

ಈ ಸಂಜೆ

Wed, 13 April 2022



ಶೇಷಾದ್ರಿಪುರಂ ಕಾನೂನು ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಎನ್‌ಎಸ್‌ಎಸ್ ಚಟುವಟಿಕೆಗಳ ಉದ್ಘಾಟನೆ ಹಾಗೂ ಗಾಂಧೀಜಿ ಜೀವನ ಸಂದೇಶ ಕುರಿತ ಉಪನ್ಯಾಸ ಕಾರ್ಯಕ್ರಮವನ್ನು ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ವೂಡೇ ಪಿ.ಕೃಷ್ಣ ಉದ್ಘಾಟಿಸಿದರು. ನ್ಯಾಯವಾದಿ ಕೆ.ಕೃಷ್ಣಸ್ವಾಮಿ, ಪ್ರಾಂಶುಪಾಲೆ ಡಾ. ಶ್ವೇತಾ, ರಾಮಲಿಂಗೇಶ್ವರ ಮತ್ತಿತರರು ಹಾಜರಿದ್ದರು.

ವಿಜಯ ಕರ್ನಾಟಕ

ಬುಧವಾರ, 13 ಏಪ್ರಿಲ್ 2022


ಸ್ವಾಭಿಮಾನಿ ಪುಸ್ತಕ ಪ್ರಶಸ್ತಿ ಪ್ರದಾನ

ಬೆಂಗಳೂರು: ಜಾತಿ, ಮತಗಳು ಒಳಉಡುಪುಗಳಂತಿರಬೇಕು. ಆದರೆ, ಇದನ್ನು ಜನ ಮರೆತು ವರ್ತಿಸುತ್ತಿದ್ದಾರೆ. ಹೀಗಾಗಿಯೇ ಸಮಾಜದಲ್ಲಿ ಶಾಂತಿ ಕದಡುವ ಕೆಲಸ ಆಗುತ್ತಿದ್ದೆ ಎಂದು ಡಾ.ವೂಡೇ ಪಿ.ಕೃಷ್ಣ ಕಳವಳ ವ್ಯಕ್ತಪಡಿಸಿದರು.

ಶೇಷಾದ್ರಿಪುರಂ ಕಾಲೇಜಿನ ಸಭಾಂಗಣದಲ್ಲಿ ಸ್ವಾಭಿಮಾನಿ ಕರ್ನಾಟಕ ವೇದಿಕೆ ಆಯೋಜಿಸಿದ್ದ 'ಸ್ವಾಭಿಮಾನಿ ಪುಸ್ತಕ ಪ್ರಶಸ್ತಿ'ಯನ್ನು ಪ್ರದಾನ ಮಾಡಿ ಅವರು ಮಾತನಾಡಿದರು.

ಪ್ರಶಸ್ತಿ ಆಯ್ಕೆ ಸಮಿತಿಯ ಸದಸ್ಯ ಮತ್ತು ವಿಮರ್ಶಕ ಡಾ. ಎಚ್.ದಂಡಪ್ಪ ಮಾತನಾಡಿದರು.

ಪೂರ್ಣಿಮಾ ಮಾಳಿಗೆ ಮನಿ, ಡಿ.ನಳಿನ, ಡಾ.ಸತೀಶ್ ಕುಮಾರ್ ಎಸ್ ಹೊಸಮನಿ, ಡಾ.ಎಚ್.ಎಸ್.ಅನುಪಮಾ, ದೇವು ಮಾಕೊಂಡ, ಆಕರ್ಷ್ ರಮೇಶ್ ಕಮಲ ಅವರು ಪ್ರಶಸ್ತಿ ಸ್ವೀಕರಿಸಿದರು.



ಸ್ವಾಭಿಮಾನಿ ಪುಸ್ತಕ ಪ್ರಶಸ್ತಿಯನ್ನು ಡಾ. ವೂಡೇ ಪಿ. ಕೃಷ್ಣ ಪ್ರದಾನ ಮಾಡಿದರು. ವೇದಿಕೆಯ ಅಧ್ಯಕ್ಷ ದ್ವಾರನಕುಂಟೆ ಪಾತಣ್ಣ, ವಿಮರ್ಶಕ ಡಾ. ಎಚ್ ದಂಡಪ್ಪ ಉಪಸ್ಥಿತರಿದ್ದರು.

ವೇದಿಕೆಯ ಅಧ್ಯಕ್ಷ ದ್ವಾರನಕುಂಟೆ ಪಾತಣ್ಣ, ಹಿರಿಯ ಕವಿಗಳಾದ ಡಾ.ಎಸ್.ಆರ್.ವಿಜಯಶಂಕರ, ಜಾಣಗೆರೆ ವೆಂಕಟರಾಮಯ್ಯ, ಡಾ. ಎಚ್.ಎಸ್.ಎಂ.ಪ್ರಕಾಶ್ ಉಪಸ್ಥಿತರಿದ್ದರು.

4
ಉದಯವಾಣಿ ಬೆಂಗಳೂರು
ಬುಧವಾರ, ಏಪ್ರಿಲ್ 13, 2022

ಸ್ವತಂತ್ರ ಕಾಲೇಜಿನಲ್ಲಿ ಉತ್ತಮ ಶೈಕ್ಷಣಿಕ ವಾತಾವರಣ



ಕೆಂಗೇರಿ ಉಪನಗರದ ಶೇಷಾದ್ರಿಪುರಂ ಸ್ವತಂತ್ರ ಪದವಿ ಪೂರ್ವ ಕಾಲೇಜಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ತುಮಕೂರಿನ ರಾಮಕೃಷ್ಣ ವಿವೇಕಾನಂದ ಆಶ್ರಮದ ಅಧ್ಯಕ್ಷರಾದ ಡಾ.ವೀರೇಶಾನಂದ ಸರಸ್ವತಿ ಶ್ರೀಗಳನ್ನು ಸನ್ಮಾನಿಸಲಾಯಿತು.

ಕೆಂಗೇರಿ: ಕಾಲೇಜಿನಲ್ಲಿ ವಿವಿಧ ಪಠ್ಯೇತರ ಕಾರ್ಯಕ್ರಮಗಳನ್ನು ರೂಪಿಸುವ ಮೂಲಕ ವಿದ್ಯಾರ್ಥಿಗಳ ಉತ್ತಮ ಭವಿಷ್ಯ ಕಟ್ಟಿಕೊಳ್ಳಲು ಪೂರಕ ವಾತಾವರಣ ನಿರ್ಮಿಸಲಾಗುವುದು ಎಂದು ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಕಾರ್ಯದರ್ಶಿ ನಾಡೋಜ ವೂಡೇ ಪಿ.ಕೃಷ್ಣ ಹೇಳಿದರು.

ಯಶವಂತಪುರ ಕ್ಷೇತ್ರದ ಕೆಂಗೇರಿ ಉಪನಗರದ ಶೇಷಾದ್ರಿಪುರಂ ಸ್ವತಂತ್ರ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ 2021-22 ಸಾಲಿನ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ವಿವಿಧ ಕ್ರೀಡಾ ವಿಜೇತರಿಗೆ ಬಹುಮಾನ ವಿತರಣೆ ಹಾಗೂ ಬೀಳ್ಕೊಡುಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ವಿದ್ಯಾರ್ಥಿಗಳ ಜೀವನದಲ್ಲಿ ಎಸ್ಎಸ್ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ಅತ್ಯಂತ ಮಹತ್ವವಾದ ಘಟ್ಟವಾಗಿದ್ದು, ಚೆನ್ನಾಗಿ ಓದಿ ಉನ್ನತ ಶಿಕ್ಷಣ ಪಡೆದು ಉಜ್ವಲ ಭವಿಷ್ಯ ರೂಪಿಸಿಕೊಳ್ಳಬೇಕು. ಈ ಮೂಲಕ ಪೋಷಕರು ಹಾಗೂ ಕಾಲೇಜಿಗೆ ಕೀರ್ತಿ ತರಬೇಕು ಎಂದರು.

ಕಾರ್ಯಕ್ರಮದಲ್ಲಿ ತುಮಕೂರಿನ ರಾಮಕೃಷ್ಣ ವಿವೇಕಾನಂದ ಆಶ್ರಮದ ಅಧ್ಯಕ್ಷರಾದ ಡಾ.ವೀರೇಶಾನಂದ ಸರಸ್ವತಿ ಸ್ವಾಮೀಜಿ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಕಾಲೇಜು ಪ್ರಾಂಶುಪಾಲ ಡಾ. ಆರ್.ಮಂಜುನಾಥ್, ಶೇಷಾದ್ರಿಪುರಂ ಪದವಿ ಕಾಲೇಜಿನ ಪ್ರಾಂಶುಪಾಲ ಪ್ರೊ.ಜಯರಾಮ್, ಉಪನ್ಯಾಸಕರು, ಸಿಬ್ಬಂದಿ, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಪ್ರಜಾವಾಣಿ
ಬುಧವಾರ • ಏಪ್ರಿಲ್ 13, 2022

ಚಿತ್ರಾವಳಿ



ಸ್ವಾಭಿಮಾನಿ ಕರ್ನಾಟಕ ವೇದಿಕೆ ವತಿಯಿಂದ ನಗರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಲೇಖಕರಾದ (ಕುಳಿತವರು ಎಡದಿಂದ) ಪೂರ್ಣಿಮಾ ಮಾಳಿಗೆಮನಿ, ಡಿ.ನಳಿನ, ಸತೀಶ್ ಕುಮಾರ್ ಎಸ್.ಹೊಸಮನಿ, ಎಚ್.ಎಸ್. ಅನುಪಮಾ, ಮುಮ್ತಾಜ್ ಬೇಗಂ, ದೇವು ಮಾಕೊಂಡ, ಆಕರ್ಷ ರಮೇಶ್ ಕಮಲ ಅವರಿಗೆ 'ಸ್ವಾಭಿಮಾನಿ ಪುಸ್ತಕ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಶೇಷಾದ್ರಿಪುರ ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿ ವೂಡೇ ಪಿ.ಕೃಷ್ಣ, ವೇದಿಕೆ ಅಧ್ಯಕ್ಷ ದ್ವಾರನಕುಂಟೆ ಪಾತಣ್ಣ, ವಿಮರ್ಶಕ ಎಚ್.ದಂಡಪ್ಪ ಹಾಗೂ ಇತರರು ಇದ್ದಾರೆ.

ಸಂಜೆವಾಣಿ
ಬೆಂಗಳೂರು 3
ಬುಧವಾರ 6 ಏಪ್ರಿಲ್ 2022



ಬುದ್ಧ, ಬಸವ, ಗಾಂಧಿ ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ ಇಂದು ನಗರದ ಖಾಸಗಿ ಹೋಟೇಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಡಾ. ರಾಮಲಿಂಗೇಶ್ವರ ಬರೆದಿರುವ 'ಭೂಮಿ ತಬ್ಬಿದ ಆಕಾಶ' ಕೃತಿಯನ್ನು ಸಾಹಿತಿ ಡಾ. ಅರಳು ಮಲ್ಲಿಗೆ ಪಾರ್ಥಸಾರಥಿ ಲೋಕಾರ್ಪಣೆ ಮಾಡಿದರು. ಶಿಕ್ಷಣ ತಜ್ಞ ನಾಡೋಜ ಡಾ. ವೂಡೆ ಪಿ ಕೃಷ್ಣ, ವಿಶ್ರಾಂತ ಕುಲಪತಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್, ಗುಣಸಾಗರಿ. ಸಿ. ನಾಗರಾಜ್ ಇದ್ದಾರೆ.

ಪ್ರಜಾ ಪ್ರಗತಿ

ದಿ.ಕೆ.ಎಚ್.ಪಾಟೀಲರ ಪತ್ನಿ ನಿಧನ

ತುಮಕೂರು



ಕೆಪಿಸಿಸಿ ಮಾಜಿ ಅಧ್ಯಕ್ಷ, ಸಹಕಾರ ರಂಗದ ದಿಗ್ಗಜ ದಿ.ಕೆ.ಎಚ್.ಪಾಟೀಲರ ಪತ್ನಿ ಪದ್ಮಾವತಿ ಕೃಷ್ಣಗೌಡ ಪಾಟೀಲ(88) ಅವರು ಸೋಮವಾರ ಸಂಜೆ 4.30ರಲ್ಲಿ ಹುಬ್ಬಳ್ಳಿಯ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾಗಿದ್ದಾರೆ. ಮೃತರು ಮಾಜಿ ಸಚಿವ ಹಾಗೂ ಗದಗಿನ ಶಾಸಕರಾದ ಎಚ್.ಕೆ.ಪಾಟೀಲ್ ಹಾಗೂ ಡಿ.ಕೆ.ಪಾಟೀಲ್ ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮಂಗಳವಾರ ಮಧ್ಯಾಹ್ನ ಸ್ವಗ್ರಾಮ ಗದಗಿನ ಹುಲಕೋಟಿಯಲ್ಲಿ ಅಂತ್ಯಕ್ರಿಯೆ ನೆರವೇರಲಿದ್ದು, ಪದ್ಮಾವತಿಯವರು ಪತಿಯಂತೆ ಗಾಂಧಿ ವಿಚಾರಧಾರೆಗಳಿಂದ ಪ್ರಭಾವಿತರಾಗಿ ಸಮಾಜಮುಖಿ ಸೇವಾ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದರು. ಪದ್ಮಾವತಿಯವರ ನಿಧನಕ್ಕೆ ಸಿಎಂ ಬಸವರಾಜಬೊಮ್ಮಾಯಿ, ಮಾಜಿ ಸಿಎಂಗಳಾದ ಸಿದ್ದರಾಮಯ್ಯ, ಎಚ್.ಡಿ.ಕುಮಾರಸ್ವಾಮಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಸಂಸದ ಜಿ.ಎಸ್.ಬಸವರಾಜು ಸೇರಿ ಅನೇಕ ಗಣ್ಯರು ಸಂತಾಪ ಸೂಚಿಸಿದ್ದಾರೆ.

ಆದರ್ಶ ಮಹಿಳೆಯಾಗಿದ್ದರು:

ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಪ್ರೊ.ಜಿ.ಕೃಷ್ಣ ಅವರು ಸಂತಾಪ ಸೂಚಿಸಿ, ಹುಲಕೋಟಿಯ ಹುಲಿ ಎಂದೇ ಪ್ರಖ್ಯಾತರಾಗಿದ್ದ ಕೆ.ಎಚ್.ಪಾಟೀಲರ ಸಾಧನೆಗಳ ಹಿಂದೆ ಆದರ್ಶ ವ್ಯಕ್ತಿತ್ವದ ಪದ್ಮಾವತಿಯವರ ಶ್ರಮ, ಬೆಂಬಲವಿತ್ತು. ಎಚ್.ಕೆ.ಪಾಟೀಲ್‌ರಂತಹ ಸಜ್ಜನ ವ್ಯಕ್ತಿತ್ವದ ನೇತಾರರನ್ನು ಸಮಾಜಕ್ಕೆ ಕೊಡುಗೆಯಾಗಿ ಕೊಟ್ಟ ತಾಯಿಯ ನಿಧನ ಇಡೀ ಸಮಾಜಕ್ಕೆ, ಗಾಂಧಿ ಪರಿವಾರಕ್ಕೂ ಆದ ನಷ್ಟ ಎಂದು ಶೋಕ ಸಂದೇಶದಲ್ಲಿ ತಿಳಿಸಿದ್ದಾರೆ.

Tumkur Edition
5 Apr, 2022 Page No. 8
Powered by : eReleGo.com

ವಿಜಯ ಕರ್ನಾಟಕ
ಬುಧವಾರ,30 ಮಾರ್ಚ್ 2022

ಎಲ್ಲಿ-ಏನು?

ಬುಧವಾರ

ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್: ಪುನೀತ್ ರಾಜ್‌ಕುಮಾರ್ ಕುರಿತ ರಾಜರತ್ನ ಕವನ ಸಂಕಲನ ಮತ್ತು ರಾಜರತ್ನ ಹಾಡುಗಳ ಧ್ವನಿ ಸಾಂದ್ರಿಕೆ ಲೋಕಾರ್ಪಣೆ ಸಮಾ ರಂಭ. ಲೋಕಾರ್ಪಣೆ: ಹಿರಿಯ ನಟಿ ಡಾ. ಜಯಮಾಲಾ. ಅಧ್ಯಕ್ಷತೆ: ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟ ಪೂರ್ವ ಅಧ್ಯಕ್ಷ ಡಾ. ಮನು ಬಳಿಗಾರ್. ಮುಖ್ಯ ಅತಿಥಿ: ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ. ವೂಡೇ ಪಿ.ಕೃಷ್ಣ. ಪ್ರಾಸ್ತಾವಿಕ ನುಡಿ: ಜೆ.ಡಿ.ಧನ್ನೂರ.



ಸ್ಥಳ: ಸೆಮಿನಾರ್ ಹಾಲ್, ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ, ಶೇಷಾದ್ರಿಪುರಂ. 4.00

ಪ್ರಜಾವಾಣಿ

ಬುಧವಾರ • ಮಾರ್ಚ್ 30, 2022

ನಟ ಪುನೀತ್ ರಾಜ್‌ಕುಮಾರ್ ಅವರ ಕುರಿತಾದ 'ರಾಜರತ್ನ' ಕವನ ಸಂಕಲನ ಮತ್ತು ಧ್ವನಿಸಾಂದ್ರಿಕೆ ಬಿಡುಗಡೆ: ನಟಿ ಜಯಮಾಲಾ, ಅಧ್ಯಕ್ಷತೆ–ಮನು ಬಳಿಗಾರ್ ಅತಿಥಿಗಳು–ಪ್ರೊ.ಪಿ.ಕೃಷ್ಣ, ಜಿ.ಡಿ. ದಸೂರ, ಎನ್. ರಾಮಲಿಂಗೇಶ್ವರ, ಆಯೋಜನೆ–ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್, ಸಾನಿಯಾ ಪ್ರಕಾಶನ, ಸ್ಥಳ–ಸಮ್ಮೇಳನ ಸಭಾಂಗಣ, ಶೇಷಾದ್ರಿಪುರ ಶಿಕ್ಷಣ ಸಂಸ್ಥೆ, ಶೇಷಾದ್ರಿಪುರ, ಸಂಜೆ 4.45



ಜಯಮಾಲಾ

ವಿಜಯ ಕರ್ನಾಟಕ
ಬುಧವಾರ,30 ಮಾರ್ಚ್ 2022,
ಬೆಂಗಳೂರು

‘ನಾಗಾರ್ಜುನ ಯೂನಿಟಿ ಸ್ಯಾಟಲೈಟ್’ಗೆ ಚಾಲನೆ


ಬೆಂಗಳೂರು: ಇಂಡಿಯನ್ ಟೆಕ್ನಾಲಜಿ ಕಾಂಗ್ರೆಸ್ ಅಸೋಸಿಯೇಶನ್ ಸಹಯೋಗದಲ್ಲಿ ನಾಗಾರ್ಜುನ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್ ವತಿಯಿಂದ ಅಭಿವೃದ್ಧಿಪಡಿಸಲಿರುವ ‘ನಾಗಾರ್ಜುನ ಯೂನಿಟಿ ಸ್ಯಾಟಲೈಟ್’ ಉದ್ಘಾಟನಾ ಸಮಾರಂಭವು ಮಾ.26ರಂದು ಜರುಗಿತು.

ದೇವನಹಳ್ಳಿ-ಚಿಕ್ಕಬಳ್ಳಾಪುರ ರಸ್ತೆಯ ಮುದುಗುರ್ಕಿಯಲ್ಲಿರುವ ನಾಗಾರ್ಜುನ ಕಾಲೇಜ್ ಆಫ್ ಎಂಜಿನಿಯರಿಂಗ್ ಮತ್ತು ಟೆಕ್ನಾಲಜಿ ಆವರಣದಲ್ಲಿ ಇಸ್ರೊ ಎಸ್‌ಐಪಿಏ ನಿರ್ದೇಶಕ, ವಿಜ್ಞಾನಿ ಡಾ. ಪ್ರಕಾಶ ರಾವ್, ಆ್ಯಪಲ್ ಪ್ರಾಜೆಕ್ಟ್ ಡೈರೆಕ್ಟರ್, ವಿಜ್ಞಾನಿ ಪ್ರೊ. ಆರ್.ಎಂ.ವಸಗಂ ಯೂನಿಟಿ ಸ್ಯಾಟಲೈಟ್‌ಗೆ ಚಾಲನೆ ನೀಡಿದರು. ಅಜಾದಿ ಕಾ ಅಮೃತ ಮಹೋತ್ಸವ ಅಂಗವಾಗಿ ಕೇಂದ್ರ ಸರಕಾರ ಘೋಷಿಸಿರುವ ‘75 ಸ್ಯಾಟಲೈಟ್ಸ್ ಮಿಷನ್: 2022’ ಭಾಗವಾಗಿ ‘ನಾಗಾರ್ಜುನ ಯೂನಿಟಿ ಸ್ಯಾಟಲೈಟ್’ ಅಭಿವೃದ್ಧಿಪಡಿಸಲಾಗುತ್ತಿದೆ.



ನಾಗಾರ್ಜುನ ಕಾಲೇಜ್ ಆಫ್ ಎಂಜಿನಿಯರಿಂಗ್ ಮತ್ತು ಟೆಕ್ನಾಲಜಿ ಆವರಣದಲ್ಲಿ ‘ನಾಗಾರ್ಜುನ ಯೂನಿಟಿ ಸ್ಯಾಟಲೈಟ್’ ಅಭಿವೃದ್ಧಿಗೆ ಚಾಲನೆ ದೊರಕಿತು.

ಪ್ರಜಾವಾಣಿ
ಬುಧವಾರ ○ ಮಾರ್ಚ್ 23, 2022



ಪ್ರಶಸ್ತಿ ಪ್ರದಾನ

ಬೆಂಗಳೂರು ಮ್ಯಾನೇಜ್‌ಮೆಂಟ್ ಅಸೋಸಿಯೇಷನ್ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಶೇಷಾದ್ರಿಪುರ ಸಮೂಹ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ವೂಡೆ ಪಿ.ಕೃಷ್ಣ ಅವರಿಗೆ 'ವರ್ಷದ ಶ್ರೇಷ್ಠ ಶಿಕ್ಷಣ ತಜ್ಞ–2022' ಪ್ರಶಸ್ತಿ ಪ್ರದಾನ ಮಾಡಲಾಯಿತು. ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ) ಮಾಜಿ ಮುಖ್ಯಸ್ಥ ಪ್ರೊ.ಎ.ಎಸ್. ಕಿರಣ್‌ಕುಮಾರ್, ರಾಜ್ಯಸಭಾ ಸದಸ್ಯ ಕೆ.ಸಿ.ರಾಮಮೂರ್ತಿ ಹಾಗೂ ಅಸೋಸಿಯೇಷನ್‌ನ ಸದಸ್ಯರು ಇದ್ದರು

ಕನ್ನಡಪ್ರಭ ಬುಧವಾರ 23.3.2022



ಬೆಂಗಳೂರು ಮ್ಯಾನೇಜ್‌ಮೆಂಟ್ ಅಸೋಸಿಯೇಷನ್‌ನ 2022ನೇ ಸಾಲಿನ ಶಿಕ್ಷಣ ತಜ್ಞ ಪ್ರಶಸ್ತಿಗೆ ಡಾ| ವೂಡೇ ಪಿ.ಕೃಷ್ಣ ಭಾಜನರಾಗಿದ್ದು, ಇಸ್ರೋ ಮಾಜಿ ಅಧ್ಯಕ್ಷ ಡಾ.ಕಿರಣ್ ಕುಮಾರ್ ಪ್ರಶಸ್ತಿ ಪ್ರದಾನ ಮಾಡಿದರು. ರಾಜ್ಯಸಭಾ ಸದಸ್ಯ ಕೆ.ಸಿ.ರಾಮಮೂರ್ತಿ ಇದ್ದರು.

ಈ ಸಂಜೆ

ಮಂಗಳವಾರ
22 ಮಾರ್ಚ್ 2022



ಇಂಡಿಯನ್ ರೆಡ್‌ಕ್ರಾಸ್ ಸಂಸ್ಥೆಯ ಶತಮಾನೋತ್ಸವದ ಅಂಗವಾಗಿ ವಿಶೇಷ ಅಂಚೆ ಲಕೋಟೆಯನ್ನು ಚೀಫ್ ಮೋಸ್ಟ್ ಮಾಸ್ಟರ್ ಎಸ್ .ರಾಜೇಂದ್ರ ಕುಮಾರ್ , ಡಾ. ವೂಡೇ ಪಿ.ಕೃಷ್ಣ ಬಿಡುಗಡೆ ಮಾಡಿದರು. ಐಆರ್‌ಸಿಎಸ್ ಉಪಾಧ್ಯಕ್ಷ ಗೋಪಾಲ್ ಬಿ.ಹೊಸೂರ್ ಮತ್ತಿತರರು ಪಾಲ್ಗೊಂಡಿದ್ದರು.

ಪ್ರಜಾಪ್ರಗತಿ

ಮಾ.26: ಪ್ರೊ.ವೈ.ಎಸ್.ಸಿದ್ದೇಗೌಡ ಅವರ ಅಭಿನಂದನಾ ಗ್ರಂಥ ಸಾರಥಿ ಲೋಕಾರ್ಪಣೆ

ತುಮಕೂರು



ಪ್ರೊ.ವೈ.ಎಸ್.ಸಿದ್ದೇಗೌಡ ಸ್ನೇಹ ಬಳಗ ಬೆಂಗಳೂರು, ಈಳ್ಗೆವು ಪ್ರಕಾಶನ ತುಮಕೂರು, ವಚನ ಮಂಟಪ ಮಸ್ಕತ್, ಅಮೇರಿಕಾದ ನ್ಯಾಷನಲ್ ಕನ್ನಡಕೂಟ ಇವರ ಸಹಯೋಗದಲ್ಲಿ ತುಮಕೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ವೈ.ಎಸ್.ಸಿದ್ದೇಗೌಡ ಅವರ ಅಭಿನಂದನಾ ಗ್ರಂಥ 'ಸಾರಥಿ' ಲೋಕಾರ್ಪಣೆ ಮತ್ತು ರಾಷ್ಟ್ರೀಯ ಶಿಕ್ಷಣ ನೀತಿ ಕುರಿತ ಅಂತರರಾಷ್ಟ್ರೀಯ ವಿಚಾರ ಸಂಕಿರಣ ಸಮಾರಂಭವು ಮಾರ್ಚ್ 26ರಂದು ಬೆಳಗ್ಗೆ 9:30ರಿಂದ ಸಂಜೆ 5 ಗಂಟೆಯವರೆಗೆ ಬೆಂಗಳೂರು ನಗರ ವಿಶ್ವವಿದ್ಯಾಲಯದ ಜ್ಞಾನಜ್ಯೋತಿ ಸಭಾಂಗಣದಲ್ಲಿ ನಡೆಯಲಿದೆ.

ಈ ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ತುಮಕೂರಿನ ಹಿರೇಮಠದ ಅಧ್ಯಕ್ಷರಾದ ಡಾ.ಶ್ರೀ ಶಿವಾನಂದ ಶಿವಾಚಾರ್ಯ ಮಹಾಸ್ವಾಮಿಗಳು ವಹಿಸುತ್ತಾರೆ. ಕರ್ನಾಟಕಸರ್ಕಾರದ ಸಂಸದೀಯ ವ್ಯವಹಾರ ಹಾಗೂ ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ಕಾರ್ಯಕ್ರಮವನ್ನು ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಉನ್ನತ ಶಿಕ್ಷಣ ಮಂಡಳಿಯ ಉಪಾಧ್ಯಕ್ಷ ಪ್ರೊ.ಬಿ.ತಿಮ್ಮೇಗೌಡ, ಬೆಂಗಳೂರು ಸಿಟಿ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಲಿಂಗರಾಜ ಗಾಂಧಿ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ.ಎನ್.ಎಸ್.ರಾಮೇಗೌಡ ಮತ್ತಿತರರು ಪಾಲ್ಗೊಳ್ಳುವರು.

ಈ ಕಾರ್ಯಕ್ರಮದಲ್ಲಿ ಪ್ರೊ.ವೈ.ಎಸ್.ಸಿದ್ದೇಗೌಡ ಅವರ ಬದುಕು, ಆಡಳಿತ, ಸಂಶೋಧನೆ ಮತ್ತು ಸಮಾಜಸೇವೆ ಕುರಿತು ಪ್ರೊ.ಹೆಚ್.ಆರ್.ತಿಮ್ಮೇಗೌಡ, ಪ್ರೊ.ಕೆ.ಇ.ರಾಧಾಕೃಷ್ಣ, ಪ್ರೊ.ಎಸ್.ಎ.ಕಾಜಿ, ಪ್ರೊ.ಬಿ.ರಮೇಶ್ವಿಷ ಮಂಡಿಸುತ್ತಾರೆ. ರಾಷ್ಟ್ರೀಯ ಶಿಕ್ಷಣ ನೀತಿ:2020ರ ಬಹುಮುಖದ ಆಯಾಮವನ್ನು ಕುರಿತ ವಿಶೇಷ ಉಪನ್ಯಾಸವನ್ನು ಶ್ರೇಷ್ಠ ಶಿಕ್ಷಣ ತಜ್ಞರಾದ ಶ್ರೀಎಂ.ಕೆ.ಶ್ರೀದರ್ ಅವರು ನೀಡಲಿದ್ದಾರೆ. ಅಂತರರಾಷ್ಟ್ರೀಯ ವಿಚಾರ ಸಂಕಿರಣದ ಪರ್ಯಾಯ ಗೋಷ್ಠಿಯಲ್ಲಿ ಸುಮಾರು ಐವತ್ತಕ್ಕೂ ಹೆಚ್ಚು ಪ್ರತಿನಿಧಿಗಳು ಪ್ರಸ್ತುತ ರಾಷ್ಟ್ರೀಯ ಶಿಕ್ಷಣ ನೀತಿ ಕುರಿತ ವಿಷಯದ ಮೇಲೆ ಪ್ರಬಂಧ ಮಂಡನೆ ಮಾಡುತ್ತಾರೆ. ಈಗೋಷ್ಠಿಗಳ ಅಧ್ಯಕ್ಷತೆಯನ್ನು ಪ್ರೊ.ಬಿ.ಎಸ್.ಗುಂಜಾಲ್, ಡಾ.ಹೆಚ್.ಪಿ.ಜ್ಯೋತಿ, ಡಾ.ಲೋಕೇಶ್‌ಎಂ. ವಹಿಸುತ್ತಾರೆ.

ಸಮಾರೋಪ ಸಮಾರಂಭದಲ್ಲಿ ದಿವ್ಯ ಸಾನಿಧ್ಯವನ್ನು ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಗೌರವ ಕಾರ್ಯದರ್ಶಿಗಳಾದ ಶ್ರೀ ಪ್ರಸನ್ನನಾಥ ಸ್ವಾಮೀಜಿ ವಹಿಸುವರು. ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ರವರು ಉದ್ಘಾಟನೆಯನ್ನು ನೇರವೇರಿಸುವರು. ಮುಖ್ಯ ಅತಿಥಿಗಳಾಗಿ ರಾಷ್ಟ್ರೀಯ ಮೌಲ್ಯಾಂಕ ಮತ್ತು ಮಾನ್ಯತಾ ಪರಿಷತ್ತಿನ ನಿರ್ದೇಶಕ ಡಾ.ಎಸ್.ಸಿ.ಶರ್ಮ, ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿಗಳಾದ ಶಿಕ್ಷಣ ತಜ್ಞ, ನಾಡೋಜ ಡಾ.ವೂಡೇ ಪಿಕೃಷ್ಣ ಬೆಂಗಳೂರು ಸಿಟಿ ವಿಶ್ವವಿದ್ಯಾಲಯದ ಮೌಲ್ಯಮಾಪನ ಕುಲಸಚಿವರಾದ ಪ್ರೊ.ಬಿ.ರಮೇಶ್, ಮತ್ತಿತರರು ಭಾಗವಹಿಸುವರು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಖ್ಯಾತ ಸಂಸ್ಕೃತಿ ಚಿಂತಕರು ಹಾಗೂ ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳಾದ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ ಅವರು ವಹಿಸಲಿದ್ದಾರೆ.


ವಿಜಯ ಕರ್ನಾಟಕ

ಮಂಗಳವಾರ, 22 ಮಾರ್ಚ್ 2022 10 ನಮ್ಮ ಬೆಂಗಳೂರು

ಚಿತ್ರ ಸುದ್ದಿ




ಬೆಂಗಳೂರು ಮ್ಯಾನೇಜ್‌ಮೆಂಟ್ ಅಸೋಸಿಯೇಷನ್ ವತಿಯಿಂದ ವೂಡೇ ಪಿ.ಕೃಷ್ಣ ಅವರಿಗೆ 'ವರ್ಷದ ಶಿಕ್ಷಣ ತಜ್ಞ-2022' ಪ್ರಶಸ್ತಿ ಪ್ರದಾನ ಮಾಡಲಾಯಿತು. ಈ ವೇಳೆ ಇಸ್ರೊ ಮಾಜಿ ಅಧ್ಯಕ್ಷ ಡಾ. ಎ.ಎಸ್.ಕಿರಣ್ ಕುಮಾರ್, ರಾಜ್ಯಸಭಾ ಸದಸ್ಯ ಕೆ.ಸಿ.ರಾಮಮೂರ್ತಿ ಸೇರಿದಂತೆ ಗಣ್ಯರು ಉಪಸ್ಥಿತರಿದ್ದರು.



ಬೆಂಗಳೂರು ಮ್ಯಾನೇಜ್‌ಮೆಂಟ್ ನೀಡುವ ಪ್ರತಿಷ್ಠಿತ-2022ನೆ ಸಾಲಿನ ಶಿಕ್ಷಣ ತಜ್ಞ ಪ್ರಶಸ್ತಿಯನ್ನು ನಾಡೋಜ ವೂಡೆ.ಪಿ. ಕೃಷ್ಣ ಅವರಿಗೆ ಇಸ್ರೋ ಮಾಜಿ ಅಧ್ಯಕ್ಷ ಡಾ.ಎ.ಎಸ್. ಕಿರಣ್‌ಕುಮಾರ್ ಪ್ರದಾನ ಮಾಡಿದರು. ರಾಜ್ಯಸಭಾ ಸದಸ್ಯ ಕೆ.ಸಿ. ರಾಮಮೂರ್ತಿ ಮತ್ತಿತರರಿದ್ದರು.

ಬೆಂಗಳೂರು
ಉದಯವಾಣಿ
ಸೋಮವಾರ, ಮಾರ್ಚ್ 21, 2022



ಬೆಂಗಳೂರು ಮ್ಯಾನೇಜ್‌ಮೆಂಟ್ ನೀಡುವ ಪ್ರತಿಷ್ಠಿತ 2022 ನೇ ಸಾಲಿನ ಶಿಕ್ಷಣ ತಜ್ಞ ಪ್ರಶಸ್ತಿಯನ್ನು ನಾಡೋಜ ವೂಡೆ ಪಿ. ಅವರು ಭಾನುವಾರ ಸ್ವೀಕರಿಸಿದರು. ಇಸ್ರೋ ಮಾಜಿ ಅಧ್ಯಕ್ಷ ಡಾ. ಎ.ಎಸ್. ಕಿರಣ್ ಕುಮಾರ್ ಈ ಪ್ರಶಸ್ತಿಯನ್ನು ಪ್ರದಾನ ಮಾಡಿದರು. ರಾಜ್ಯಸಭಾ ಸದಸ್ಯ ಕೆ.ಸಿ. ರಾಮಮೂರ್ತಿ ಇತರರಿದ್ದರು.

ನಂ1 ವಿಜಯವಾಣಿ
• VIJAYAVANI » BENGALURU
ಭಾನುವಾರ ಮಾರ್ಚ್ 2022
20 MARCH 2022

ಸಂಗೀತದಿಂದ ಮನಸ್ಸಿನ ಒತ್ತಡ ನಿವಾರಣೆ

ಬೆಂಗಳೂರು: ಮನಸ್ಸಿನ ಒತ್ತಡ ಕಡಿಮೆ ಮಾಡಿಕೊಳ್ಳಲು ಸಂಗೀತ ಸಹಕಾರಿಯಾಗಿದ್ದು, ಸಂಗೀತಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಬೇಕು ಎಂದು ನಿವೃತ್ತ ಲೋಕಾಯುಕ್ತ ನ್ಯಾ. ಸಂತೋಷ್ ಹೆಗ್ಡೆ ಹೇಳಿದ್ದಾರೆ.

ಶ್ರೀ ಗುರು ಗಾನ ಲಹರಿ ಸಂಗೀತ ಅಕಾಡೆಮಿ ವತಿಯಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಜಯನಗರ 8ನೇ ಬ್ಲಾಕ್‌ನಲ್ಲಿರುವ ಶ್ರೀ ಜಯರಾಮ ಸೇವಾ ಮಂಡಳಿಯಲ್ಲಿ ಶನಿವಾರ ಆಯೋಜಿಸಿದ್ದ 12ನೇ ಸಂಗೀತೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದರು.

ಚಿಕ್ಕ ವಯಸ್ಸಿನಿಂದಲೂ ನನಗೆ ಸಂಗೀತದಲ್ಲಿ ಬಹಳ ಪ್ರೀತಿ, ಆಸಕ್ತಿ. ನನ್ನ ಬಳಿ 25 - 30 ಸಾವಿರ ಹಾಡುಗಳ ಸಂಗ್ರಹವಿದೆ. ಮೊಬೈಲ್‌ನಲ್ಲಿ ಪ್ರಯಾಣದ ವೇಳೆ ಸಂಗೀತ ಕೇಳುತ್ತೇನೆ. ಚಿಕ್ಕವನಿದ್ದಾಗ ತಬಲಾ ಕಲಿಯುವ ಆಸೆ ಇತ್ತು. ಕಾರಣಾಂತರಗಳಿಂದ ಸಾಧ್ಯವಾಗಲಿಲ್ಲ. ಆದರೆ, ಸಂಗೀತದ ಮೇಲಿರುವ ಪ್ರೀತಿ ಕಡಿಮೆಯಾಗಿಲ್ಲ ಎಂದರು.

ತಬಲಾ ವಾದಕ ಡಾ. ಪಂಡಿತ್ ಸತೀಶ್ ಹಂಪಿಹೊಳಿ, ಸಂಸ್ಥೆ ಅಧ್ಯಕ್ಷ ಶಿವಾನಂದ ಹೇರೂರ್ ಮತ್ತಿತರರು ಉಪಸ್ಥಿತರಿದ್ದರು.



ನ್ಯಾ. ಸಂತೋಷ ಹೆಗ್ಡೆ ಅವರನ್ನು ಸಂಘಟಕರು ಗೌರವಿಸಿದರು.

ಮ್ಯೂಸಿಕ್ ಶಿಕ್ಷಣದ ಭಾಗವಾಗಬೇಕು

ಕರೊನಾ ನಂತರ ಮೊದಲ ಕಾರ್ಯಕ್ರಮ ಇದಾಗಿದೆ. ಒಬ್ಬರಿಂದ ಒಬ್ಬರು ತುಂಬ ಕಲಿಯಬೇಕಿದೆ. ಸಂಗೀತ ಪರಂಪರೆ ಉಳಿಸುವ ಕೆಲಸ ಆಗಬೇಕು. ಇದು ಶಿಕ್ಷಣದ ಒಂದು ಭಾಗ ಆಗಬೇಕು. ಸಂಗೀತಕ್ಕೆ ಆಧ್ಯಾತ್ಮಿಕ ಶಕ್ತಿ ಇದೆ ಎಂದು ಶಿಕ್ಷಣ ತಜ್ಞ ನಾಡೋಜ ಡಾ. ವೂಡೇ ಪಿ.ಕೃಷ್ಣ ಹೇಳಿದರು.

ಬಿಎಂಎ ವಾರ್ಷಿಕ ಪ್ರಶಸ್ತಿ ಪ್ರದಾನ | ಇಸ್ರೋ ಮಾಜಿ ಅಧ್ಯಕ್ಷ ಕಿರಣ್‌ಕುಮಾರ್ ಸಲಹೆ

ವಿವೇಚನೆಯಿಂದ ವಿಜ್ಞಾನ ಬಳಸಿ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ವಿಜ್ಞಾನ-ತಂತ್ರಜ್ಞಾನ ಕ್ಷೇತ್ರಗಳಲ್ಲಿ ಪ್ರಪಂಚ ಸಾಕಷ್ಟು ಸಾಧನೆ ಮಾಡುತ್ತಿದೆಯಾದರೂ, ಯಾವುದನ್ನೂ ಅತಿಯಾಗಿ ಬಳಕೆ ಮಾಡದೆ, ವಿವೇಚನೆಯಿಂದ ವರ್ತಿಸುವ ಮೂಲಕ ಮುಂದಿನ ಪೀಳಿಗೆಗೂ ಭೂಮಿಯನ್ನು ಉಳಿಸಬೇಕಿದೆ ಎಂದು ಇಸ್ರೋ ಮಾಜಿ ಅಧ್ಯಕ್ಷ ಡಾ. ಎ.ಎಸ್. ಕಿರಣ್ ಕುಮಾರ್ ಹೇಳಿದ್ದಾರೆ.

ನಗರದ ಖಾಸಗಿ ಹೋಟೆಲ್‌ನಲ್ಲಿ ಶನಿವಾರ ಆಯೋಜಿಸಿದ್ದ ಬೆಂಗಳೂರು ಮ್ಯಾನೇಜ್ಮೆಂಟ್ ಅಸೋಸಿಯೇಷನ್‌ನ (ಬಿಎಂಎ) 65ನೇ ವಾರ್ಷಿಕ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಮಾತನಾಡಿದರು.

ಮಾನವ ವಿಜ್ಞಾನ-ತಂತ್ರಜ್ಞಾನದಲ್ಲಿ ಸಾಕಷ್ಟು ಪ್ರಗತಿ ಸಾಧಿಸುತ್ತಿದ್ದಾನೆ. ಅದರ ಜತೆಗೆ ಅನೇಕ ಅನಿರೀಕ್ಷಿತಗಳನ್ನೂ ಎದುರಿಸುವಂತಾಗಿದೆ. ಕೆಲ ಸಮಸ್ಯೆಗಳು ಪ್ರಾಕೃತಿಕವಾದರೆ, ಮತ್ತೆ ಕೆಲವು ಮಾನವ ನಿರ್ಮಿತ ಸಮಸ್ಯೆಗಳೇ ಆಗಿವೆ. ಅವಿಷ್ಕಾರಗಳು ಜೀವನಮಟ್ಟ ಸುಧಾರಿಸುವಂತಾಗಬೇಕೇ ಹೊರತು, ಜಗತ್ತು ಅಥವಾ ಜೀವ ಸಂಕುಲಕ್ಕೇ ವಿನಾಶಕಾರಿಯಾಗಿ ಪರಿಣಮಿಸಬಾರದು. ಸಾಂಕ್ರಾಮಿಕ, ಪ್ರಾಕೃತಿಕ ವಿಕೋಪ, ಹವಾಮಾನ ವೈಪರೀತ್ಯ ರೂಪದಲ್ಲಿ ಈಗಾಗಲೇ ಅದನ್ನು ನೋಡುವಂತಾಗಿದೆ ಎಂದರು.

ಈಗಾಗಲೇ ಬಾಹ್ಯಾಕಾಶವನ್ನು ಆಳಲು ಮನುಷ್ಯ ಹೊರಟಿದ್ದಾನೆ. ಪ್ರಕೃತಿಯಲ್ಲಿ ಸಾಕಷ್ಟು ದೊರೆಯುತ್ತಿದೆ. ಆದರೆ, ಯಾವುದನ್ನು ಎಷ್ಟು ಬಳಸಿಕೊಳ್ಳಬೇಕು, ಹೇಗೆ ಬಳಸಿಕೊಳ್ಳಬೇಕು ಎಂಬ ಬಗ್ಗೆಯೂ ಯೋಚಿಸಬೇಕು. ನಾವು ಸೃಷ್ಟಿಸಿರುವ ಸಮಸ್ಯೆಗಳಿಗೆ ನಾವೇ ಪರಿಹಾರ ಹುಡುಕಬೇಕಿದೆ ಎಂದು ಕಿವಿಮಾತು ಹೇಳಿದರು.

ರಾಜ್ಯಸಭಾ ಸದಸ್ಯ ಕೆ.ಸಿ. ರಾಮಮೂರ್ತಿ ಮಾತನಾಡಿ, ಸಂದಿಗ್ಧ ಪರಿಸ್ಥಿತಿಗಳನ್ನು ಹೇಗೆ ನಿರ್ವಹಣೆ ಮಾಡಬೇಕು ಎನ್ನುವುದನ್ನು ಮ್ಯಾನೇಜ್ಮೆಂಟ್ ಕಲಿಸುತ್ತಿದೆ. ಭವಿಷ್ಯದಲ್ಲಿ ಏನಾಗಬಹುದು ಎನ್ನುವುದು ಯಾರಿಗೂ ತಿಳಿದಿರುವುದಿಲ್ಲ. ಕೋವಿಡ್‌ನಂಥ ಸನ್ನಿವೇಶ ಎದುರಾಗುತ್ತದೆ ಎಂದು ಯಾರೂ ಊಹಿಸಿರಲಿಲ್ಲ. ಸಾಂಕ್ರಾಮಿಕ, ಯುದ್ಧದಂತಹ ಕಠಿಣ ಸನ್ನಿವೇಶಗಳನ್ನು ಎದುರಿಸುವ ನಿಟ್ಟಿನಲ್ಲಿ ಯುವಜನತೆಯನ್ನು ಸಿದ್ಧಪಡಿಸಬೇಕಿದೆ ಎಂದರು.



ಬೆಂಗಳೂರು ಮ್ಯಾನೇಜ್ಮೆಂಟ್ ಅಸೋಸಿಯೇಷನ್‌ನ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪುರಸ್ಕೃತರಾದ ಪರಿಸರವಾದಿ ತುಳಸಿಗೌಡ, ಪ್ಯಾರಾ ಅಥ್ಲೀಟ್ ಮಾಲತಿ ಕೆ. ಹೊಳ್ಳ, ವಿಜಯವಾಣಿ ಸಂಪಾದಕ ಕೆ.ಎನ್. ಚನ್ನೇಗೌಡ ಅವರೊಂದಿಗೆ ಇಸ್ರೋ ಮಾಜಿ ಅಧ್ಯಕ್ಷ ಕಿರಣ್ ಕುಮಾರ್, ರಾಜ್ಯಸಭಾ ಸದಸ್ಯ ಕೆ.ಸಿ. ರಾಮಮೂರ್ತಿ, ಬಿಎಂಎ ಅಧ್ಯಕ್ಷ ಪ್ರದೀಪ್ ಸಿಂಗ್ ಖರೋಲಾ, ಕಾರ್ಯದರ್ಶಿ ಡಾ. ಬಿ. ಅಮರ್‌ನಾಥ್, ಡಾ. ಮಧುರಾಣಿ ಗೌಡ.



ಬಿಎಂಎ ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ಕಿರಣ್‌ಕುಮಾರ್ ಉದ್ಘಾಟಿಸಿದರು.

"ಪದ್ಮಶ್ರೀ ಪ್ರಶಸ್ತಿ ಆಯ್ಕೆ ವಿಧಾನದಲ್ಲಿ ದೊಡ್ಡ ಬದಲಾವಣೆಯನ್ನು ನಾವು ನೋಡುತ್ತಿದ್ದೇವೆ. ತುಳಸಿಗೌಡ ಅಂಥವರನ್ನು ಯಾರೂ ಗುರುತಿಸಿ ಪ್ರಶಸ್ತಿ ನೀಡುತ್ತಿರಲಿಲ್ಲ. ಪ್ರಶಸ್ತಿಯ ಆಸೆ ಇಲ್ಲದೆ ಸಮಾಜಕ್ಕೆ, ಪರಿಸರಕ್ಕೆ ಸೇವೆ ಮಾಡುತ್ತಿದ್ದವರಿಗೂ ಪದ್ಮಶ್ರೀ ಪ್ರಶಸ್ತಿ ನೀಡುತ್ತಿರುವುದು ಸಂತಸದ ವಿಚಾರವಾಗಿದೆ.

– **ಕೆ.ಸಿ. ರಾಮಮೂರ್ತಿ** ರಾಜ್ಯಸಭಾ ಸದಸ್ಯ

"ಸಮಾಜ ಕನ್ನಡಿ ಇದ್ದಂತೆ. ನಾವು ಸಮಾಜಕ್ಕೆ ಏನು ಕೊಡುತ್ತೇವೆ, ಅದೇ ನಮಗೆ ಸಿಗುತ್ತದೆ. ನನ್ನ ಸಾಧನೆ ಗುರುತಿಸಿ ಬಿಎಂಎ ಪ್ರಶಸ್ತಿ ನೀಡಿ ಗೌರವಿಸಿದೆ. ಅದರ ಜತೆಗೆ, ನನ್ನ ಹೆಗಲ ಮೇಲೆ ದೊಡ್ಡ ಜವಾಬ್ದಾರಿಯನ್ನೂ ಹೊರಿಸಿದೆ.

| **ಮಾಲತಿ ಕೆ. ಹೊಳ್ಳ** ಪ್ಯಾರಾ ಅಥ್ಲೀಟ್

ಹೊಸ ದಿಗಂತ ಶನಿವಾರ 19 ಮಾರ್ಚ್ 2022



ನಗರದಲ್ಲಿ ಕಲಾದೇಗುಲ ಸಂಸ್ಥೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕಸಾಪ ರಾಜ್ಯಾಧ್ಯಕ್ಷ ಡಾ.ಮಹೇಶ್ ಜೋಶಿ ಅವರನ್ನು ಸನ್ಮಾನಿಸಲಾಯಿತು. ಕನ್ನಡ ಪರಿಚಾರಕ ವೈ.ಕೆ.ಮುದ್ದುಕೃಷ್ಣ, ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ ಮುಖ್ಯಸ್ಥ ವೂಡೇ ಪಿ. ಕೃಷ್ಣ ಮತ್ತಿತರರಿದ್ದರು.

ಶುಕ್ರವಾರ, 18 ಮಾರ್ಚ್, 2022



ಶೇಷಾದ್ರಿಪುರಂ ಕಾಲೇಜು ವತಿಯಿಂದ ಚೌಡಯ್ಯ ಮೆಮೋರಿಯಲ್ ಹಾಲ್‌ನಲ್ಲಿ ಹಮ್ಮಿಕೊಂಡಿದ್ದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ವಿತರಣಾ ಕಾರ್ಯಕ್ರಮವನ್ನು ನಾಡೋಜ ವೂಡೆ ಪಿ.ಕೃಷ್ಣ ಉದ್ಘಾಟಿಸಿದರು. ಡಾ.ವೀಣಾ ದೇಶಪಾಂಡೆ, ಧರ್ಮದರ್ಶಿಗಳಾದ ಕೆ.ಕೃಷ್ಣಸ್ವಾಮಿ, ಅಶೋಕ್, ಡಿ.ಸಿ.ಲೋಕನಾಥ್, ಪ್ರಾಂಶುಪಾಲರಾದ ಡಾ.ಎಚ್.ಎಸ್. ಮೀರಾ, ಪ್ರೊ.ವಿದ್ಯಾ, ಡಾ.ಭಾರ್ಗವಿ ಮತ್ತಿತರರು ಭಾಗವಹಿಸಿದ್ದರು.

ಪ್ರಜಾ ಪ್ರಗತಿ

ವಿದ್ಯಾರ್ಥಿಗಳಿಗೆ ಸನ್ಮಾನ

ವೂಡೆ ಪಿ. ಕೃಷ್ಣ ಇತರರು ಭಾಗಿ



ತುಮಕೂರು

ನಗರದ ಶೇಷಾದ್ರಿಪುರಂ ಪದವಿ ಪೂರ್ವ ಕಾಲೇಜಿನಲ್ಲಿ ವೈದ್ಯಕೀಯ ಶಿಕ್ಷಣ ಪರೀಕ್ಷೆಯಲ್ಲಿ ರ್‍ಯಾಂಕ್ ಪಡೆದು ಉಚಿತ ಪ್ರವೇಶಾತಿ ಪಡೆದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ತುಮಕೂರು ಜಿಲ್ಲಾ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸಿದ್ದಲಿಂಗಪ್ಪ ಕೆ ಎಸ್ ಮಾತನಾಡಿ, ಗುರು ಜ್ಞಾನವಂತನಾಗಬೇಕು, ಆದರ್ಶವಾದಿಯಾಗಿರಬೇಕು. ಅಂತಹ ಗುರು ಅರಿಯದ ಮನಸ್ಸುಗಳಿಗೆ ಅರಿವನ್ನು ಮೂಡಿಸುತ್ತಾನೆ. ಅಂಧಕ ಅಂಧಕನಿಗೆ ದಾರಿ ತೋರಲು ಸಾಧ್ಯವಿಲ್ಲ, ಮಾತಿಗಿಂತ ಕೃತಿ ಲೇಸು ಎಂಬುದಕ್ಕೆ ಈ ಸನ್ಮಾನ ಕಾರ್ಯಕ್ರಮ ಸಾಕ್ಷಿಯಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ನಾಡೋಜ ಡಾ.ವೂಡೇ ಪಿ.ಕೃಷ್ಣ ಮಾತನಾಡಿ, ನಮ್ಮ ಕಾಲೇಜಿನಿಂದ ವೈದ್ಯಕೀಯ ಶಿಕ್ಷಣ ಹಾಗೂ ವೃತ್ತಿಪರ ಪದವಿಗಳಿಗೆ ದಾಖಲಾತಿ ಪಡೆದ ವಿದ್ಯಾರ್ಥಿಗಳಿಗೆ ಅಭಿನಂದಿಸಲು ಸಂತೋಷವಾಗುತ್ತದೆ ಎಂದರು. ನಮ್ಮ ಸಂಸ್ಥೆಯಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳು ಜಾಗತಿಕ ಮಟ್ಟದಲ್ಲಿ ಅನೇಕ ಉನ್ನತ ಸ್ಥಾನಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿದ ವಿದ್ಯಾರ್ಥಿನಿ ಯಶಸ್ವಿನಿಯ ತಂದೆ ಡಾ.ಸಿದ್ದಗಂಗಯ್ಯ ಮಾತನಾಡಿ, ಬುದ್ಧಿವಂತರನ್ನು ಸೇರಿಸಿಕೊಂಡು ಬುದ್ಧಿವಂತರನ್ನಾಗಿ ಮಾಡುವುದು ಕಷ್ಟವಲ್ಲ, ಮಧ್ಯಮ ವರ್ಗದ ಮತ್ತು ಬಡ ವಿದ್ಯಾರ್ಥಿಗಳನ್ನು ರ್‍ಯಾಂಕ್ ತೆಗೆಯುವಂತೆ ಮಾಡುವುದು ಮುಖ್ಯ. ಆ ನಿಟ್ಟಿನಲ್ಲಿ ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ ಅತ್ಯಂತ ಗುಣಮಟ್ಟದ ಶಿಕ್ಷಣವನ್ನು ಕಡಿಮೆ ವೆಚ್ಚದಲ್ಲಿ ನೀಡುತ್ತಾ ಬಂದಿದೆ ಎಂದರು. ಸನ್ಮಾನ ಸ್ವೀಕರಿಸಿದ ವಿದ್ಯಾರ್ಥಿಗಳಾದ ಬಿಂದು ಶ್ರೀ ಬಿ ಎಸ್, ಯಶಸ್ವಿನಿ. ಎಸ್, (ಮೈಸೂರು ಮೆಡಿಕಲ್ ಕಾಲೇಜು. ಜ್ಞಾನ ಬಿ.ಆರ್ (ಜೆಜೆಎಂಎಂಸಿ ದಾವಣಗೆರೆ), ಸ್ವಾತಿ ಶೇಖರ್ (ಶ್ರೀದೇವಿ ಮೆಡಿಕಲ್ ಕಾಲೇಜು ತುಮಕೂರು). ಸಿಂಚನಾ ಎನ್ ಮೂರ್ತಿ, ಅಫ್ರಿನ್ ಇಕ್ಬಾಲ್ . (ಬಿಎಂಎಸ್ ಕಾಲೇಜು ಬೆಂಗಳೂರು), ಲಕ್ಷ್ಮಿ ಎಸ್.(ಎಸ್ಐಟಿ ತುಮಕೂರು) ಕಾರ್ಯಕ್ರಮದಲ್ಲಿ ಪ್ರಾಚಾರ್ಯರಾದ ಬಸವರಾಜು ಬಿ.ವಿ. ಶೇಷಾದ್ರಿಪುರಂ ಪದವಿ ಕಾಲೇಜಿನ ಪ್ರಾಂಶುಪಾಲರಾದ ಜಗದೀಶ ಜಿ.ಟಿ ಉಪಸ್ಥಿತರಿದ್ದರು.

Tumkur Edition
11 Mar, 2022 Page No. 7
Powered by : eReleGo.com

ವಿಶ್ವವಾಣಿ
17.03.2022 ಗುರುವಾರ
vishwavani.news

ಎನ್‌ಎಸ್‌ಎಸ್ ವಿದ್ಯಾರ್ಥಿಗಳಿಂದ ಸಮಾಜಮುಖಿ ಕಾರ್ಯ ಸಾಧ್ಯ



ಎನ್‌ಎಸ್‌ಎಸ್ ಭಾವೈಕ್ಯತಾ ಶಿಬಿರವನ್ನು ಅಪರ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಉದ್ಘಾಟಿಸಿದರು. ಡಾ.ವೂಡೆ ಪಿ.ಕೃಷ್ಣ ಪ್ರೊ.ಲಿಂಗರಾಜ ಮತ್ತಿತರರು ಇದ್ದರು.

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಬೆಂಗಳೂರು ಮಹಾನಗರ ಐಟಿ ಸಿಟಿ ಮತ್ತು ಸಿಲಿಕಾನ್ ವ್ಯಾಲಿ ಎಂದು ಪ್ರಾಮುಖ್ಯತೆಯನ್ನು ಪಡೆದುಕೊಂಡಿದ್ದು, ರಾಜ್ಯದ ಶೇ. 60ರಷ್ಟು ಯುವಜನರು ಐಟಿ ಕ್ಷೇತ್ರದಲ್ಲಿ ಕೆಲಸ ಮಾಡಲು ಇಚ್ಛೆ ಪಡುತ್ತಾರೆ ಎಂದು ಕ್ರೀಡಾ ಮತ್ತು ಯುವ ಸಬಲೀಕರಣ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅಭಿಪ್ರಾಯಪಟ್ಟರು.

ನಗರದ ಗಾಂಧಿ ಭವನದಲ್ಲಿ ಆಯೋಜಿಸಿದ್ದ ಎನ್‌ಎಸ್‌ಎಸ್ 7 ದಿನಗಳ ರಾಷ್ಟ್ರೀಯ ಭಾವೈಕ್ಯತಾ ಶಿಬಿರ ಉದ್ಘಾಟಿಸಿ ಮಾತನಾಡಿ, ರಾಷ್ಟ್ರೀಯ ಭಾವೈಕ್ಯತೆ ಶಿಬಿರದಿಂದ ವಿದ್ಯಾರ್ಥಿಗಳಲ್ಲಿ ಸಹಬಾಳ್ವೆ ಮತ್ತು ಸಮಾಜಮುಖಿ ಕಾರ್ಯ ನಿರ್ವಹಿಸಲು ಸಾಧ್ಯವಾಗುತ್ತದೆ. ನಾವು ಭಾರತೀಯರು. ನಮ್ಮ ಕಲೆ-ಸಂಸ್ಕೃತಿಯನ್ನು ಎತ್ತಿಹಿಡಿಯಲು ರಾಷ್ಟ್ರೀಯ ಭಾವೈಕ್ಯತೆ ಶಿಬಿರಗಳು ಉತ್ತಮ ವೇದಿಕೆ ಆಗುತ್ತವೆ ಎಂದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ನಾಡೋಜ ಡಾ. ವೂಡೇ ಪಿ. ಕೃಷ್ಣ ಮಾತನಾಡಿ, ಎನ್‌ಎಸ್‌ಎಸ್ ಸ್ವಯಂಸೇವಕರು ಸೇವೆಯ ಜತೆಯಲ್ಲಿ ಜೀವನದ ಪಾಠ ಕಲಿಯಲು ಸಾಧ್ಯವಾಗುತ್ತದೆ. ಕಾಲೇಜಿನ ಕೊಠಡಿಯ ಶಿಕ್ಷಣ ಡಿಗ್ರಿ ನೀಡುತ್ತದೆ. ಆದರೆ ಎನ್‌ಎಸ್‌ಎಸ್ ಮುಖಾಂತರ ಉತ್ತಮ ನಾಯಕರಾಗಿ ದೇಶಸೇವೆ ಮಾಡಲು ಮತ್ತು ಜೀವನದ ಪಾಠ ಕಲಿಯಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಬೆಂಗಳೂರು ನಗರ ವಿವಿ ಕುಲಪತಿ ಪ್ರೊ. ಲಿಂಗರಾಜ, ಎನ್‌ಎಸ್‌ಎಸ್ ಪ್ರಾದೇಶಿಕ ನಿರ್ದೇಶಕ ಕಾದ್ರಿ ನರಸಿಂಹಯ್ಯ, ರಾಜ್ಯ ಎನ್‌ಎಸ್‌ಎಸ್ ಅಧಿಕಾರಿ ಪ್ರತಾಪ್ ಲಿಂಗಯ್ಯ, ಬೆಂಗಳೂರು ನಗರ ವಿವಿ ಕುಲಸಚಿವ ಪ್ರೊ. ರಮೇಶ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಪ್ರಜಾವಾಣಿ ಗುರುವಾರ ● ಮಾರ್ಚ್ 17, 2022

ಸಹಬಾಳ್ವೆ ಮೂಡಿಸುವ ರಾಷ್ಟ್ರೀಯ ಭಾವೈಕ್ಯ ಶಿಬಿರ: ಶಾಲಿನಿ ರಜನೀಶ್



ಬೆಂಗಳೂರು: 'ವಿದ್ಯಾರ್ಥಿಗಳಲ್ಲಿ ಸಹಬಾಳ್ವೆ ಮೂಡಿಸಲು ಮತ್ತು ಸಮಾಜಮುಖಿ ಕಾರ್ಯನಿರ್ವಹಿಸಲು ರಾಷ್ಟ್ರೀಯ ಭಾವೈಕ್ಯ ಶಿಬಿರಗಳು ಪೂರಕ' ಎಂದು ಕ್ರೀಡಾ ಮತ್ತು ಯುವ ಸಬಲೀಕರಣ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅಭಿಪ್ರಾಯಪಟ್ಟರು.

ಬೆಂಗಳೂರು ನಗರ ವಿಶ್ವವಿದ್ಯಾಲಯ, ರಾಜ್ಯ ಎನ್‌ಎಸ್‌ಎಸ್ ಕೋಶ, ರಾಜ್ಯ ಸರ್ಕಾರ ಮತ್ತು ಎನ್‌ಎಸ್‌ಎಸ್ ಪ್ರಾದೇಶಿಕ ನಿರ್ದೇಶನಾಲಯ ವತಿಯಿಂದ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಮತ್ತು ಬೆಂಗಳೂರು ನಗರ ವಿಶ್ವವಿದ್ಯಾಲಯದ ಬಹುಶಿಸ್ತೀಯ ಕಾಲೇಜಿನ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಎನ್‌ಎಸ್‌ಎಸ್ ಏಳು ದಿನಗಳ ರಾಷ್ಟ್ರೀಯ ಭಾವೈಕ್ಯ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

'ಭಾರತ ವೈವಿಧ್ಯಮಯ ದೇಶ. ಇಲ್ಲಿ ಹಲವಾರು ಸಂಸ್ಕೃತಿಗಳಿವೆ. ನಮ್ಮ ಕಲೆ-ಸಂಸ್ಕೃತಿಯನ್ನು ಎತ್ತಿಹಿಡಿಯಲು ರಾಷ್ಟ್ರೀಯ ಭಾವೈಕ್ಯ ಶಿಬಿರಗಳು ಉತ್ತಮ ವೇದಿಕೆ ಒದಗಿಸಲಿವೆ' ಎಂದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೆ ಪಿ.ಕೃಷ್ಣ, 'ಎನ್‌ಎಸ್‌ಎಸ್ ಮೂಲಕ ಉತ್ತಮ ನಾಯಕರಾಗಿ ದೇಶ ಸೇವೆ ಮಾಡಲು ಮತ್ತು ಜೀವನದ ಪಾಠ ಕಲಿಯಲು ಸಾಧ್ಯ. ವಿದ್ಯಾರ್ಥಿಗಳು ಜೀವನದಲ್ಲಿ ಶಿಸ್ತು ಅಳವಡಿಸಿಕೊಳ್ಳಬೇಕು' ಎಂದು ತಿಳಿಸಿದರು.

ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಲಿಂಗರಾಜ ಗಾಂಧಿ ಅಧ್ಯಕ್ಷತೆ ವಹಿಸಿದ್ದರು. ಎನ್‌ಎಸ್‌ಎಸ್ ಪ್ರಾದೇಶಿಕ ನಿರ್ದೇಶಕ ಖಾದ್ರಿ ನರಸಿಂಹಯ್ಯ, ರಾಜ್ಯ ಎನ್‌ಎಸ್‌ಎಸ್ ಅಧಿಕಾರಿ ಪ್ರತಾಪ್ ಲಿಂಗಯ್ಯ ಇದ್ದರು.

ಸಂಯುಕ್ತ ಕರ್ನಾಟಕ

17 ಮಾರ್ಚ್ 2022 ಗುರುವಾರ
ಬೆಂಗಳೂರು (BENGALURU)

ನೇರ ನುಡಿಯ ಕೆ.ಎಚ್.ಪಾಟೀಲ್

ಸಂ.ಕ.ಸಮಾಚಾರ, ಬೆಂಗಳೂರು.
ಸಹಕಾರಿ ಕ್ಷೇತ್ರದಲ್ಲಿ ಧುರೀಣರೆನ್ನಿಸಿದ್ದ ಕೆ.ಎಚ್.ಪಾಟೀಲ್ ಅವರು ಅಂದಿನ ರಾಜಕಾರಣದಲ್ಲಿ ನೇರವಂತಿಕೆಗೆ ಹೆಸರಾಗಿದ್ದರು. ಮೈಸೂರು ಹೆಸರು ಬದಲಾಗಿ ರಾಜ್ಯಕ್ಕೆ ಕರ್ನಾಟಕವೆಂದು ಹೊಸದಾಗಿ ನಾಮಕರಣ ಮಾಡುವ ಸಂದರ್ಭದಲ್ಲಿ ವಿಧಾನ ಪರಿಷತ್‌ನಲ್ಲಿ ಈ ಪ್ರಸ್ತಾವನೆಯನ್ನು ಸಲ್ಲಿಸಿದವರೇ ಕೆ.ಎಚ್.ಪಾಟೀಲ್ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಕೆ.ಎಚ್.ಪಾಟೀಲ್ ಅವರ 98ನೇ ಜನ್ಮ ದಿನಾಚರಣೆ ಅಂಗವಾಗಿ ಗಾಂಧೀ ಭವನದಲ್ಲಿ ಕೆಹೆಚ್ಪಿ ಅವರ ಅಭಿಮಾನಿ ಬಳಗದ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕೆ.ಎಚ್. ಪಾಟೀಲ್ ಅವರು ಮತ್ತು ತಮ್ಮ ನಡುವಿನ ನಿಕಟ ಸಂಬಂಧದ ಬಗ್ಗೆ ನೆನಪು ಮಾಡಿಕೊಂಡರು.

ಮುಖ್ಯಮಂತ್ರಿ ದೇವರಾಜ ಅರಸು ಅವರ ಒಡನಾಡಿಯಾಗಿದ್ದ ಕೆ.ಎಚ್. ಪಾಟೀಲ್ ಅವರು ರಾಜಕಾರಣದಲ್ಲಿ ನಮಗೆಲ್ಲ ಪ್ರೇರಣೆಯಾಗಿದ್ದರು. ಅಂದು ಸೇವಾದಳದ ಅಧ್ಯಕ್ಷರಾಗಿ ಕೆಲಸ ಮಾಡಿದವರು. ಬಳಿಕ ಸೇವಾದಳದ ಅಧಿಕಾರವನ್ನು ಅವರು ನನಗೆ ಹಸ್ತಾಂತರಿಸಿದ್ದರು ಎಂದು ಮೇಲ್ಮನೆ ಪ್ರತಿಪಕ್ಷ ನಾಯಕ ಬಿ.ಕೆ.ಹರಿಪ್ರಸಾದ್ ಹೇಳಿದರೆ. ಬಿ.ಎಲ್.ಶಂಕರ್ ಅವರು ಕೆ.ಎಚ್. ಪಾಟೀಲ್ ಅವರೊಂದಿಗೆ ನಾನು ಧಾರವಾಡದಲ್ಲಿ ಓದುತ್ತಿರುವಾಗ ಅವರನ್ನು ಆಗಾಗ ಕಾಣುತ್ತಿದ್ದೆನು ಎಂದರು. ವಿಧಾನ ಪರಿಷತ್ ಮಾಜಿ ಸಭಾಪತಿ ವಿ.ಆರ್.ಸುದರ್ಶನ್, ಮೇಲ್ಮನೆ ಸದಸ್ಯ ಪ್ರಕಾಶ್ ರಾಥೋಡ್, ಹಿರಿಯ ಚಿಂತಕ ಪ್ರೊ.ಜಿ.ಬಿ. ಶಿವರಾಜ್, ಡಾ.ವೂಡೆ ಪಿ.ಕೃಷ್ಣ ಅವರು ಸೇರಿದಂತೆ ಮುಂತಾದ ಗಣ್ಯರು ಕೆ.ಹೆಚ್.ಪಾಟೀಲ್ ಅವರ ಭಾವ ಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ಇದಕ್ಕೂ ಮುನ್ನ ಸಭಾಪತಿ ಬಸವರಾಜ ಹೊರಟ್ಟಿಯವರು ಕೆ.ಹೆಚ್.ಪಾಟೀಲ ಅವರ ಭಾವಚಿತ್ರವನ್ನು ಅನಾವರಣಗೊಳಿಸಿದರು.



ಕೆ.ಎಚ್.ಪಾಟೀಲ್ ಅವರ 98ನೇ ಜನ್ಮದಿನದ ಅಂಗವಾಗಿ ಏರ್ಪಡಿಸಲಾಗಿದ್ದ ಕಾರ್ಯಕ್ರಮದಲ್ಲಿ ಸಭಾಪತಿ ಬಸವರಾಜ ಹೊರಟ್ಟಿಯವರು ನೂತನ ಭಾವಚಿತ್ರ ಅನಾವರಣಗೊಳಿಸಿದರು.

ಸಂಯುಕ್ತ ಕರ್ನಾಟಕ


Wed. 16 March 2022

ಕಲಾವಿದರಿಗೆ ವೇದಿಕೆ ಬಹುಮುಖ್ಯ

ಸಂ.ಕ.ಸಮಾಚಾರ, ಬೆಂಗಳೂರು

ಕಲಾವಿದರ ಕಲೆ ಎಷ್ಟೇ ಶ್ರೀಮಂತಿಕೆಯಿಂದ ಕೂಡಿದ್ದರೂ ಅವಕಾಶ ಬಹಳ ಮುಖ್ಯ. ಆಗ ಮಾತ್ರ ಕಲಾವಿದ ಬೆಳಗಲು ಸಾಧ್ಯ ಎಂದು ಕಸಾಪ ರಾಜ್ಯಾಧ್ಯಕ್ಷ ಡಾ. ಮಹೇಶ್ ಜೋಷಿ ಅಭಿಪ್ರಾಯಪಟ್ಟರು.

ನಗರದಲ್ಲಿ ಕಲಾದೇಗುಲ ಸಂಸ್ಥೆ ಹಮ್ಮಿಕೊಂಡಿದ್ದ ಗಾನಲಯ ಸಂಭ್ರಮ ಕಾರ್ಯಕ್ರಮದಲ್ಲಿ ಕಲಾದೇಗುಲ ವಾರ್ಷಿಕ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಅವರು, ಕಲಾವಿದರಿಗೆ ವೇದಿಕೆ ಕಲ್ಪಿಸುವ ಸತ್ಕಾರ್ಯದಲ್ಲಿ ಕಲಾದೇಗುಲ ಸಂಸ್ಥೆ ತೊಡಗಿದೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು. ಕಾರ್ಯಕ್ರಮ ಉದ್ಘಾಟಿಸಿದ ಹಿರಿಯ ಗಾಯಕ ವೈ ಕೆ ಮುದ್ದುಕೃಷ್ಣ ಮಾತನಾಡಿ, ಕಲಾದೇಗುಲ ಶ್ರೀನಿವಾಸ್ ಒಳ್ಳೆಯ ಕೆಲಸ ಮಾಡುತ್ತಿದ್ದಾರೆ ಹಾಗು ಅಕ್ಷಿ ಚಿತ್ರಕ್ಕೆ ರಾಷ್ಟ್ರಪ್ರಶಸ್ತಿ ಬಂದಿದ್ದಕ್ಕೆ ಮತ್ತೊಮ್ಮೆ ಅಭಿನಂದನೆ ತಿಳಿಸಿದರು .



ಬೆಂಗಳೂರಿನಲ್ಲಿ ಕಲಾದೇಗುಲ ಸಂಸ್ಥೆ ಕಸಾಪ ರಾಜ್ಯಾಧ್ಯಕ್ಷ ಡಾ. ಮಹೇಶ್ ಜೋಷಿ ಹಾಗೂ ಗಾಯಕಿ ಹೇಮಾಪ್ರಸಾದ್ ಅವರಿಗೆ ಕಲಾದೇಗುಲ ವಾರ್ಷಿಕ ಪ್ರಶಸ್ತಿ ನೀಡಿ ಗೌರವಿಸಿತು. ಸಂಸ್ಥೆ ಕಾರ್ಯದರ್ಶಿ ಕಲಾದೇಗುಲ ಶ್ರೀನಿವಾಸ ಮತ್ತಿತರರಿದ್ದರು.

ನಾಡೋಜ ಡಾವುಡೆ ಪಿ ಕೃಷ್ಣ ಮಾತನಾಡಿ, ಈ ಕಾರ್ಯಕ್ರಮ ತುಂಬ ಅರ್ಥಪೂರ್ಣವಾಗಿದ್ದು, ಸಂಸ್ಕಾರ ತುಂಬಿದ ವಾತಾವರಣ ದಿಂದಲೇ ಇಂದಿನ ಪೋಷಕರು ಮಕ್ಕಳಿಗೆ ಇಂತಹ ದೈವಿಕ ಕಲೆಯನ್ನ ಕಲಿಸುತ್ತಿದ್ದಾರೆಂದರು.ಡಾ ಹೇಮಾ ಪ್ರಸಾದ್ ಮಾತನಾಡಿ ಕಲೆ ಹವ್ಯಾಸ ವಾಗಿ ಮಾತ್ರ ಸೀಮಿತವಾಗ ಬಾರದು. ವೃತ್ತಿಯಾಗಿ ಸ್ವೀಕರಿಸಬೇಕು ಎಂದರು ವೇದಿಕೆಯಲ್ಲಿ ಕಲಾದೇಗುಲ ಸಂಸ್ಥೆಯ ಕಾರ್ಯದರ್ಶಿ ಶ್ರೀನಿವಾಸ್ ಉಪಸ್ಥಿತ ರಿದ್ದರು. ಇದೇ ಸಂದರ್ಭದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಇಂದು ಸಂಜೆ 15 ಮಾರ್ಚ್ 2022

"ಗಾನ ಲಯ ಸಂಭ್ರಮ"

2022 ಸಾಂಸ್ಕೃತಿಕ ಕಾರ್ಯಕ್ರಮ



ಬೆಂಗಳೂರು: ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಕಲಾದೇಗುಲ ಸಂಸ್ಥೆಯು "ಗಾನ ಲಯ ಸಂಭ್ರಮ " – 2022 ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ " ಕಲಾದೇಗುಲ ವಾರ್ಷಿಕ ಪ್ರಶಸ್ತಿ " ಕೊಡಮಾಡುವ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು ಹಾಗು ನಾಡೋಜ ಡಾ ಮಹೇಶ್ ಜೋಶಿ (2021 ನೇ ಸಾಲಿನ) ಹಾಗೂ ಸಂಗೀತ ಗಂಗಾ ಸಂಸ್ಥೆಯ ಅಧ್ಯಕ್ಷರಾದ ಡಾ ಹೇಮಾ ಪ್ರಸಾದ್ ಅವರಿಗೆ (2020 ನೇ ಸಾಲಿನ) ಕಲಾದೇಗುಲ ವಾರ್ಷಿಕ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ವೈ.ಕೆ.ಮುದ್ದುಕೃಷ್ಣ ಮಾಡಿದರೆ, ನಾಡೋಜ ಡಾ.ವುಡೆ ಪಿ.ಕೃಷ್ಣ ಕಲಾದೇಗುಲ ವಾರ್ಷಿಕ ಪ್ರಶಸ್ತಿ ನೀಡಿ ಗೌರವಿಸಿದರು ಜೊತೆಗೆ ವೇದಿಕೆಯಲ್ಲಿ ಕಲಾದೇಗುಲ ಸಂಸ್ಥೆಯ ಕಾರ್ಯದರ್ಶಿ ಶ್ರೀನಿವಾಸ್ ಉಪಸ್ಥಿತರಿದ್ದರು.

ಪ್ರಶಸ್ತಿಯನ್ನು ಸ್ವೀಕರಿಸಿ ಮಾತನಾಡಿದ ನಾಡೋಜ ಡಾ ಮಹೇಶ ಜೋಶಿ ಕಲಾದೇಗುಲ ಸಂಸ್ಥೆ ಒಳ್ಳೆಯ ಕೆಲಸವನ್ನ ಮಾಡುತ್ತಿದೆ . ಕಲಾವಿದರಿಗೆ ವೇದಿಕೆ ತುಂಬಾ ಮುಖ್ಯ ಎಂದರು.

ನಾಡೋಜ ಡಾ ವುಡೆ ಪಿ.ಕೃಷ್ಣ ಮಾತನಾಡಿ, ಈ ಕಾರ್ಯಕ್ರಮ ತುಂಬ ಅರ್ಥಪೂರ್ಣವಾಗಿದ್ದು, ಸಂಸ್ಕಾರ ತುಂಬಿದ ವಾತಾವರಣವಾಗಿರಲು ಕಾರಣ ಇಂದಿನ ಪೋಷಕರು ಮಕ್ಕಳಿಗೆ ಇಂತಹ ದೈವೀಕ ಕಲೆಯನ್ನ ಕಲಿಸುತ್ತಿರುವುದು ಎಂದರು. ಇನ್ನು ಡಾ ಹೇಮಾ ಪ್ರಸಾದ್ ಮಾತನಾಡಿ ಕಲೆ ಹವ್ಯಾಸವಾಗಿ ಮಾತ್ರ ಸೀಮಿತವಾಗಬಾರದು, ವೃತ್ತಿಯಾಗಿ ಸ್ವೀಕರಿಸಬೇಕು ಎಂದರು . ಇದು ಸಾಧ್ಯವೆನ್ನುವುದನ್ನು ಧೃಡವಾಗಿ ಉದಾಹರಣೆ ಸಮೇತ ಹೇಳಿದರು.

ಇನ್ನು ವೈ.ಕೆ.ಮುದ್ದುಕೃಷ್ಣ ಮಾತನಾಡಿ ಕಲಾದೇಗುಲ ಶ್ರೀನಿವಾಸ್ ಒಳ್ಳೆಯ ಕೆಲಸ ಮಾಡುತ್ತಿದ್ದಾರೆ ಹಾಗು ಅಕ್ಷಿ ಚಿತ್ರಕ್ಕೆ ರಾಷ್ಟ್ರಪ್ರಶಸ್ತಿ ಬಂದಿದ್ದಕ್ಕೆ ಮತ್ತೊಮ್ಮೆ ಅಭಿನಂದನೆ ತಿಳಿಸಿದರು. ಇದೇ ಸಂದರ್ಭದಲ್ಲಿ ಕಲಾದೇಗುಲದ ವತಿಯಿಂದ ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಲಾಗಿತ್ತು .

ವಿಜಯ ಕರ್ನಾಟಕ ಮಂಗಳವಾರ, 15 ಮಾರ್ಚ್ 2022



ಕಲಾದೇಗುಲ ಸಂಸ್ಥೆ ನಗರದ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಆಯೋಜಿಸಿದ್ದ 'ಗಾನ ಲಯ ಸಂಭ್ರಮ'ದಲ್ಲಿ ಕಸಾಪ ಅಧ್ಯಕ್ಷ ನಾಡೋಜ ಡಾ. ಮಹೇಶ್ ಜೋಶಿ ಹಾಗೂ ಗಾಯಕಿ ಡಾ. ಹೇಮಾ ಪ್ರಸಾದ್ ಅವರಿಗೆ ಕಲಾದೇಗುಲ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಡಾ. ವೂಡೇ ಪಿ. ಕೃಷ್ಣ ಪ್ರಶಸ್ತಿ ಪ್ರದಾನ ಮಾಡಿದರು. ಗಾಯಕ ವೈ ಕೆ ಮುದ್ದುಕೃಷ್ಣ ಉಪಸ್ಥಿತರಿದ್ದರು.

ಡಾ.ಮಹೇಶ್ ಜೋಶಿ, ಹೇಮಾ ಪ್ರಸಾದ್‌ಗೆ ಪ್ರಶಸ್ತಿ

ಬೆಂಗಳೂರು: ಕಲಾದೇಗುಲ ಸಂಸ್ಥೆ ವತಿಯಿಂದ ಗಾನ ಲಯ ಸಂಭ್ರಮ - 2022 ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಕಲಾದೇಗುಲ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ನಡೆಯಿತು.

ಕಸಾಪ ಅಧ್ಯಕ್ಷ ನಾಡೋಜ ಡಾ.ಮಹೇಶ್ ಜೋಶಿ ಅವರಿಗೆ 2021ನೇ ಸಾಲಿನ ಹಾಗೂ ಸಂಗೀತ ಗಂಗಾ ಸಂಸ್ಥೆಯ ಅಧ್ಯಕ್ಷೆ ಡಾ.ಹೇಮಾ ಪ್ರಸಾದ್ ಅವರಿಗೆ 2020ನೇ ಸಾಲಿನ ಕಲಾದೇಗುಲ ವಾರ್ಷಿಕ ಪ್ರಶಸ್ತಿ ನೀಡಿ ಗೌರವಿಸಲಾಯಿತು. ನಾಡೋಜ ಡಾ. ವೂಡೆ ಪಿ.ಕೃಷ್ಣ ಪ್ರಶಸ್ತಿ ಪ್ರದಾನ ಮಾಡಿದರು.


ಪ್ರಶಸ್ತಿ ಸ್ವೀಕರಿಸಿದ ನಾಡೋಜ ಮಹೇಶ್ ಜೋಶಿ, ಕಲಾವಿದರಿಗೆ ವೇದಿಕೆ ಅತಿ ಮುಖ್ಯವಾಗಿದ್ದು, ಇದನ್ನು ಒದಗಿಸುವ ಕಾರ್ಯವನ್ನು ಕಲಾ ದೇಗುಲ ಸಂಸ್ಥೆ ಮಾಡುತ್ತಿದೆ ಎಂದು ಶ್ಲಾಘಿಸಿದರು.

ವೈ.ಕೆ.ಮುದ್ದುಕೃಷ್ಣ ಕಾರ್ಯಕ್ರಮ ಉದ್ಘಾಟಿಸಿದರು. ಕಲಾದೇಗುಲ ಸಂಸ್ಥೆಯ ಕಾರ್ಯದರ್ಶಿ ಶ್ರೀನಿವಾಸ್ ಉಪಸ್ಥಿತರಿದ್ದರು.



ಕಲಾದೇಗುಲ ಸಂಸ್ಥೆ ವತಿಯಿಂದ ನಾಡೋಜ ಡಾ.ಮಹೇಶ್ ಜೋಶಿ ಮತ್ತು ಡಾ.ಹೇಮಾ ಪ್ರಸಾದ್ ಅವರಿಗೆ ಕಲಾದೇಗುಲ ವಾರ್ಷಿಕ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಸಂಯುಕ್ತ ಕರ್ನಾಟಕ
14 ಮಾರ್ಚ್ 2022 ಸೋಮವಾರ



ನಾಡೋಜ ಡಾ. ಹಂ.ಪ.ನಾಗರಾಜಯ್ಯರಿಂದ ಯುವಜನ ಸಮಾವೇಶ ಉದ್ಘಾಟನೆ

ಹೋರಾಟಗಳಿಗೆ ನೈತಿಕ ಮೌಲ್ಯ ಅಗತ್ಯ

ಸಂ.ಕ.ಸಮಾಚಾರ, ಬೆಂಗಳೂರು

ದೇಶವನ್ನು ಸುಧಾರಿಸುವ ನಿಟ್ಟಿನಲ್ಲಿ ಹೋರಾಟ ಮಾಡಲು ಪ್ರಥಮವಾಗಿ ನೈತಿಕತೆ ಮತ್ತು ಮೌಲ್ಯಗಳು ಮುಖ್ಯ. ಇಂತಹ ಮಹತ್ವಪೂರಿತ ಗುಣಗಳನ್ನು ಮೈಗೂಡಿಸಿಕೊಳ್ಳಬೇಕು. ಇಲ್ಲದಿದ್ದರೆ ಯಾವುದೇ ಹೋರಾಟಗಳು ಸಫಲತೆಯನ್ನು ಕಾಣುವುದಿಲ್ಲ ಎಂದು ಹಿರಿಯ ಸಾಹಿತಿ ನಾಡೋಜ ಡಾ. ಹಂ.ಪ.ನಾಗರಾಜಯ್ಯ ಎಂದು ಅಭಿಪ್ರಾಯಪಟ್ಟರು.

ಗಾಂಧಿ ಭವನದಲ್ಲಿ ಭಾನುವಾರ ಬುದ್ಧ-ಬಸವ-ಗಾಂಧಿ ಸಾಂಸ್ಕೃತಿಕ ಟ್ರಸ್ಟ್ ಮತ್ತು ಗಾಂಧಿ ಸ್ಮಾರಕ ನಿಧಿ ಆಶ್ರಯದಲ್ಲಿ ನಡೆದ ಗಾಂಧೀಜಿ, ವಿವೇಕಾನಂದ ಸ್ಮಾರಕ ಪ್ರಣೀತ 7 ನೇ ವರ್ಷದ ಯುವಜನ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಅವರು, ನೈತಿಕ ಪ್ರಜ್ಞೆ ಮತ್ತು ಆತ್ಮ ಸಾಕ್ಷಿಗೆ ಅನುಗುಣವಾಗಿ ಯುವಕರು ದೇಶ ಕಟ್ಟುವ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳುವ ಮೂಲಕ ದೇಶಕ್ಕೆ ತಮ್ಮ ಇತಿಮಿತಿಯಲ್ಲಿ ಕೊಡುಗೆ ನೀಡಬೇಕು ಎಂದು ಕಿವಿಮಾತು ಹೇಳಿದರು. ಇಂದಿನ ದಿನಗಳಲ್ಲಿ ಓದುವ ಅಭ್ಯಾಸ ಕಡಿಮೆ ಆಗಿದೆ. ಇದು ಸರಿಯಲ್ಲ.



ಯುವಜನ ಸಮಾವೇಶವನ್ನು ಹಿರಿಯ ಸಾಹಿತಿ ನಾಡೋಜ ಡಾ. ಹಂ.ಪ.ನಾಗರಾಜಯ್ಯ ಅರಳಿಮರಕ್ಕೆ ನೀರೆರೆಯುವ ಮೂಲಕ ಉದ್ಘಾಟಿಸಿದರು.

ಯುವಕರು ಮೊಬೈಲ್. ಇಂಟರ್‌ನೆಟ್ ಮತ್ತು ಸಾಮಾಜಿಕ ಮಾಧ್ಯಮಗಳಿಗೆ ಮಾರು ಹೋಗದೆ ಕಲೆ, ಇತಿಹಾಸ, ಸಾಹಿತ್ಯಾತ್ಮಕ ಪುಸ್ತಕಗಳನ್ನು ಓದಬೇಕು. ಆಗ ಮಾತ್ರ ಸಮಾಜವನ್ನು ಅರ್ಥ ಮಾಡಿಕೊಂಡು, ಪ್ರಬುದ್ಧತೆಯನ್ನು ಹೊಂದಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಡಾ.ಡಿ.ಸಿ.ಶಿವಕುಮಾರ್ ಅವರ ಕೃತಿಯನ್ನು ಬಿಡುಗಡೆ ಮಾಡಿ ಮಾತನಾಡಿದ ಸಾಹಿತಿ ಡಾ.ಕಮಲಾ ಹಂಪನಾ ಅವರು, ಗಾಂಧೀಜಿ ಅವರ ಸತ್ಯ, ಅಹಿಂಸೆ ಮತ್ತು ಬುದ್ಧ, ಬಸವಣ್ಣನವರ ಜೀವ ತತ್ವಗಳನ್ನು ಯುವ ಸಮುದಾಯ ಅಳವಡಿಸಿಕೊಳ್ಳಬೇಕು. ಸಾಹಿತ್ಯದ ಎಲ್ಲಾ ಪ್ರಕಾರಗಳನ್ನು ಓದಬೇಕು. ಇಲ್ಲದಿದ್ದರೆ ಗಟ್ಟಿ ವ್ಯಕ್ತಿತ್ವವನ್ನು ಪಡೆದುಕೊಳ್ಳಲು ಸಾಧ್ಯವಿಲ್ಲ ಎಂದು ವ್ಯಾಖ್ಯಾನಿಸಿದರು. ಸಮಾವೇಶದ ಅಧ್ಯಕ್ಷ ಸಂಗಮೇಶ ಮಾತನಾಡಿ, ಪ್ರಸ್ತುತ ವ್ಯವಸ್ಥೆಯಲ್ಲಿ ಜಾತ್ಯಾತೀತವಾಗಿ, ಧರ್ಮಾತೀತವಾಗಿ ಭಾರತದ ಜನಸಂಖ್ಯೆಯನ್ನು ನಿಯಂತ್ರಣಕ್ಕೆ ತರಬೇಕು. ಆಗ ಮಾತ್ರ ದೇಶ ಮತ್ತು ಜನರ ಬದುಕ ಹಸನಾಗಲು ಸಾಧ್ಯವಾಗುತ್ತದೆ ಎಂದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ.ವೂಡೇ ಪಿ.ಕೃಷ್ಣ, ಸಾಹಿತಿ ಶಶಿಕಾಂತರಾವ್, ವಕೀಲ ನಂಜಪ್ಪ ಕಾಳೇಗೌಡ, ಡಾ. ಎಸ್.ರಾಮಲಿಂಗೇಶ್ವರ ಮತ್ತಿತರರು ಇದ್ದರು.

ಸೋಮವಾರ 14 ಮಾರ್ಚ್ 2022
14 MARCH 2022



ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಸಹಯೋಗದೊಂದಿಗೆ ಆಯೋಜಿಸಿದ್ದ ಗಾಂಧೀಜಿ-ವಿವೇಕಾನಂದ ಪ್ರಣೀತ 7ನೇ ವರ್ಷದ ಯುವಜನ ಸಮಾವೇಶದಲ್ಲಿ ಕಲಾವಿದ ಸಂಗಮೇಶ ಉಪಾಸೆ ಅವರನ್ನು ಅಭಿನಂದಿಸಲಾಯಿತು. ಸಾಹಿತಿ ಹಂ.ಪ.ನಾಗರಾಜಯ್ಯ, ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ.ವೂಡೇ ಪಿ.ಕೃಷ್ಣ, ಸಾಹಿತಿ ಡಾ.ಕಮಲಾ ಹಂಪನಾ, ಲೇಖಕಿ ಇಂದಿರಾ ಕೃಷ್ಣಪ್ಪ, ಟ್ರಸ್ಟ್ ಅಧ್ಯಕ್ಷ ಡಾ.ಎಸ್. ರಾಮಲಿಂಗೇಶ್ವರ ಇದ್ದರು.

ನಂ1 ವಿಜಯವಾಣಿ
ಕನ್ನಡ ದಿನಪತ್ರಿಕೆ
VIJAYAVANI >> BENGALURU

ಸೋಮವಾರ 14 ಮಾರ್ಚ್ 2022
14 MARCH 2022




ಕಲಾದೇಗುಲ ಸಂಸ್ಥೆ ಆಯೋಜಿಸಿದ್ದ 'ಗಾನ ಲಯ ಸಂಭ್ರಮ' ಕಾರ್ಯಕ್ರಮದಲ್ಲಿ ಕಸಾಪ ಅಧ್ಯಕ್ಷ ಡಾ. ಮಹೇಶ ಜೋಶಿ ಹಾಗೂ ಗಾಯಕಿ ಡಾ. ಹೇಮಾ ಪ್ರಸಾದ್ ಅವರಿಗೆ ಕಲಾದೇಗುಲ ಪ್ರಶಸ್ತಿ ಪ್ರದಾನ ಮಾಡಲಾಯಿತು. ವೂಡೇ ಪಿ. ಕೃಷ್ಣ, ವೈ.ಕೆ. ಮುದ್ದುಕೃಷ್ಣ ಇದ್ದರು.

2

ಉದಯವಾಣಿ / ಬೆಂಗಳೂರು


ಸೋಮವಾರ, ಮಾರ್ಚ್ 14, 2022



ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್ ಭಾನುವಾರ ಗಾಂಧಿ ಭವನದಲ್ಲಿ ಹಮ್ಮಿಕೊಂಡಿದ್ದ ರಾಜ್ಯ ಮಟ್ಟದ ಯುವಜನ ಸಮಾವೇಶವನ್ನು ಹಿರಿಯ ಸಂಶೋಧಕ ಹಂಪ ನಾಗರಾಜಯ್ಯ, ಲೇಖಕಿ ಡಾ.ಕಮಲಾ ಹಂಪನಾ ಉದ್ಘಾಟಿಸಿದರು. ಶಿಕ್ಷಣ ತಜ್ಞ ಡಾ. ವೂಡೇ ಪಿ ಕೃಷ್ಣ, ಇಂದಿರಾ ಕೃಷ್ಣಪ್ಪ, ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್‌ನ ಅಧ್ಯಕ್ಷ ಡಾ.ಸಿಸಿರಾ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಹೊಸ ದಿಗಂತ
7
14 Mar 2022

ಸಮಾಜಕ್ಕಾಗಿ ಜಾತಿವಾದ ಅಂತ್ಯವಾಗಲಿ



ಬೆಂಗಳೂರು: ಸಾರ್ವಜನಿಕರ ನೆಮ್ಮದಿ ಕೆಡಿಸುತ್ತಿರುವ ಧರ್ಮ ಮತ್ತು ಜಾತಿವಾದಕ್ಕೆ ಅಂತ್ಯ ಹಾಡಿದಾಗ ಮಾತ್ರ ದೇಶದಲ್ಲಿ ಉತ್ತಮ ಆಡಳಿತ, ವ್ಯವಹಾರಿಕ ವ್ಯವಸ್ಥೆಯನ್ನು ರೂಪಿಸಲು ಸಾಧ್ಯ ಎಂದು ಹಾಸ್ಯ ಕಲಾವಿದ ಸಂಗಮೇಶ ಉಪಾಸೆ ಹೇಳಿದರು.

ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್ ಮತ್ತು ಯುವ ಸಬಲೀಕರಣ ಇಲಾಖೆ ಸಹಯೋಗದಲ್ಲಿ ಆಯೋಜಿಸಲಾದ ಗಾಂಧೀಜಿ ವಿವೇಕಾನಂದ ಪ್ರಣೀತ ಯುವಜನ ಸಮಾವೇಶದ ಸರ್ವಾಧ್ಯಕ್ಷ ಸ್ಥಾನದಿಂದ ಮಾತನಾಡಿ, ಇಂದು ದೇಶವನ್ನು ವಿಭಜನೆ ಮಾಡುತ್ತಿರುವ ಈ ಜಾತಿ ಮತ್ತು ಧರ್ಮದ ಮನೋಭಾವವನ್ನು ಹೋಗಲಾಡಿಸಬೇಕು. ಅದಕ್ಕಾಗಿ ಮೊದಲಿ ಎಲ್ಲರ ಮನಸ್ಸನ್ನು ಕೆಡಿಸುತ್ತಿರುವ ಮೀಸಲಾತಿಗಳನ್ನು ತೆಗೆದು ಹಾಕಿ, ನಿಜವಾದ ಪ್ರತಿಭೆ ಇರುವವರಿಗೆ ಮೊದಲ ಆದ್ಯತೆ ದೊರಕುವಂತೆ ಆಗಬೇಕು. ಆಗ ಮಾತ್ರ ಸಮಾಜದಲ್ಲಿ ಮೂಡಿರುವ ಭಿನ್ನಾಭಿಪ್ರಾಯ ಕಡಿಮೆ ಆಗುತ್ತದೆ ಎಂದು ಹೇಳಿದರು.

ಯುವಕರು ವ್ಯಸನ ಮುಕ್ತರಾಗಲಿ: ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ನಾಡೋಜ ಡಾ.ವೂಡೇ ಪಿ. ಕೃಷ್ಣ ಮಾತನಾಡಿ, ಇಂದಿನ ಯುವ ಜನಾಂಗ ಹೆಚ್ಚು ವ್ಯಸನಗಳತ್ತ ವಾಲುತ್ತಿದೆ. ಇದು ಅಪಾಯಕಾರಿ ಬೆಳವಣಿಗೆ, ಇದನ್ನು ಆದಷ್ಟು ಬೇಗ ನಿಯಂತ್ರಿಸಿ ಸಮಾಜವನ್ನು ಮತ್ತೆ ಉತ್ತಮ ದಾರಿಗೆ ತರುವುದು ನಮ್ಮೆಲ್ಲರ ಜವಾಬ್ದಾರಿ ಆಗಿದೆ. ಅದಕ್ಕಾಗಿ ಕಳೆದು ಹೋಗುತ್ತಿರುವ ಮೌಲ್ಯಾಧಾರಿತ ಹಾಗೂ ಜಾಗೃತಿ ಕಾರ್ಯಕ್ರಮಗಳನ್ನು ಹೆಚ್ಚಾಗಿ ಹಮ್ಮಿಕೊಳ್ಳಬೇಕು ಎಂದು ಹೇಳಿದರು.

ಸಮಿತಿ ನಾಡೋಜ ಡಾ. ಕಮಲಾ ಹಂಪನಾ, ಗಾಂಧಿ ಸ್ಮಾರಕ ನಿಧಿಯ ಗೌರವ ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ, ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್‌ನ ಅಧ್ಯಕ್ಷ ಡಾ. ಎಸ್ ರಾಮಲಿಂಗೇಶ್ವರ (ಸಿಸಿರಾ), ಸಮಿತಿ ಶಶಿಕಾಂತರಾವ್ ಮುತ್ತಿಕರು ಉಪಸ್ಥಿತರಿದ್ದರು.


ಯುವಜನತೆ ಪುಸ್ತಕ ಓದಬೇಕು

ಹಿರಿಯ ಸಾಹಿತಿ ನಾಡೋಜ ಡಾ. ಹಂ.ಪ. ನಾಗರಾಜಯ್ಯ ಮಾತನಾಡಿ, ಯುವ ಜನತೆ ಹೆಚ್ಚು ಪುಸ್ತಕ ಓದುವುದನ್ನು ಅಳವಡಿಸಿಕೊಳ್ಳಬೇಕು. ಇದರಿಂದ ಜ್ಞಾನವೂ ಹೆಚ್ಚಾಗುತ್ತದೆ ಮತ್ತು ವಿವಿಧ ದುರಭ್ಯಾಸಗಳು ಕಡಿಮೆ ಆಗುತ್ತವೆ. ಅದಕ್ಕಾಗಿ ಪ್ರತಿಯೊಂದು ಮನೆಯಲ್ಲಿ ಚಿಕ್ಕ ಒಂದು ಗ್ರಂಥಾಲಯ ಇರಬೇಕು ಎಂದು ಹೇಳಿದರು.

ವಾರ್ತಾ ಭಾರತಿ

Mar 14, 2022

ಬೆಂಗಳೂರಿನ ಗಾಂಧಿ ಭವನದಲ್ಲಿ 'ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್'ನ ರಾಜ್ಯಮಟ್ಟದ ಯುವಜನ ಸಮಾವೇಶವನ್ನು ನಾಡೋಜ ಡಾ.ಹಂಪನಾ, ನಾಡೋಜ ಡಾ.ಕಮಲಾ ಹಂಪನಾ, ಶಿಕ್ಷಣ ತಜ್ಞ ನಾಡೋಜ ಡಾ.ವೂಡೇ ಪಿ.ಕೃಷ್ಣ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಸಮಾವೇಶದ ಅಧ್ಯಕ್ಷ, ಕಲಾವಿದ ಸಂಗಮೇಶ ಉಪಾಸೆ ಅವರನ್ನು ಅಭಿನಂದಿಸಲಾಯಿತು. ನ್ಯಾಯವಾದಿ ನಂಜಪ್ಪ ಕಾಳೇಗೌಡ, ಸಾಹಿತಿ ಶಶಿಕಾಂತರಾವ್, ಲೇಖಕಿ ಇಂದಿರಾ ಕೃಷ್ಣಪ್ಪ, ಟ್ರಸ್ಟ್ ಅಧ್ಯಕ್ಷ ಡಾ.ಸಿಸಿರಾ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.



ಕ್ರೀಡಾಪಟುಗಳ ಸಾಮರ್ಥ್ಯ ಪ್ರದರ್ಶನಕ್ಕೆ ವೇದಿಕೆ

• [illegible]

ಶೇಷಾದ್ರಿಪುರಂ ಸಂಯುಕ್ತ ಪದವಿ ಪೂರ್ವ ಕಾಲೇಜು ತನ್ನ ರಜತ ಮಹೋತ್ಸವಕ್ಕೆ ಕ್ರಿಕೆಟ್ ಪಂದ್ಯಾಟ ಆಯೋಜನೆ ಮಾಡಿ, ಕ್ರೀಡಾಪಟುಗಳು ತಮ್ಮ ಸಾಮರ್ಥ್ಯ ಪ್ರದರ್ಶನ ಮಾಡಲು ಒಂದೊಳ್ಳೆ ವೇದಿಕೆ ಒದಗಿಸಿದೆ ಎಂದು ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿ ನಾಡೋಜ ವೂಡೇ ಪಿ. ಕೃಷ್ಣ ಹೇಳಿದ್ದಾರೆ.

ಶೇಷಾದ್ರಿಪುರ ಶಿಕ್ಷಣ ದತ್ತಿಯ ಶೇಷಾದ್ರಿಪುರಂ ಸಂಯುಕ್ತ ಪದವಿ ಪೂರ್ವ ಕಾಲೇಜಿನ ರಜತ ಮಹೋತ್ಸವದ ಸವಿನೆನಪಿಗಾಗಿ ಆಯೋಜಿಸಿದ ಶೇಷಾದ್ರಿಪುರಂ ಸಮೂಹದ ಸಂಸ್ಥೆಗಳಾದ ಅಂತರ - ಪದವಿ ಪೂರ್ವ ಕಾಲೇಜು ಟಿ-11 ಕ್ರಿಕೆಟ್ ಪಂದ್ಯಾವಳಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕರ್ನಾಟಕ ಅರಣ್ಯ ಇಲಾಖೆಯಲ್ಲಿ ವಲಯ ಉಪ ಅರಣ್ಯಾಧಿಕಾರಿಗಳಾದ ಬಿ. ನರಸಿಂಹರಾಜು ಮಾತನಾಡಿ, ನಮ್ಮ ಕಾಲದಲ್ಲಿ ಕ್ರೀಡಾಪಟುಗಳಿಗೆ ಇಷ್ಟೊಂದು ಪ್ರೋತ್ಸಾಹ ಇರಲಿಲ್ಲ. ಇಂದು ನಿಮಗೆ ಎಲ್ಲಾ ಹಂತಗಳಲ್ಲೂ ಅತ್ಯುತ್ತಮವಾದ ಪ್ರೋತ್ಸಾಹವಿದ್ದು, ಮುಂದಿನ ನಿಮ್ಮ ಕ್ರೀಡಾ ಭವಿಷ್ಯದ ಉಜ್ವಲವಾಗಿರಲೆಂದು ಆಶಿಸಿದ್ದಾರೆ.

ಶೇಷಾದ್ರಿಪುರಂ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಪ್ರೊ. ಟಿ. ಕೆ. ಮಂಜುನಾಥ್ ಮಾತನಾಡಿ, ನಮ್ಮ ಕಾಲೇಜು ರಜತ ಮಹೋತ್ಸವ ಆಚರಿಸಿಕೊಳ್ಳುತ್ತಿದ್ದು, ಇದನ್ನು ಅವಿಸ್ಮರಣೀಯಗೊಳಿಸುವ ಸಲುವಾಗಿ ಪಂದ್ಯಾವಳಿಯನ್ನು ಆಯೋಜಿಸಿದ್ದು, ಇದರಲ್ಲಿ ಯಾರೇ ಗೆದ್ದರು ಅದು ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೆಲುವಾಗಿರುತ್ತದೆ. ಆಗಾಗಿ ಆತ್ಮವಿಶ್ವಾಸ ಮತ್ತು ಸ್ಪರ್ಧಾ ಮನೋಭಾವದಿಂದ ಆಡುವ ಮೂಲಕ ಪಂದ್ಯಾವಳಿ ಯಶಸ್ವಿಗೊಳಿಸಬೇಕೆಂದು ಕೋರಿದ್ದಾರೆ.

ವಾಣಿಜ್ಯಶಾಸ್ತ್ರ ವಿಭಾಗದ ಹಿರಿಯ ಉಪನ್ಯಾಸಕ ಪ್ರವೀಣ್ ಎ. ಕಶ್ಯಪ್, ದೈಹಿಕ ಶಿಕ್ಷಣ ಉಪನ್ಯಾಸಕ ಡಾ. ಗೋವಿಂದಯ್ಯ ಹೆಚ್.ಕೆ ,ತುಮಕೂರು ಶೇಷಾದ್ರಿಪುರಂ ಪದವಿ ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕ ಮನೋಹರ್ ಎ. ಪಿ ಸೇರಿದಂತೆ ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಪದವಿ ಪೂರ್ವ ಕಾಲೇಜುಗಳ ಎಲ್ಲಾ ಉಪನ್ಯಾಸಕರುಗಳು, ತೀರ್ಪುಗಾರರು, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಇದ್ದರು.

ಎರಡು ದಿನಗಳ ಕಾಲ ನಡೆಯುವ ಪಂದ್ಯಾವಳಿಯಲ್ಲಿ ಶೇಷಾದ್ರಿಪುರಂ ಸಂಯುಕ್ತ ಪದವಿ ಪೂರ್ವ ಕಾಲೇಜು ಒಳಗೊಂಡಂತೆ ಶೇಷಾದ್ರಿಪುರಂ ಪದವಿ ಪೂರ್ವ ಕಾಲೇಜು (ಮುಖ್ಯ), ಶೇಷಾದ್ರಿಪುರಂ ಸಂಜೆ ಪದವಿ ಪೂರ್ವ ಕಾಲೇಜು, ಶೇಷಾದ್ರಿಪುರಂ ಪದವಿ ಪೂರ್ವ ಕಾಲೇಜು ಯಲಹಂಕ, ಶೇಷಾದ್ರಿಪುರಂ ಸ್ವತಂತ್ರ ಪದವಿ ಪೂರ್ವ ಕಾಲೇಜು ಕೆಂಗೇರಿ, ಶೇಷಾದ್ರಿಪುರಂ ಸ್ವತಂತ್ರ ಪದವಿ ಪೂರ್ವ ಕಾಲೇಜು ಮಾಗಡಿ ರಸ್ತೆ ಹೀಗೆ ಒಟ್ಟು 6 ತಂಡಗಳು ಭಾಗವಹಿಸಿದ್ದು, ಲೀಗ್ ಕಂ ನಾಕ್ ಔಟ್ ಮಾದರಿಯಲ್ಲಿ ಪಂದ್ಯಾಟ ನಡೆಯಲಿದೆ.



ಸಂಯುಕ್ತ ಕರ್ನಾಟಕ

10 ಮಾರ್ಚ್ 2022 ಗುರುವಾರ
ಬೆಂಗಳೂರು (BENGALURU)



ಶೇಷಾದ್ರಿಪುರ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಜಾನಪದ ಅಕಾಡೆಮಿ ಅಧ್ಯಕ್ಷೆ ಮಂಜಮ್ಮ ಜೋಗತಿ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಶೇಷಾದ್ರಿಪುರ ಶಿಕ್ಷಣ ದತ್ತಿ ಗೌರವ ಪ್ರಧಾನ ಕಾರ್ಯದರ್ಶಿ ಡಾ.ವೂಡೇ ಪಿ.ಕೃಷ್ಣ, ಶಿಕ್ಷಣ ದತ್ತಿ ಅಧ್ಯಕ್ಷ ಎಸ್.ಆರ್. ಪಂಡಿತಾರಾಧ್ಯ ಮತ್ತಿತರರಿದ್ದರು.

ಕನ್ನಡಿಗರ ಕಣ್ಮಣಿ
ವಿಶ್ವ ವಾರಿಧಿ
ಕನ್ನಡ ದಿನಪತ್ರಿಕೆ
VISHWA VAARIDHI KANNADA DAILY
BANGALORE OFFICE: NO.84, CHOURU BUILDING, GROUND FLOOR, 1st Cross, VIDHANASOUDHA LAYOUT BANGALORE-560058
vishwavaaridhi@gmail.com
vishwavaaridhi

ಶೇಷಾದ್ರಿಪುರಂ ಕಾಲೇಜಿನ ವಿದ್ಯಾರ್ಥಿಗಳಿಂದ ಎರಡು ದಿನಗಳ ಕ್ರಿಕೆಟ್ ಟೂರ್ನಮೆಂಟ್

ದಾಸರಹಳ್ಳಿ

ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಶೇಷಾದ್ರಿಪುರಂ ಸಂಯುಕ್ತ ಪದವಿ ಪೂರ್ವ ಕಾಲೇಜು ತನ್ನ 25 ವರ್ಷಗಳ ರಜತ ಮಹೋತ್ಸವದ ಸವಿ ನೆನಪಿಗಾಗಿ ಶೇಷಾದ್ರಿಪುರಂ ಸಹೋದರ ಸಂಸ್ಥೆಗಳಾದ ಅಂತರ – ಪದವಿ ಪೂರ್ವ ಕಾಲೇಜು ಬಿ–12 ಕ್ರಿಕೆಟ್ ಪಂದ್ಯಾವಳಿಯನ್ನು ಗೋಲ್ಡನ್ ರೇ ಕ್ರಿಕೆಟ್ ಮೈದಾನದಲ್ಲಿ ಆಯೋಜನೆ ಮಾಡಿದೆ.

ಎರಡು ದಿನಗಳ ಕಾಲ ನಡೆಯುವ ಪಂದ್ಯಾವಳಿಯಲ್ಲಿ ಶೇಷಾದ್ರಿಪುರಂ ಸಂಯುಕ್ತ ಪದವಿ ಪೂರ್ವ ಕಾಲೇಜು ಒಳಗೊಂಡಂತೆ ಶೇಷಾದ್ರಿಪುರಂ ಪದವಿ ಪೂರ್ವ ಕಾಲೇಜು (ಮುಖ್ಯ), ಶೇಷಾದ್ರಿಪುರಂ ಸಂಜೆ ಪದವಿ ಪೂರ್ವ ಕಾಲೇಜು, ಶೇಷಾದ್ರಿಪುರಂ ಪದವಿ ಪೂರ್ವ ಕಾಲೇಜು ಯಲಹಂಕ, ಶೇಷಾದ್ರಿಪುರಂ ಸ್ವತಂತ್ರ ಪದವಿ ಪೂರ್ವ ಕಾಲೇಜು ಶೃಂಗೇರಿ, ಶೇಷಾದ್ರಿಪುರಂ ಸ್ವತಂತ್ರ ಪದವಿ ಪೂರ್ವ ಕಾಲೇಜು ಮಾಗಡಿ ರಸ್ತೆ ಹೀಗೆ ಒಟ್ಟು 6 ತಂಡಗಳು ಭಾಗವಹಿಸಿದ್ದು, ಲೀಗ್ ಕಂ ನಾಕ್ ಔಟ್ ಮಾದರಿಯಲ್ಲಿ ಪಂದ್ಯಾಟ ನಡೆಯಲಿದೆ.

ಇಂದು ನಡೆದ ಉದ್ಘಾಟನಾ ಸಮಾರಂಭದಲ್ಲಿ ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿ ನಾಡೋಜ ವೂಡೇ ಪಿ. ಕೃಷ್ಣ ಅವರು ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ 'ಶೇಷಾದ್ರಿಪುರಂ ಸಂಯುಕ್ತ ಪದವಿ ಪೂರ್ವ ಕಾಲೇಜು ತನ್ನ ರಜತ ಮಹೋತ್ಸವದ ಸಂದರ್ಭದಲ್ಲಿ ಒಂದು ಅರ್ಥಪೂರ್ಣವಾದ ಪಂದ್ಯಾಟವನ್ನು ಆಯೋಜನೆ ಮಾಡುವ ಮೂಲಕ ಕ್ರೀಡಾಪಟುಗಳು ತಮ್ಮ ಸಾಮರ್ಥ್ಯ ಪ್ರದರ್ಶನ ಮಾಡಲು ಒಂದೊಳ್ಳೆ ವೇದಿಕೆಯನ್ನು ಒದಗಿಸಿದ್ದಾರೆ' ಎಂದರು.

ಮುಖ್ಯ ಅತಿಥಿ ಹಿರಿಯ ಕ್ರಿಕೆಟ್ ಆಟಗಾರ ಹಾಗೂ ಕರ್ನಾಟಕ ಅರಣ್ಯ ಇಲಾಖೆಯಲ್ಲಿ ವಲಯ ಉಪ ಅರಣ್ಯಾಧಿಕಾರಿಗಳಾದ ಜಿ. ನರಸಿಂಹರಾಜು ಅವರು ಮಾತನಾಡುತ್ತಾ 'ನಮ್ಮ ಕಾಲದಲ್ಲಿ ಕ್ರೀಡಾಪಟುಗಳಿಗೆ ಇಷ್ಟೊಂದು ಪ್ರೋತ್ಸಾಹ ಇರಲಿಲ್ಲ. ಇಂದು ನಿಮಗೆ




ಎಲ್ಲಾ ಹಂತಗಳಲ್ಲೂ ಅತ್ಯುತ್ತಮವಾದ ಪ್ರೋತ್ಸಾಹವಿದ್ದು, ಮುಂದಿನ ನಿಮ್ಮ ಕ್ರೀಡಾ ಭವಿಷ್ಯ ಉಜ್ವಲವಾಗಿರಲೆಂದು ಆಶಿಸಿದರು.

ಶೇಷಾದ್ರಿಪುರಂ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಪ್ರೊ. ಟಿ.ಕೆ. ಮಂಜುನಾಥ್ ತಮ್ಮ ಪ್ರಾಸ್ತಾವಿಕ ಮಾತುಗಳಲ್ಲಿ 'ನಮ್ಮ ಕಾಲೇಜು ರಜತ ಮಹೋತ್ಸವವನ್ನು ಆಚರಿಸಿಕೊಳ್ಳುತ್ತಿದ್ದು, ಇದನ್ನು ಅವಿಸ್ಮರಣೀಯಗೊಳಿಸುವ ಸಲುವಾಗಿ ಪಂದ್ಯಾವಳಿಯನ್ನು ಆಯೋಜಿಸಿದ್ದು, ಇದರಲ್ಲಿ ಯಾರೇ ಗೆದ್ದರೂ ಅದು ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೆಲುವಾಗಿರುತ್ತದೆ. ಹಾಗಾಗಿ ಆತ್ಮವಿಶ್ವಾಸ ಮತ್ತು ಸ್ಪರ್ಧಾ ಮನೋಭಾವದಿಂದ ಆಡುವ ಮೂಲಕ ಪಂದ್ಯಾವಳಿಯನ್ನು ಯಶಸ್ವಿಗೊಳಿಸಬೇಕೆಂದು ಕೋರಿದರು.

ವಾಣಿಜ್ಯ ಶಾಸ್ತ್ರ ವಿಭಾಗದ ಹಿರಿಯ ಉಪನ್ಯಾಸಕ ಪ್ರವೀಣ್ ಎ. ಕಶ್ಯಪ್ ಎಲ್ಲರನ್ನು ವಂದಿಸಿದರು ಹಾಗೂ ದೈಹಿಕ ಶಿಕ್ಷಣ ಉಪನ್ಯಾಸಕ ಡಾ. ಗೋವಿಂದಯ್ಯ ಹೆಚ್.ಕೆ ರವರು ಪಂದ್ಯಾವಳಿಯ ಉದ್ದೇಶ ಮತ್ತು ಸ್ವರೂಪವನ್ನು ತಿಳಿಸಿದರು. ನಂತರ ಎಲ್ಲರನ್ನು ಸ್ವಾಗತಿಸಿ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರೂಪಿಸಿದರು.

ಇದೇ ಸಂದರ್ಭದಲ್ಲಿ ತುಮಕೂರು ಶೇಷಾದ್ರಿಪುರಂ ಪದವಿ ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕ ಮನೋಹರ್ ಎ. ಪಿ ಸೇರಿದಂತೆ ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಪದವಿ ಪೂರ್ವ ಕಾಲೇಜುಗಳ ಎಲ್ಲಾ ಉಪನ್ಯಾಸಕರುಗಳು, ತೀರ್ಪುಗಾರರು, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಯವರು, ಹಳೆಯ ವಿದ್ಯಾರ್ಥಿಗಳು ಹಾಗೂ ಕ್ರೀಡಾಪಟುಗಳು ಹಾಜರಿದ್ದರು.

ಬುಧವಾರ, 09 ಮಾರ್ಚ್, 2022



ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ ವತಿಯಿಂದ ಹಮ್ಮಿಕೊಂಡಿದ್ದ ಪದವಿ ಪೂರ್ವ ಕಾಲೇಜಿನ ರಜತ ಮಹೋತ್ಸವ ಹಾಗೂ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಪದ್ಮಶ್ರೀ ಮಂಜಮ್ಮ ಜೋಗತಿ, ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ವೂಡೇ ಪಿ. ಕೃಷ್ಣ ಪ್ರೊ. ಮಂಜುನಾಥ, ಪಂಡಿತಾರಾಧ್ಯ ಸೇರಿದಂತೆ ಮತ್ತಿತರರಿದ್ದರು.

ವಿಜಯ ಕರ್ನಾಟಕ

ಕರ್ನಾಟಕ ಬಜೆಟ್ 2022-23

16 | ಶನಿವಾರ, 5 ಮಾರ್ಚ್ 2022, ಬೆಂಗಳೂರು

ವಿದ್ಯಾರ್ಥಿ ಮಾರ್ಗದರ್ಶಿನಿ ಕ್ರಾಂತಿಕಾರಕ

▫ ಡಾ.ವೂಡೇ ಪಿ.ಕೃಷ್ಣ

ತಜ್ಞರ ವಿಶ್ಲೇಷಣೆ



ರಾಜ್ಯದ ಏಳು ಜಿಲ್ಲೆಗಳಲ್ಲಿ ವಿನೂತನ ಮಾದರಿಯ 7 ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುವುದಾಗಿ ಘೋಷಿಸಿರುವ ಸರಕಾರದ ಕ್ರಮ ಸ್ವಾಗತಾರ್ಹ. ಆಧುನಿಕ ತಂತ್ರಜ್ಞಾನದ ಗರಿಷ್ಠ ಬಳಕೆಯೊಂದಿಗೆ, ಕಡಿಮೆ ಸಿಬ್ಬಂದಿಯೊಂದಿಗೆ ಆರಂಭಿಸಲು ಉದ್ದೇಶಿಸಿರುವ ಈ ವಿಶ್ವವಿದ್ಯಾಲಯಗಳು ಶೀಘ್ರ ಜಾರಿಗೆ ಬರಬೇಕು. ಇದರಿಂದಾಗಿ ಹಿಂದುಳಿದ ಪ್ರದೇಶಗಳಾದ ಚಾಮರಾಜನಗರ, ಬೀದರ್, ಹಾವೇರಿ, ಹಾಸನ, ಕೊಡಗು, ಕೊಪ್ಪಳ ಮತ್ತು ಬಾಗಲಕೋಟೆ ಜಿಲ್ಲೆಗಳ ವಿದ್ಯಾರ್ಥಿಗಳ ಉನ್ನತ ಶಿಕ್ಷಣಕ್ಕೆ ಹೆಚ್ಚು ಅನುಕೂಲವಾಗಲಿದೆ.

ಸರಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರ ಬೋಧನಾ ಅವಧಿ ಮತ್ತು ಮಾಸಿಕ ಗೌರವಧನ ಹೆಚ್ಚಳ ಮಾಡಿರುವುದು ಸರಿಯಷ್ಟೇ. ಆದರೆ, ಈ ಕಾಲೇಜುಗಳಲ್ಲಿ ಖಾಲಿಯಿರುವ ಬೋಧಕರ ಹುದ್ದೆಗಳಲ್ಲಿ ಈ ಬಾರಿ ಕನಿಷ್ಠ ಶೇ.25ರಷ್ಟು ಹುದ್ದೆಗಳ ಭರ್ತಿ ಬಗ್ಗೆ ಬಜೆಟ್‌ನಲ್ಲಿ ಘೋಷಣೆ ಮಾಡಿದ್ದರೆ



ಉತ್ತಮವಾಗಿರುತ್ತಿತ್ತು. ಶಿಕ್ಷಕರು ಉನ್ನತ ಶಿಕ್ಷಣದ ಜೀವಾಳವಾಗಿದ್ದಾರೆ. ಸರಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಾಯಂ ಬೋಧಕರ ಕೊರತೆಯಿದ್ದು, ಶೈಕ್ಷಣಿಕ ಚಟುವಟಿಕೆಗಳ ಮೇಲೆ ಪರಿಣಾಮ ಉಂಟಾಗಿದೆ. ಆದ್ದರಿಂದ ಈ ವರ್ಷ ಶೇ.25ರಷ್ಟಾದರೂ ಹುದ್ದೆಗಳ ಭರ್ತಿಗೆ ಮುಂದಾಗಿದ್ದರೆ, ಮುಂದಿನ ಐದಾರು ವರ್ಷಗಳಲ್ಲಿ ಹಂತಹಂತವಾಗಿ ಖಾಲಿಯಿರುವ ಎಲ್ಲ ಹುದ್ದೆಗಳನ್ನು ಸುಲಭವಾಗಿ ಭರ್ತಿ ಮಾಡಲು ಸಹಕಾರಿಯಾಗುತ್ತಿತ್ತು.

ಕೇಂದ್ರ ಲೋಕಸೇವಾ ಆಯೋಗ, ಎಸ್‌ಎಸ್‌ಸಿ, ನೀಟ್, ಜೆಇಇ, ರೈಲ್ವೆ, ಬ್ಯಾಂಕಿಂಗ್ ಇತ್ಯಾದಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಆನ್‌ಲೈನ್ ಮೂಲಕ ಉಚಿತವಾಗಿ ತರಬೇತಿ ನೀಡಲು 'ಮುಖ್ಯಮಂತ್ರಿ ವಿದ್ಯಾರ್ಥಿ ಮಾರ್ಗದರ್ಶಿನಿ' ಎಂಬ ಯೋಜನೆಯನ್ನು ಘೋಷಣೆ ಮಾಡಿರುವುದು ಅತ್ಯುತ್ತಮ ಸಂಗತಿಯಾಗಿದೆ. ಇದರಿಂದ ರಾಜ್ಯದ ವಿದ್ಯಾರ್ಥಿಗಳು ಮತ್ತು ನಾನಾ ಹುದ್ದೆಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ತೆಗೆದುಕೊಳ್ಳುವ ಅಭ್ಯರ್ಥಿಗಳಿಗೆ ಅನುಕೂಲವಾಗಲಿದೆ. ಮತ್ತು ಸ್ಪರ್ಧಾತ್ಮಕ ಪರೀಕ್ಷೆ ಹೆಸರಲ್ಲಿ ದುಬಾರಿ ಶುಲ್ಕದ ಮೂಲಕ ಅಭ್ಯರ್ಥಿಗಳನ್ನು ಕಿತ್ತುತಿನ್ನುವ ಸಂಸ್ಥೆಗಳಿಗೂ ಕಡಿವಾಣ ಹಾಕಲು ಸಾಧ್ಯವಾಗಲಿದೆ.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿರುವ ಹಾಸ್ಟೆಲ್ ವಿದ್ಯಾರ್ಥಿಗಳಿಗೆ 'ಸ್ಪೋಕನ್ ಇಂಗ್ಲಿಷ್' ಹಾಗೂ 'ವ್ಯಕ್ತಿತ್ವ ವಿಕಸನ' ತರಬೇತಿಗೆ ಕ್ರಮ ಕೈಗೊಂಡಿರುವುದು ಸಹ ಒಳ್ಳೆಯ ಬೆಳವಣಿಗೆ. ಇದರಿಂದಾಗಿ ಸಮಾಜದ ಅಂಚಿನಲ್ಲಿರುವ ಸಮುದಾಯಗಳ ವಿದ್ಯಾರ್ಥಿಗಳು ಪದವಿ ಅಥವಾ ಸ್ನಾತಕೋತ್ತರ ಪದವಿ ಪೂರೈಸಿದ ನಂತರ ಉದ್ಯೋಗ ಪಡೆಯಲು ಹಾಗೂ ಸಂದರ್ಶನ ಎದುರಿಸಲು ಹೆಚ್ಚು ನೆರವಾಗಲಿದೆ.


ಶಿಕ್ಷಣ ತಜ್ಞರು

ಸಂಯುಕ್ತ ಕರ್ನಾಟಕ
ಮಂಗಳವಾರ 01 ಮಾರ್ಚ್ 2022



ಗಾಂಧಿಭವನದಲ್ಲಿ ನಡೆದ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಶ್ರೀ ಬೇಲಿಮಠ ಮಹಾಸಂಸ್ಥಾನ ಪೀಠಾಧ್ಯಕ್ಷ ಶ್ರೀ ಶಿವರುದ್ರ ಮಹಾಸ್ವಾಮಿ ಅವರು ಗಾಂಧಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿದರು.

ಸೋಮವಾರ 28 ಫೆಬ್ರವರಿ 2022



ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಡಾ. ಕೆ. ನಾಗಪ್ಪ ಆಳ್ವ ಮತ್ತು ಶ್ರೀಮತಿ ಕಲ್ಯಾಣಿ ನಾಗಪ್ಪ ಆಳ್ವ ದತ್ತಿ ಮತ್ತು ರಾಷ್ಟ್ರೀಯ ಸೇವಾ ಯೋಜನೆ ಮತ್ತು ಯುವ ಸಬಲೀಕರಣ ಇಲಾಖೆ ಸಂಯುಕ್ತಾಶ್ರಯದಲ್ಲಿ ಗಾಂಧಿ ಭವನದಲ್ಲಿಂದು ಹಮ್ಮಿಕೊಂಡಿದ್ದ ದತ್ತಿ ಉಪನ್ಯಾಸ ಕಾರ್ಯಕ್ರಮವನ್ನು ಶ್ರೀ ಶಿವರುದ್ರಸ್ವಾಮೀಜಿ ಅವರು ಉದ್ಘಾಟಿಸಿದರು. ನಾಡೋಜ ಡಾ. ವೂಡೇ ಪಿ. ಕೃಷ್ಣ, ಶ್ರುತಿಪ್ರಿಯ, ಕೆ. ಮೋಹನ್‌ದೇವ್ ಆಳ್ವ, ಇಂದಿರಾ ಕೃಷ್ಣಪ್ಪ ಮತ್ತಿತರರು ಪಾಲ್ಗೊಂಡಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ

VIJAYAVANI » BENGALURU
ಮಂಗಳವಾರ 1 ಮಾರ್ಚ್ 2022
1 MARCH 2022

ಶ್ರೀ ಶಿವರುದ್ರ ಸ್ವಾಮೀಜಿ ಅಭಿಮತ ಗಾಂಧಿಭವನದಲ್ಲಿ ದತ್ತಿ ಉಪನ್ಯಾಸ

ಮತ ಪಂಥಗಳು ಹಲವು, ಧರ್ಮ ಒಂದೇ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು


ಮತ ಪಂಥಗಳೆಷ್ಟೇ ಇದ್ದರೂ ಧರ್ಮ ಎನ್ನುವುದು ಒಂದೇ. ನಮ್ಮ ಅನುಭವ ಹಾಗೂ ಅಂತರಂಗದ ಒಳನೋಟವೇ ಧರ್ಮ ಎಂದು ಬೇಲಿಮಠದ ಪೀಠಾಧ್ಯಕ್ಷ ಶ್ರೀ ಶಿವರುದ್ರ ಸ್ವಾಮೀಜಿ ಹೇಳಿದ್ದಾರೆ.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಹಾಗೂ ರಾಷ್ಟ್ರೀಯ ಸೇವಾ ಯೋಜನೆ ಯುವ ಸಬಲೀಕರಣ ಇಲಾಖೆ ಸಹಯೋಗದಲ್ಲಿ ಸೋಮವಾರ ಗಾಂಧಿಭವನದಲ್ಲಿ ಹಮ್ಮಿಕೊಂಡಿದ್ದ ಡಾ.ಕೆ. ನಾಗಪ್ಪ ಆಳ್ವ ಮತ್ತು ಶ್ರೀಮತಿ ಕಲ್ಯಾಣಿ ನಾಗಪ್ಪ ಆಳ್ವ ದತ್ತಿ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಆಶೀರ್ವಚನ ನೀಡಿದರು.

ದೀಪಗಳು ಸಾವಿರಾರು, ಆದರೆ ಅವು ನೀಡುವ ಬೆಳಕು ಒಂದೇ. ಹಾಗಾಗಿ ಬೆಳಕನ್ನು ದೀಪಗಳ ಜತೆಗೆ ಹಂಚಬಾರದು. ಪ್ರತಿಯೊಂದು ದೀಪಕ್ಕೂ ಬೇರೆ ಬೇರೆ ಬೆಳಕು ಎಂದು ಅಡ್ಡಗೋಡೆ ಕಟ್ಟಲು ಸಾಧ್ಯವಿಲ್ಲ. ಮತ ಪಂಥಗಳು ದೀಪಗಳಂತೆ, ಅವು ನೀಡುವ ಬೆಳಕೇ ಧರ್ಮ. ಮತ ಪಂಥಗಳು ನಮ್ಮ ನಮ್ಮ ಆಚರಣೆಗೆ ಸಂಬಂಧಪಟ್ಟಿದ್ದು, ಅವುಗಳಿಂದ ಪಡೆಯುವ ಅನುಭವವೇ ಧರ್ಮ ಎಂದರು.

ದತ್ತಿ ಸಂಸ್ಥಾಪಕ ಕೆ. ಮೋಹನ್‌ದೇವ್ ಆಳ್ವ ಮಾತನಾಡಿ, ಜೀವಮಾನವಿಡೀ ಗಾಂಧಿ ಅವರ ಶಿಸ್ತುಬದ್ಧ ಅನುಯಾಯಿಗಳಾಗಿ ಬದುಕಿದ್ದ ತಂದೆ-ತಾಯಿ ಹೆಸರಿನಲ್ಲಿ ದತ್ತಿ ಸ್ಥಾಪಿಸಿ ಯುವಜನರಿಗೆ ಗಾಂಧಿ ಅವರ ಜೀವನ ಮೌಲ್ಯಗಳನ್ನು ತಿಳಿಸುವ ನಿಟ್ಟಿನಲ್ಲಿ ಪ್ರತಿ ವರ್ಷ ದತ್ತಿ ಉಪನ್ಯಾಸ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ ಎಂದು ತಿಳಿಸಿದರು. ಈ ಹಿಂದೆ ದತ್ತಿ ನಿಧಿಗೆ 1 ಲಕ್ಷ ದತ್ತಿ ಇರಿಸಿದ್ದ ಅವರು, ಕಾರ್ಯಕ್ರಮ ಆಯೋಜನೆಗೆ ಅನುಕೂಲ ಆಗಲೆಂದು ಮತ್ತೆ 1 ಲಕ್ಷ ರೂ. ದೇಣಿಗೆ ನೀಡಿದರು.

ಎಸ್.ಜೆ.ಆರ್. ಕಾಲೇಜು ವತಿಯಿಂದ ನಡೆಸಲಾಗಿದ್ದ 'ಗಾಂಧಿ ಚಿಂತನೆ' ವಿಷಯ ಕುರಿತು ಅಂತರ ಕಾಲೇಜು ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ಕಾಲೇಜು ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ, ಗೌರವ ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ, ಶೃತಿ ಪ್ರಿಯ ಮೊದಲಾದವರು ಉಪಸ್ಥಿತರಿದ್ದರು.



ಗಾಂಧಿ ಭವನದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಬೇಲಿಮಠದ ಪೀಠಾಧ್ಯಕ್ಷ ಶ್ರೀ ಶಿವರುದ್ರ ಸ್ವಾಮೀಜಿ, ದತ್ತಿ ಸಂಸ್ಥಾಪಕ ಕೆ. ಮೋಹನ್‌ದೇವ್ ಆಳ್ವ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ, ಗೌರವ ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ ಇದ್ದರು.

ಈ ಸಂಜೆ

ಶನಿವಾರ, 26 ಫೆಬ್ರವರಿ, 2022

ವಿದ್ಯಾದಾನ ಮಹಾದಾನ

ಬೆಂಗಳೂರು, ಫೆ.25- ಶೇಷಾದ್ರಿಪುರಂ ಸಮೂಹ ಸಂಸ್ಥೆಗಳ ವತಿಯಿಂದ ಕೆ.ಎಂ.ನಂಜಪ್ಪನವರ 110ನೇ ಜನ್ಮ ದಿನಾಚರಣೆ ಪ್ರಯುಕ್ತ ರಕ್ತದಾನ ಮೇಳ ಹಮ್ಮಿಕೊಳ್ಳಲಾಗಿತ್ತು.

ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಆವರಣದಲ್ಲಿ ಆಯೋಜಿಸಿದ್ದ ಶಿಬಿರದಲ್ಲಿ ಸಂಸದ ಪಿ.ಸಿ.ಮೋಹನ್ ಮಾತನಾಡಿ, ಸ್ವಯಂ ಪ್ರೇರಿತ ಬೃಹತ್ ರಕ್ತದಾನ ಮೇಳವು ಒಂದು ಅರ್ಥಪೂರ್ಣ ಕಾರ್ಯಕ್ರಮ ಎಂದರು.

ಎಲ್ಲಾ ದಾನಕ್ಕಿಂತ ವಿದ್ಯಾದಾನ ಮಹಾದಾನ. ಶೇಷಾದ್ರಿಪುರಂ ಸಮೂಹ ಶಿಕ್ಷಣ ಸಂಸ್ಥೆಯು ಎಲ್ಲಾ ವರ್ಗದ ವಿದ್ಯಾರ್ಥಿಗಳಿಗೆ ಕಡಿಮೆ ಶುಲ್ಕದಲ್ಲಿ ಗುಣಮಟ್ಟದ ಶಿಕ್ಷಣ ನೀಡುತ್ತಿದೆ. ಮುಂದಿನ ದಿನಗಳಲ್ಲಿ ಈ ಸಂಸ್ಥೆಯಲ್ಲಿ ಒಂದು ಲಕ್ಷ ವಿದ್ಯಾರ್ಥಿಗಳು ಓದುವಂತಾಗಲಿ ಎಂದು ಹಾರೈಸಿದರು.

ಸಂಸ್ಥೆಗೆ ಮೈಸೂರು ಮಹಾರಾಜರು 1943ರಲ್ಲಿ 2.5 ಎಕರೆ ಜಾಗ ಕೊಟ್ಟಿದ್ದು ಇದರ ಬೆಳವಣಿಗೆಗೆ ಪೂರಕವಾಗಿದೆ ಎಂದು ತಿಳಿಸಿದರು.

ಇದೇ ವೇಳೆ ದೇಸಿಕಥನಗಳು ಎಂಬ ಸಂಶೋಧನಾ ಲೇಖನಗಳ ಸಂಗ್ರಹದ ಪುಸ್ತಕ ಲೋಕಾರ್ಪಣೆ ಮಾಡಲಾಯಿತು.

ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಎನ್ ಆರ್. ಪಂಡಿತಾರಾಧ್ಯ ಮಾತನಾಡಿ, ಕೆ.ಎಂ. ನಂಜಪ್ಪನವರು ಆರ್ ವಿ ಇಂಜಿನಿಯರಿಂಗ್ ಕಾಲೇಜಿನ ಸಂಸ್ಥಾಪಕರು ಹಾಗೂ ಆಗಿನ ಕಾಲದಲ್ಲಿ ಸರ್ಕಾರಕ್ಕೆ ಒಂದು ಲಕ್ಷ ರೂ. ಹಣ ನೀಡಿ ಕಾಲೇಜು ಪ್ರಾರಂಭಿಸಿದ್ದನ್ನು ಸ್ಮರಿಸಿದರು.

ಸಂಸ್ಥೆಯ ಗೌರವ ಪ್ರಧಾನ ಕಾರ್ಯದರ್ಶಿ ಡಾ.ವೂಡೇ ಪಿ.ಕೃಷ್ಣ ಮಾತನಾಡಿ, ಕೆ.ಎಂ.ನಂಜಪ್ಪ ಅವರಿಗೆ ಪ್ರಪ್ರಥಮ ಬಾರಿಗೆ ಸಂಜೆ ಕಾಲೇಜು ಪ್ರಾರಂಭಿಸಿದ ಖ್ಯಾತಿ ಸಲ್ಲುತ್ತದೆ ಎಂದರು.




ರೆಡ್‌ಕ್ರಾಸ್ ರಾಜ್ಯ ಸಂಚಾಲಕ ರಾಜುಚಂದ್ರಶೇಖರ್ ರಕ್ತದಾನದ ಮಹತ್ವ ತಿಳಿಸಿ, 18 ರಿಂದ 60 ವರ್ಷದವರೆಗೂ ದೇಹದ ತೂಕ ಕನಿಷ್ಠ 45 ಕೆಜಿ ಇರುವವರು ರಕ್ತದಾನಕ್ಕೆ ಅರ್ಹರು. ಪ್ರತಿಯೊಬ್ಬರು ರಕ್ತದಾನದ ರಾಯಭಾರಿಗಳಾಗಬೇಕು ಎಂದು ತಿಳಿಸಿದರು.

ಗೌರವ ಸಹಾಯಕ ಕಾರ್ಯದರ್ಶಿ ಎಂ.ಎಸ್.ನಟರಾಜ್, ಧರ್ಮದರ್ಶಿ ಕೆ.ಕೃಷ್ಣಸ್ವಾಮಿ, ಜಾನಪದ ವಿದ್ವಾಂಸ ಮೀರಾಸಾಬಿಹಳ್ಳಿ ಶಿವಣ್ಣ ಹಾಗೂ ಇತರರು ಭಾಗವಹಿಸಿದ್ದರು.

ಶಿಬಿರದಲ್ಲಿ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳ ಭಾಗವಹಿಸಿದ್ದು 600 ಯೂನಿಟ್ ರಕ್ತವನ್ನು ಶೇಖರಿಸಿ ರಾಜ್ಯದ ವಿವಿಧ ಸರ್ಕಾರಿ ಆಸ್ಪತ್ರೆಗೆ ತಲುಪಿಸಲಾಯಿತು.


ರಕ್ತದ ಮೊದಲ ದಾನಿ ವಿದ್ಯಾರ್ಥಿ ಸಾಯಿ ಗೌರವ್ ರಕ್ತದ ಸ್ಯಾಚೆಟ್ಟನ್ನು ಸಂಸದ ಪಿ.ಸಿ.ಮೋಹನ್ ಅವರಿಗೆ ನೀಡಲಾಯಿತು.

ಗುರುವಾರ, 24 ಫೆಬ್ರವರಿ, 2022



ಶೇಷಾದ್ರಿಪುರಂ ಕಾಲೇಜಿನ ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಭಾಗದಿಂದ ಹಮ್ಮಿಕೊಂಡಿದ್ದ ಬೆಸ್ಟ್ ಫಿಸಿಕ್ ಸ್ಪರ್ಧೆಯನ್ನು ನಾಡೋಜ ಡಾ.ವೂಡೇ ಪಿ.ಕೃಷ್ಣ ಉದ್ಘಾಟಿಸಿದರು. ಅಂತಾರಾಷ್ಟ್ರೀಯ ಬಾಡಿ ಬಿಲ್ಡರ್ ಅರ್ನಾಲ್ಡ್, ಮನೋಜ್‌ಕುಮಾರ್, ಪ್ರಾಂಶುಪಾಲರಾದ ಡಾ.ಮೀರಾ, ಎಂ.ಎಸ್.ನಟರಾಜ್, ಕಾರ್ತಿಕ್, ಶ್ರೀಧರ್ ಮತ್ತಿತರರು ಹಾಜರಿದ್ದರು.

ಬುಧವಾರ 23 ಫೆಬ್ರವರಿ 2022



ಶೇಷಾದ್ರಿಪುರಂ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಸರ್ವಧರ್ಮ ಸಮನ್ವಯತೆಯ ಸೌಹಾರ್ದ ಚಿಂತನ ಗೋಷ್ಠಿಯನ್ನು ಪ್ರೊ. ಮುರಳಿಧರನ್ ಶರ್ಮಾ ಉದ್ಘಾಟಿಸಿದರು. ಧಮ್ಮಚಾರಿ ಡಾ.ರಾಜೇಂದ್ರ, ನಾಡೋಜ ಡಾ.ವೂಡೆ ಪಿ.ಕೃಷ್ಣ, ಡಾ.ಭಾರ್ಗವಿ, ಡಾ.ಮೀರಾ ಮತ್ತಿತರರು ಪಾಲ್ಗೊಂಡಿದ್ದರು.



ಸ್ಪಂದನ್‌ದೀಪ್ ಫೌಂಡೇಶನ್ ಸಂಸ್ಥಾಪಕ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ರಕ್ತದಾನ ಶಿಬಿರದಲ್ಲಿ ನಾಡೋಜ ವೋಡೆ ಪಿ.ಕೃಷ್ಣ, ಐಆರ್‌ಸಿಎಸ್‌ನ ರಾಜು ಚಂದ್ರಶೇಖರ್, ಬಿಎಸ್‌ಎಫ್‌ನ ನಿವೃತ್ತ ಅಧಿಕಾರಿ ಎನ್.ಎಂ.ವಿಜಯ್‌ಸಿಂಗ್, ಕೆಟಿಪಿಸಿಎಲ್‌ನ ನಿವೃತ್ತ ಎಜಿಎಂ ರಂಗನಾಥ್ ಗುಪ್ತ, ಫೌಂಡೇಶನ್ ವಿಮಲ್‌ಕುಮಾರ್ ಪಾಲ್ಗೊಂಡಿದ್ದರು.

ಉದಯವಾಣಿ ಬೆಂಗಳೂರು

ಮಂಗಳವಾರ, ಫೆಬ್ರವರಿ 15, 2022

ರಕ್ತದಾನ ಶಿಬಿರದಲ್ಲಿ ನಾಡೋಜ ಡಾ.ವೂಡೇ ಪಿ, ಕೃಷ್ಣ ಅಭಿಪ್ರಾಯ | ಪ್ರತಿವರ್ಷ 2500 ಯೂನಿಟ್ ರಕ್ತ ಸಂಗ್ರಹ


ಕಷ್ಟದಲ್ಲಿ ನೆರವು ನೀಡುವವರು ದೈವ ಸ್ವರೂಪಿಗಳು

ಕೆಂಗೇರಿ: ಕಷ್ಟದಲ್ಲಾದವರು ದೈವ ಸ್ವರೂಪಿಗಳು, ವಿದ್ಯಾರ್ಥಿಗಳು ಶಾಲಾ- ಕಾಲೇಜು ದಿನಗಳಲ್ಲೇ ಸೇವಾ ಮನೋಭಾವ ಬೆಳೆಸಿಕೊಳ್ಳಬೇಕು. ಈ ಮನೋಭಾವ ನಿಮ್ಮನ್ನು ಎತ್ತರಕ್ಕೆ ಕೊಡೊಯ್ಯುತ್ತದೆ ಎಂದು ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ನಾಡೋಜ ಡಾ.ವೂಡೇ ಪಿ ಕೃಷ್ಣ ಹೇಳಿದರು.

ಯಶವಂತಪುರ ವಿಧಾನಸಭಾ ಕ್ಷೇತ್ರದ ಕೆಂಗೇರಿ ಉಪನಗರದ ಶೇಷಾದ್ರಿಪುರಂ ಅಕಾಡೆಮಿ ಆಫ್ ಬ್ಯುಸಿನೆಸ್ ಸ್ಟಡೀಸ್ ಕಾಲೇಜಿನ ಆವರಣದಲ್ಲಿ ಕೆ.ಎಂ.ನಂಜಪ್ಪ ಸ್ಮರಣಾರ್ಥ ನಡೆದ ರಕ್ತದಾನ ಶಿಬಿರದಲ್ಲಿ ಮಾತನಾಡಿದರು.

ಶೇಷಾದ್ರಿಪುರಂ ಸಮೂಹ ಶಿಕ್ಷಣ ಸಂಸ್ಥೆಗಳಿಂದ ಪ್ರತಿವರ್ಷ 2500 ಯೂನಿಟ್ ರಕ್ತದಾನಿ ವಿದ್ಯಾರ್ಥಿಗಳಿಂದ ರಕ್ತವನ್ನು ಸಂಗ್ರಹಿಸಿ ಕೊಡಲಾಗುತ್ತಿದೆ. ಇದರಿಂದ 7500 ಜನರ ಪ್ರಾಣ ರಕ್ಷಣೆ ಮಾಡಿದಂತಾಗುತ್ತಿದೆ ಎಂದರು.

ರಕ್ತದಾನ ಶುದ್ಧ ಮಾನವೀಯತೆಯ ಅಂತಃಕರಣದಿಂದ ಮಾಡುವಂತಹದ್ದು ಇಂದಿನ ವಿದ್ಯಾರ್ಥಿಗಳು ಸಮಾಜಕ್ಕೆ ಉಪಯುಕ್ತವಾಗುವಂತಹ ಪ್ರಜೆಗಳಾಗಬೇಕು. ರಕ್ತದಾನದಿಂದ ನಮ್ಮ ದೇಹಕ್ಕೆ ಆಗುವ ಹಲವಾರು ಉಪಯೋಗಗಳ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು.



ಕೆ.ಎಂ.ನಂಜಪ್ಪ ಸ್ಮರಣಾರ್ಥ ನಡೆದ ರಕ್ತದಾನ ಶಿಬಿರದಲ್ಲಿ ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ನಾಡೋಜ ಡಾ.ವೂಡೇ ಪಿ ಕೃಷ್ಣ ಭಾಗವಹಿಸಿದ್ದರು.

ಕರ್ನಾಟಕ ಪತ್ರಕರ್ತ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಮಾತನಾಡಿ, ರಕ್ತದಾನ ನಿಮ್ಮ ವ್ಯಕ್ತಿತ್ವವನ್ನು ಕಟ್ಟಿಕೊಳ್ಳಲು ಇದೊಂದು ಸುವರ್ಣ ಅವಕಾಶ ದೇಶಿಯ ಆಹಾರ ಸಂಸ್ಕೃತಿ ಮಾತ್ರವೇ ಆರೋಗ್ಯ ಸಂರಕ್ಷಣೆಯಲ್ಲಿ ಗಟ್ಟಿಪಾತ್ರ ವಹಿಸುತ್ತದೆ. ಪೋಷಕರಿಗೆ ಉತ್ತಮ ಮಕ್ಕಳಾಗಿ, ಸಮಾಜಕ್ಕೆ ಉತ್ತಮ ಪ್ರಜೆಗಳಾಗಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ನಿಮ್ಮ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಿ ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಇದೇ ವೇಳೆ ರಕ್ತದಾನ ಮಾಡಿದ ವಿದ್ಯಾರ್ಥಿಗಳಿಗೆ ಪ್ರಶಂಸಾ ಪತ್ರಗಳನ್ನು ವಿತರಿಸಲಾಯಿತು. ರಾಜಭವನದ ಪಥಸಂಚಲನದಲ್ಲಿ ಭಾಗವಹಿಸಿದ ಎನ್‌ಎಸ್‌ಎಸ್ ವಿದ್ಯಾರ್ಥಿ ಜೀವನ್ ಗೌಡನಿಗೆ ಸನ್ಮಾನ ಪತ್ರ ನೀಡಿ ಗೌರವಿಸಲಾಯಿತು. ಮೊದಲ ರಕ್ತದಾನಿ ಕೆ.ನಿಕಿತಾ ನೀಡಿದ ರಕ್ತವನ್ನು ಸರ್ಕಾರಿ ಬ್ಲಡ್ ಬ್ಯಾಂಕಿಗೆ ಹಸ್ತಾಂತರಿಸಲಾಯಿತು.

ಕಾಲೇಜಿನ ಧರ್ಮದರ್ಶಿ ಡಬ್ಲ್ಯೂ.ಡಿ.ಅಶೋಕ್, ರಾಜು ಚಂದ್ರಶೇಖರ್, ಕಾಲೇಜು ಕಾರ್ಯಕಾರಿ ಸಮಿತಿ ಅಧ್ಯಕ್ಷ ಬಿ.ಎ.ಅನಂತರಾಮು, ಪ್ರಾಂಶುಪಾಲರಾದ ಡಾ.ಮಂಜುನಾಥ್, ಪ್ರೊ.ಜಯರಾಂ, ಕೆಂಗೇರಿ ಆರಕ್ಷಕ ಠಾಣಾಧಿಕಾರಿ ಸಿ.ವಸಂತ್, ರೋಟರಿ ಸಂಸ್ಥೆಯ ಮುಖ್ಯಸ್ಥ ಶ್ರೀಕಾಂತ್ ಭಗವತ್ ಹಾಗೂ ಕರ್ನಾಟಕ ರಾಜ್ಯದ ಎನ್‌ಎಸ್‌ಎಸ್ ಅಧಿಕಾರಿ ಪ್ರತಾಪ್ ಲಿಂಗಯ್ಯ ಸೇರಿದಂತೆ ಕಾಲೇಜಿನ ವಿದ್ಯಾರ್ಥಿಗಳು ಇದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ

VIJAYAVANI » BENGALURU
ಬುಧವಾರ 9 ಫೆಬ್ರವರಿ 2022
9 FEBRUARY 2022

ರಕ್ತದಾನ ಮಾಡುವುದು ಅನ್ನದಾನದಷ್ಟೇ ಶ್ರೇಷ್ಠ ಗುಣ

ಯಶವಂತಪುರ: ವೈದ್ಯಲೋಕ ಎಷ್ಟೇ ಮುಂದುವರಿದಿದ್ದರೂ ಕೃತಕ ರಕ್ತ ಸೃಷ್ಟಿ ಇನ್ನೂ ಸಾಧ್ಯವಾಗಿಲ್ಲ. ಹೀಗಾಗಿ ರಕ್ತದಾನವು ಅನ್ನದಾನದಷ್ಟೇ ಶ್ರೇಷ್ಠ ಎಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಹೇಳಿದ್ದಾರೆ.

ಕೆಂಗೇರಿ ಉಪನಗರದ ಶೇಷಾದ್ರಿಪುರಂ ಕಾಲೇಜಿನಲ್ಲಿ ವಿವಿಧ ಸಂಘ-ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡಿದ್ದ 'ಕೆ.ಎಂ.ನಂಜಪ್ಪ ಸ್ಮರಣಾರ್ಥ ರಕ್ತದಾನ ಶಿಬಿರ'ದಲ್ಲಿ ಮಾತನಾಡಿದರು.

ವಿದ್ಯಾರ್ಥಿಗಳು ಶಾಲಾ-ಕಾಲೇಜು ದಿನಗಳಲ್ಲೇ ಸೇವಾ ಮನೋಭಾವ ಬೆಳೆಸಿಕೊಳ್ಳಬೇಕು, ಈ ಮನೋಭಾವ ಎತ್ತರಕ್ಕೆ ಕೊಂಡೊಯ್ಯುತ್ತದೆ ಎಂದರು.

ಕಾಲೇಜಿನ ಮುಖ್ಯ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ, ಡಾ.ರಾಜು ಚಂದ್ರಶೇಖರ್, ಧರ್ಮದರ್ಶಿ ಡಬ್ಲ್ಯು.ಡಿ. ಅಶೋಕ್, ಬಿ.ಎ. ಅನಂತರಾಮು, ಪ್ರಾಂಶುಪಾಲ ಡಾ.ಆರ್. ಮಂಜುನಾಥ್, ಪ್ರೊ.ಜಯರಾಮ್, ಪೊಲೀಸ್ ಇನ್‌ಸ್ಪೆಕ್ಟರ್ ಸಿ. ವಸಂತ್, ರೊಟೇರಿಯನ್ ಶ್ರೀಕಾಂತ್ ಭಾಗವತ್, ಎನ್‌ಎಸ್‌ಎಸ್ ಅಧಿಕಾರಿ ಪ್ರತಾಪ್ ಲಿಂಗಯ್ಯ ಮತ್ತಿತರರಿದ್ದರು.


ವಿಜಯವಾಣಿ



ಕೆಂಗೇರಿ ಉಪನಗರದ ಶೇಷಾದ್ರಿಪುರಂ ಕಾಲೇಜಿನಲ್ಲಿ ಮಂಗಳವಾರ ಏರ್ಪಡಿಸಿದ್ದ ರಕ್ತದಾನ ಶಿಬಿರವನ್ನು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಉದ್ಘಾಟಿಸಿದರು. ಡಾ.ವೂಡೇ ಪಿ. ಕೃಷ್ಣ, ಡಾ.ರಾಜು ಚಂದ್ರಶೇಖರ್, ಪ್ರಾಂಶುಪಾಲ ಡಾ.ಆರ್. ಮಂಜುನಾಥ್ ಇತರರಿದ್ದರು.

ಸಂಜೆವಾಣಿ

ಬೆಂಗಳೂರು 7
ಮಂಗಳವಾರ ೦೮ ಫೆಬ್ರವರಿ ೨೦೨೨



ನಗರದ ಶೇಷಾದ್ರಿಪುರಂ ಅಕಾಡೆಮಿ ಆಫ್ ಬಿಸಿನೆಸ್ ಸ್ಟಡೀಸ್ ಕಾಲೇಜಿನಲ್ಲಿ ಇಂದು ನಡೆದ ರಕ್ತದಾನ ಶಿಬಿರವನ್ನು ಕೆಯುಡಬ್ಲ್ಯುಜೆ ಅಧ್ಯಕ್ಷ ಶಿವಾನಂದ ತಗಡೂರು ಅವರು ಉದ್ಘಾಟಿಸಿದರು. ಡಾ. ವೂಡೆ ಪಿ. ಕೃಷ್ಣ, ರಾಜುಚಂದ್ರ ಶೇಖರ್, ಇನ್ಸ್ ಪೆಕ್ಟರ್ ವಸಂತರಾಜು ಹಾಗೂ ಇತರರು ಭಾಗವಹಿಸಿದ್ದರು. ಸುಮಾರು 150 ಮಂದಿ ವಿದ್ಯಾರ್ಥಿಗಳು ರಕ್ತದಾನ ಮಾಡಿದರು.

ಈ ಸಂಜೆ

ಮಂಗಳವಾರ
08 ಫೆಬ್ರವರಿ 2022




ಶೇಷಾದ್ರಿಪುರಂ ಅಕಾಡೆಮಿ ಆಫ್ ಬ್ಯುಸಿನೆಸ್ ಸ್ಟಡೀಸ್, ರೆಡ್‌ಕ್ರಾಸ್ ಹಾಗು ರೋಟರಿ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ರಕ್ತದಾನ ಶಿಬಿರಕ್ಕೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಚಾಲನೆ ನೀಡಿದರು. ಶೇಷಾದ್ರಿಪುರಂ ಎಜುಕೇಷನ್ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ವೂಡೇ ಪಿ.ಕೃಷ್ಣ, ಡಾ.ರಾಜು ಚಂದ್ರಶೇಖರ್, ಕೆಂಗೇರಿ ಠಾಣೆಯ ಇನ್‌ಸ್ಪೆಕ್ಟರ್ ವಸಂತ್ ಮತ್ತಿತರರು ಹಾಜರಿದ್ದರು.

VIJAYAVANI BENGALURU
ಶನಿವಾರ 5 ಫೆಬ್ರವರಿ 2022
5 FEBRUARY 2022

ಯಡಿಯೂರಪ್ಪ ಅಭಿಮತ । 'ಕೋವಿಡ್ ಕತೆಗಳು' ಪುಸ್ತಕ ಲೋಕಾರ್ಪಣೆ

ಕೋವಿಡ್ ಯಶಸ್ವಿ ನಿರ್ವಹಣೆ



ಗಾಂಧಿ ಭವನದಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ಶಿವಾನಂದ ತಗಡೂರು ಅವರ 'ಕೋವಿಡ್ ಕತೆಗಳು'ಕೃತಿಯನ್ನು ಯಡಿಯೂರಪ್ಪ ಬಿಡುಗಡೆ ಮಾಡಿದರು. ಡಾ. ಸಿ.ಎನ್. ಮಂಜುನಾಥ್, ಡಾ. ವೂಡೇ ಪಿ. ಕೃಷ್ಣ, ನಟಿ ಸೋನು ಗೌಡ, ವಿಶ್ವೇಶ್ವರ ಭಟ್, ರವಿ ಹೆಗಡೆ, ಕೆ.ಎನ್. ಚನ್ನೇಗೌಡ, ಸದಾಶಿವ ಶೆಣೈ ಉಪಸ್ಥಿತರಿದ್ದರು.

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಕೋವಿಡ್ ವಿರುದ್ಧದ ಹೋರಾಟದಲ್ಲಿ ಸೋಂಕಿನಿಂದ ಮೃತಪಟ್ಟ ಪತ್ರಕರ್ತರ ಕುಟುಂಬಗಳಿಗೆ ಸರ್ಕಾರ ಆರ್ಥಿಕ ನೆರವು ನೀಡುವ ಮೂಲಕ ತನ್ನ ಕರ್ತವ್ಯ ನಿರ್ವಹಿಸಿದೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದ್ದಾರೆ.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಶುಕ್ರವಾರ ಗಾಂಧಿ ಭವನದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಬಹುರೂಪಿ ಪ್ರಕಾಶನ ಪ್ರಕಟಿತ ಶಿವಾನಂದ ತಗಡೂರು ಅವರ 'ಕೋವಿಡ್ ಕತೆಗಳು' ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದರು.

ಕೋವಿಡ್ ಮೊದಲ ಹಾಗೂ ಎರಡನೇ ಅಲೆಯಲ್ಲಿ ಸೋಂಕಿನಿಂದ ಆಸ್ಪತ್ರೆ ಸೇರಿದವರು ಗುಣಮುಖರಾಗಿ ಹಿಂದಿರುಗುತ್ತಾರೆಂಬ ನಂಬಿಕೆಯೇ ಇರುತ್ತಿರಲಿಲ್ಲ. ಅಂತಹ ಸಂಕಷ್ಟದ ಕಾಲದಲ್ಲಿ ಪ್ರತಿ ವಾರ ತಜ್ಞರ ಸಭೆ ನಡೆಸಿ, ಮಾರ್ಗದರ್ಶನ ಪಡೆದು ಸಾಧ್ಯವಾದಷ್ಟು ಪ್ರಾಣಗಳನ್ನು ಉಳಿಸುವ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇವೆ. ಸದ್ಯ ಕೋವಿಡ್ ಇದ್ದರೂ, ಸಾವು ನೋವು ಕಡಿಮೆಯಾಗಿದೆ. ಆದಾಗಿಯೂ ಕೋವಿಡ್ ನೊಂದಿಗೇ ಬದುಕುವ ಅನಿವಾರ್ಯ ಪರಿಸ್ಥಿತಿ ಇದೆ ಎಂದು ಹೇಳಿದರು.

ಮಾಧ್ಯಮಗಳ ಸಹಕಾರ: ನಾನೂ ಎರಡು ಬಾರಿ ಸೋಂಕಿಗೆ ಒಳಗಾದರೂ, ಅದರ ನಡುವೆಯೇ ಒಂದೆಡೆ ಆಡಳಿತ ನಿರ್ವಹಣೆ ಮತ್ತೊಂದೆಡೆ ಕೋವಿಡ್ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳಬೇಕಾಯಿತು. ಆ ಸಂದರ್ಭದಲ್ಲಿ ಕೋವಿಡ್ ಕುರಿತು ಜನರಿಗೆ ಮಾಹಿತಿ ನೀಡುವ ಹಾಗೂ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಮಾಧ್ಯಮಗಳ ಸಹಕಾರ ಬಹಳ ಮುಖ್ಯವಾಗಿತ್ತು. ಅದನ್ನು ಪತ್ರಕರ್ತರು ಬಹಳ ಯಶಸ್ವಿಯಾಗಿ ನಿಭಾಯಿಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕರೊನಾ ವಾರಿಯರ್ಸ್: ಶಿವಾನಂದ ತಗಡೂರು ಕೋವಿಡ್ ಸಂದರ್ಭದ ಘಟನೆಗಳನ್ನು ಈ ಕೃತಿಯಲ್ಲಿ ಮನಮುಟ್ಟುವ ರೀತಿಯಲ್ಲಿ ನಿರೂಪಣೆ ಮಾಡಿದ್ದಾರೆ. ಇದನ್ನು ಓದಿದಾಗ ಕೋವಿಡ್ ಸಂದರ್ಭ ಮಾಧ್ಯಮದವರು ಎದುರಿಸಿದ ಸಮಸ್ಯೆ ಸವಾಲುಗಳು ತಿಳಿಯುತ್ತವೆ. ಸೋಂಕಿನಿಂದ ಮೃತಪಟ್ಟ ಪತ್ರಕರ್ತರ ಕುಟುಂಬಗಳಿಗೆ ಮುಖ್ಯಮಂತ್ರಿ ಪರಿಹಾರ ನಿಧಿಯಿಂದ 5 ಲಕ್ಷ ರೂ. ಪರಿಹಾರ ನೀಡುವ ಮೂಲಕ ಸರ್ಕಾರ ತನ್ನ ಕರ್ತವ್ಯವನ್ನು ನಿರ್ವಹಿಸಿದೆ. ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘ ಕೂಡ ಪತ್ರಕರ್ತರ ನೆರವಿಗೆ ಧಾವಿಸಿದ್ದು ಶ್ಲಾಘನೀಯ ಸಂಗತಿ ಎಂದು ಯಡಿಯೂರಪ್ಪ ಹೇಳಿದರು.

ವಿಶ್ವವಾಣಿ ಸಂಪಾದಕ ವಿಶ್ವೇಶ್ವರ ಭಟ್ ಅವರಿಗೆ 'ಪಿ. ರಾಮಯ್ಯ ಪ್ರಶಸ್ತಿ' ಪ್ರದಾನ ಮಾಡಲಾಯಿತು. ವಿಜಯವಾಣಿ ಪತ್ರಿಕೆ ಸಂಪಾದಕ ಕೆ.ಎನ್. ಚನ್ನೇಗೌಡ, ಕನ್ನಡಪ್ರಭ ಸಂಪಾದಕ ರವಿ ಹೆಗಡೆ, ಕರ್ನಾಟಕ ಮಾಧ್ಯಮ ಅಕಾಡೆಮಿ ಅಧ್ಯಕ್ಷ ಸದಾಶಿವ ಶೆಣೈ, ನಟಿ ಸೋನು ಗೌಡ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ, ವಾರ್ತಾ ಇಲಾಖೆ ವಿಶ್ರಾಂತ ಜಂಟಿ ನಿರ್ದೇಶಕ ಎಚ್.ಬಿ. ದಿನೇಶ್, ಬಹುರೂಪಿ ಪ್ರಕಾಶನದ ಜಿ.ಎನ್. ಮೋಹನ್ ಮತ್ತಿತರರು ಉಪಸ್ಥಿತರಿದ್ದರು.

ಸೇಡು ತೀರಿಸಿಕೊಂಡ ಪ್ರಕೃತಿ

ಪ್ರಕೃತಿ ವಿರುದ್ಧ ಹೋದರೆ ಯಾವ ಸ್ಥಿತಿ ಎದುರಾಗುತ್ತದೆ ಎನ್ನುವುದಕ್ಕೆ ಕೋವಿಡ್ ಉತ್ತಮ ನಿದರ್ಶನ. ತಿನ್ನಬಾರದ್ದನ್ನು ತಿಂದರೆ, ಮಾಡಬಾರದನ್ನು ಮಾಡಿದರೆ ಪ್ರಕೃತಿ ಸೇಡು ತೀರಿಸಿಕೊಳ್ಳುವ ಬಗೆ ಇದು ಎಂದು ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ ಹೇಳಿದರು.

"ಪತ್ರಕರ್ತರು ಕೇವಲ ಟೀಕೆ ಮಾಡುವವರಲ್ಲ. ಒಳ್ಳೆಯ ಕೆಲಸ ಮಾಡಿದಾಗ ಬೆನ್ನುತಟ್ಟಿ ಪ್ರೋತ್ಸಾಹವನ್ನೂ ನೀಡುತ್ತಾರೆ. ಅಧಿಕಾರ ಇದ್ದಾಗ ಮಾತ್ರವಲ್ಲ, ಹೋದ ಮೇಲೂ ಅದೇ ಗೌರವ ನೀಡುತ್ತಿದ್ದಾರೆ. ಅದನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡುತ್ತೇನೆ. ಮುಂದಿನ ದಿನಗಳಲ್ಲೂ ನಾಡಿನ ಅಭಿವೃದ್ಧಿಗೆ ಒಟ್ಟಾಗಿ ಹೋರಾಟ ಮಾಡೋಣ.

। ಬಿ.ಎಸ್.ಯಡಿಯೂರಪ್ಪ
ಮಾಜಿ ಮುಖ್ಯಮಂತ್ರಿ

ಶನಿವಾರ,5 ಫೆಬ್ರವರಿ 2022,
ಬೆಂಗಳೂರು

ವಿಜಯ ಕರ್ನಾಟಕ VK

ಕೋವಿಡ್ ವೇಳೆ ಮಾಧ್ಯಮ ಕಾರ್ಯಕ್ಕೆ ಶ್ಲಾಘನೆ

ಸಂಕಷ್ಟ ಪರಿಸ್ಥಿತಿಯಲ್ಲಿ ನೆರವಾಗಿದ್ದು ಮಾಧ್ಯಮ ಎಂದ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ

ವಿಕ ಸುದ್ದಿಲೋಕ ಬೆಂಗಳೂರು

''ಕೋವಿಡ್ ಮೊದಲ ಮತ್ತು ಎರಡನೇ ಅಲೆ ಅತ್ಯಂತ ಗಂಭೀರವಾಗಿತ್ತು. ಆ ಪರಿಸ್ಥಿತಿಯಲ್ಲಿ ನಾನು ಎರಡು ಬಾರಿ ಕೋವಿಡ್ ಸೋಂಕಿಗೆ ಒಳಗಾದೆ. ಅದರ ನಡುವೆಯೇ ಒಂದು ಕಡೆ ಆಡಳಿತ ನಿರ್ವಹಣೆ, ಮತ್ತೊಂದೆಡೆ ಕೋವಿಡ್ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳಬೇಕಾಯಿತು. ಆ ಸಂದರ್ಭದಲ್ಲಿ ನನಗೆ ಎಲ್ಲಾ ರೀತಿಯ ಸಹಕಾರ ಕೊಟ್ಟು ಆಡಳಿತವನ್ನು ಸುಸೂತ್ರವಾಗಿ ನಡೆಸಲು ನೆರವಾಗಿದ್ದು ಮಾಧ್ಯಮಗಳು,'' ಎಂದು ಮಾಜಿ ಮುಖ್ಯಮಂತ್ರಿ ಬಿ. ಎಸ್. ಯಡಿಯೂರಪ್ಪ ನುಡಿದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ನಗರದಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮ ದಲ್ಲಿ ಬಹುರೂಪಿ ಪ್ರಕಾಶನ ಪ್ರಕಟಿತ ಪತ್ರಕರ್ತ ಶಿವಾನಂದ ತಗಡೂರು ಅವರ 'ಕೋವಿಡ್ ಕತೆಗಳು' ಪುಸ್ತಕ ಬಿಡುಗಡೆ ಮಾಡಿ ಅವರು ಮಾತನಾಡಿದರು.

''ಶಿವಾನಂದ ತಗಡೂರು ಕೋವಿಡ್ ಸಂದರ್ಭದ ಘಟನೆಗಳನ್ನು ಈ ಕೃತಿಯಲ್ಲಿ ಮನಮುಟ್ಟುವ ರೀತಿಯಲ್ಲಿ ನಿರೂಪಿಸಿದ್ದಾರೆ. ಇದು ಕೋವಿಡ್ ಕಥೆಯಲ್ಲ, ಕಟು ಸತ್ಯ. ಇದನ್ನು ಓದಿದಾಗ ಕೋವಿಡ್ ಸಂದರ್ಭದಲ್ಲಿ ಮಾಧ್ಯಮದವರು ಎದುರಿಸಿದ ಸಮಸ್ಯೆ ಸವಾಲುಗಳು ತಿಳಿಯುತ್ತವೆ. ಕೋವಿಡ್ ನಿಯಂತ್ರಣದಲ್ಲಿ ಪತ್ರಿಕಾರಂಗ ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸಿದೆ. ಈ ವೇಳೆ ಸೋಂಕಿನಿಂದ ಮೃತಪಟ್ಟ ಕುಟುಂಬಗಳಿಗೆ ಮುಖ್ಯಮಂತ್ರಿ ಪರಿಹಾರ ನಿಧಿಯಿಂದ 5 ಲಕ್ಷ ರೂ. ಪರಿಹಾರ ನೀಡುವ ಮೂಲಕ ಸರಕಾರ ತನ್ನ ಕರ್ತವ್ಯ ಮಾಡಿದೆ. ಅದೇ ರೀತಿ ಸಂಕಷ್ಟದ ಸಂದರ್ಭದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಪತ್ರಕರ್ತರ ನೆರವಿಗೆ ಧಾವಿಸಿದ್ದು ಶ್ಲಾಘನೀಯ,'' ಎಂದರು.



ಪತ್ರಕರ್ತ ಶಿವಾನಂದ ತಗಡೂರು ಅವರ 'ಕೋವಿಡ್ ಕತೆಗಳು' ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಮಾಜಿ ಸಿಎಂ ಬಿ ಎಸ್ ಯಡಿಯೂರಪ್ಪ ಮತ್ತಿತರರು ಭಾಗವಹಿಸಿದ್ದರು.

''ಕೋವಿಡ್ ಸಾಂಕ್ರಾಮಿಕ ಸಂದರ್ಭದಲ್ಲಿ ಜೀವದ ಹಂಗು ತೊರೆದು ಪತ್ರಕರ್ತರು ಕಾರ್ಯನಿರ್ವಹಿಸಿದ್ದಾರೆ. ಈ ಹೋರಾಟದಲ್ಲಿ ಸೋಂಕಿನಿಂದ ಮೃತಪಟ್ಟ ಪತ್ರಕರ್ತರ ಕುಟುಂಬಗಳಿಗೆ ಆರ್ಥಿಕ ನೆರವು ನೀಡುವ ಮೂಲಕ ಸರಕಾರ ತನ್ನ ಜವಾಬ್ದಾರಿ ನಿರ್ವಹಿಸಿದೆ,'' ಎಂದು ಬಿ.ಎಸ್. ಯಡಿಯೂರಪ್ಪ ಹೇಳಿದರು.

ಪುಸ್ತಕ ಬಿಡುಗಡೆಗೊಳಿಸಿದ ಜಯದೇವ ಹೃದ್ರೋಗ ಸಂಸ್ಥೆಯ ನಿರ್ದೇಶಕ ಡಾ. ಸಿ.ಎನ್. ಮಂಜುನಾಥ್ ''ವೈದ್ಯ ವೃತ್ತಿಯಲ್ಲಿ ಮಾನವೀಯತೆ ಅತ್ಯಂತ ಮುಖ್ಯವಾಗಿದ್ದು ಖಾಸಗಿ ಆಸ್ಪತ್ರೆಗಳು ಶೇ.20ರಷ್ಟು ಹಾಸಿಗೆಗಳನ್ನು ಬಡ ಮತ್ತು ಮಧ್ಯಮ ವರ್ಗದವರ ಚಿಕಿತ್ಸೆಗೆ ಮೀಸಲಿಡುವ ನಿರ್ಧಾರ ಮಾಡಬೇಕು,'' ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ ವಿಶ್ವೇಶ್ವರ ಭಟ್ ಅವರಿಗೆ 'ಪಿ.ರಾಮಯ್ಯ ಪ್ರಶಸ್ತಿ' ನೀಡಿ ಸನ್ಮಾನಿಸಲಾಯಿತು. 'ವಿಜಯವಾಣಿ' ಸಂಪಾದಕ ಕೆ.ಎನ್. ಚನ್ನೇಗೌಡ, 'ಕನ್ನಡಪ್ರಭ' ಸಂಪಾದಕ ರವಿ ಹೆಗಡೆ, ಕರ್ನಾಟಕ ಮಾಧ್ಯಮ ಅಕಾಡೆಮಿ ಅಧ್ಯಕ್ಷ ಸದಾಶಿವ ಶೆಣೈ, ನಟಿ ಸೋನು ಗೌಡ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ ವಾರ್ತಾ ಇಲಾಖೆ ನಿವೃತ್ತ ಜಂಟಿ ನಿರ್ದೇಶಕ ಎಚ್.ಬಿ.ದಿನೇಶ್, ಬಹುರೂಪಿ ಪ್ರಕಾಶನದ ಜಿ.ಎನ್. ಮೋಹನ್ ಮತ್ತಿತರರು ಉಪಸ್ಥಿತರಿದ್ದರು.

ಕನ್ನಡಪ್ರಭ

ಶನಿವಾರ 5.2.2022

ಮಾಜಿ ಸಿಎಂ ಶ್ಲಾಘನೆ | 'ಶಿವಾನಂದ ತಗಡೂರು ಹೇಳಿದ ಕೋವಿಡ್ ಕತೆಗಳು' ಪುಸ್ತಕ ಬಿಡುಗಡೆ | ಕೊರೋನಾ ಹೋರಾಟಕ್ಕೆ ಮಾಧ್ಯಮಗಳಿಂದ ಶಕ್ತಿ: ಬಿಎಸ್‌ವೈ ಬಣ್ಣನೆ

ಕೋವಿಡ್ ವೇಳೆ ಜೀವದ ಹಂಗು ಬಿಟ್ಟು ಪತ್ರಕರ್ತರ ಕೆಲಸ

• ಕನ್ನಡಪ್ರಭ ವಾರ್ತೆ ಬೆಂಗಳೂರು

ಕೊರೋನಾ ವಿರುದ್ಧದ ಹೋರಾಟದಲ್ಲಿ ಪತ್ರಕರ್ತರು ಕೂಡ ಪ್ರಾಣದ ಹಂಗು ತೊರೆದು ಕಾರ್ಯನಿರ್ವಹಿಸಿದ್ದು, ಸೋಂಕಿನಿಂದ ಮೃತಪಟ್ಟ ಪತ್ರಕರ್ತರ ಕುಟುಂಬಗಳಿಗೆ ಆರ್ಥಿಕ ನೆರವು ನೀಡುವ ಮೂಲಕ ರಾಜ್ಯ ಸರ್ಕಾರವು ತನ್ನ ಜವಾಬ್ದಾರಿ ನಿಭಾಯಿಸಿದೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪ ಹೇಳಿದರು.

ನಗರದ ಗಾಂಧಿ ಭವನದಲ್ಲಿ ಶುಕ್ರವಾರ ನಡೆದ ಬಹುಮುಖಿ ಪ್ರಕಾಶನದ 'ಶಿವಾನಂದ ತಗಡೂರು ಹೇಳಿದ ಕೋವಿಡ್ ಕತೆಗಳು' ಪುಸ್ತಕ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಅವರು, 'ಕಳೆದ ಎರಡು ವರ್ಷಗಳಿಂದ ಕೊರೋನಾ ಎದುರಿಸಲು ರಾಜ್ಯ ಸರ್ಕಾರವು ಸಾಕಷ್ಟು ವಿಶೇಷ ಪ್ರಯತ್ನಗಳನ್ನು ಮಾಡಿದೆ. ಇಂತಹ ಸಂದರ್ಭದಲ್ಲಿ ಮುದ್ರಣ ಮತ್ತು ಎಲೆಕ್ಟ್ರಾನಿಕ್ ಮಾಧ್ಯಮಗಳು ಜನರಲ್ಲಿ ಜಾಗೃತಿ ಮೂಡಿಸಿ ಸೋಂಕನ್ನು ಎದುರಿಸುವ



ಬೆಂಗಳೂರಲ್ಲಿ 'ಶಿವಾನಂದ ತಗಡೂರು ಹೇಳಿದ ಕೋವಿಡ್ ಕತೆಗಳು' ಪುಸ್ತಕ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಯಡಿಯೂರಪ್ಪ, ಪತ್ರಕರ್ತರು, ಗಣ್ಯರು..

ಶಕ್ತಿಯನ್ನು ನೀಡಿದವು. ಸೋಂಕು ತೀವ್ರವಾಗಿದ್ದ ಸಂದರ್ಭದಲ್ಲಿ ಸಾಕಷ್ಟು ಪತ್ರಕರ್ತರು ಪ್ರಾಣದ ಹಂಗು ತೊರೆದು ಕಾರ್ಯ ನಿರ್ವಹಿಸಿದ್ದಾರೆ. ಅನೇಕ ಕಷ್ಟಗಳ ಸಂದರ್ಭಗಳನ್ನು ಎದುರಿಸಿದ್ದು, ಅವುಗಳನ್ನು ನೆನಸಿಕೊಂಡರೆ ಭಯವಾಗುತ್ತದೆ. ಅಂತಹ ಪತ್ರಕರ್ತರ ಸಂಕಷ್ಟದ ಸಂದರ್ಭದಲ್ಲಿ ನೆರವಾಗುವುದು ಸರ್ಕಾರ ಕರ್ತವ್ಯವಾಗಿತ್ತು. ಹೀಗಾಗಿಯೇ ಕೊರೋನಾದಿಂದ ಮೃತಪಟ್ಟ ಪತ್ರಕರ್ತರ ಕುಟುಂಬಕ್ಕೆ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಐದು ಲಕ್ಷ ರು. ಆರ್ಥಿಕ ನೆರವು ನೀಡಲಾಯಿತು' ಎಂದರು.

ಶೇ.20 ಹಾಸಿಗೆ ಬಡವರಿಗೆ ಮೀಸಲಿಡಿ:


ಅನಂತರ ಮಾತನಾಡಿದ ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ ಡಾ.ಸಿ.ಎನ್ ಮಂಜುನಾಥ್, ರೋಗಿಗಳ ಆರ್ಥಿಕ ಸ್ಥಿತಿಗತಿ ಅರ್ಥ ಮಾಡಿಕೊಂಡು ಚಿಕಿತ್ಸೆ ನೀಡುವ ಮನಸ್ಥಿತಿಯನ್ನು ವೈದ್ಯರು ಬೆಳೆಸಿಕೊಳ್ಳಬೇಕು. ರೋಗಿ ಚೇತರಿಕೆ ಕಾಣುವುದಿಲ್ಲ ಎಂದು ತಿಳಿದಿದ್ದರೂ ಆಸ್ಪತ್ರೆ ಬಿಲ್ ಹೆಚ್ಚಿಸಲು ಚಿಕಿತ್ಸೆ ಮುಂದುವರೆಸಬಾರದು. ಒಂದು ವೇಳೆ ರೋಗಿ ಬಡವನಾಗಿದ್ದರೆ ಸತ್ತ ರೋಗಿ ಜತೆ ಇದ್ದವರೂ ಸಾಯುತ್ತಾರೆ. ವೃತ್ತಿಯಲ್ಲಿ ಮಾನವೀಯತೆ ಅತ್ಯಂತ ಮುಖ್ಯವಾಗಿದ್ದು, 100 ಹಾಸಿಗೆಗಳಿಗಿಂತ ಹೆಚ್ಚಿರುವ ಖಾಸಗಿ ಆಸ್ಪತ್ರೆಗಳು ಶೇ.20 ರಷ್ಟು ಹಾಸಿಗೆಗಳನ್ನು ಬಡ ಮತ್ತು ಮಧ್ಯಮವರ್ಗದವರ ಚಿಕಿತ್ಸೆಗೆ ಮೀಸಲಿಡುವ ನಿರ್ಧಾರ ಮಾಡಬೇಕು ಎಂದು ಸಲಹೆ ನೀಡಿದರು.

ಕನ್ನಡಪ್ರಭ ಮತ್ತು ಸುವರ್ಣ ನ್ಯೂಸ್ ಪ್ರಧಾನ ಸಂಪಾದಕ ರವಿ ಹೆಗಡೆ, ವಿಜಯವಾಣಿ ಪತ್ರಿಕೆ ಸಂಪಾದಕ ಕೆ.ಎನ್. ಚನ್ನೇಗೌಡ, ವಿಶ್ವವಾಣಿ ಪತ್ರಿಕೆ ಸಂಪಾದಕ ವಿಶ್ವೇಶ್ವರ ಭಟ್, ಕರ್ನಾಟಕ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು, ಕರ್ನಾಟಕ ಮಾಧ್ಯಮ ಅಕಾಡೆಮಿಯ ಅಧ್ಯಕ್ಷ ಸದಾಶಿವ ಶೆಣೈ, ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ವೂಡೇ ಪಿ. ಕೃಷ್ಣ, ವಾರ್ತಾ ಇಲಾಖೆಯ ವಿಶ್ರಾಂತ ಜಂಟಿ ನಿರ್ದೇಶಕ ಎಚ್.ಬಿ. ದಿನೇಶ್, ಚಲನಚಿತ್ರ ನಟಿ ಸೋನು ಗೌಡ, ಬಹುರೂಪಿ ಸಂಸ್ಥೆಯ ಜಿ.ಎನ್. ಮೋಹನ್ ವೇದಿಕೆಯಲ್ಲಿದ್ದರು.

ಸಂಯುಕ್ತ ಕರ್ನಾಟಕ

05 ಫೆಬ್ರವರಿ 2022
ಶನಿವಾರ

ಕೊರೊನಾ ಓಡಿಸಲು ಮಾಸ್ಕ್ ಬಾಳಸಂಗಾತಿ



ಸಂ.ಕ. ಸಮಾಚಾರ, ಬೆಂಗಳೂರು

ಕೊರೊನಾ ವೈರಸ್ ವಿಭಿನ್ನ ರೋಗ. ಇದು ಮಾನಸಿಕ ಕಾಯಿಲೆ ಮಾತ್ರವಲ್ಲ ಅಸ್ಪೃಶ್ಯತೆಯ ಕಾಯಿಲೆಯೂ ಹೌದು. ಮೂರು ಅಲೆಗಳಲ್ಲಿ ಕೋವಿಡ್ ತನ್ನ ಕರಾಳತೆ ಪ್ರದರ್ಶಿಸಿದೆ. ಭವಿಷ್ಯದಲ್ಲಿ ನಾವು ಮಾಸ್ಕ್‌ಅನ್ನು ಬಾಳಸಂಗಾತಿಯಾಗಿ ಮಾಡಿಕೊಂಡಲ್ಲಿ ಮಾತ್ರ ಆರೋಗ್ಯಯುತ ಬದುಕು ಸಾಧ್ಯವಿದೆ ಎಂದು ಜಯದೇವ ಆಸ್ಪತ್ರೆಯ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್ ಅಭಿಪ್ರಾಯಪಟ್ಟರು.

ಬೆಂಗಳೂರಿನ ಗಾಂಧಿಭವನದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಅವರ ಕೋವಿಡ್ ಕಥೆಗಳ ಎಂಬ ಪುಸ್ತಕ ಲೋಕಾರ್ಪಣೆ ಸಮಾರಂಭದಲ್ಲಿ ಮಾತನಾಡಿದ ಅವರು ಕೋವಿಡ್‌ನಿಂದ ಕರ್ನಾಟಕ ಆರೋಗ್ಯ ಕ್ಷೇತ್ರದ ಸೌಲಭ್ಯಗಳಲ್ಲಿ ದೊಡ್ಡಮಟ್ಟದಲ್ಲಿ ಮೇಲ್ದರ್ಜೆಗೇರಿದೆ ಎಂದರು.

ರೋಗಿಯ ಆರ್ಥಿಕ ಸ್ಥಿತಿ ಅರಿತು ಮಾನವೀಯತೆ ಮತ್ತು ಹೃದಯವಂತಿಕೆಯಿಂದ ಚಿಕಿತ್ಸೆ ನೀಡುವ ವ್ಯವಸ್ಥೆ ಆಗಬೇಕಿದೆ. ನಮ್ಮ ಖಾಸಗಿ ಆಸ್ಪತ್ರೆಗಳು ಬಡವರಿಗೆಂದೇ ಶೇ20ರಷ್ಟು ಹಾಸಿಗೆಗಳನ್ನು ಕಾದಿರಿಸುವ ಮೂಲಕ ಸರ್ಕಾರಿ ಆಸ್ಪತ್ರೆಗಳ ದರದಲ್ಲಿ ಚಿಕಿತ್ಸೆ ಕೊಡಬೇಕೆಂದು ಕರೆ ನೀಡಿದರು.

ಸಮಾರಂಭದ ಅಧ್ಯಕ್ಷತೆಯನ್ನು ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರು ವಹಿಸಿದ್ದರು, ವೇದಿಕೆಯಲ್ಲಿ ಹಿರಿಯ ಪತ್ರಕರ್ತರಾದ ವಿಶ್ವೇಶ್ವರಭಟ್, ರವಿಹೆಗಡೆ, ಚೆನ್ನೇಗೌಡ, ಕರ್ನಾಟಕ ಮಾಧ್ಯಮ ಅಕಾಡೆಮಿ ಅಧ್ಯಕ್ಷ ಸದಾಶಿವಶೆಣೈ, ಕೃತಿಯ ಕರ್ತೃ ಶಿವಾನಂದ ತಗಡೂರು, ಗಾಂಧಿ ಭವನ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ ಕೃಷ್ಣ, ವಾರ್ತಾ ಇಲಾಖೆ ನಿವೃತ್ತ ಅಧಿಕಾರಿ ಹೆಚ್.ಬಿ.ದಿನೇಶ್ ಹಾಜರಿದ್ದರು.

ಉದಯವಾಣಿ

ಶನಿವಾರ, ಫೆಬ್ರವರಿ 5, 2022

'ಕೋವಿಡ್ ಕಥೆಗಳು' ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅಭಿಪ್ರಾಯ

ಎಲ್ಲರ ಸಹಕಾರದಿಂದ ಕೊರೊನಾ ಎದುರಿಸಲು ಸಾಧ್ಯವಾಯ್ತು

ಬೆಂಗಳೂರು: ವೈದ್ಯಕೀಯ ಕ್ಷೇತ್ರ, ಮಾಧ್ಯಮ, ಶಾಸಕಾಂಗ ಸೇರಿದಂತೆ ಎಲ್ಲಾ ಕ್ಷೇತ್ರಗಳು ಸಂಪೂರ್ಣ ಸಹಕಾರ ನೀಡಿದ್ದರಿಂದ ರಾಜ್ಯದಲ್ಲಿ ಕೊರೊನಾ ಸದೃಢವಾಗಿ ಎದುರಿಸಲು ಸಾಧ್ಯವಾಯಿತು ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅಭಿಪ್ರಾಯ ವ್ಯಕ್ತಪಡಿಸಿದರು.

ನಗರದ ಗಾಂಧಿ ಭವನದಲ್ಲಿ ಶುಕ್ರವಾರ ಪತ್ರಕರ್ತ ಶಿವಾನಂದ ತಗಡೂರು ಅವರ 'ಕೋವಿಡ್ ಕಥೆಗಳು' ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದ ಅವರು, ಸಂವಿಧಾನದ 4ನೇ ಅಂಗವಾಗಿ ಮಾಧ್ಯಮ ಕೊರೊನಾ ಸಂದರ್ಭದಲ್ಲಿ ಬಹಳ ಜವಾಬ್ದಾರಿಯುತವಾಗಿ ನಡೆದುಕೊಂಡಿದೆ ಎಂದು ಶ್ಲಾಘನೆ ವ್ಯಕ್ತಪಡಿಸಿದರು. ತುಂಬಾ ಸಂಕಷ್ಟದ ಸಮಯದಲ್ಲಿ ಎಲ್ಲರ ಸಹಕಾರದಿಂದ ಕೊರೊನಾ ಎದುರಿಸಲು ವಿಶೇಷ ಪ್ರಯತ್ನ ಮಾಡಿದೆವು. ವಿದ್ಯುನ್ಮಾನ, ಮುದ್ರಣ ಮಾಧ್ಯಮಗಳು ಕೂಡ ಸಂಪೂರ್ಣ ಸಹಕಾರ ನೀಡಿ, ಜನರಲ್ಲಿ ಜಾಗೃತಿ ಮೂಡಿಸಿ ಕೊರೊನಾ ಎದುರಿಸಲು ಶಕ್ತಿ ನೀಡಿದವು ಎಂದರು.

ಡಾ.ಸಿ.ಎನ್.ಮಂಜುನಾಥ್‌ಗೆ ಅಭಿನಂದನೆ: ಮಹಾಮಾರಿಗೆ ತುತ್ತಾಗಿ ಆಸ್ಪತ್ರೆ ಸೇರಿದರೆ ವಾಪಸ್ ಬರುತ್ತಾರೆ ಎಂಬ ನಂಬಿಕೆ ಇಲ್ಲದ ಸಮಯದಲ್ಲಿ ಡಾ. ಸಿ.ಎನ್.ಮಂಜುನಾಥ್ ಅವರು ಹಗಲು-ರಾತ್ರಿಯೆನ್ನದೆ ಮಾರ್ಗದರ್ಶನ- ಸಲಹೆಗಳನ್ನು ನೀಡುತ್ತಿದ್ದರು. ಸಾಧ್ಯವಾದಷ್ಟು ಮಟ್ಟಿಗೆ ಸಾವುಗಳನ್ನು ತಡೆಗಟ್ಟುವುದು ಶ್ರಮಿಸಿದರು ಎಂದು ಅಭಿನಂದನೆ ಸಲ್ಲಿಸಿದರು. ಕೋವಿಡ್ ಕತೆಗಳು- ಕತೆಗಳಲ್ಲ, ಕಟುವಾಸ್ತವ ಸಂಗತಿ ಎಂಬುದು ಎಲ್ಲರಿಗೂ ತಿಳಿದಿರುವ ವಿಷಯವಾಗಿದೆ. ಪತ್ರಕರ್ತರು ಯಾವ ರೀತಿಯಲ್ಲಿ ಸಾವು-ನೋವುಗಳಿಗೆ ತುತ್ತಾದರು ಎಂಬುದನ್ನು ಮನಮುಟ್ಟುವಂತೆ ಚಿತ್ರಣ ಮಾಡಿದ್ದಾರೆ. ಪ್ರಾಣದ ಹಂಗು ತೊರೆದು ಕಾರ್ಯ-ನಿರ್ವಹಿಸಿದರು ಎಂದು ಹೇಳಿದರು.



ನಗರದ ಗಾಂಧಿ ಭವನದಲ್ಲಿ ಶುಕ್ರವಾರ ಪತ್ರಕರ್ತ ಶಿವಾನಂದ ತಗಡೂರು ಅವರ 'ಕೋವಿಡ್ ಕಥೆಗಳು' ಪುಸ್ತಕವನ್ನು ಮಾಜಿ ಸಿಎಂ ಯಡಿಯೂರಪ್ಪ ಬಿಡುಗಡೆಗೊಳಿಸಿದರು.

ಮಾಸ್ ಬಳಸುವುದು ಉತ್ತಮ: ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ನಿರ್ದೇಶಕ ಡಾ. ಸಿ.ಎನ್. ಮಂಜುನಾಥ್ ಮಾತನಾಡಿ, ರಾಜ್ಯದಲ್ಲಿ ಕೊನಾ 3ನೇ ಅಲೆಯ ಅಂತ್ಯದಲ್ಲಿದ್ದೇವೆ. ಆದರೆ, ಐರೋಪ್ಯ ರಾಷ್ಟ್ರಗಳಲ್ಲಿ 4,5ನೇ ಅಲೆ ಕೂಡ ಕಾಣಿಸಿಕೊಂಡಿರುವುದರಿಂದ ಮಾಸ್ ಜೀವನದ ಭಾಗವಾಗಬೇಕು. ಮುಂದಿನ ಒಂದೆರಡು ವರ್ಷಗಳ ಕಾಲ ಜನದಟ್ಟಣೆ ಇರುವಂತಹ ಪ್ರದೇಶಗಳಲ್ಲಿ ಮಾಸ್ ಬಳಸುವುದು ಉತ್ತಮ ಎಂದು ಸಲಹೆ ನೀಡಿದರು.

ಶೇ.90ರಷ್ಟು ಜನರಿಗೆ ಕೊರೊನಾ ಬಂದು ಹೋಗಿದೆ. ಕೆಲವರಿಗೆ ಲಕ್ಷಣ ಇದೆ. ಮತ್ತೆ ಕೆಲವರಲ್ಲಿ ಇಲ್ಲ. ಆದ್ದರಿಂದ ಮುನ್ನಚ್ಚರಿಕೆ ವಹಿಸಬೇಕು. 1 ಮತ್ತು 2ನೇ ಅಲೆಯಲ್ಲಿ ಶ್ವಾಸಕೋಶಕ್ಕೆ ಸೋಂಕು ತಗುಲಿದ್ದರಿಂದ ಸಾವು-ನೋವುಗಳು ಜಾಸ್ತಿಯಾಗಿದ್ದವು. 3ನೇ ಅಲೆಯಲ್ಲಿ ಶ್ವಾಸಕೋಶಕ್ಕೆ ತಗುಲದಿದ್ದರಿಂದ ತೀವ್ರತೆ ಕಡಿಮೆ ಎಂದು ಹೇಳಿದರು.

ಶಿವಾನಂದ ತಗಡೂರು ಮಾತನಾಡಿ, ಕೊರೊನಾ ಸಂಕಷ್ಟ ಕಾಲದಲ್ಲಿ ಪತ್ರಕರ್ತರು ಎದುರಿಸಿದ ಸವಾಲುಗಳನ್ನು ವಿವರಿಸಿ ಆಗ ಮುಖ್ಯಮಂತ್ರಿಯಾಗಿದ್ದ ಯಡಿಯೂರಪ್ಪ ಅವರು ಪತ್ರಕರ್ತರ ನೆರವಿಗೆ ಸ್ಪಂದನೆಗೆ ಕೃತಜ್ಞತೆ ಸಲ್ಲಿಸಿದರು. ಬಹುರೂಪಿ ಪ್ರಕಾಶನದ ಜಿ.ಎನ್. ಮೋಹನ್, ಕನ್ನಡಪ್ರಭ-ಸುವರ್ಣ ವಾಹಿನಿ ಸಮೂಹ ಸಂಪಾದಕ ರವಿ ಹೆಗಡೆ, ವಿಶ್ವವಾಣಿ ಸಂಪಾದಕ ವಿಶ್ವೇಶ್ವರ ಭಟ್, ವಿಜಯವಾಣಿ ಸಂಪಾದಕ ಕೆ.ಎನ್.ಚನ್ನೇಗೌಡ, ಕರ್ನಾಟಕ ಮಾಧ್ಯಮ ಅಕಾಡೆಮಿ ಅಧ್ಯಕ್ಷ ಸದಾಶಿವ ಶೆಣೈ, ವಾರ್ತಾ ಇಲಾಖೆ ನಿವೃತ್ತ ಜಂಟಿ ನಿರ್ದೇಶಕ ಎಚ್.ಬಿ.ದಿನೇಶ್, ಗಾಂಧಿಭವನ ಅಧ್ಯಕ್ಷ ವೂಡೇ ಪಿ.ಕೃಷ್ಣ ನಟಿ ಸೋನುಗೌಡ ಉಪಸ್ಥಿತರಿದ್ದರು.

> ಹಿಜಾಬ್ ವಿವಾದಕ್ಕೆ ಸಂಬಂಧಿಸಿದಂತೆ ಯಾವುದೇ ಪ್ರತಿಕ್ರಿಯೆ ನೀಡಲು ಇಚ್ಛಿಸುವುದಿಲ್ಲ. ನಾನು ಕೂಡ ಎಲ್ಲವನ್ನೂ ನೋಡುತ್ತಿದ್ದೇನೆ. ಸೂಕ್ತವಾದ ಸಮಯದಲ್ಲಿ ಸರ್ಕಾರ ಕ್ರಮ ಕೈಗೊಳ್ಳಲಿದೆ.
>
> • ಬಿ.ಎಸ್.ಯಡಿಯೂರಪ್ಪ, ಮಾಜಿ ಮುಖ್ಯಮಂತ್ರಿ

ಶನಿವಾರ ಫೆಬ್ರುವರಿ 5, 2022

ಪ್ರಜಾವಾಣಿ

‘ನೊಂದವರಿಗೆ ನೆರವಾದ ನೆಮ್ಮದಿ ಇದೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೋವಿಡ್ ಸಮಯದಲ್ಲಿ ಪತ್ರಕರ್ತರ ಸಂಕಷ್ಟಗಳಿಗೆ ಸ್ಪಂದಿಸಿದ್ದೇನೆ. ಮೃತರ ಹಲವು ಕುಟುಂಬಗಳಿಗೆ ನೆರವಾದ ನೆಮ್ಮದಿ ಇದೆ’ ಎಂದು ಶಾಸಕ ಬಿ.ಎಸ್. ಯಡಿಯೂರಪ್ಪ ಅವರು ತಿಳಿಸಿದರು.

ಕರ್ನಾಟಕ ಕಾರ್ಯನಿರತ ಪ[illegible]ರ್ತರ ಸಂಘ ನಗರದಲ್ಲಿ ಶ[illegible]ರ ಹಮ್ಮಿಕೊಂಡಿದ್ದ ಶಿವಾನಂದ ತಗಡೂರು ಹೇಳಿದ ಕೋವಿಡ್ ಕಥೆಗಳು ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಜಯದೇವ ಹೃದ್ರೋಗ ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್, ‘ವಿಜಯವಾಣಿ’ ಪತ್ರಿಕೆ ಸಂಪಾದಕ ಕೆ.ಎನ್.ಚನ್ನೇಗೌಡ, ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ.ಕೃಷ್ಣ, ವಾರ್ತಾ ಇಲಾಖೆಯ ನಿವೃತ್ತ ಜಂಟಿ ನಿರ್ದೇಶಕ ಎಚ್.ಬಿ.ದಿನೇಶ್, ಬಹುರೂಪಿ ಪ್ರಕಾಶನದ ಜಿ.ಎನ್.ಮೋಹನ್ ಇದ್ದರು.



ಬಿ.ಎಸ್.ಯಡಿಯೂರಪ್ಪ ಅವರು ಪುಸ್ತಕ ಬಿಡುಗಡೆ ಮಾಡಿದರು. (ಎಡದಿಂದ) ‘ವಿಶ್ವವಾಣಿ’ ಪತ್ರಿಕೆ ಸಂಪಾದಕ ವಿಶ್ವೇಶ್ವರ ಭಟ್, ‘ಕನ್ನಡ ಪ್ರಭ’ ಮತ್ತು ‘ಸುವರ್ಣ ನ್ಯೂಸ್’ ಸಂಪಾದಕ ರವಿ ಹೆಗಡೆ, ಕೃತಿಯ ಲೇಖಕ ಶಿವಾನಂದ ತಗಡೂರು, ಜಯದೇವ ಹೃದ್ರೋಗ ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್, ಕರ್ನಾಟಕ ಮಾಧ್ಯಮ ಅಕಾಡೆಮಿ ಅಧ್ಯಕ್ಷ ಸದಾಶಿವ ಶೆಣೈ ಹಾಗೂ ನಟಿ ಸೋನುಗೌಡ ಇದ್ದಾರೆ.

05.02.2022 ಶನಿವಾರ
vishwavani.news
ವಿಶ್ವವಾಣಿ

ಕರೋನಾ ಜತೆ ಬದುಕು ಅನಿವಾರ್ಯ



ಪತ್ರಕರ್ತ ಶಿವಾನಂದ ತಗಡೂರು ಅವರ ಕೋವಿಡ್ ಕಥೆಗಳು ಕೃತಿಯನ್ನು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಬಿಡುಗಡೆ ಮಾಡಿದರು.

ಬೆಂಗಳೂರು: ಕರೋನ ಮಹಾಮಾರಿ ಸಂಕಷ್ಟದ ಸಂದರ್ಭದಲ್ಲಿ ಕರೋನಾ ವಾರಿಯರ್ಸ್‌ಗಳಂತೆ ಜೀವದ ಹಂಗು ತೊರೆದು ದುಡಿದ ಪತ್ರಕರ್ತರ ನೆರವಿಗೆ ನಿಂತ ಕಾರ್ಯನಿರತ ಪತ್ರಕರ್ತರ ಸಂಘದ ಪರಿಶ್ರಮ ಶ್ಲಾಘನೀಯ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದ್ದಾರೆ.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಆಶ್ರಯದಲ್ಲಿ ಶುಕ್ರವಾರ ಗಾಂಧಿ ಭವನದಲ್ಲಿ ಪತ್ರಕರ್ತ ಶಿವಾನಂದ ತಗಡೂರು ಅವರ ಕೋವಿಡ್ ಕತೆಗಳು ಕೃತಿ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದರು. ಕರೋನಾ ಮೊದಲ ಮತ್ತು ಎರಡನೆ ಅಲೆಯ ಸಂದರ್ಭದಲ್ಲಿ ಸರಕಾರದೊಂದಿಗೆ ಪತ್ರಕರ್ತರು ಮತ್ತು ಸಮಾಜದ ಇನ್ನಿತರ ವ್ಯವಸ್ಥೆಗಳು ಕೈಜೋಡಿಸಿದ ಪರಿಣಾಮ ಮೂರನೇ ಅಲೆಯಲ್ಲಿ ಸಾವು ನೋವಿನ ಪ್ರಮಾಣ ಕಡಿಮೆಯಾಗಿದೆ. ಆದರೆ, ಕರೋನಾದೊಂದಿಗೆ ನಮ್ಮ ಬದುಕು ಅನಿವಾರ್ಯವಾಗಿದೆ ಎಂದು ಹೇಳಿದರು.

ವಿಶ್ವವಾಣಿ ಪತ್ರಿಕೆಯ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಮಾತನಾಡಿ, ಒಂದು ಕ್ಷಾಯಿಲೆ ಇಡೀ ಜಗತ್ತನ್ನು ಬದಲಾಯಿಸಿದ ಉದಾಹರಣೆ ಇದ್ದರೆ ಅದು ಕರೋನ ಮಾತ್ರ. ಕರೋನ ಆವರಿಸದ, ತಟ್ಟದ, ಸ್ಪರ್ಶಿಸದ ಯಾವುದೇ ಒಂದು ಕ್ಷೇತ್ರ ಉಳಿದಿಲ್ಲ. ನಮ್ಮ ಜೀವನ ಶೈಲಿ, ವಿಧಾನ, ನಮ್ಮ ದೈನಂದಿನ ಬದುಕು, ಮಾನವೀಯ ಸಂಬಂಧ, ಕೌಟುಂಬಿಕ ವ್ಯವಸ್ಥೆ, ವ್ಯವಹಾರ, ಆಚಾರ, ವಿಚಾರ, ಉದ್ಯೋಗ, ನಮ್ಮ ಭಾಷೆ, ಸಂಸ್ಕೃತಿ ಹೀಗೆ ಪ್ರತಿಯೊಂದು ಆಯಾಮವನ್ನು ತಟ್ಟಿದಂತಹ ಒಂದು ವಿದ್ಯಾಮಾನ ಕರೋನಾ ಎಂದರು.

ಕೋವಿಡ್ ಕಾಲದಲ್ಲಿ ಪತ್ರಕರ್ತರ ಬದುಕು ಎಷ್ಟು ದುರ್ಭರವಾಗಿತ್ತು ಎಂದು ಶಿವಾನಂದ ತಗಡೂರು ಕಟ್ಟಿಕೊಟ್ಟಿದ್ದಾರೆ. ಈ ರೀತಿಯ ಅವಗಡಗಳಾದಾಗ ಪತ್ರಕರ್ತರು ತಮ್ಮ ಜೀವದ ಹಂಗು ತೊರೆದು ಕೆಲಸ ಮಾಡುವಂತದ್ದು, ಆ ಕೆಲಸದಲ್ಲಿ ಮೈಮರೆತು ಅಪಾಯಗಳಿಗೆ ಸಿಲಿಕಿಸಿಕೊಳ್ಳುವಂತಹ ಸನ್ನಿವೇಶ ಈ ಕೃತಿಯಲ್ಲಿ ಪರಿಣಾಮಕಾರಿಯಾಗಿ ಮೂಡಿಬಂದಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಕನ್ನಡಪ್ರಭ ಪತ್ರಿಕೆ ಸಂಪಾದಕ ರವಿ ಹೆಗಡೆ, ವಿಜಯವಾಣಿ ಪತ್ರಿಕೆ ಸಂಪಾದಕ ಕೆ.ಎನ್.ಚೆನ್ನೇಗೌಡ, ಜಯದೇವ ಆಸ್ಪತ್ರೆ ನಿರ್ದೇಶಕ ಡಾ. ಸಿ.ಎನ್. ಮಂಜುನಾಥ್, ಪ್ರೆಸ್‌ಕ್ಲಬ್ ಅಧ್ಯಕ್ಷ ಸದಾಶಿವ ಶಣೈ, ಗಾಂಧಿ ಭವದ ಪದಾಧಿಕಾರಿ ಎಚ್.ಬಿ. ದಿನೇಶ್, ಉದ್ಯಮಿಗಳಾದ ಶಡಕ್ಷರಿ, ನಾಡೋಜ ಡಾ.ಬಿ.ಟಿ.ರುದ್ರೇಶ್, ಬಹುರೂಪಿ ಪ್ರಕಾಶನದ ಜಿ.ಎನ್.ಮೋಹನ್, ಚಿತ್ರನಟಿ ಸೋನುಗೌಡ ಉಪಸ್ಥಿತರಿದ್ದರು.

ವಾರ್ತಾ ಭಾರತಿ
ಶನಿವಾರ, ಫೆಬ್ರವರಿ 5, 2022

ಸ್ವಾತಂತ್ರ್ಯ ಹೋರಾಟಗಾರರಿಗೆ ಸಚಿವ ಎಸ್.ಟಿ.ಸೋಮಶೇಖರ್ ಸನ್ಮಾನ



ಮೈಸೂರು, ಫೆ.4: ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಅವರು 'ಪೌರ ಸನ್ಮಾನದ ನೆನಪು' ಕಾರ್ಯಕ್ರಮದಲ್ಲಿ ಗಾಂಧೀಜಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದ್ದಾರೆ.

ಇದೇ ವೇಳೆ ಹಿರಿಯ ಸ್ವತಂತ್ರ ಹೋರಾಟಗಾರರು ಹಾಗೂ ಗಾಂಧಿವಾದಿಗಳಾದ ಬಿ.ಲಿಂಗಯ್ಯ, ವೈ.ಸಿ.ರೇವಣ್ಣ ಸಿ.ಆರ್.ರಂಗಶೆಟ್ಟಿ, ಟಿ.ಪುಟ್ಟಣ್ಣ ಹಾಗೂ ಇನ್ನಿತರರಿಗೆ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಮೈಸೂರು ಮಹಾಪೌರರಾದ ಸುನಂದಾ ಪಾಲನೇತ್ರಾ, ಶಾಸಕ ತನ್ವೀರ್ ಸೇಠ್, ಶೇಷಾದ್ರಿಪುರಂ ಶಿಕ್ಷಣ ದತ್ತಿ ಪ್ರ.ಕಾರ್ಯದರ್ಶಿ ನಾಡೋಜ ಡಾ.ವೂಡೇ ಕೃಷ್ಣ, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಮಹಾದೇವಸ್ವಾಮಿ, ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷ ಕೃಷ್ಣಪ್ಪಗೌಡ, ಉಪಮೇಯರ್ ಅನ್ವರ್ ಬೇಗ್, ಮೈಸೂರು ವಿವಿಯ ಗಾಂಧಿ ಭವನದ ವಿಶ್ರಾಂತ ನಿರ್ದೇಶಕ ಡಾ.ಎಸ್. ಶಿವರಾಜಪ್ಪ, ರಾಜ್ಯ ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಅಧ್ಯಕ್ಷ ಮಹದೇವಯ್ಯ, ಮೈಸೂರು ಮಹಾನಗರ ಪಾಲಿಕೆ ಹೆಚ್ಚುವರಿ ಆಯುಕ್ತೆ ರೂಪಾ ಇನ್ನಿತರರು ಹಾಜರಿದ್ದರು.

ಹೊಸ ದಿಗಂತ

ಶನಿವಾರ 5 ಫೆಬ್ರವರಿ 2022, ಬೆಂಗಳೂರು

ಕೃತಿ ಲೋಕಾರ್ಪಣೆ ವೇಳೆ ಮಾಜಿ ಸಿಎಂ ಯಡಿಯೂರಪ್ಪ ಹೇಳಿಕೆ

ಸಮಾಜಸೇವೆಗೆ ಅಧಿಕಾರ ಬೇಕಿಲ್ಲ



ಬೆಂಗಳೂರು: ಸಮಾಜ ಸೇವೆ ಮಾಡಲು ಅಧಿಕಾರ ಮುಖ್ಯವಲ್ಲ, ಮನಸ್ಸಿದ್ದರೆ ಸಾಕು ಜನರಿಗೆ ಸಹಾಯ ಮಾಡಬಹುದು ಎಂದು ಕೋವಿಡ್ ಕಲಿಸಿಕೊಟ್ಟಿದೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹೇಳಿದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಹಾಗೂ ಬಹುರೂಪಿ ಪ್ರಕಟಣೆ ವತಿಯಿಂದ ಶುಕ್ರವಾರ ಗಾಂಧಿಭವನದಲ್ಲಿ ಆಯೋಜಿಸಿದ್ದ ಶಿವಾನಂದ ತಗಡೂರು ಹೇಳಿದ ಕೋವಿಡ್ ಕಥೆಗಳು ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದ ಅವರು, ಕೊರೋನಾ ಎಲ್ಲರನ್ನು ಒಂದುಗೂಡಿಸಿರುವುದು ಮಾತ್ರವಲ್ಲದೆ, ಸಮಾಜದಲ್ಲಿ ಕಾಣೆಯಾಗುತ್ತಿದ್ದ ಮಾನವೀಯತೆಯನ್ನು ಜಾಗೃತಗೊಳಿಸಿದೆ. ಅದರೊಂದಿಗೆ ಸಮಸ್ಯೆಗಳ ನಡುವೆಯೂ ಬದುಕುವುದು ಹೇಗೆ ಎನ್ನುವ ಅನುಭವವನ್ನು ಪ್ರತಿಯೊಬ್ಬರಲ್ಲು ಮೂಡಿಸಿದೆ. ಪ್ರಸುತ 3ನೇ ಅಲೆ ಕಾಣಿಸಿಕೊಂಡಿದ್ದು, ಮುಂದಿನ ದಿನಗಳಲ್ಲಿ ಇದು ಮತ್ತಷ್ಟು ರೂಪಾಂತರಿ ಆಗಿ ಬಂದರೂ ಅದನ್ನು ಎದುರಿಸುವ ಧೈರ್ಯ ಎಲ್ಲರಲ್ಲೂ ಮೂಡಿದೆ ಎಂದರು.

ಜನರು ಜಾಗ್ರತೆ ವಹಿಸಲಿ: ಜಯದೇವ ಆಸ್ಪತ್ರೆಯ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್ ಮಾತನಾಡಿ, ಪ್ರಸ್ತುತ ಲಸಿಕೆ ಉಚಿತ ಹಾಗೂ ಕೋವಿಡ್ ಖಚಿತ ಎನ್ನುವಂತಾಗಿದೆ. ಆದರೆ, ಸಾವಿನ ಸಂಖ್ಯೆ ಕಡಿಮೆ ಆಗಿರುವುದು ಸಮಾಧಾನಕರ ಸಂಗತಿ. ಹಾಗೆಂದು ಜನರು ನಿರ್ಲಕ್ಷಿಸಬಾರದು. ಒಂದು ಸಾವೂ ಆ ಮನೆಯವರಿಗೆ ಶೇ.100 ತೊಂದರೆಯನ್ನು ತರುತ್ತದೆ. ಈ ಕೋವಿಡ್ ಒಂದೇ ಕಾಯಿಲೆ ಆಗಿದ್ದರು, ಅದರಿಂದ 2 ವಿಧದ ಪರಿಣಾಮಗಳಿವೆ. ದೇಹದ ಮೇಲೆ ಆಗುವ ಪರಿಣಾಮವನ್ನು ಗುಣಪಡಿಸಬಹುದಾದರೂ, ಮನಸ್ಸಿನ ಮೇಲಿನ ಪರಿಣಾಮ ಹೆಚ್ಚು ಆಘಾತಕಾರಿಯಾಗಿರುತ್ತದೆ. ಹೀಗಾಗಿ ಜನರು ಇನ್ನೂ ಕೆಲ ಕಾಲ ಜಾಗ್ರತೆ ವಹಿಸಬೇಕಿದೆ ಎಂದರು.

ಲೇಖಕ ಶಿವಾನಂದ ತಗಡೂರು, ವಿಜಯವಾಣಿ ಸಂಪಾದಕ ಕೆ.ಎನ್.ಚನ್ನೇಗೌಡ, ಕನ್ನಡಪ್ರಭ ಸಂಪಾದಕ ರವಿ ಹೆಗಡೆ, ವಿಶ್ವವಾಣಿ ಸಂಪಾದಕ ವಿಶ್ವೇಶ್ವರ ಭಟ್, ವಿಜಯ ಕರ್ನಾಟಕ ಸಂಪಾದಕ ಹರಿಪ್ರಕಾಶ್ ಕೋಣೆಮನೆ, ಮಾಧ್ಯಮ ಅಕಾಡೆಮಿ ಅಧ್ಯಕ್ಷ ಸದಾಶಿವ ಶೆಣೈ ಮತ್ತಿತರರಿದ್ದರು.

ವಾರ್ತಾ ಭಾರತಿ

ಬೆಂಗಳೂರು | ಶನಿವಾರ, ಫೆಬ್ರವರಿ 5, 2022

'ಕೋವಿಡ್ ಕಥೆಗಳು' ಕೃತಿ ಬಿಡುಗಡೆ

ನೊಂದವರಿಗೆ ನೆರವಾದ ನೆಮ್ಮದಿ ನನಗಿದೆ: ಬಿಎಸ್‌ವೈ

ಬೆಂಗಳೂರು, ಫೆ.4: 'ಕೋವಿಡ್ ಕಾಲದಲ್ಲಿ ಪತ್ರಕರ್ತರು ಎದುರಿಸಿದ ತಲ್ಲಣಗಳಿಗೆ ನಾನು ಸ್ಪಂದಿಸಿದ್ದೇನೆ. ಅವರ ಕುಟುಂಬಗಳ ಕಣ್ಣೀರನ್ನು ಒರೆಸಲು ಒಂದಿಷ್ಟು ಸಹಕಾರಿಯಾಗಿದ್ದೇನೆ ಎನ್ನುವುದು ನನಗೆ ನೆಮ್ಮದಿ ತಂದಿದೆ' ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದ್ದಾರೆ.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಬೆಂಗಳೂರಿನ ಗಾಂಧಿ ಭವನದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ 'ಬಹುರೂಪಿ' ಪ್ರಕಾಶನ ಪ್ರಕಟಿಸಿರುವ 'ಶಿವಾನಂದ ತಗಡೂರು ಹೇಳಿದ ಕೋವಿಡ್ ಕಥೆಗಳು' ಕೃತಿಯ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದರು.

ಕೋವಿಡ್, ನಮ್ಮ ಸಡಿಕಾರ ಎದುರಿಸಿದ ಮಹಾ ಸಮಸ್ಯೆಯಾಗಿತ್ತು. ಪ್ರತಿಯೊಬ್ಬರ ಬದುಕನ್ನೂ ಕೋವಿಡ್ ಅಲುಗಾಡಿಸಿದೆ. ಇಂತಹ ಸಂದರ್ಭದಲ್ಲಿ ಶಿವಾನಂದ ತಗಡೂರು ಅವರು ಈ ಮಾರಣಾಂತಿಕ ರೋಗದಿಂದ ಸಾವನ್ನಪ್ಪಿದ ಕುಟುಂಬಗಳ ಪರವಾಗಿ ನಿಂತದ್ದು ಶ್ಲಾಘನೀಯ. ಅವರ ದೃಢ ಹೋರಾಟದಿಂದಾಗಿ ಅನೇಕ ಕುಟುಂಬಗಳು ನೆಮ್ಮದಿ ಕಂಡಿವೆ ಎಂದರು.

ಕೃತಿ ಬಿಡುಗಡೆ ಮಾಡಿದ ಜಯದೇವ ಆಸ್ಪತ್ರೆಯ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ ಅವರು, ಶಿವಾನಂದ ತಗಡೂರು ಅವರು ಪತ್ರಕರ್ತ ಕುಟುಂಬಗಳಿಗೆ ಬೆಂಬಲವಾಗಿ ನಿಂತದ್ದೇ ಅಲ್ಲದೆ ಅವರ



ಕುಟುಂಬದ ಕಣ್ಣೀರ ಕಥೆಗಳನ್ನು ದಾಖಲಿಸಿರುವುದು ಅಭಿನಂದನೀಯ. ಇದರಿಂದಾಗಿ ಒಂದು ಸಂಘ ಮನಸ್ಸು ಮಾಡಿದರೆ ಇಂತಹ ರಚನಾತ್ಮಕ ಕಾರ್ಯ ಮಾಡಬಹುದು ಎಂದು ಗೊತ್ತಾಗುತ್ತದೆ ಎಂದರು.

ಕೃತಿಯ ಲೇಖಕ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಮಾತನಾಡಿ, ಕೋವಿಡ್ ಎನ್ನುವ ಮಹಾರೋಗ ಜಗತ್ತಿನ ಎಲ್ಲರನ್ನೂ ನಲುಗಿಸಿದೆ. ನಮ್ಮ ಸುದ್ದಿ ಮನೆಗಳಿಗೆ ಅದು ಕಾಲಿಟ್ಟಾಗ ನಾವು ತಬ್ಬಿಬ್ಬಾಗಿದ್ದೆವು. ಆದರೆ ಸಂಘ ಇಂತಹ ಸಂದರ್ಭದಲ್ಲಿ ಧೀ ಶಕ್ತಿಯಿಂದ ಪತ್ರಕರ್ತರ ಕುಟುಂಬಗಳ ಬೆನ್ನಿಗೆ ನಿಂತಿತು. ಇದು ನಮ್ಮೆಲ್ಲರಿಗೂ ನೆಮ್ಮದಿ ತಂದಿದೆ ಎಂದರು.

'ವಿಶ್ವವಾಣಿ'ಯ ಸಂಪಾದಕ ವಿಶ್ವೇಶ್ವರ ಭಟ್ ಅವರಿಗೆ ಪಿ.ರಾಮಯ್ಯ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ಕರ್ನಾಟಕ ಮಾಧ್ಯಮ ಅಕಾಡಮಿಯ ಅಧ್ಯಕ್ಷ ಸದಾಶಿವ ಶೆಣೈ, ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ವೂಡೇ ಪಿ. ಕೃಷ್ಣ, ವಾರ್ತಾ ಇಲಾಖೆಯ ವಿಶ್ರಾಂತ ಜಂಟಿ ನಿರ್ದೇಶಕ ಎಚ್.ಬಿ. ದಿನೇಶ್, ಚಲನಚಿತ್ರ ನಟ ಸೋನು ಗೌಡ, ಬಹುರೂಪಿಯ ಜಿ.ಎನ್. ಮೋಹನ್ ಉಪಸ್ಥಿತರಿದ್ದರು.

ಮಹಾತ್ಮಗಾಂಧೀಜಿ ಅವರಿಗೆ ಮೈಸೂರಲ್ಲಿ ಪೌರ ಸನ್ಮಾನ ಸ್ಮರಣೆ

ಗಾಂಧಿ ಮಾರ್ಗಿಗಳು, ಸ್ವಾತಂತ್ರ್ಯ ಹೋರಾಟಗಾರರಿಗೆ ಗೌರವ ಸಲ್ಲಿಕೆ



ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಮೇಯರ್ ಸುನಂದಾ ಪಾಲನೇತ್ರ, ಶಾಸಕ ತನ್ವೀರ್ ಸೇಠ್ ಇನ್ನಿತರರು ಮಹಾತ್ಮ ಗಾಂಧೀಜಿ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಬಲಚಿತ್ರದಲ್ಲಿ ಸ್ವಾತಂತ್ರ್ಯ ಹೋರಾಟಗಾರರು ಮತ್ತು ಗಾಂಧಿ ಮಾರ್ಗಿಗಳನ್ನು ಗೌರವಿಸಲಾಯಿತು.



ಮೈಸೂರು,ಫೆ.3(ಎಂಟಿವೈ)- ಮೈಸೂರಲ್ಲಿ ರಾಷ್ಟ್ರಪಿತ ಮಹಾತ್ಮ ಗಾಂಧಿ ಅವರಿಗೆ 1927 ಆಗಸ್ಟ್ 21ರಲ್ಲಿ ಪೌರ ಸನ್ಮಾನ ಸಂದಿದ ಸ್ಮರಣಾರ್ಥ ಗುರುವಾರ ಮೈಸೂರಲ್ಲಿ ಪೌರ ಸನ್ಮಾನ ನೆನಪು ಅಂಗವಾಗಿ ಸ್ವಾತಂತ್ರ್ಯ ಹೋರಾಟಗಾರರು ಮತ್ತು ಗಾಂಧಿ ಮಾರ್ಗಿಗಳನ್ನು ಗೌರವಿಸಲಾಯಿತು.

ಮೈಸೂರಿನ ಪುರಭವನದಲ್ಲಿ ಇಂದು ಬೆಳಗ್ಗೆ ಜಿಲ್ಲಾಡಳಿತ, ಮೈಸೂರು ಮಹಾನಗರ ಪಾಲಿಕೆ ಮತ್ತು ಶೇಷಾದ್ರಿಪುರಂ ಸಂಯುಕ್ತ ಪದವಿ ಕಾಲೇಜು ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಪೌರ ಸನ್ಮಾನ ನೆನಪು ಕಾರ್ಯಕ್ರಮದ ಅಂಗವಾಗಿ ವಿದ್ಯಾರ್ಥಿಗಳು ಗಾಂಧಿ ಸಂದೇಶವುಳ್ಳ ಭಿತ್ತಿ ಪತ್ರ ಹಿಡಿದು, ಸದ್ಭಾವನಾ ಮೆರವಣಿಗೆ ನಡೆಸಿ ರಾಷ್ಟ್ರಪಿತ ಮಹಾತ್ಮಗಾಂಧೀಜಿ ಅವರಿಗೆ ಗೌರವ ಸಮರ್ಪಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಮೇಯರ್ ಸುನಂದಾ ಪಾಲನೇತ್ರ, ಶಾಸಕ ತನ್ವೀರ್ ಸೇಠ್ ಹಾಗೂ ಇನ್ನಿತರರು ಮಹಾತ್ಮ ಗಾಂಧೀಜಿ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಇದೇ ವೇಳೆ ಮೈಸೂರು ವಿವಿ ಗಾಂಧಿ ಭವನದ ವಿಶ್ರಾಂತ ನಿರ್ದೇಶಕ ಪ್ರೊ. ಎಸ್.ಶಿವರಾಜಪ್ಪ ಮಾತನಾಡಿ, ಮೈಸೂರು ಅರಮನೆ ಮತ್ತು ಗುರುಮನೆಯಿಂದ ಸನ್ಮಾನ ಸ್ವೀಕರಿಸಲು ಒಪ್ಪದ ಮಹಾತ್ಮ ಗಾಂಧೀಜಿ ಅಂದಿನ ಪುರಸಭೆಯಿಂದ ಪುರಭವನದಲ್ಲಿ ಪೌರ ಸನ್ಮಾನ ಸ್ವೀಕರಿಸಿದರು. ಡಿ.ಬನುಮಯ್ಯ ಸ್ವಾಗತ ಸಮಿತಿ ಅಧ್ಯಕ್ಷರಾಗಿದ್ದರು. ಪತ್ರಕರ್ತರಾದ ತಾತಯ್ಯ, ಶೇಷಾದ್ರಿ ಮತ್ತು ಸವಿತ್ರಾಬಾಯಿ ಸದಸ್ಯರಾಗಿದ್ದರು. ಅದ್ಧೂರಿ ಸತ್ಕಾರಕ್ಕೆ ಸಿದ್ಧತೆ ನಡೆದಿತ್ತು ಗಾಂಧೀಜಿ ಇದೆಲ್ಲವನ್ನು ತಿರಸ್ಕರಿಸಿದರು. ತಾತಯ್ಯನವರ ಮನೆಯ ಒಂದು ಕೊಠಡಿಯಲ್ಲಿ ಉಳಿದಿದ್ದರು. ಎರಡು ದಿನಗಳ ಕಾಲ ಮೈಸೂರಿನಲ್ಲಿದ್ದ ಗಾಂಧೀಜಿ, ದಲಿತರು ವಾಸಿಸುತ್ತಿದ್ದ ಆದಿಕರ್ನಾಟಕ ಪುರಕ್ಕೆ ಭೇಟಿ ನೀಡಿದರು. ಜಾತಿ ಸೂಚಕ ಹೆಸರನ್ನು ಅಶೋಕಪುರಂ ಎಂದು ಬದಲಾಯಿಸಿದರು. ಆದಿದ್ರಾವಿಡ ಪುರಕ್ಕೂ ಭೇಟಿ ನೀಡಿ ಗಾಂಧಿನಗರ ಎಂದು ಮಾರ್ಪಡಿಸಿದರು. ಅಂದು ಕೆಆರ್ ಮಿಲ್‌ಗೂ ಭೇಟಿ ನೀಡಿ, ಕಾರ್ಮಿಕರ ಸಮಸ್ಯೆಗಳನ್ನು ಆಲಿಸಿದರು ಎಂದು ವಿವರಿಸಿದರು.

ಮಹಾತ್ಮ ಗಾಂಧೀಜಿ ಜಾತಿ ಸೋಂಕಿಲ್ಲದ ರಾಷ್ಟ್ರಪ್ರೇಮಿ. ಹಿಂದೂ-ಮುಸ್ಲಿಂ ಐಕ್ಯತೆ ಇಲ್ಲದೇ ಈ ದೇಶ ಶಾಂತಿಯಿಂದ ಇರಲು ಸಾಧ್ಯವಿಲ್ಲ ಎಂದು ಗಾಂಧೀಜಿ ಹೇಳಿದ್ದಾರೆ. ಗಾಂಧಿ ಬೋಧಿಸಿರುವ ಧರ್ಮ ಸೌಹಾರ್ದತೆ ಇಂದು ಹೆಚ್ಚು ಅವಶ್ಯವಿದೆ. ಆ ನಿಟ್ಟಿನಲ್ಲಿ ಎಲ್ಲರೂ ಗಾಂಧೀಜಿ ಅವರ ತತ್ವ ಸಿದ್ಧಾಂತಗಳನ್ನು ಮೈಗೂಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕರ್ನಾಟಕ ಗಾಂಧೀ ಭವನ ಸ್ಮಾರಕ ನಿಧಿ ಮಾಜಿ ಅಧ್ಯಕ್ಷ ಡಾ.ವೂಡೇ ಕೃಷ್ಣ ಮಾತನಾಡಿ, ಗಾಂಧೀಜಿ ಮೈಸೂರು ರಾಜ್ಯಕ್ಕೆ ಮೂರು ಬಾರಿ ಭೇಟಿ ನೀಡಿದ್ದಾರೆ. ಡಿ.ವಿ.ಗುಂಡಪ್ಪ ಅವರ ಆಹ್ವಾನದ ಮೇರೆಗೆ 1915ರಲ್ಲಿ ಬೆಂಗಳೂರಿಗೆ ಭೇಟಿ ನೀಡಿದ್ದರು. 1927ರಲ್ಲಿ ಚಿಕಿತ್ಸೆ ಪಡೆಯಲು ನಂದಿ ಬೆಟ್ಟದಲ್ಲಿದ್ದರು. ಹರಿಜನೋದ್ಧಾರಕ್ಕೆ ನಿಧಿ ಸಂಗ್ರಹಿಸಲು 1934ರಲ್ಲಿ ಕರ್ನಾಟಕಕ್ಕೆ ಬಂದಿದ್ದರು. ಮೈಸೂರು ರಾಜ್ಯ ರಾಜರ ಪ್ರಗತಿಪರವಾದ ಆಲೋಚನೆಯಿಂದ ಗಾಂಧೀಜಿ ಪ್ರೇರಿತರಾಗಿದ್ದರು. ಮೈಸೂರು ಮಾದರಿ ರಾಜ್ಯ ಎಂದು ಕರೆದಿದ್ದರು. ಸ್ವಾತಂತ್ರ್ಯ ಅಮೃತ ಮಹೋತ್ಸವದ ನೆನಪಿನಲ್ಲಿ ಗಾಂಧೀ ಪೌರ ಸನ್ಮಾನ ಸ್ವೀಕಾರ ಸ್ಮರಿಸುತ್ತಿರುವುದು ಐತಿಹಾಸಿಕ ಕಾರ್ಯ ಎಂದರು. ಗಾಂಧೀಜಿ ಅವರಿಗೆ ವೈಯಕ್ತಿಕ ಬದುಕು ಇರಲಿಲ್ಲ. ಅವರ ಬದುಕಿನಲ್ಲಿ ಪಾರದರ್ಶಕತೆ ಇತ್ತು. ಭೇದಭಾವ ಇರಲಿಲ್ಲ. ಯಾರಿಂದಲೂ ಏನನ್ನೂ ನಿರೀಕ್ಷೆ ಮಾಡುತ್ತಿರಲಿಲ್ಲ. ಪ್ರೀತಿ, ಸೌಹಾರ್ದತೆಯ ಅಹಿಂಸಾತ್ಮಕ ಸಮಾಜ, ಬಹುತ್ವ ಕಾಪಾಡುವ ಸಮಾಜದ ಕಲ್ಪನೆ ಇತ್ತು. ದೇಶದ ಶಕ್ತಿ ಆಧ್ಯಾತ್ಮದಲ್ಲಿದೆ ಎಂದು ನಂಬಿದ್ದರು. ಇವುಗಳ ಸಾಕಾರಕ್ಕೆ ಜೀವನಪರ್ಯಂತ ದುಡಿದರು. ದೇಶದ ಸ್ವಾತಂತ್ರ್ಯ, ಅಖಂಡತೆ, ಸೌಹಾರ್ದತೆಗಾಗಿ ಗಾಂಧೀಜಿ 142 ದಿನ ಉಪವಾಸ ಮಾಡಿದ್ದಾರೆ. ಇಂದು ಗಾಂಧೀ ಮರೆಯುತ್ತಿದ್ದೇವೆ. ಯುವಕರಲ್ಲಿ ಅವರ ವಿಚಾರಧಾರೆ ಬಿತ್ತುವ ಅನಿವಾರ್ಯತೆ ಇದೆ. ವಿದ್ಯಾರ್ಥಿಗಳು ಗಾಂಧಿಯನ್ನು ಓದಬೇಕು, ಪ್ರಶ್ನೆ ಮಾಡಬೇಕು, ಟೀಕೆ ಮಾಡಬೇಕು ಎಂದು ಸಲಹೆ ನೀಡಿದರು.

ಮೇಯರ್ ಸುನಂದಾ ಪಾಲನೇತ್ರ ಮಾತನಾಡಿ, 1927ರಲ್ಲಿ ಮಹಾತ್ಮಗಾಂಧೀಜಿ, 1997-98ರಲ್ಲಿ ಡಾ.ರಾಜ್‌ಕುಮಾರ್, 2008-09ರಲ್ಲಿ ಬಿ.ಎಸ್.ಯಡಿಯೂರಪ್ಪ ಅವರಿಗೆ ಮೈಸೂರು ಮಹಾನಗರ ಪೌರ ಸನ್ಮಾನ ಮಾಡಿ ಗೌರವಿಸಿದೆ. ಮಹಾತ್ಮ ಗಾಂಧೀಜಿ ಅವರದ್ದು ಸ್ವಚ್ಛ ಭಾರತ ಕನಸಾಗಿತ್ತು. ಅವರ ಆಶಯವನ್ನು ಪ್ರಧಾನ ಮಂತ್ರಿ ನರೇಂದ್ರ ಮೋದಿ ಸಾಕಾರಗೊಳಿಸಿದ್ದಾರೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಉಪ ಮೇಯರ್ ಅನ್ವರ್ ಬೇಗ್, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಕರ್ನಾಟಕ ಕಾಂಪೋಸ್ಟ್ ನಿಗಮದ ಅಧ್ಯಕ್ಷ ಎಸ್.ಮಹದೇವಯ್ಯ, ಕರ್ನಾಟಕ ಖಾದಿ ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷ ಎನ್.ಆರ್.ಕೃಷ್ಣಪ್ಪಗೌಡ, ಮೈಲ್ಯಾಕ್ ಅಧ್ಯಕ್ಷ ಎನ್.ವಿ.ಫಣೀಶ್, ನಗರಪಾಲಿಕೆ ಆಡಳಿತ ಪಕ್ಷದ ನಾಯಕ ಶಿವಕುಮಾರ್, ಪುರಭವನ ಅಭಿವೃದ್ಧಿ ಸಮಿತಿ ಅಧ್ಯಕ್ಷ ರಮೇಶ್, ಪಾಲಿಕೆ ಸದಸ್ಯರಾದ ರವೀಂದ್ರ, ರಂಗಸ್ವಾಮಿ, ಎಂ.ಯು. ಸುಬ್ಬಯ್ಯ, ಸಿ.ಎಸ್.ರಜನಿ ಅಣ್ಣಯ್ಯ, ನಗರ ಪಾಲಿಕೆ ಹೆಚ್ಚುವರಿ ಆಯುಕ್ತೆ ರೂಪಾ, ಆರೋಗ್ಯಾಧಿಕಾರಿ ಡಾ. ಡಿ.ಜಿ.ನಾಗರಾಜ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಕನ್ನಡಪ್ರಭ

Fri, 04 February 2022

ಗಾಂಧಿ ನೆನಪಿನಲ್ಲಿ ಗಾಂಧಿವಾದಿಗಳಿಗೆ ಸನ್ಮಾನ

ಗಾಂಧೀಜಿ ಮೈಸೂರು ರಾಜ್ಯಕ್ಕೆ ಮೂರು ಬಾರಿ ಭೇಟಿ ನೀಡಿದ್ದರು: ಕರ್ನಾಟಕ ಗಾಂಧೀ ಭವನದ ಸ್ಮಾರಕ ನಿಧಿ ಮಾಜಿ ಅಧ್ಯಕ್ಷ ಡಾ.ವೂಡೇ ಕೃಷ್ಣ

• ಕನ್ನಡಪ್ರಭ ವಾರ್ತೆ ಮೈಸೂರು

ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರು ಮೈಸೂರು ಪೌರ ಸನ್ಮಾನ ಸ್ವೀಕರಿಸಿದ ನೆನಪಿನ ಅಂಗವಾಗಿ ಸ್ವಾತಂತ್ರ್ಯ ಹೋರಾಟಗಾರರು ಮತ್ತು ಗಾಂಧಿಮಾರ್ಗಿಗಳನ್ನು ಗುರುವಾರ ಸನ್ಮಾನಿಸಲಾಯಿತು.

ನಗರದ ಪುರಭವನದಲ್ಲಿ ಜಿಲ್ಲಾಡಳಿತ, ನಗರ ಪಾಲಿಕೆ ಮತ್ತು ಶೇಷಾದ್ರಿಪುರಂ ಸಂಯುಕ್ತ ಪದವಿ ಕಾಲೇಜಿನ ಸಹಯೋಗದಲ್ಲಿ ನಡೆದ ಕಾರ್ಯಕ್ರಮದಲ್ಲಿ ಗಾಂಧಿ ಮಾರ್ಗಿಗಳಾದ ಸನ್ಮಾನ ಬಿ.ಲಿಂಗಯ್ಯ, ವೈ.ಸಿ. ರೇವಣ್ಣ, ರಂಗಶೆಟ್ಟಿ, ಟಿ. ಪುಟ್ಟಣ್ಣ, ಪ್ರೊ. ಶಶಿಕಲಾ ಅವರನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಸನ್ಮಾನಿಸಿದರು.

ಕರ್ನಾಟಕ ಗಾಂಧೀ ಭವನದ ಸ್ಮಾರಕ ನಿಧಿ ಮಾಜಿ ಅಧ್ಯಕ್ಷ ಡಾ.ವೂಡೇ ಕೃಷ್ಣ ಮಾತನಾಡಿ, ಗಾಂಧೀಜಿ ಮೈಸೂರು ರಾಜ್ಯಕ್ಕೆ ಮೂರು ಬಾರಿ ಭೇಟಿ ನೀಡಿದ್ದಾರೆ. ಡಿ.ವಿ. ಗುಂಡಪ್ಪ ಅವರ ಆಹ್ವಾನದ ಮೇರೆಗೆ 1915 ರಲ್ಲಿ ಬೆಂಗಳೂರಿಗೆ ಭೇಟಿ ನೀಡಿದ್ದರು. 1927 ರಲ್ಲಿ ಚಿಕಿತ್ಸೆ ಪಡೆಯಲು ನಂದಿ ಬೆಟ್ಟಕ್ಕೆ ಬಂದಿದ್ದರು. ಆಗ ಆ. 21 ರಂದು ಮೈಸೂರಿನ ಪೌರ ಸನ್ಮಾನ ಸ್ವೀಕರಿಸಿದ್ದರು. ಹರಿಜನೋದ್ಧಾರಕ್ಕೆ ನಿಧಿ ಸಂಗ್ರಹಿಸಲು 1934ರಲ್ಲಿ ಭೇಟಿ ನೀಡಿದ್ದಾಗಿ ತಿಳಿಸಿದರು. ಮೈಸೂರು ರಾಜ್ಯ, ರಾಜರ ಪ್ರಗತಿಪರವಾದ ಆಲೋಚನೆಯಿಂದ ಗಾಂಧೀ ಪ್ರೇರಿತರಾಗಿದ್ದರು. ಮೈಸೂರು ಮಾದರಿ ರಾಜ್ಯ ಎಂದು ಕರೆದಿದ್ದರು. ಸ್ವಾತಂತ್ರ್ಯ ಅಮೃತ ಮಹೋತ್ಸವದ ನೆನಪಿನಲ್ಲಿ ಗಾಂಧೀ ಪೌರ ಸನ್ಮಾನ ಸ್ವೀಕಾರ ಸ್ಮರಿಸುತ್ತಿರುವುದು ಐತಿಹಾಸಿಕ ಕಾರ್ಯ ಎಂದು ನುಡಿದರು.



ಮೈಸೂರಿನ ಪುರಭವನದಲ್ಲಿ ಜಿಲ್ಲಾಡಳಿತ ಆಯೋಜಿಸಿದ್ದ ಗಾಂಧೀಜಿಗೆ ಪೌರ ಸನ್ಮಾನ ನೆನಪು ಕಾರ್ಯಕ್ರಮದಲ್ಲಿ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಗಾಂಧೀಜಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿದರು. ಮೇಯರ್ ಸುನಂದಾ ಪಾಲನೇತ್ರ, ಶಾಸಕ ತನ್ವೀರ್ ಸೇಠ್, ಉಪ ಮೇಯರ್ ಅನ್ವರ್‌ಬೇಗ್, ನಗರ ಪಾಲಿಕೆ ಸದಸ್ಯ ಶಿವಕುಮಾರ್, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಲ್.ಆರ್. ಮಹದೇವಸ್ವಾಮಿ ಇತರರು ಇದ್ದರು.

ಗಾಂಧೀಗೆ ವೈಯಕ್ತಿಕ ಬದುಕು ಇರಲಿಲ್ಲ, ಬದುಕಿನಲ್ಲಿ ಪಾರದರ್ಶಕತೆ ಇತ್ತು. ಯಾರಿಂದಲೂ ಏನನ್ನೂ ನಿರೀಕ್ಷೆ ಮಾಡುತ್ತಿರಲಿಲ್ಲ, ಪ್ರೀತಿ, ಸೌಹಾರ್ದತೆಯ ಅಹಿಂಸಾತ್ಮಕ ಸಮಾಜ, ಬಹುತ್ವ ಕಾಪಾಡುವ ಸಮಾಜದ ಕಲ್ಪನೆ ಇತ್ತು. ದೇಶದ ಶಕ್ತಿ ಆಧ್ಯಾತ್ಮದಲ್ಲಿದೆ ಎಂದು ನಂಬಿದ್ದರು. ಇವುಗಳ ಸಾಕಾರಕ್ಕೆ ಜೀವನ ಪರ್ಯಂತ ದುಡಿದರು. ಇವತ್ತು ಗಾಂಧೀಜಿ ಮರೆಯುತ್ತಿದ್ದೇವೆ. ಯುವಕರಲ್ಲಿ ಅವರ ವಿಚಾರಧಾರೆ ಬಿತ್ತಬೇಕಿದೆ ಎಂದರು.

ಮೇಯರ್ ಸುನಂದಾ ಪಾಲನೇತ್ರ ಮಾತನಾಡಿ, 1927 ರಲ್ಲಿ ಗಾಂಧೀಜಿ, 1997-98ರಲ್ಲಿ ಡಾ. ರಾಜಕುಮಾರ್, 2008-09ರಲ್ಲಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಮೈಸೂರು ನಗರ ಪಾಲಿಕೆಯಿಂದ ಪೌರ ಸನ್ಮಾನ ನೀಡಿ ಗೌರವಿಸಲಾಗಿದೆ. ಸ್ವಚ್ಛ ಭಾರತದ ಗಾಂಧೀಜಿ ಆಶಯವನ್ನು ಪ್ರಧಾನಿ ನರೇಂದ್ರ ಮೋದಿ ಸಾಕಾರಗೊಳಿಸಿದ್ದಾರೆ ಎಂದರು.



ಮೈಸೂರಿನ ಪುರಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಗಾಂಧೀ ಮಾರ್ಗಿಗಳಾದ ಬಿ. ಲಿಂಗಯ್ಯ, ವೈ.ಸಿ.ರೇವಣ್ಣ, ರಂಗಶೆಟ್ಟಿ, ಟಿ. ಪುಟ್ಟಣ್ಣ, ಪ್ರೊ. ಶಶಿಕಲಾ ಅವರನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಸನ್ಮಾನಿಸಿದರು. ಶಾಸಕ ತನ್ವೀರ್ ಸೇಠ್, ಮೇಯರ್ ಸುನಂದಾ ಪಾಲನೇತ್ರ ಮೊದಲಾದವರು ಇದ್ದಾರೆ.

ಗಾಂಧೀ ನೆನಪು ಹಂಚಿಕೊಂಡ ಮೈಸೂರು ವಿವಿ ಗಾಂಧೀ ಭವನದ ವಿಶ್ರಾಂತ ನಿರ್ದೇಶಕ ಪ್ರೊ.ಎಸ್. ಶಿವರಾಜಪ್ಪ, ಮೈಸೂರು ಅರಮನೆ ಮತ್ತು ಗುರುಮನೆ ಸನ್ಮಾನ ಸ್ವೀಕರಿಸಲು ಒಪ್ಪದೆ ಅಂದಿನ ಪುರಸಭೆಯಿಂದ ಪುರಭವನದಲ್ಲಿ ಪೌರಸನ್ಮಾನ ಸ್ವೀಕರಿಸಿದರು. ಡಿ.ಬನುಮಯ್ಯ ಸ್ವಾಗತ ಸಮಿತಿ ಅಧ್ಯಕ್ಷರಾಗಿದ್ದರು. ಪತ್ರಕರ್ತರಾದ ತಾತಯ್ಯ, ಶೇಷಾದ್ರಿ ಮತ್ತು ಸಮುತ್ತಾಬಾಯಿ ಸದಸ್ಯರಾಗಿದ್ದರು. ಅದ್ದೂರಿ ಸ್ವಾಗತಕ್ಕೆ ತಿರಸ್ಕರಿಸಿ, ತಾತಯ್ಯನವರ ಮನೆಯ ಒಂದು ಕೊಠಡಿಯಲ್ಲಿ ಉಳಿದಿದ್ದರು. ಎರಡು ದಿನ ಮೈಸೂರಿನಲ್ಲಿದ್ದ ಗಾಂಧೀಜಿ, ದಲಿತರು ವಾಸಿಸುತ್ತಿದ್ದ ಆದಿಕರ್ನಾಟಕ ಪುರಕ್ಕೆ ಭೇಟಿ ನೀಡಿದರು. ಜಾತಿ ಸೂಚಕ ಹೆಸರನ್ನು ಅಶೋಕಪುರಂ ಎಂದು ಬದಲಿಸಿದರು. ಆದಿದ್ರಾವಿಡ ಪುರಕ್ಕೂ ಭೇಟಿ ನೀಡಿ ಗಾಂಧಿನಗರ ಎಂದು ಮಾರ್ಪಡಿಸಿದರು. ಕೆ.ಆರ್. ಮಿಲ್‌ಗೆ ಭೇಟಿ ನೀಡಿ ಕಾರ್ಮಿಕರ ಸಮಸ್ಯೆ ಆಲಿಸಿದ್ದಾಗಿ ವಿವರಿಸಿದರು.

ಶಾಸಕ ತನ್ವೀರ್ ಸೇಠ್, ಮೇಯರ್ ಸುನಂದಾ ಪಾಲನೇತ್ರ, ಉಪ ಮೇಯರ್ ಅನ್ವರ್‌ಬೇಗ್, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಲ್.ಆರ್. ಮಹದೇವಸ್ವಾಮಿ, ಕರ್ನಾಟಕ ಕಾಂಪೋಸ್ಟ್ ನಿಗಮದ ಅಧ್ಯಕ್ಷ ಎಸ್. ಮಹದೇವಯ್ಯ, ಕರ್ನಾಟಕ ಖಾದಿ ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷ ಎನ್.ಆರ್. ಕೃಷ್ಣಪ್ಪ ಗೌಡ, ಮೈಲ್ಯಾಕ್ ಅಧ್ಯಕ್ಷ ಎನ್.ವಿ. ಫಣೀಶ್, ನಗರಪಾಲಿಕೆ ಆಡಳಿತ ಪಕ್ಷದ ನಾಯಕ ಶಿವಕುಮಾರ್, ಪುರಭವನ ಅಭಿವೃದ್ಧಿ ಸಮಿತಿ ಅಧ್ಯಕ್ಷ ರಮೇಶ್, ನಗರ ಪಾಲಿಕೆ ಸದಸ್ಯರಾದ ರವೀಂದ್ರ, ರಂಗಸ್ವಾಮಿ, ಎಂ.ಯು. ಸುಬ್ಬಯ್ಯ, ಸಿ.ಎಸ್. ರಜನಿ ಅಣ್ಣಯ್ಯ, ನಗರಪಾಲಿಕೆ ಹೆಚ್ಚುವರಿ ಆಯುಕ್ತೆ ರೂಪಾ, ಆರೋಗ್ಯಾಧಿಕಾರಿ ಡಾ. ನಾಗರಾಜ್ ಇದ್ದರು.

ಪ್ರಜಾವಾಣಿ ಗುರುವಾರ • ಜನವರಿ 27, 2022

'ಸರ್ಕಾರವನ್ನು ಮಾಧ್ಯಮ ಎಚ್ಚರಿಸಲಿ'




ಬೆಂಗಳೂರು: 'ಜನತಂತ್ರ ವ್ಯವಸ್ಥೆಯಲ್ಲಿ ಮಾಧ್ಯಮವು ಸರ್ಕಾರವನ್ನು ಎಚ್ಚರಿಸುವ ಕೆಲಸ ಮಾಡಬೇಕು. ಬದಲಾದ ಸನ್ನಿವೇಶದಲ್ಲಿ ಮಾಧ್ಯಮವೂ ರಾಜಕೀಯ ಪಕ್ಷಗಳ ಕೈಗೊಂಬೆಯಂತೆ ಕಾರ್ಯನಿರ್ವಹಿಸುತ್ತಿವೆ' ಎಂದು ವಿಧಾನ ಪರಿಷತ್ ಸದಸ್ಯ ಎಚ್. ವಿಶ್ವನಾಥ್ ಬೇಸರ ವ್ಯಕ್ತಪಡಿಸಿದರು.

ನಚ್ಚಿ ಬಳಗ ನಗರದಲ್ಲಿ ಬುಧವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ಚಕ್ರವರ್ತಿಯಾಗದ ನಚ್ಚಿ' ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದರು. 'ಮಾಧ್ಯಮದಲ್ಲಿ ಈಗ ನೇರ ಬರವಣಿಗೆ ಹಾಗೂ ಹೇಳಿಕೆಗಳು ಕಾಣಸಿಗುವುದಿಲ್ಲ. ಪತ್ರಕರ್ತರಲ್ಲಿನ ಬದ್ಧತೆಯೂ ಮಾಯವಾಗುತ್ತಿದೆ. ಜನತಂತ್ರ ವ್ಯವಸ್ಥೆಯಲ್ಲಿ ಮಾಧ್ಯಮ ಪಾರದ ಮನೆಯಾಗಬೇಕು. ಆದರೆ, ಈಗ ಅದು ಕುಸಿತದ ಹಾದಿ ಹಿಡಿದಿದೆ. ರಾಜಕಾರಣ ಮತ್ತು ಮಾಧ್ಯಮ ಒಂದೇ ಎಂಬಂತಾಗಿದ್ದು, ರಾಜಕೀಯ ಪಕ್ಷಗಳ ಹಿಡಿತಕ್ಕೆ ಒಳಗಾಗುತ್ತಿವೆ. ಈ ಕ್ಷೇತ್ರದ ಹಿರಿಯರು ಜವಾಬ್ದಾರಿ ತೆಗೆದುಕೊಂಡು, ಸರಿಯಾದ ಹಾದಿಯಲ್ಲಿ ಮಾಧ್ಯಮ ಸಾಗುವಂತೆ ನೋಡಿಕೊಳ್ಳಬೇಕು' ಎಂದು ತಿಳಿಸಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ವೂಡೇ ಪಿ. ಕೃಷ್ಣ, 'ನಚ್ಚಿ ಅವರಿಗೆ ಎಲ್ಲ ವಿಷಯದ ಬಗ್ಗೆಯೂ ಮಾಹಿತಿ ಇರುತ್ತಿತ್ತು. ಅವರು ತಮ್ಮದೇ ಆದ ರೀತಿಯಲ್ಲಿ ಬದುಕು ನಡೆಸಿ, ಪತ್ರಿಕೋದ್ಯಮ ಕ್ಷೇತ್ರದಲ್ಲಿ ಛಾಪು ಮೂಡಿಸಿದ್ದಾರೆ. ಇಂತಹ ಪತ್ರಕರ್ತರ ಬದುಕು–ಬರಹಗಳನ್ನು ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೆ ತಿಳಿಸುವ ಕೆಲಸವಾಗಬೇಕು. ಪ್ರಜಾಪ್ರಭುತ್ವದಲ್ಲಿ ಮಾಧ್ಯಮ ನಾಲ್ಕನೇ ಅಂಗ. ಅದು ಸರಿಯಾದ ರೀತಿಯಲ್ಲಿ ಕಾರ್ಯನಿರ್ವಹಿಸಿ, ಸಮಾಜ ಸುಧಾರಣೆಗೆ ಶ್ರಮಿಸಬೇಕು' ಎಂದು ತಿಳಿಸಿದರು.


ಸಂಜೆವಾಣಿ



ಬುದ್ಧ, ಬಸವ, ಗಾಂಧಿ ಸಾಂಸ್ಕೃತಿಕ ಟ್ರಸ್ಟ್ ಹಾಗೂ ಕನ್ನಡ ಅಭಿವೃದ್ಧಿಕಾರ ಆಯೋಜಿಸಿದ್ದ ಕನ್ನಡ ಕಾವ್ಯ ಸಂಸ್ಕೃತಿ ಜಾಗೃತಿ ಶಿಬಿರಕ್ಕೆ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಉದ್ಘಾಟಿಸಿದರು. ಸಂಘದ ಅಧ್ಯಕ್ಷ ಡಾ. ಎಸ್. ರಾಮಲಿಂಗೇಶ್ವರ ಹಾಗೂ ಇಂದಿರಾ ಕೃಷ್ಣಪ್ಪ ಮತ್ತು ಡಾ. ಸಂತೋಷ್ ಹಾನಗಲ್ಲ ಇದ್ದಾರೆ.

ಇಂದು ಸಂಜೆ

ಗುರುವಾರ
20 ಜನವರಿ 2022



ಬುದ್ಧ, ಬಸವ, ಗಾಂಧಿ ಸಾಂಸ್ಕೃತಿ ಟ್ರಸ್ಟ್, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ವತಿಯಿಂದ ಆಯೋಜಿಸಲಾಗಿದ್ದ ಕನ್ನಡ ಕಾವ್ಯ ಸಂಸ್ಕೃತಿ ಜಾಗೃತಿ ಶಿಬಿರವನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್ ನಾಗಾಭರಣ ಉದ್ಘಾಟಿಸಿದರು.

ಗುರುವಾರ, 20 ಜನವರಿ, 2022



ಕನ್ನಡ ಅಭಿವೃದ್ಧಿ ಪ್ರಾಧಿಕಾರ ಸಹಯೋಗದೊಂದಿಗೆ ಗಾಂಧಿಭವನದಲ್ಲಿ ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ ಹಮ್ಮಿಕೊಂಡಿದ್ದ ಕನ್ನಡ ಕಾವ್ಯ ಸಂಸ್ಕೃತಿ ಜಾಗೃತಿ ಶಿಬಿರದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ನಾಗಾಭರಣ, ನಾಡೋಜ ಡಾ. ವೂಡೇ ಪಿ. ಕೃಷ್ಣ, ಇಂದಿರಾ ಕೃಷ್ಣ ಮತ್ತಿತರರ ಗಣ್ಯರು ಪಾಲ್ಗೊಂಡಿದ್ದರು.

ಟಿ. ಸುರೇಶ್ ಸಾರಥ್ಯದಲ್ಲಿ...
ಜೀವನ್ಮುಖಿ ಕನ್ನಡ ಪಾಕ್ಷಿಕ ಪತ್ರಿಕೆ
ಜನವರಿ 15, 2022

ಯಶಸ್ವಿಯಾಗಿ ನಡೆದ ಕನ್ನಡ ನುಡಿ ಸಮ್ಮೇಳನ

2 ▶▶ ಸುರೇಶ್, ಪಿ. ಶಿವರಾಜು, ಪ್ರೊ. ದೊಡ್ಡರಸಿನಕೆರೆ ಮಾಯಪ್ಪ, ಶ್ರೀಮತಿ ಹೆಚ್.ಆರ್. ಸುಜಾತಾ, ಶ್ರೀಮತಿ ಎಂ.ಆರ್. ಶೋಭಾ, ಶ್ರೀಮತಿ ಎ.ಬಿ. ಗೀತಾ, ಶಿವಕುಮಾರ್ ಬೆಳ್ಳಿ ತಟ್ಟೆ, ಕೆ.ಪಿ. ಸತ್ಯನಾರಾಯಣ, ಬಿ. ಮೋಹನ್ ಕುಮಾರ್, ವಿ.ರಾಮಾಂಜಿನಿ, ಅವರಿಗೆ ಕದಂಬರತ್ನ ಪ್ರಶಸ್ತಿ ಪ್ರದಾನ ಮಾಡಲಾಗಿತ್ತು. ನಿಕಟ ಪೂರ್ವ ಸಮ್ಮೇಳನ ಅಧ್ಯಕ್ಷರಾದ ಲೇಖಕರು ಹಾಗೂ ಕನ್ನಡ ಪರ ಸಂಘಟಕರಾದ ಎಂ. ತಿಮ್ಮಯ್ಯ, ಮಂಡ್ಯ ಜಿಲ್ಲಾಯುವ ಬರಹಗಾರರ ಅಧ್ಯಕ್ಷರಾದ ಟಿ. ಸತೀಶ್ ಜವರೇಗೌಡ ವೇದಿಕೆಯಲ್ಲಿ ಇದ್ದರು. ಬಳಿಕ ನಡೆದ ರಾಜ್ಯಮಟ್ಟದ ಕವಿಗೋಷ್ಠಿಗೆ ವಿಜಯ ಕರ್ನಾಟಕ ಪುರವಣಿ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ವಿದ್ಯಾ ರಶ್ಮಿ ಪೆಲತ್ತಡ್ಕ ಚಾಲನೆ ನೀಡಿದರು. ಖ್ಯಾತ ಸಾಹಿತಿ ಮತ್ತು ಪತ್ರಕರ್ತರಾದ ಉಗಮ ಶ್ರೀನಿವಾಸ್ ಅಧ್ಯಕ್ಷತೆ ವಹಿಸಿ ಉದಯೋನ್ಮುಖ ಕವಿಗಳಿಗೆ ಉಪಯುಕ್ತವಾಗುವ ಮಾತುಗಳನ್ನು ಆಡಿದರು. 24 ಮಂದಿ ಕವಿ ಕವಯತ್ರಿಯರು ತಮ್ಮ ಕವನಗಳನ್ನು ವಾಚಿಸಿದರು. ಲೇಖಕಿ ಮತ್ತು ಚಿಂತಕಿ ಶ್ರೀಮತಿ ನಳಿನಿ ವೆಂಕಪ್ಪ ಹಾಗೂ ಸಾಹಿತಿ ಮತ್ತು ಚಿಂತಕರಾದ ಹಡವನಹಳ್ಳಿ ವೀರಣ್ಣಗೌಡ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಸಂವಾದ ಕಾರ್ಯಕ್ರಮದಲ್ಲಿ ಸಾಹಿತಿ ಹಾಗೂ ಕನ್ನಡ ಉಪನ್ಯಾಸಕ ಡಾ. ಕಾಂತರಾಜಪುರ ಸುರೇಶ್, ಕನ್ನಡ ಪರ ಹೋರಾಟಗಾರ ಎಲ್. ಲೋಕೇಶ್, ಚಲನಚಿತ್ರ ನಿರ್ದೇಶಕ ಮಂಜುನಾಥ್ ಪಾಂಡವಪುರ ಪಾಲ್ಗೊಂಡಿದ್ದರು. ಸಂಜೆ ನಡೆದ ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಮಾಜಿ ಸಚಿವರಾದ ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ ವಹಿಸಿದ್ದರು. ಕನ್ನಡ ಅಭಿವೃದ್ಧಿ ಪ್ರಾಧಿಕಾರಧ ಕಾರ್ಯದರ್ಶಿ ಡಾ. ಸಂತೋಷ ಹಾನಗಲ್ಲ ಅವರು ತಮ್ಮ ಸತ್ವ ಶಾಲಿಯಾದ ಸಮಾರೋಪ ನುಡಿಗಳ ಮೂಲಕ ಸಮ್ಮೇಳನಕ್ಕೆ ಮೆರಗು ನೀಡಿದರು. ಕನ್ನಡ ಜನಶಕ್ತಿ ಕೇಂದ್ರದ ಅಧ್ಯಕ್ಷರಾದ ಸಿ.ಕೆ. ರಾಮೇಗೌಡ ಅವರು ವಿವಿಧ ಕ್ಷೇತ್ರದ ಸಾಧಕರಾದ ಡಾ. ಪಿ. ನಾಗರಾಜ, ಕ್ರಾಂತಿ ರಾಜು, ಡಾ. ಎಸ್.ಆರ್. ಜಗನ್ನಾಥ್, ಕೆ. ಕಿಶೋರ್ ಕುಮಾರ್, ಕೆ. ಆನಂದ್ ಕುಮಾರ್, ಶಿವಣ್ಣ, ಎಸ್.ವಿ. ಕುಮಾರ ಸ್ವಾಮಿ, ಶ್ರೀಮತಿ ವಿಶಾಲಾಕ್ಷಿ ಜಿ. ಶೆಟ್ಟಿ, ಶ್ರೀನಿವಾಸ್ ಪ್ರಸಾದ್ ಎ, ವರದರಾಜು, ಎಸ್. ಮಂಜುನಾಥ್ ಅವರಿಗೆ ಕರುನಾಡು ಚೇತನ ಪ್ರಶಸ್ತಿ ಪ್ರದಾನ ಮಾಡಿದರು. ಯಶೋಧ ಕಿರಿಣ್ ತಂಡದವರಿಂದ ಜನಪದ ನೃತ್ಯ, ಕುಮಾರಿ ಜಿ. ನಿತ್ಯಾ ಅವರಿಂದ ಶಾಸ್ತ್ರೀಯ ನೃತ್ಯ, ಗೆಜ್ಜೆ ಹೆಜ್ಜೆ ರಂಗ ತಂಡದವರಿಂದ ಸಾರಾಯಿ ಸಂಕಟ ಸಾಮಾಜಿಕ ಕಳಕಳಿಯ ನಾಟಕ ದಿನವಿಡೀ ಯಾವುದೇ ಗದ್ದಲ ಇಲ್ಲದೆ ಯಶಸ್ವಿಯಾಗಿ ನಡೆಯಿತು. ಪತ್ರಿಕೆಯ ಎಲ್ಲ ಓದುಗರಿಗೂ ಮತ್ತು ಹಿತೈಷಿಗಳಿಗೂ ಹೊಸ ವರುಷದ ಶುಭಾಷಯಗಳು ಹೊಸ ವರುಷವು ನಿಮಗೆ ಹೊಸ ಚೈತನ್ಯ ನೀಡಲಿ ಎಂದು ಆಶಿಸುವೆ. ◈



ಜೀವನ್ಮುಖಿ ಕನ್ನಡ ಪಾಕ್ಷಿಕ ಪತ್ರಿಕೆ

ಜನವರಿ 15, 2022

ಯಶಸ್ವಿಯಾಗಿ ನಡೆದ ಕನ್ನಡ ನುಡಿ ಸಮ್ಮೇಳನ

ಮಹಾನಗರಿಯ ಒಡಲಿನ ಜೆ.ಸಿ.ರಸ್ತೆಯ ಕನ್ನಡ ಭವನದ ನಯನ ಸಭಾಂಗಣದಲ್ಲಿ ನಮ್ಮ ಅಖಿಲ ಕರ್ನಾಟಕ ಕುವೆಂಪು ಸಾಂಸ್ಕೃತಿಕ ವೇದಿಕೆಯ ನೇತೃತ್ವದಲ್ಲಿ ನಡೆದ ಈ ಕನ್ನಡ ನುಡಿ ಸಮ್ಮೇಳನಕ್ಕೆ ಕನ್ನಡ ಪರ ಹೋರಾಟಗಾರರೂ ಹಾಗೂ ಸಂಘಟಕರೂ ಆದಂತಹ ಪಾಲನೇತ್ರ ಅವರನ್ನು ಸರ್ವಾಧ್ಯಕ್ಷರನ್ನಾಗಿ ಆಯ್ಕೆ ಮಾಡಿದ್ದೆವು. ಕಳೆದ ನಾಲ್ಕು ದಶಕಗಳಿಂದ ನಾಡು, ನುಡಿ, ನೆಲ, ಜಲ ಪರವಾದ ಚಟುವಟಿಕೆಗಳಲ್ಲಿ ಸದಾ ಸಕ್ರೀಯರಾಗಿರುವ ಪಾಲನೇತ್ರ ಅವರ ಆಯ್ಕೆ ಬಗ್ಗೆ ಸಾಂಸ್ಕೃತಿಕ ಮತ್ತು ಸಾಹಿತ್ಯವಲಯದ ಹಲವು ಗಣ್ಯರು ಮೆಚ್ಚುಗೆ ವ್ಯಕ್ತಪಡಿಸಿ, ನಮ್ಮ ಆಯ್ಕೆಗೆ ತಮ್ಮ ಶ್ಲಾಘನೀಯ ಅನುಮೋದನೆ ಒತ್ತಿದ್ದು ಸಂತೋಷದ ಸಂಗತಿ.



ದಿನವೀಡಿ ನಡೆದ ಕನ್ನಡ ನುಡಿ ಸಮ್ಮೇಳನ ಖ್ಯಾತ ಸಾಹಿತಿ ಹಾಗೂ ವಿಶ್ರಾಂತ ಕುಲಪತಿಗಳಾದ ಪ್ರೊ. ಮಲ್ಲೇಪುರಂ ಜಿ. ವೇಂಕಟೇಶ ಅವರು ಅತ್ಯಂತ ಪ್ರೀತಿಯಿಂದ ಉದ್ಘಾಟಿಸಿದ್ದು ಅವಿಸ್ಮರಣಿಯ. ಅವರ ಪ್ರತಿ ಮಾತುಗಳು ಸಮ್ಮೇಳನದ ಆಶಯಕ್ಕೆ ಅರ್ಥಪೂರ್ಣತೆಯ ಆವರಣ ಒದಗಿಸಿತ್ತು. ಕನ್ನಡ ಪರಂಪರೆಯ ತಿರುಳನ್ನು ಬಿಚ್ಚಿಡುತ್ತಲೇ, ಕನ್ನಡ ಬಲವರ್ಧನೆಯನ್ನು ಧ್ಯಾನಿಸುವುಧು. ಅಖಿಲ ಕರ್ನಾಟಕ ಕುವೆಂಪು ಸಾಂಸ್ಕೃತಿಕ ವೇದಿಕೆಯು ಕನ್ನಡಕ್ಕೆ ಒಳ್ಳೆಯದು ಆಗಲೇಬೇಕು ಎಂದು ಹಠಕ್ಕೇ ಬಿದ್ದು ನಾಡು–ನುಡಿ–ಸಂಸ್ಕೃತಿಯ ಕಾರ್ಯಗಳನ್ನು ಮಾಡುತ್ತಿದೆ. ಸಾಹಿತ್ಯ ಸಮ್ಮೇಳನಕ್ಕೆ ಖ್ಯಾತ ಸಾಹಿತಿಗಳು ಮಾತ್ರವೇ ಅಧ್ಯಕ್ಷರು ಆಗುತ್ತಿದ್ದರು. ಕನ್ನಡದ ಮೌನ ಸಾಧಕರಾದ, ಕನ್ನಡ ಸಂಘಟಕರನ್ನು, ಹೋರಾಟಗಾರರನ್ನು ಗುರುತಿಸಲಾಗುತ್ತಿಲ್ಲ. ಈ ಸಂದರ್ಭದಲ್ಲಿ ಅಖಿಲ ಕರ್ನಾಟಕ ಕುವೆಂಪು ಸಾಂಸ್ಕೃತಿಕ ವೇದಿಕೆ ಅನೇಕ ವರ್ಷಗಳಿಂದ ಕನ್ನಡ ಕೆಲಸವನ್ನು ಒಂದು ವ್ರತದಂತೆ ನಡೆಸಿಕೊಂಡು ಕನ್ನಡದ ಹೋರಾಟಗಾರ ಪಾಲನೇತ್ರ ಅವರನ್ನು ಆಯ್ಕೆ ಮಾಡಿರುವುದು ಅರ್ಥಪೂರ್ಣ. ಇಂಗ್ಲಿಂಷ್ ಸೇರಿದಂತೆ ಅನ್ಯ ಭಾಷೆಗಳ ನಡುವೆ ಕನ್ನಡ ಭಾಷೆ ಆತಂಕಗಳನ್ನು ಎದುರಿಸುತ್ತಿದೆ. ದಿನ ಕಳೆದಂತೆ ಕನ್ನಡ ಬಳಕೆಯ ಪ್ರದೇಶ ಕಿರಿದಾಗುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದರು. ಶಿಕ್ಷಣದಲ್ಲಿ ಕನ್ನಡ ಮರೆಯಾಗಿ, ಇಂಗ್ಲಿಂಷ್ ವ್ಯಾಪಿಸಿಕೊಳ್ಳುತ್ತಿದೆ. ಭಾಷೆಗೆ ಸಂವರ್ಧನೆ ಮತ್ತು ವಿಸ್ತರಣೆ ಅಗತ್ಯ. ಈ ಪ್ರಕ್ರಿಯೆಯಿಂದ ಮಾತ್ರ ಭಾಷೆ ಉಳಿಯಲು ಸಾಧ್ಯ. ತಮಿಳು ನಾಡು ಸೇರಿದಂತೆ ನೇರೆಯ ರಾಜ್ಯದವರು ತಮ್ಮ ಭಾಷೆಯನ್ನು ವಿಸ್ತರಣೆ ಮಾಡುವ ಕಾರ್ಯದಲ್ಲಿ ತೊಡಗಿದ್ದಾರೆ. ಜೊತೆಗೆ, ಭಾಷಾ ಸಂವರ್ಧನೆಯನ್ನು ಮಾಡುತ್ತಿದ್ದಾರೆ. ಆದರೆ, ಕನ್ನಡಿಗರಾದ ನಾವು, ಕನ್ನಡ ರಾಜ್ಯೋತ್ಸವದ ಹೆಸರಿನಲ್ಲಿ ಸಂಭ್ರಮಾಚರಣೆ ಮಾಡುತ್ತಿದ್ದು ಭಾಷೆಯನ್ನು ವಿಸ್ತರಣೆ ಮಾಡುವುದನ್ನು ಮರೆಯುತ್ತಿದ್ದೇವೆ ಎಂದು ಆತಂಕ ವ್ಯಕ್ತಪಡಿಸಿದರು.

ಕದಂಬ ರತ್ನ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಶ್ರೀಮತಿ ಶೈಲಜ ವಿ. ಸೋಮಣ್ಣ ಕನ್ನಡ ಮತ್ತು ಕನ್ನಡಿಗರು ಉಳಿಯ ಬೇಕು ಎಂದರೆ ಪ್ರತಿಯೊಬ್ಬರು ಮನೆಯಲ್ಲಿ ಕನ್ನಡ ಭಾಷೆ ಬಳಸಬೇಕು. ಆಡಳಿತದಲ್ಲಿ ವ್ಯವಹಾರದಲ್ಲಿ ಸಹ ಸಂಪೂರ್ಣ ಕನ್ನಡ ಬಳಸಬೇಕು. ಆಗ ಮಾತ್ರ ಮಾತೃ ಭಾಷೆ ಉಳಿಯಲು ಸಾಧ್ಯ. ಇಂದಿನ ಯುವಕ–ಯುವತಿಯರು ವಿದೇಶಿ ಭಾಷೆಗೆ ಅತಿಯಾದ ವ್ಯಾಮೋಹ ಬೆಳೆಸಿಕೊಳ್ಳದೇ ಮಾತೃ ಭಾಷೆಯನ್ನು ಹೆಚ್ಚು ಗೌರವಿಸಬೇಕು ಎಂದು ಮನ ಬಿಚ್ಚಿ ಮಾತನಾಡಿದರು.

ಕನ್ನಡ ನುಡಿ ಸಮ್ಮೇಳನದ ಅಧ್ಯಕ್ಷರಾದ ಪಾಲನೇತ್ರ ಅವರು ರಾಷ್ಟ್ರ ಕವಿ ಕುವೆಂಪು ಅವರ ಚಿಂತನೆ ಮತ್ತು ಸಮಗ್ರ ಸಾಹಿತ್ಯವನ್ನು ಒಳಗೊಂಡ ವಿಚಾರ ಸಂಕಿರಣ ಅಥವಾ ಕುವೆಂಪು ಹೆಸರಿನಲ್ಲಿ ರಾಷ್ಟ್ರೀಯ ಉತ್ಸವ ಏರ್ಪಡಿಸಬೇಕು. ಕನ್ನಡ ಸಾಮ್ರಾಜ್ಯವನ್ನು ಕಟ್ಟುವಲ್ಲಿ ಚಕ್ರವರ್ತಿ ಇಮ್ಮಡಿ ಪುಲಕೇಶಿ ಪಾತ್ರ ಮಹತ್ವದ್ದು ಹಾಗಾಗಿ ಅವರ ಪ್ರತಿಮೆಯನ್ನು ನಗರದಲ್ಲಿ ಸ್ಥಾಪಿಸಬೇಕು. ಹಾಗೇಯೇ ಮಾಜಿ ಸಿಎಂ ಕೆಂಗಲ್ ಹನುಂತಯ್ಯ ಮತ್ತು ಎಸ್. ನಿಜಲಿಂಗಪ್ಪ ಅವರ ಹೆಸರಿನಲ್ಲಿ ರಾಜ್ಯ ಮಟ್ಟದ ಪ್ರಶಸ್ತಿ ಮತ್ತು ಅಧ್ಯಯನ ಪೀಠವನ್ನು ಸ್ಥಾಪಿಸಿ ಕನ್ನಡದ ಹಿರಿಮೆಗೆ ಶ್ರಮಿಸಿರುವ ಇವರಿಗೆ ಈ ಮೂಲಕ ಗೌರವ ಸಲ್ಲಿಸಲು ಸರ್ಕಾರ ಕೂಡಲೇ ಚಿಂತನೆ ಮಾಡಬೇಕಿದೆ ಎಂದು ಸರ್ಕಾರಕ್ಕೆ ಮನವಿ ಮಾಡಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷರಾದ ನಾಡೋಜ ಡಾ. ವೂಡೇ ಪಿ. ಕೃಷ್ಣ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭದಲ್ಲಿ ವಿವಿಧ ಕ್ಷೇತ್ರದ ಸಾಧಕರಾದ ಬಿ.

▶▶ 12

ಜೀವನ್ಮುಖಿ ಕನ್ನಡ ಪಾಕ್ಷಿಕ ಪತ್ರಿಕೆ


ಜನವರಿ 15, 2022



ಯಶಸ್ವಿಯಾಗಿ ನಡೆದ ಕನ್ನಡ ನುಡಿ ಸಮ್ಮೇಳನ

ಅಜ್ಞಾನ, ನಿರಕ್ಷರತೆ, ಬಡತನ ಇರಬಾರದು ಎಂಬುದೇ ಗಾಂಧೀಜಿ ಅವರ ಉದ್ದೇಶವಾಗಿತ್ತು

-ಗಾಂಧೀವಾದಿ ಡಬ್ಲ್ಯೂ.ಎಚ್.ಹನುಮಂತಪ್ಪ ಸ್ಮಾರಕ ದತ್ತಿ ಕಾರ್ಯಕ್ರಮದಲ್ಲಿ ಡಾ.ಶ್ಯಾಮಸುಂದರ ಬಿದರಕುಂದಿ



ಡಾ. ಶ್ಯಾಮಸುಂದರ ಬಿದರಕುಂದಿ ಅವರಿಗೆ ಜೀರಿಗೆ ಲೋಕೇಶ್ ಅವರಿಂದ ಗೌರವಾರ್ಪಣೆ. ಡಬ್ಲ್ಯೂ.ಡಿ.ಅಶೋಕ್, ನಾಡೋಜ ಡಾ. ವೂಡೇ ಪಿ.ಕೃಷ್ಣ, ಇಂದಿರಾ ಕೃಷ್ಣಪ್ಪ, ಸತ್ಯಮಂಗಲ ಮಹಾದೇವ್ ಮತ್ತು ಪ್ರೊ. ನೋಟಕಾರ್ ಸತೀಶ್ ಇದ್ದಾರೆ.

"ಭಾರತದ ಸ್ವಾತಂತ್ರ್ಯಕ್ಕಷ್ಟೇ ಗಾಂಧೀಜಿ ಶ್ರಮಿಸಲಿಲ್ಲ. ಇಡೀ ಮಾನವ ಕುಲದ ಸ್ವಾತಂತ್ರ್ಯವೇ ಅವರ ಉದ್ದೇಶವಾಗಿತ್ತು. ಅವರ ಸರಳ ಜೀವನ ಕ್ರಮವೇ ಕೆಲವೊಮ್ಮೆ ಹೆಚ್ಚು ಖರ್ಚಿಗೆ ಕಾರಣವಾಗುತ್ತಿತ್ತು. ಉದಾಹರಣೆಗೆ ಅವರು ಸೇವಿಸುತ್ತಿದ್ದ ಆಡಿನ ಹಾಲನ್ನು ದೂರದಿಂದ ತರಬೇಕಾಗಿದ್ದುದನ್ನು ಮನಗಂಡು ಆಡಿನ ಹಾಲಿನ ಸೇವನೆಯನ್ನೇ ತ್ಯಜಿಸಿದರು. ಉದ್ಯಮ ಮನುಷ್ಯನನ್ನು ಎತ್ತರಕ್ಕೇರಿಸುತ್ತದೆ ಎಂದು ನಂಬಿದ್ದ ಗಾಂಧೀಜಿ ಚರಕ, ಒಕ್ಕಲುತನ, ನೇಕಾರಿಕೆ ಇವುಗಳ ಪರವಾಗಿದ್ದರೂ ಅವರು ದೊಡ್ಡ ಯಂತ್ರಗಳ ವಿರೋಧಿಯಾಗಿರಲಿಲ್ಲ. ಯಂತ್ರಗಳಿಂದ ಸಮಯ ಉಳಿಸಿಕೊಳ್ಳೋಣ ಆದರೆ ಮಾನವೀಯತೆ ಮರೆಯದಿರೋಣ ಎಂಬುದೇ ಅವರ ಮಂತ್ರವಾಗಿತ್ತು. ಅವರ ಉದ್ದೇಶಗಳ ವಿರುದ್ಧ ನಾವು ಹೋಗುತ್ತಿರುವುದೇ ಸಮಾಜದ ಅಧಃಪತನಕ್ಕೆ ಕಾರಣವಾಗುತ್ತಿದೆ. ಆರ್ಥಿಕ ವ್ಯವಸ್ಥೆಯಲ್ಲಿ ಒಬ್ಬ ಶ್ರೀಮಂತನಾದರೆ, ನೂರಾರು ಮಂದಿ ಬಡವರಾಗುತ್ತಾರೆ. ಹೀಗಾಗಿ, ಗಾಂಧೀಜಿ ಈ ವ್ಯವಸ್ಥೆಗೆ ವಿರೋಧವಾಗಿದ್ದರು" ಎಂದು ಡಾ. ದ.ರಾ.ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್‌ನ ನಿಕಟಪೂರ್ವ ಅಧ್ಯಕ್ಷರಾದ ಹಿರಿಯ ವಿದ್ವಾಂಸ ಡಾ.ಶ್ಯಾಮಸುಂದರ ಬಿದರಕುಂದಿ ಅವರು ತಿಳಿಸಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಮತ್ತು ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜಿನ ಸಹಯೋಗದಲ್ಲಿ ಗಾಂಧೀ ಶಾಂತಿ ಪ್ರತಿಷ್ಠಾನ, ಬೆಂಗಳೂರು ಕೇಂದ್ರ 24-12-2021ರಂದು ಬೆಂಗಳೂರಿನ ಗಾಂಧಿ ಭವನದಲ್ಲಿ ಏರ್ಪಡಿಸಿದ್ದ "ಬ್ರಹ್ಮ ಸಮಾಜದ ಮುಖಂಡ ಹಾಗೂ ಗಾಂಧೀವಾದಿ ಡಬ್ಲ್ಯೂ.ಎಚ್.ಹನುಮಂತಪ್ಪ ಸ್ಮಾರಕ ದತ್ತಿ ಉಪನ್ಯಾಸ" ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದ ಡಾ.ಶ್ಯಾಮಸುಂದರ ಬಿದರಕುಂದಿ "ಗಾಂಧೀಜಿ ಮತ್ತು ಉದ್ಯಮ ಶೀಲತೆ" ಕುರಿತು ವಿಚಾರಪೂರ್ಣ ಉಪನ್ಯಾಸ ನೀಡಿದರು.

"ಕೇವಲ ಹಣ ಮಾಡುವುದೇ ಧ್ಯೇಯವಾಗಬಾರದು, ಅಸಂಗ್ರಹ ನೀತಿ ಅನುಸರಿಸಬೇಕು ಎಂಬುದೇ ಬಾಪೂಜಿ ಅವರ ಆಶಯವಾಗಿತ್ತು. ಇದೇ ತತ್ವಗಳನ್ನು 12ನೇ ಶತಮಾನದಲ್ಲಿ ಬೋಧಿಸಿದವರು ಬಸವಾದಿ ಶರಣರು. ನಾವಿಂದು ಅವಲಂಬಿಸಿರುವ ವಿಜ್ಞಾನದ ಉಪಯೋಗ ವ್ಯಕ್ತಿಗತವಾಗಿದೆ. ಅಜ್ಞಾನ, ಅನಕ್ಷರತೆ ಮತ್ತು ಬಡತನ ಇರಬರದು ಎಂಬುದೇ ಗಾಂಧೀಜಿ ಅವರ ಆಶಯವಾಗಿತ್ತು. ಹಿರೋಶಿಮಾ ಮತ್ತು ನಾಗಸಾಕಿ ಮೇಲೆ ಬಾಂಬ್ ಹಾಕಿದ ಅಮೆರಿಕಾದ ಮೇಲೆ ಜಪಾನೀಯರು ಸೇಡು ತೀರಿಸಿಕೊಳ್ಳಲಿಲ್ಲ. ಅವರು ಬುದ್ಧನ ಅಧ್ಯಾತ್ಮಿಕ ಮಾರ್ಗದಲ್ಲಿ ನಡೆದು ಜಪಾನನ್ನು ಪುನರ್ನಿಮಿಸಿ ಅಮೆರಿಕಾ ಸೇರಿದಂತೆ ಇಡೀ ವಿಶ್ವ ನಿಬ್ಬೆರಗಾಗುವಂತೆ ಮಾಡಿದರು. ಅದೇ ರೀತಿ ಗಾಂಧೀಜಿ ಬೋಧಿಸಿದ ಶಾಂತಿ ಮಂತ್ರವನ್ನು ಪಾಲಿಸೋಣ. ಅವರ ಮೇಲಿನ ಅಭಿಮಾನದ ಜೊತೆಗೆ ಸರಿಯಾದ ಜ್ಞಾನ ಬೆಳೆಸಿಕೊಳ್ಳೋಣ. ಯಂತ್ರಗಳಂತೆ ದೆವ್ವಗಳಾಗುವುದು ಬೇಡ. ಆ ದೆವ್ವಗಳನ್ನು ಮಾನವ ಕುಲದ ಒಳಿತಿಗಾಗಿ ದುಡಿಸಿಕೊಳ್ಳೋಣ" ಎಂದು ಡಾ. ಬಿದರಕುಂದಿ ಮನವಿ ಮಾಡಿದರು.

ವಿದ್ಯಾರ್ಥಿನಿ ಪ್ರೇರಣಾ ನಿರೂಪಿಸಿದ ಕಾರ್ಯಕ್ರಮ ಇಬ್ಬರು ವಿದ್ಯಾರ್ಥಿನಿಯರು "ವೈಷ್ಣವ ಜನತೋ" ಗೀತೆಯನ್ನು ಸುಶ್ರಾವ್ಯವಾಗಿ ಹಾಡುವುದರೊಂದಿಗೆ ಆರಂಭವಾಯಿತು. ಸ್ವಾಗತ ಭಾಷಣ ಮಾಡಿದ ಸಂಜೆ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ನೋಟಕಾರ ಸತೀಶ್ "ಇಂತಹ ಕಾರ್ಯಕ್ರಮಗಳಲ್ಲಿ ವಿದ್ಯಾರ್ಥಿಗಳು ಹೆಚ್ಚಾಗಿ ಭಾಗವಹಿಸಿದರೆಅವರ ವ್ಯಕ್ತಿತ್ವ ವಿಕಸನಗೊಳ್ಳುತ್ತದೆ ಎಂದು ಅಭಿಪ್ರಾಯ ಪಟ್ಟರು.

ಪ್ರಾಸ್ತಾವಿಕ ನುಡಿಗಳನ್ನಾಡಿದ ಗಾಂಧೀ ಶಾಂತಿ ಪ್ರತಿಷ್ಠಾನದ ಕಾರ್ಯದರ್ಶಿ ಡಾ. ಸತ್ಯಮಂಗಲ ಮಹಾದೇವ "ರಾಜಾ ರಾಮ ಮೋಹನರಾಯರ ಮತ್ತು ಮಹಾತ್ಮ ಗಾಂಧೀಜಿ ಅವರ ಅನುಯಾಯಿಯಾಗಿದ್ದ ಡಬ್ಲ್ಯೂ.ಹೆಚ್.ಹನುಮಂತಪ್ಪ ಅವರು ಸರಳ ಜೀವನ ಶೈಲಿ, ಉನ್ನತ ವಿಚಾರ ಧಾರೆಗಳನ್ನು ಅಳವಡಿಸಿಕೊಂಡಿದ್ದರು. ಅವರ ಆದರ್ಶಗಳನ್ನು ಪಾಲಿಸೋಣ" ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಗಾಂಧೀ ಶಾಂತಿ ಪ್ರತಿಷ್ಠಾನದ ಅಧ್ಯಕ್ಷರು ಹಾಗೂ ಅಮರ ಬಾಪುಚಿಂತನ ಪತ್ರಿಕೆಯ ಪ್ರಧಾನ ಸಂಪಾದಕರಾದ ಜೀರಿಗೆ ಲೋಕೇಶ್ "ಇಂದು ಡಬ್ಲ್ಯೂ.ಎಚ್. ಹನುಮಂತಪ್ಪನವರ 136ನೇ ಜನ್ಮದಿನ. ಗಾಂಧಿ ಚಿಂತನೆಗಳನ್ನು ಅವರು ಬಾಳಿನುದ್ದಕ್ಕೂ ಅನುಸರಿಸಿದರು. ಭಾರತೀಯರಷ್ಟೇ ಅಲ್ಲ, ವಿದೇಶಿಯರಾದ ನೆಲ್ಸನ್ ಮಂಡೇಲ, ಬರಾಕ್ ಒಬಾಮ, ಮಾರ್ಟಿನ್ ಲೂಥರ್ ಕಿಂಗ್, ಐನ್‌ಸ್ಟೀನ್ ಮೊದಲಾದ ಅನೇಕರು ಗಾಂಧೀಜಿ ಅವರ ಅನುಯಾಯಿಗಳಾಗಿದ್ದರು" ಎಂದು ಹೇಳಿದರು.

ವಿದ್ಯಾರ್ಥಿನಿ ಸಹನಾ ಅವರ ವಂದನಾರ್ಪಣೆಯಿಂದ ಮುಕ್ತಾಯವಾದ ಕಾರ್ಯಕ್ರಮದಲ್ಲಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರಾದ ನಾಡೋಜ ಡಾ. ವೂಡೇ ಪಿ.ಕೃಷ್ಣ ಮತ್ತು ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ, ದತ್ತಿದಾನಿಗಳ ಪ್ರತಿನಿಧಿಯಾಗಿ ವೂಡೇ ಪ್ರತಿಷ್ಠಾನದ ಡಬ್ಲ್ಯೂ.ಎಚ್. ದೇವಕುಮಾರ್ ಅವರ ಪುತ್ರ ಡಬ್ಲ್ಯೂ.ಡಿ.ಅಶೋಕ್ ಉಪಸ್ಥಿತರಿದ್ದರು.

ಕನ್ನಡಪ್ರಭ
Fri, 04 February 2022

ಗಾಂಧಿ ನೆನಪಿನಲ್ಲಿ ಗಾಂಧಿವಾದಿಗಳಿಗೆ ಸನ್ಮಾನ

ಗಾಂಧೀಜಿ ಮೈಸೂರು ರಾಜ್ಯಕ್ಕೆ ಮೂರು ಬಾರಿ ಭೇಟಿ ನೀಡಿದ್ದರು: ಕರ್ನಾಟಕ ಗಾಂಧೀ ಭವನದ ಸ್ಮಾರಕ ನಿಧಿ ಮಾಜಿ ಅಧ್ಯಕ್ಷ ಡಾ.ವೂಡೇ ಕೃಷ್ಣ

• ಕನ್ನಡಪ್ರಭ ವಾರ್ತೆ ಮೈಸೂರು

ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರು ಮೈಸೂರು ಪೌರ ಸನ್ಮಾನ ಸ್ವೀಕರಿಸಿದ ನೆನಪಿನ ಅಂಗವಾಗಿ ಸ್ವಾತಂತ್ರ್ಯ ಹೋರಾಟಗಾರರು ಮತ್ತು ಗಾಂಧಿಮಾರ್ಗಿಗಳನ್ನು ಗುರುವಾರ ಸನ್ಮಾನಿಸಲಾಯಿತು.

ನಗರದ ಪುರಭವನದಲ್ಲಿ ಜಿಲ್ಲಾಡಳಿತ, ನಗರಪಾಲಿಕೆ ಮತ್ತು ಶೇಷಾದ್ರಿಪುರಂ ಸಂಯುಕ್ತ ಪದವಿ ಕಾಲೇಜಿನ ಸಹಯೋಗದಲ್ಲಿ ನಡೆದ ಕಾರ್ಯಕ್ರಮದಲ್ಲಿ ಗಾಂಧೀ ಮಾರ್ಗಿಗಳಾದ ಸನ್ಮಾನ ಬಿ.ಲಿಂಗಯ್ಯ, ವೈ.ಸಿ. ರೇವಣ್ಣ, ರಂಗಶೆಟ್ಟಿ, ಟಿ. ಪುಟ್ಟಣ್ಣ, ಪ್ರೊ. ಶಶಿಕಲಾ ಅವರನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಸನ್ಮಾನಿಸಿದರು.

ಕರ್ನಾಟಕ ಗಾಂಧೀ ಭವನದ ಸ್ಮಾರಕ ನಿಧಿ ಮಾಜಿ ಅಧ್ಯಕ್ಷ ಡಾ.ವೂಡೇ ಕೃಷ್ಣ ಮಾತನಾಡಿ, ಗಾಂಧೀಜಿ ಮೈಸೂರು ರಾಜ್ಯಕ್ಕೆ ಮೂರು ಬಾರಿ ಭೇಟಿ ನೀಡಿದ್ದಾರೆ. ಡಿ.ವಿ. ಗುಂಡಪ್ಪ ಅವರ ಆಹ್ವಾನದ ಮೇರೆಗೆ 1915 ರಲ್ಲಿ ಬೆಂಗಳೂರಿಗೆ ಭೇಟಿ ನೀಡಿದ್ದರು. 1927 ರಲ್ಲಿ ಚಿಕಿತ್ಸೆ ಪಡೆಯಲು ನಂದಿ ಬೆಟ್ಟಕ್ಕೆ ಬಂದಿದ್ದರು. ಆಗ ಆ. 21 ರಂದು ಮೈಸೂರಿನ ಪೌರ ಸನ್ಮಾನ ಸ್ವೀಕರಿಸಿದ್ದರು. ಹರಿಜನೋದ್ಧಾರಕ್ಕೆ ನಿಧಿ ಸಂಗ್ರಹಿಸಲು 1934ರಲ್ಲಿ ಭೇಟಿ ನೀಡಿದ್ದಾಗಿ ತಿಳಿಸಿದರು. ಮೈಸೂರು ರಾಜ್ಯ, ರಾಜರ ಪ್ರಗತಿಪರವಾದ ಆಲೋಚನೆಯಿಂದ ಗಾಂಧೀ ಪ್ರೇರಿತರಾಗಿದ್ದರು. ಮೈಸೂರು ಮಾದರಿ ರಾಜ್ಯ ಎಂದು ಕರೆದಿದ್ದರು. ಸ್ವಾತಂತ್ರ್ಯ ಅಮೃತ ಮಹೋತ್ಸವದ ನೆನಪಿನಲ್ಲಿ ಗಾಂಧೀ ಪೌರ ಸನ್ಮಾನ ಸ್ವೀಕಾರ ಸ್ಮರಿಸುತ್ತಿರುವುದು ಐತಿಹಾಸಿಕ ಕಾರ್ಯ ಎಂದು ನುಡಿದರು.



ಮೈಸೂರಿನ ಪುರಭವನದಲ್ಲಿ ಜಿಲ್ಲಾಡಳಿತ ಆಯೋಜಿಸಿದ್ದ ಗಾಂಧೀಜಿಗೆ ಪೌರ ಸನ್ಮಾನ ನೆನಪು ಕಾರ್ಯಕ್ರಮದಲ್ಲಿ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಗಾಂಧೀಜಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿದರು. ಮೇಯರ್ ಸುನಂದಾ ಪಾಲನೇತ್ರ, ಶಾಸಕ ತನ್ವೀರ್ ಸೇಠ್, ಉಪ ಮೇಯರ್ ಅನ್ವರ್ ಬೇಗ್, ನಗರ ಪಾಲಿಕೆ ಸದಸ್ಯ ಶಿವಕುಮಾರ್, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಲ್.ಆರ್. ಮಹದೇವಸ್ವಾಮಿ ಇತರರು ಇದ್ದರು.

ಗಾಂಧೀಗೆ ವೈಯಕ್ತಿಕ ಬದುಕು ಇರಲಿಲ್ಲ, ಬದುಕಿನಲ್ಲಿ ಪಾರದರ್ಶಕತೆ ಇತ್ತು. ಯಾರಿಂದಲೂ ಏನನ್ನೂ ನಿರೀಕ್ಷೆ ಮಾಡುತ್ತಿರಲಿಲ್ಲ, ಪ್ರೀತಿ, ಸೌಹಾರ್ದತೆಯ ಅಹಿಂಸಾತ್ಮಕ ಸಮಾಜ, ಬಹುತ್ವ ಕಾಪಾಡುವ ಸಮಾಜದ ಕಲ್ಪನೆ ಇತ್ತು. ದೇಶದ ಶಕ್ತಿ ಆಧ್ಯಾತ್ಮದಲ್ಲಿದೆ ಎಂದು ನಂಬಿದ್ದರು. ಇವುಗಳ ಸಾಕಾರಕ್ಕೆ ಜೀವನ ಪರ್ಯಂತ ದುಡಿದರು. ಇವತ್ತು ಗಾಂಧೀಜಿ ಮರೆಯುತ್ತಿದ್ದೇವೆ. ಯುವಕರಲ್ಲಿ ಅವರ ವಿಚಾರಧಾರೆ ಬಿತ್ತಬೇಕಿದೆ ಎಂದರು.

ಮೇಯರ್ ಸುನಂದಾ ಪಾಲನೇತ್ರ ಮಾತನಾಡಿ, 1927 ರಲ್ಲಿ ಗಾಂಧೀಜಿ, 1997-98ರಲ್ಲಿ ಡಾ. ರಾಜಕುಮಾರ್, 2008-09ರಲ್ಲಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಮೈಸೂರು ನಗರ ಪಾಲಿಕೆಯಿಂದ ಪೌರ ಸನ್ಮಾನ ನೀಡಿ ಗೌರವಿಸಲಾಗಿದೆ. ಸ್ವಚ್ಛ ಭಾರತದ ಗಾಂಧೀಜಿ ಆಶಯವನ್ನು ಪ್ರಧಾನಿ ನರೇಂದ್ರ ಮೋದಿ ಸಾಕಾರಗೊಳಿಸಿದ್ದಾರೆ ಎಂದರು.



ಮೈಸೂರಿನ ಪುರಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಗಾಂಧೀ ಮಾರ್ಗಿಗಳಾದ ಬಿ. ಲಿಂಗಯ್ಯ, ವೈ.ಸಿ.ರೇವಣ್ಣ, ರಂಗಶೆಟ್ಟಿ, ಟಿ. ಪುಟ್ಟಣ್ಣ, ಪ್ರೊ. ಶಶಿಕಲಾ ಅವರನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಸನ್ಮಾನಿಸಿದರು. ಶಾಸಕ ತನ್ವೀರ್ ಸೇಠ್, ಮೇಯರ್ ಸುನಂದಾ ಪಾಲನೇತ್ರ ಮೊದಲಾದವರು ಇದ್ದಾರೆ.

ಗಾಂಧೀ ನೆನಪು ಹಂಚಿಕೊಂಡ ಮೈಸೂರು ವಿವಿ ಗಾಂಧೀ ಭವನದ ವಿಶ್ರಾಂತ ನಿರ್ದೇಶಕ ಪ್ರೊ.ಎಸ್. ಶಿವರಾಜಪ್ಪ, ಮೈಸೂರು ಅರಮನೆ ಮತ್ತು ಗುರುಮನೆ ಸನ್ಮಾನ ಸ್ವೀಕರಿಸಲು ಒಪ್ಪದ ಅಂದಿನ ಪುರಸಭೆಯಿಂದ ಪುರಭವನದಲ್ಲಿ ಪೌರಸನ್ಮಾನ ಸ್ವೀಕರಿಸಿದರು. ಡಿ.ಬನುಮಯ್ಯ ಸ್ವಾಗತ ಸಮಿತಿ ಅಧ್ಯಕ್ಷರಾಗಿದ್ದರು. ಪತ್ರಕರ್ತರಾದ ತಾತಯ್ಯ, ಶೇಷಾದ್ರಿ ಮತ್ತು ಸಮಿತ್ರಾಬಾಯಿ ಸದಸ್ಯರಾಗಿದ್ದರು. ಅದ್ದೂರಿ ಸ್ವಾಗತಕ್ಕೆ ತಿರಸ್ಕರಿಸಿ, ತಾತಯ್ಯನವರ ಮನೆಯ ಒಂದು ಕೊಠಡಿಯಲ್ಲಿ ಉಳಿದಿದ್ದರು. ಎರಡು ದಿನ ಮೈಸೂರಿನಲ್ಲಿದ್ದ ಗಾಂಧೀಜಿ, ದಲಿತರು ವಾಸಿಸುತ್ತಿದ್ದ ಆದಿಕರ್ನಾಟಕ ಪುರಕ್ಕೆ ಭೇಟಿ ನೀಡಿದರು. ಜಾತಿ ಸೂಚಕ ಹೆಸರನ್ನು ಅಶೋಕಪುರಂ ಎಂದು ಬದಲಿಸಿದರು. ಆದಿದ್ರಾವಿಡ ಪುರಕ್ಕೂ ಭೇಟಿ ನೀಡಿ ಗಾಂಧಿನಗರ ಎಂದು ಮಾರ್ಪಡಿಸಿದರು. ಕೆ.ಆರ್. ಮಿಲ್‌ಗೆ ಭೇಟಿ ನೀಡಿ ಕಾರ್ಮಿಕರ ಸಮಸ್ಯೆ ಆಲಿಸಿದ್ದಾಗಿ ವಿವರಿಸಿದರು.

ಶಾಸಕ ತನ್ವೀರ್ ಸೇಠ್, ಮೇಯರ್ ಸುನಂದಾ ಪಾಲನೇತ್ರ, ಉಪ ಮೇಯರ್ ಅನ್ವರ್ ಬೇಗ್, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಲ್.ಆರ್. ಮಹದೇವಸ್ವಾಮಿ, ಕರ್ನಾಟಕ ಕಾಂಪೋಸ್ಟ್ ನಿಗಮದ ಅಧ್ಯಕ್ಷ ಎಸ್. ಮಹದೇವಯ್ಯ, ಕರ್ನಾಟಕ ಖಾದಿ ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷ ಎನ್.ಆರ್. ಕೃಷ್ಣಪ್ಪ ಗೌಡ, ಮೈಲ್ಯಾಕ್ ಅಧ್ಯಕ್ಷ ಎನ್.ವಿ. ಫಣೀಶ್, ನಗರಪಾಲಿಕೆ ಆಡಳಿತ ಪಕ್ಷದ ನಾಯಕ ಶಿವಕುಮಾರ್, ಪುರಭವನ ಅಭಿವೃದ್ಧಿ ಸಮಿತಿ ಅಧ್ಯಕ್ಷ ರಮೇಶ್, ನಗರ ಪಾಲಿಕೆ ಸದಸ್ಯರಾದ ರವೀಂದ್ರ, ರಂಗಸ್ವಾಮಿ, ಎಂ.ಯು. ಸುಬ್ಬಯ್ಯ, ಸಿ.ಎಸ್. ರಜನಿ ಅಣ್ಣಯ್ಯ, ನಗರಪಾಲಿಕೆ ಹೆಚ್ಚುವರಿ ಆಯುಕ್ತೆ ರೂಪಾ, ಆರೋಗ್ಯಾಧಿಕಾರಿ ಡಾ. ನಾಗರಾಜ್ ಇದ್ದರು.

ಆಂದೋಲನ

Feb 4 2022 Page No. 2

'ಗಾಂಧಿಗೆ ಪೌರ ಸನ್ಮಾನ'ದ ಕ್ಷಣ ನೆನೆದ ಮೈಸೂರು!

ಜಿಲ್ಲಾಡಳಿತ, ಪಾಲಿಕೆ, ಶೇಷಾದ್ರಿಪುರಂ ಕಾಲೇಜು ವತಿಯಿಂದ ಹಿರಿಯ ಸ್ವಾತಂತ್ರ್ಯ ಹೋರಾಟಗಾರರಿಗೆ ಸನ್ಮಾನ

ಮೈಸೂರು: ಸ್ವಾತಂತ್ರ್ಯ ಹೋರಾಟಗಾರರು ಮತ್ತು ಗಾಂಧಿ ಮಾರ್ಗಿಗಳನ್ನು ಸನ್ಮಾನಿಸುವ ಮೂಲಕ ರಾಷ್ಟ್ರಪಿತ ಮಹಾತ್ಮ ಗಾಂಧಿ ಅವರು 1927 ಆಗಸ್ಟ್ 21ರಂದು ಅಂದಿನ ಮೈಸೂರು ರಾಜ್ಯಕ್ಕೆ ಆಗಮಿಸಿ ಪೌರ ಸನ್ಮಾನ ಸ್ವೀಕರಿಸಿದ್ದ ಸಂದರ್ಭವನ್ನು ನೆನಪಿಸಿಕೊಳ್ಳಲಾಯಿತು.

ನಗರದ ಪುರಭವನದಲ್ಲಿ ಜಿಲ್ಲಾಡಳಿತ, ನಗರಪಾಲಿಕೆ ಮತ್ತು ಶೇಷಾದ್ರಿಪುರಂ ಸಂಯುಕ್ತ ಪದವಿ ಪೂರ್ವ ಕಾಲೇಜು ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಗಾಂಧಿ ಮಾರ್ಗಿಗಳಾದ ಬಿ.ಲಿಂಗಯ್ಯ, ವೈ.ಸಿ.ರೇವಣ್ಣ, ರಂಗಶೆಟ್ಟಿ, ಟಿ.ಪುಟ್ಟಣ್ಣ, ಪ್ರೊ.ಶಶಿಕಲಾ ಅವರನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಸನ್ಮಾನಿಸಿದರು.

ಕರ್ನಾಟಕ ಗಾಂಧಿ ಭವನ ಸ್ಮಾರಕ ನಿಧಿಯ ಮಾಜಿ ಅಧ್ಯಕ್ಷ ಡಾ.ವೂಡೇ ಕೃಷ್ಣ ಮಾತನಾಡಿ, ಗಾಂಧೀಜಿ ಮೈಸೂರು ರಾಜ್ಯಕ್ಕೆ ಮೂರು ಬಾರಿ ಭೇಟಿ ನೀಡಿದ್ದಾರೆ. ಮೈಸೂರು ರಾಜ್ಯ, ರಾಜರ ಪ್ರಗತಿಪರವಾದ ಆಲೋಚನೆಯಿಂದ ಗಾಂಧಿ ಪ್ರೇರಿತರಾಗಿದ್ದರು. ಮೈಸೂರನ್ನು ಮಾದರಿ ರಾಜ್ಯ ಎಂದು ಕರೆದಿದ್ದರು. ಸ್ವಾತಂತ್ರ್ಯ ಅಮೃತ ಮಹೋತ್ಸವದ ನೆನಪಿನಲ್ಲಿ ಗಾಂಧಿ ಪೌರ ಸನ್ಮಾನ ಸ್ವೀಕಾರ ಸ್ಮರಿಸುತ್ತಿರುವುದು ಐತಿಹಾಸಿಕ ಕಾರ್ಯ ಎಂದರು.

ಗಾಂಧಿಗೆ ವೈಯಕ್ತಿಕ ಬದುಕು ಇರಲಿಲ್ಲ. ಪ್ರೀತಿ ಸೌಹಾರ್ದತೆಯ ಅಹಿಂಸಾತ್ಮಕ ಸಮಾಜ ಬಹುತ್ವ ಕಾಪಾಡುವ ಸಮಾಜದ ಕಲ್ಪನೆ ಅವರದ್ದಾಗಿತ್ತು. ಇವುಗಳ ಸಾಕಾರಕ್ಕೆ ಜೀವನ ಪರ್ಯಂತ ದುಡಿದರು. ದೇಶದ ಸ್ವಾತಂತ್ರ್ಯ, ಅಖಂಡತೆ, ಸೌಹಾರ್ದತೆಗಾಗಿ ಗಾಂಧೀಜಿ 142 ದಿನಗಳ ಕಾಲ ಉಪವಾಸ ನಡೆಸಿದರು. ಇವತ್ತು ಗಾಂಧಿಯನ್ನು ಮರೆಯುತ್ತಿದ್ದೇವೆ. ಯುವಜನರಲ್ಲಿ ಅವರ ವಿಚಾರಧಾರೆ ಬಿತ್ತಬೇಕಿದೆ ಎಂದು ಹೇಳಿದರು.

ಮೈಸೂರು ವಿವಿ ಗಾಂಧಿ ಭವನದ ನಿವೃತ್ತ ನಿರ್ದೇಶಕ ಪ್ರೊ.ಎಸ್.ಶಿವರಾಜಪ್ಪ ಮಾತನಾಡಿ, ಮೈಸೂರು ಅರಮನೆ ಮತ್ತು ಗುರುಮನೆ ಸನ್ಮಾನ ಸ್ವೀಕರಿಸಲು ಒಪ್ಪದ ಮಹಾತ್ಮ ಗಾಂಧೀಜಿ ಅಂದಿನ ಪುರಸಭೆಯಿಂದ ಪುರಭವನದಲ್ಲಿ ಪೌರ ಸನ್ಮಾನ ಸ್ವೀಕರಿಸಿದ್ದರು. ಎರಡು ದಿನಗಳ ಕಾಲ ಮೈಸೂರಿನಲ್ಲಿದ್ದ ಗಾಂಧೀಜಿ ದಲಿತರು ವಾಸಿಸುತ್ತಿದ್ದ 'ಆದಿಕರ್ನಾಟಕಪುರ'ಕ್ಕೆ ಭೇಟಿ ನೀಡಿ ಜಾತಿಸೂಚಕ ಹೆಸರನ್ನು 'ಅಶೋಕಪುರಂ' ಎಂದು ಬದಲಾಯಿಸಿದ್ದರು. 'ಆದಿದ್ರಾವಿಡಪುರ'ಕ್ಕೂ ಭೇಟಿ ನೀಡಿ 'ಗಾಂಧಿನಗರ' ಎಂದು ನಾಮಕರಣ ಮಾಡಿದರು. ಕೆ.ಆರ್.ಮಿಲ್‌ಗೆ ಭೇಟಿ ನೀಡಿ ಕಾರ್ಮಿಕರ ಸಮಸ್ಯೆಗಳನ್ನು ಆಲಿಸಿದರು ಎಂದು ಆ ದಿನಗಳನ್ನು ಸ್ಮರಿಸಿದರು.

ಮಹಾತ್ಮ ಗಾಂಧಿ ಜಾತಿ ಸೋಂಕಿಲ್ಲದ ರಾಷ್ಟ್ರಪ್ರೇಮಿ. ಹಿಂದೂ-ಮುಸ್ಲಿಂ ಏಕತೆ ಇಲ್ಲದೇ ಈ ದೇಶ ಶಾಂತಿಯಿಂದ ಇರಲು ಸಾಧ್ಯವಿಲ್ಲ ಎಂದು ಗಾಂಧಿ ನಂಬಿದ್ದರು. ಗಾಂಧಿ ಬೋಧಿಸಿರುವ ಧರ್ಮಸೌಹಾರ್ದತೆ ಇಂದು ಹೆಚ್ಚು ಅವಶ್ಯವಿದೆ ಎಂದು ಶಿವರಾಜಪ್ಪ ಅಭಿಪ್ರಾಯಪಟ್ಟರು.

ಶಾಸಕ ತನ್ವೀರ್ ಸೇಠ್, ಮಹಾಪೌರರಾದ ಸುನಂದಾ ಪಾಲನೇತ್ರ, ಉಪ ಮಹಾಪೌರ ಅನ್ವರ್ ಬೇಗ್, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಕರ್ನಾಟಕ ಕಾಂಪೋಸ್ಟ್ ನಿಗಮದ ಅಧ್ಯಕ್ಷ ಎಸ್.ಮಹದೇವಯ್ಯ, ಕರ್ನಾಟಕ ಖಾದಿ ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷ ಎಸ್.ಆರ್.ಕೃಷ್ಣಪ್ಪ ಗೌಡ, ಮೈಲ್ಯಾಕ್ ಅಧ್ಯಕ್ಷ ಎನ್.ವಿ.ಫಣೀಶ್, ನಗರಪಾಲಿಕೆ ಆಡಳಿತ ಪಕ್ಷದ ನಾಯಕ ಶಿವಕುಮಾರ್, ಪುರಭವನ ಅಭಿವೃದ್ಧಿ ಸಮಿತಿ ಅಧ್ಯಕ್ಷ ರಮೇಶ್, ನಗರಪಾಲಿಕೆ ಸದಸ್ಯರಾದ ರವೀಂದ್ರ, ರಂಗಸ್ವಾಮಿ, ಎಂ.ಯು.ಸುಬ್ಬಯ್ಯ, ಸಿ.ಎಸ್.ರಜನಿ ಅಣ್ಣಯ್ಯ, ನಗರಪಾಲಿಕೆ ಹೆಚ್ಚುವರಿ ಆಯುಕ್ತರಾದ ರೂಪಾ, ಆರೋಗ್ಯಾಧಿಕಾರಿ ಡಾ.ನಾಗರಾಜ್ ಹಾಜರಿದ್ದರು. ಸಭಾ ಕಾರ್ಯಕ್ರಮಕ್ಕೂ ಮುನ್ನ ವಿದ್ಯಾರ್ಥಿಗಳು ಗಾಂಧಿ ಸಂದೇಶವುಳ್ಳ ಭಿತ್ತಿಪತ್ರ ಹಿಡಿದು ಸದ್ಭಾವನಾ ಮೆರವಣಿಗೆ ನಡೆಸಿದರು.





ಮೈಸೂರಿನ ಪುರಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಗಾಂಧಿ ಮಾರ್ಗಿಗಳಾದ ಬಿ.ಲಿಂಗಯ್ಯ, ವೈ.ಸಿ.ರೇವಣ್ಣ, ರಂಗಶೆಟ್ಟಿ, ಟಿ.ಪುಟ್ಟಣ್ಣ, ಪ್ರೊ.ಶಶಿಕಲಾ ಅವರನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಸನ್ಮಾನಿಸಿದರು. ಶಾಸಕ ತನ್ವೀರ್ ಸೇಠ್, ಮಹಾಪೌರರಾದ ಸುನಂದಾ ಪಾಲನೇತ್ರ ಇನ್ನಿತರರು ಹಾಜರಿದ್ದರು. ಮತ್ತೊಂದು ಚಿತ್ರದಲ್ಲಿ ಗಾಂಧಿ ಸಂದೇಶವುಳ್ಳ ಭಿತ್ತಿಪತ್ರ ಹಿಡಿದು ವಿದ್ಯಾರ್ಥಿಗಳು ಸದ್ಭಾವನಾ ಮೆರವಣಿಗೆ ನಡೆಸಿದ್ದನ್ನು ಕಾಣಬಹುದು.

ಸಮಯ ಪಾಲಿಸದ ಸಚಿವರು!!

ಮೈಸೂರು: ಸದಾ ಕರ್ತವ್ಯನಿಷ್ಠೆ, ಸಮಯ ಪಾಲನೆ ಮಂತ್ರ ಜಪಿಸುತ್ತಿದ್ದ ಮಹಾತ್ಮ ಗಾಂಧೀಜಿ ಅವರ ನೆನಪಿನ ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು ಸಮಯ ಪಾಲನೆ ಮಾಡದ ಕಾರಣ ವಿದ್ಯಾರ್ಥಿಗಳು ಎರಡೂವರೆ ತಾಸು ಬಿಸಿಲಿನಲ್ಲಿ ಕಾದು ನಿಲ್ಲುವಂತಾಯಿತು. ಬೆಳಿಗ್ಗೆ 11 ಗಂಟೆಗೆ ಕಾರ್ಯಕ್ರಮ ನಿಗದಿಪಡಿಸಲಾಗಿತ್ತು. ಆದರೆ, ಸಚಿವರು ಮಧ್ಯಾಹ್ನ 1.30ಕ್ಕೆ ಆಗಮಿಸಿದರು. ಅಲ್ಲಿಯ ತನಕ ಹಿರಿಯ ಸ್ವಾತಂತ್ರ್ಯ ಹೋರಾಟಗಾರರು, ಕಾಲೇಜು ವಿದ್ಯಾರ್ಥಿಗಳು ಕಾದು ಕಾದು ಸುಸ್ತಾಗಿ ಅಲ್ಲೇ ಕುಳಿತುಕೊಂಡರು.

ಸಂಯುಕ್ತ ಕರ್ನಾಟಕ Fri, 04 February 2022

ಸ್ವಾತಂತ್ರ್ಯ ಯೋಧರಿಗೆ ಗೌರವ



ಪೌರಸನ್ಮಾನದ ನೆನಪಿನಲ್ಲಿ ಹಿರಿಯ ಸ್ವಾತಂತ್ರ್ಯ ಯೋಧರನ್ನು ಸನ್ಮಾನಿಸಿದ ದೃಶ್ಯ.

ಸಂ.ಕ. ಸಮಾಚಾರ ಮೈಸೂರು

ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರಿಗೆ ಮೈಸೂರಿನಲ್ಲಿ ನಡೆದಿದ್ದ ಪೌರಸನ್ಮಾನದ ನೆನಪಿನಲ್ಲಿ ನಗರದ ಪುರಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರಾದ ಎಸ್.ಟಿ. ಸೋಮಶೇಖರ್ ಹಿರಿಯ ಸ್ವಾತಂತ್ರ್ಯ ಹೋರಾಟಗಾರರನ್ನು ಸನ್ಮಾನಿಸಿದರು.

ಗಾಂಧೀಮಾರ್ಗಿಗಳಾದ ಬಿ. ಲಿಂಗಯ್ಯ, ವೈ.ಸಿ. ರೇವಣ್ಣ, ಸಿ.ಆರ್. ರಂಗಶೆಟ್ಟಿ, ಟಿ. ಪುಟ್ಟಣ್ಣ ಹಾಗೂ ಇನ್ನಿತರರು ಸನ್ಮಾನ ಸ್ವೀಕರಿಸಿದರು. ಈ ವೇಳೆ ಮಾತನಾಡಿ, ಸ್ವಾತಂತ್ರ್ಯ ಹೋರಾಟಗಾರರು ದೇಶಕ್ಕೆ ಸ್ವಾತಂತ್ರ್ಯ ದೊರಕಿಸುವ ನಿಟ್ಟಿನಲ್ಲಿ ಮಾಡಿದ ತ್ಯಾಗ ಸ್ಮರಿಸಿದರು.

ಈ ವೇಳೆ ಹಿರಿಯ ಸ್ವತಂತ್ರ ಹೋರಾಟಗಾರರು ಉಪಸ್ಥಿತರಿದ್ದರು. ಮೈಸೂರಿನ ಮೇಯರ್ ಸುನಂದಾ ಪಾಲನೇತ್ರ, ನರಸಿಂಹರಾಜ ಕ್ಷೇತ್ರದ ಶಾಸಕರಾದ ತನ್ವೀರ್‌ಸೇಠ್, ಶೇಷಾದ್ರಿಪುರಂ ಶಿಕ್ಷಣ ದತ್ತಿ ಪ್ರಧಾನ ಕಾರ್ಯದರ್ಶಿಗಳಾದ ಡಾ. ವೂಡೇ ಕೃಷ್ಣ, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷರಾದ ಮಹಾದೇವಸ್ವಾಮಿ, ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷರಾದ ಕೃಷ್ಣಪ್ಪಗೌಡ, ಉಪ ಮೇಯರ್ ಅನ್ವರ್ ಬೇಗ್, ಇನ್ನಿತರರು ಹಾಜರಿದ್ದರು.

ಸಂಯುಕ್ತ ಕರ್ನಾಟಕ


31 ಜನವರಿ 2022
ಸೋಮವಾರ
ಬೆಂಗಳೂರು

ಎಲ್ಲಾ ಶಿಕ್ಷಣ ಸಂಸ್ಥೆಗಳಲ್ಲಿ ವಿವೇಕಾನಂದ ಕೇಂದ್ರ ಅವಶ್ಯ

ಬೆಂಗಳೂರು: ರಾಜ್ಯದ ಎಲ್ಲಾ ಶಾಲಾ ಕಾಲೇಜುಗಳಲ್ಲಿ ವಿವೇಕಾನಂದ ಅಧ್ಯಯನ ಕೇಂದ್ರ ಆರಂಭಿಸಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುವುದರೊಂದಿಗೆ ಸತ್ಪ್ರಜೆಯನ್ನಾಗಿ ರೂಪಿಸಬೇಕೆಂದು ತುಮಕೂರಿನ ಸ್ವಾಮಿ ವಿರೇಶಾನಂದ ಸರಸ್ವತಿ ಸಲಹೆ ನೀಡಿದರು. ಶೇಷಾದ್ರಿಪುರಂ ಕಾಲೇಜಿನಲ್ಲಿ ವಿವೇಕಾನಂದ ಅಧ್ಯಯನ ಕೇಂದ್ರ ಮತ್ತು ರಾಮಕೃಷ್ಣ ವಿವೇಕಾನಂದ ಆಶ್ರಮ ತುಮಕೂರು ಆಶ್ರಯದಲ್ಲಿ ನಡೆದ ಶೈಕ್ಷಣಿಕ ಸಂಸ್ಥೆಗಳಲ್ಲಿ ವಿವೇಕಾನಂದ ಅಧ್ಯಯನ ಕೇಂದ್ರದ ಮಹತ್ವಪೂರ್ಣ ಪಾತ್ರ, ಕುರಿತ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು ಜೀವನದಲ್ಲಿ ಸಕಾರಾತ್ಮಕ ಮನೋಭಾವನೆಗಳನ್ನು ಬೆಳೆಸಿಕೊಳ್ಳಬೇಕು. ಆಧ್ಯಾತ್ಮ ಎಂದರೆ ನಿನ್ನನ್ನು ನೀನು ತಿಳಿದುಕೊಳ್ಳುವುದು, ನಿನ್ನ ನಡೆಯನ್ನು ಸರಿಪಡಿಸಿಕೊಳ್ಳುವುದು ಎಂದು ಹೇಳಿದರು.

ಎಲ್ಲಾ ಶಾಲೆ ಕಾಲೇಜುಗಳಲ್ಲಿ ವಿವೇಕಾನಂದ ಅಧ್ಯಯನ ಕೇಂದ್ರ ಪ್ರಾರಂಭದ ಅಗತ್ಯವಿದೆ ಎಂದು ಪ್ರತಿಪಾದಿಸಿದ ಅವರು ಸರ್ಕಾರವು ಇದಕ್ಕೆ ಅನುಮತಿ ನೀಡಿದೆ. ಈ ನಿಟ್ಟಿನಲ್ಲಿ ರಾಜ್ಯದ ಎಲ್ಲಾ ಶಾಲಾ ಕಾಲೇಜುಗಳಲ್ಲಿ ಅಗತ್ಯ ಕ್ರಮ ಕೈಗೊಳ್ಳುವಂತೆ ಅವರು ಸಲಹೆ ನೀಡಿದರು.

ನಾಡೋಜ ಡಾ. ವೂಡೇ ಪಿ ಕೃಷ್ಣ, ಸರ್ವರನ್ನು ಸ್ವಾಗತಿಸಿದರು. ಕಾಲೇಜಿನ ಪ್ರಾಂಶುಪಾಲೆ ಡಾ, ಮೀರಾ ಹೆಚ್.ಎನ್, ಪ್ರೊ. ಎಸ್. ಮುರಳೀಧರನ್, ಎಂ.ಎಸ್. ನಟರಾಜ್ ಪಾಲ್ಗೊಂಡಿದ್ದರು..



ಸಂಯುಕ್ತ ಕರ್ನಾಟಕ

29 ಜನವರಿ 2022
ಶನಿವಾರ
ಬೆಂಗಳೂರು

ಸಮಾಜ ಸುಧಾರಣೆಗೆ ಮಾಧ್ಯಮಗಳು ಶ್ರಮಿಸಲಿ

ಸಂ.ಕ. ಸಮಾಚಾರ, ಬೆಂಗಳೂರು

ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸುವ ಮಾಧ್ಯಮಗಳೂ ಪ್ರತಿಪಕ್ಷಗಳಂತೆ ಕಾರ್ಯನಿರ್ವಹಿಸಿದರೇ ಮಾತ್ರ ಪ್ರಜಾಪ್ರಭುತ್ವದ ಉಳಿವು ಸಾಧ್ಯ ಎಂದು ಮಾಜಿ ಸಚಿವ ಎಚ್. ವಿಶ್ವನಾಥ್ ಅಭಿಪ್ರಾಯಪಟ್ಟಿದ್ದಾರೆ. ನಚ್ಚಿ ಬಳಗದ ಆಶ್ರಯದಲ್ಲಿ ನಡೆದ 'ಚಕ್ರವರ್ತಿಯಾಗದ ನಚ್ಚಿ' ಕೃತಿ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದ ಅವರು, ಪ್ರಸ್ತುತ ದಿನಗಳಲ್ಲಿ ಮಾಧ್ಯಮಗಳು . ಆಳುವವರನ್ನು ಎಚ್ಚರಿಸುವ ಕೆಲಸ ಮಾಡದೇ ರಾಜಕೀಯ ಪಕ್ಷಗಳ ಕೈಗೊಂಬೆಯಂತೆ ಕೆಲಸ ಮಾಡುತ್ತಿರುವುದು ದುರದೃಷ್ಟಕರ ಸಂಗತಿ. ಮಾಧ್ಯಮಗಳಲ್ಲಿ ಸತ್ಯ, ಪ್ರಾಮಾಣಿಕತೆ, ನಿಷ್ಪಕ್ಷಪಾತ ಬರವಣಿಗೆಗಳು ಕಾಣುತ್ತಿಲ್ಲ ಎಂದು




ವಿಐಎಸ್‌ವಿಎ- 'ಚಕ್ರವರ್ತಿಯಾಗದ ನಚ್ಚಿ' ಕೃತಿಯನ್ನು ಮಾಜಿ ಸಚಿವ ಎಚ್. ವಿಶ್ವನಾಥ್ ಬಿಡುಗಡೆ ಮಾಡಿದರು

ವಿಷಾದಿಸಿದರು. ಈಚೆಗೆ ಪತ್ರಕರ್ತರಲ್ಲೂ ಬದ್ಧತೆ ಮಾತ್ರವೇ ಅಲ್ಲ ಸಾಮಾಜಿಕ ಜ್ಞಾನದ ಕೊರತೆ ಎದ್ದು ಕಾಣುತ್ತಿದೆ. ಭಾಷೆ ಮೇಲೆ ಹಿಡಿತವಿಲ್ಲ. ವ್ಯಾಕರಣ ಜ್ಞಾನವೂ ಇಲ್ಲ. ಜನತಂತ್ರ ವ್ಯವಸ್ಥೆಯಲ್ಲಿ ಮಾಧ್ಯಮಗಳೂ ಬೋಧನಾ ತರಗತಿಗಳಾಗಬೇಕು. ಸಾಹಿತ್ಯ, ಕಲೆ, ಸಂಗೀತ ಮತ್ತು ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವವರು ಈ ಕ್ಷೇತ್ರಕ್ಕೆ ಹೆಚ್ಚು ಬರಬೇಕು. ಈ ಬಗ್ಗೆ ಹಿರಿಯ ಪತ್ರಕರ್ತರು ಜವಾಬ್ದಾರಿ ತೆಗೆದುಕೊಳ್ಳಬೇಕು.

ಇಲ್ಲದಿದ್ದರೇ ಮಾಧ್ಯಮಗಳ ಬಗ್ಗೆ ಜನತೆ ಅಸಹ್ಯ ಪಡುವ ಕಾಲ ಬರುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು.

ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ.ಕೃಷ್ಣಪ್ಪ ಮಾತನಾಡಿ, ಸಂವಿಧಾನದ ನಾಲ್ಕನೇ ಅಂಗವಾದ ಪತ್ರಿಕಾ ರಂಗ ಪ್ರಾಮಾಣಿಕವಾಗಿ ಕಾರ್ಯ ಮಾಡಿ ಸಮಾಜ ಸುಧಾರಣೆಗೆ ಅವಿರತ ಶ್ರಮಿಸಬೇಕಾದ ಇಂದು ಅತ್ಯಗತ್ಯವಾಗಿದೆ ಎಂದರು.

ಕನ್ನಡಪ್ರಭ
ಗುರುವಾರ 27.1.2022




'ಚಕ್ರವರ್ತಿಯಾಗದ ನಚ್ಚಿ' ಪುಸ್ತಕ ಲೋಕಾರ್ಪಣೆ

• ಕನ್ನಡಪ್ರಭ ವಾರ್ತೆ ಬೆಂಗಳೂರು

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮಾಧ್ಯಮವು ಜನಾದೇಶ ಪಡೆದ ಸರ್ಕಾರವನ್ನು ಎಚ್ಚರಿಸುವ ಕೆಲಸ ಮಾಡಬೇಕು. ಆದರೆ, ಈಗ ಮಾಧ್ಯಮವು ರಾಜಕೀಯ ಪಕ್ಷಗಳ ಕೈಗೊಂಬೆಯಂತೆ ಕಾರ್ಯನಿರ್ವಹಿಸುತ್ತಿದೆ ಎಂದು ವಿಧಾನಪರಿಷತ್ ಸದಸ್ಯ ಎಚ್. ವಿಶ್ವನಾಥ್ ಬೇಸರ ವ್ಯಕ್ತಪಡಿಸಿದ್ದಾರೆ. ಗಾಂಧಿ ಭವನದಲ್ಲಿ ಬುಧವಾರ ನಚ್ಚಿ ಬಳಗದ ವತಿಯಿಂದ ದಿವಂಗತ ಎಂ.ಎನ್. ಚಕ್ರವರ್ತಿ (ನಚ್ಚಿ) ನೆನಪಿನಾರ್ಥ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ಚಕ್ರವರ್ತಿಯಾಗದ ನಚ್ಚಿ' ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದರು. ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ವೂಡೇ ಪಿ.ಕೃಷ್ಣ ಮಾತನಾಡಿ, ನಚ್ಚಿ ಅವರಿಗೆ ಎಲ್ಲ ವಿಷಯದ ಬಗೆಯೂ ಮಾಹಿತಿ ಇರುತ್ತಿತ್ತು. ಇಂತಹ ಪತ್ರಕರ್ತರ ಬದುಕು, ಬರಹಗಳನ್ನು ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೆ ತಿಳಿಸುವ ಕೆಲಸವಾಗಬೇಕು ಎಂದರು.

ಉದಯವಾಣಿ

ಗುರುವಾರ, ಜನವರಿ 27, 2022



ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಆವರಣದಲ್ಲಿ ಹಮ್ಮಿಕೊಂಡಿದ್ದ 73ನೇ ಗಣರಾಜ್ಯೋತ್ಸವ ಪ್ರಯುಕ್ತ ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜಿನ ರೈಫಲ್ ಶೂಟಿಂಗ್ ಅಕಾಡೆಮಿಯನ್ನು ಅಂತಾರಾಷ್ಟ್ರೀಯ ಪಿಸ್ತೂಲ್ ಶೂಟರ್ ಒಲಂಪಿಕ್ ಕ್ರೀಡಾಪಟು ಮತ್ತು ಅರ್ಜುನ ಪ್ರಶಸ್ತಿ ಪುರಸ್ಕೃತ ಪ್ರಕಾಶ್ ನಂಜಪ್ಪ ಉದ್ಘಾಟಿಸಿದರು.


ಹೊಸ ದಿಗಂತ
ಬುಧವಾರ, 5 ಜನವರಿ 2022, ಬೆಂಗಳೂರು

ತ್ಯಾಗಿಗಳಿಗೆ ಸಮಾಜದ ಗೌರವ ಹೆಚ್ಚು

ಬೆಂಗಳೂರು: ಸಮಾಜಕ್ಕಾಗಿ ಜೀವನವನ್ನು ತ್ಯಾಗ ಮಾಡಿದವರನ್ನು ಸಮಾಜ ಯಾವಾಗಲೂ ಸ್ಮರಿಸಿಕೊಳ್ಳುತ್ತದೆ ಎಂದು ತುಮಕೂರು ಸಿದ್ದಗಂಗಾ ಮಠದ ಸಿದ್ದಲಿಂಗ ಸ್ವಾಮೀಜಿ ಹೇಳಿದರು.

ಮಂಗಳವಾರ ಡಾ.ಎಚ್.ಶ್ರೀನಿವಾಸಯ್ಯ ಚಾರಿಟಬಲ್ ಟ್ರಸ್ಟ್‌ನ ಡಾ.ಎಚ್.ಶ್ರೀನಿವಾಸಯ್ಯ ಸೇವಾ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, ಸಮಾಜ ಎಲ್ಲರನ್ನೂ ಯಾವಗಲೂ ನೆನಪಿಡುವುದಿಲ್ಲ, ಯಾರೂ ಇತರರಿಗಾಗಿ ಬದುಕುತ್ತಾರೋ ಅವರನ್ನು ಮಾತ್ರ ಸಮಾಜ ಸ್ಮರಿಸುತ್ತದೆ. ಸೇವೆಗೆ ಸಮನಾದದ್ದು ಜಗತ್ತಿನಲ್ಲಿ ಬೇರೆ ಯಾವುದಿಲ್ಲ ಎಂದರು.

ಎಚ್.ಶ್ರೀನಿವಾಸಯ್ಯ ಅವರು ಗಾಂಧಿ ತತ್ವಗಳನ್ನು ಅಳವಡಿಸಿಕೊಂಡು ಅನೇಕ ಸಮಾಜಮುಖಿ ಕಾರ್ಯಗಳನ್ನು ಮಾಡಿದ ಶ್ರೇಷ್ಠ ವ್ಯಕ್ತಿ. ಸ್ವಾತಂತ್ರ್ಯ ಹೋರಾಟದಲ್ಲಿ ಭೂಗತವಾಗಿ ಇದ್ದುಕೊಂಡು ಸ್ವಾತಂತ್ರ್ಯದ ಕಿಚ್ಚನ್ನು ಹೆಚ್ಚಿಸಿದವರು ಎಚ್.ಶ್ರೀನಿವಾಸಯ್ಯನವರು. ಇಂತಹ ಮಹಾನ್ ವ್ಯಕ್ತಿ ಕನ್ನಡ ನಾಡಿನಲ್ಲಿ ಹುಟ್ಟಿರುವುದು ಹೆಮ್ಮೆಯ ವಿಷಯ ಎಂದು ಸ್ವಾಮೀಜಿ ಹೇಳಿದರು.



ಸರ್ಕಾರದ ಯೋಜನೆ ಯಶಸ್ವಿಯಾಗಲಿ: ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಕೃಷಿ ವಿಜ್ಞಾನ ಪ್ರತಿಷ್ಠಾನ ಹುಲಿಕೋಟೆ ಅಧ್ಯಕ್ಷ ಡಿ.ಆರ್. ಪಾಟೀಲ, ಈ ಪ್ರಶಸ್ತಿಯಿಂದ ನನ್ನ ಜವಾಬ್ದಾರಿ ಮತ್ತಷ್ಟು ಹೆಚ್ಚಿದೆ. ಗಾಂಧೀಜಿಯವರ ಗ್ರಾಮ ಸ್ವರಾಜ್ಯದ ಕನಸನ್ನು ನನಸು ಮಾಡಲು ಮತ್ತಷ್ಟು ಶ್ರಮಿಸುತ್ತೇನೆ. ಸರ್ಕಾರದ ಯೋಜನೆಗಳು ತಳಮಟ್ಟದಲ್ಲಿ ಯಶಸ್ವಿಯಾಗಬೇಕು, ಆ ನಿಟ್ಟಿನಲ್ಲಿ ನಾವೆಲ್ಲರೂ ಪ್ರಯತ್ನಿಸಬೇಕು ಎಂದರು.

ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ವೂಡೇ ಪಿ.ಕೃಷ್ಣ, ಮಾಜಿ ಸಂಸದ ಸಿ. ನಾರಾಯಣಸ್ವಾಮಿ, ಟ್ರಸ್ಟ್ ಅಧ್ಯಕ್ಷ ಎ.ಸದಾನಂದ ಇದ್ದರು.

ಉದಯವಾಣಿ ಬೆಂಗಳೂರು
ಬುಧವಾರ, ಜನವರಿ 5, 2022



ಕರ್ನಾಟಕ ವಚನ ಸಾಹಿತ್ಯ ಪರಿಷತ್ತು ಶುಕ್ರವಾರ ಕರ್ನಾಟಕ ಚಿತ್ರಕಲಾ ಪರಿಷತ್ತಿನ ಆವರಣದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ 2021ನೇ ಸಾಲಿನ ಕಾಯಕ ಯೋಗಿ ಶಿವಕುಮಾರ ಸ್ವಾಮೀಜಿ ಪ್ರಶಸ್ತಿಯನ್ನು ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಡಾ.ವೂಡೇ ಪಿ.ಕೃಷ್ಣ ಅವರಿಗೆ ಪ್ರದಾನ ಮಾಡಲಾಯಿತು. ಹಿರಿಯ ಸಂಸ್ಕೃತ ವಿದ್ವಾಂಸ ಮಲ್ಲೇಪುರಂ ಜಿ.ವೆಂಕಟೇಶ ಇತರರು ಇದ್ದರು.

ವಿಜಯ ಕರ್ನಾಟಕ 10 ಶನಿವಾರ, 1 ಜನವರಿ 2022




ಕರ್ನಾಟಕ ವಚನ ಸಾಹಿತ್ಯ ಪರಿಷತ್ತು ವತಿಯಿಂದ ನಗರದ ಚಿತ್ರಕಲಾ ಪರಿಷತ್ತಿನ ದೇವರಾಜ್ ಅರಸು ಸಭಾಂಗಣದಲ್ಲಿ ನಾಡೋಜ ಡಾ. ವೂಡೆ ಪಿ. ಕೃಷ್ಣ ಅವರಿಗೆ ಡಾ. ಶಿವಕುಮಾರ ಸ್ವಾಮೀಜಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ಈ ವೇಳೆ ಪ್ರೊ. ಮಲ್ಲೇಪುರ ಜಿ. ವೆಂಕಟೇಶ್, ಡಾ. ಎಸ್.ಜಿ.ಸುಶೀಲಮ್ಮ, ಇಂದಿರಾ ಕೃಷ್ಣಪ್ಪ, ಎಂ.ವಿ.ತ್ಯಾಗರಾಜ್, ಕೃಷಿ ವಿವಿ ಕುಲಪತಿ ಡಾ. ರಾಜೇಂದ್ರ ಪ್ರಸಾದ್ ಇದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ

VIJAYAVANI » BENGALURU
ಗುರುವಾರ 6 ಜನವರಿ 2022
6 JANUARY 2022

ಗಾಂಧಿ ಮಾರ್ಗದಲ್ಲಿ ನಡೆದ ಶ್ರೀನಿವಾಸಯ್ಯ



ಎಚ್. ಶ್ರೀನಿವಾಸಯ್ಯ ಜನ್ಮದಿನಾಚರಣೆಯನ್ನು ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಸ್ವಾಮೀಜಿ ಉದ್ಘಾಟಿಸಿದರು. ಮಾಜಿ ಸಂಸದ ಸಿ. ನಾರಾಯಣ ಸ್ವಾಮಿ, ಗಾಂಧಿ ಪ್ರತಿಷ್ಠಾನದ ಅಧ್ಯಕ್ಷ ಡಾ.ವೂಡೇ ಪಿ. ಕೃಷ್ಣ ಮತ್ತಿತರರು ಉಪಸ್ಥಿತರಿದ್ದರು.

ಮಲ್ಲೇಶ್ವರ: ಗಾಂಧಿ ತತ್ವಗಳನ್ನು ಅಳವಡಿಸಿಕೊಂಡು ಆದರ್ಶದ ಜೀವನ ನಡೆಸಿದ್ದ ಗಾಂಧಿ ಪ್ರತಿಷ್ಠಾನದ ಸಂಸ್ಥಾಪಕ ಎಚ್. ಶ್ರೀನಿವಾಸಯ್ಯ ಮಾದರಿ ಸಾಧಕ ಎಂದು ತುಮಕೂರಿನ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಸ್ವಾಮೀಜಿ ಹೇಳಿದ್ದಾರೆ.

ಮಲ್ಲೇಶ್ವರದ ಬಿಇಎಸ್ ಶಿಕ್ಷಣ ಸಂಸ್ಥೆಯಲ್ಲಿ ಆಯೋಜಿಸಿದ್ದ ಎಚ್. ಶ್ರೀನಿವಾಸಯ್ಯ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

'ಕರ್ನಾಟಕದ ಗಾಂಧಿ' ಎಂದೇ ಹೆಸರಾಗಿದ್ದ ಶ್ರೀನಿವಾಸಯ್ಯ, ಪ್ರಸ್ತುತ ಯುಜನತೆಗೆ ಸ್ಫೂರ್ತಿಯಾಗಿದ್ದಾರೆ. ಅವರ ವ್ಯಕ್ತಿತ್ವ ಹಾಗೂ ಸಾಧನೆ ಬಗ್ಗೆ ತಿಳಿದುಕೊಂಡು ಆ ಮಾರ್ಗದಲ್ಲಿ ಮುನ್ನಡೆಯಬೇಕು. ಸ್ವಾತಂತ್ರ್ಯ ಹೋರಾಟದಲ್ಲಿ ಭೂಗತವಾಗಿದ್ದುಕೊಂಡು ಕೆಲಸ ಮಾಡಿದ್ದರು. ಬಳಿಕ ಅನೇಕ ಸಂಸ್ಥೆಗಳನ್ನು ತೆರೆದು ಜನರ ಬವಣೆ ನೀಗಿಸಲು ಶ್ರಮಿಸಿದ್ದರು ಎಂದು ಸ್ಮರಿಸಿದರು. ತ್ಯಾಗ ಮಾಡಿದರನ್ನು ಜಗತ್ತು ಸ್ಮರಿಸುತ್ತದೆ. ದೇಶಕ್ಕಾಗಿ ದುಡಿದ ಕಾರಣಕ್ಕೆ ಶ್ರೀನಿವಾಸಯ್ಯ ಹೆಸರಾದರು. ಆ ಕಾಲದಲ್ಲಿಯೇ ತಮ್ಮ ದೇಹದಾನ ಮಾಡಿದರು. ಅಂಥವರನ್ನು ಪಡೆದ ಈ ನಾಡು ಪುಣ್ಯ ಮಾಡಿದೆ ಎಂದರು.

ಡಿ.ಆರ್. ಪಾಟೀಲ್ ಅವರಿಗೆ ಸೇವಾ ಪ್ರಶಸ್ತಿ ಪ್ರದಾನ ಮಾಡಲಾಯಿತು. ಮಾಜಿ ಸಂಸದ ಸಿ. ನಾರಾಯಣ ಸ್ವಾಮಿ, ಗಾಂಧಿ ಪ್ರತಿಷ್ಠಾನದ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ, ಬಿಇಎಸ್ ಸಂಸ್ಥೆಯ ಅಧ್ಯಕ್ಷ ಎ. ಸದಾನಂದ ಮತ್ತಿತರರಿದ್ದರು.